
ಜುಲೈ 1998 ಬೆಲೆ ರೂ. 5

ಮಯೂರ



ಶಿವರಾಮ ಕಾರಂತರ
ಹೃದಯಂಗಮ
ಕಾದಂಬರಿ


ಬೆಟ್ಟದ ಜೀವ

ಆರಂಭ



ಛಾಯಾಚಿತ್ರ: ಎನ್. ಪ್ರಸಾದ್

ಪ್ರಿಯ ಓದುಗ



ಮಾಸ್ತಿ ಪ್ರಶಸ್ತಿಯ
ಹಾ. ಮಾ. ನಾ.

ಹಾ ಮಾ ನಾ ಎಂದೇ ಪ್ರಸಿದ್ಧರಾದ ಹಾರೋಗದ್ದೆ ಮಾನಪ್ಪ ನಾಯಕರು ಭಾಷಾಕೋವಿದರಾಗಿ, ಸೃಜನಶೀಲ ಬರಹಗಾರರಾಗಿ, ಶಿಕ್ಷಣ ತಜ್ಞರಾಗಿ ಕರ್ನಾಟಕದ ಒಳಗೆ, ಹೊರಗೆ ರಾಷ್ಟ್ರದ ಶಿಕ್ಷಣ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಚಿರಪರಿಚಿತರಾದವರು. ಕನ್ನಡ ನನ್ನ ಮೊದಲ ಪ್ರೀತಿ, ಎರಡನೆಯ ಪ್ರೀತಿಯೂ ಅದೇ ಎನ್ನುವ ಹಾ. ಮಾ. ನಾಯಕರು ಸಾಹಿತಿಯಾಗಿ, ಸಾಹಿತ್ಯದ ಬೋಧಕರಾಗಿ ಭಾಷಾಶಾಸ್ತ್ರಜ್ಞರಾಗಿ, ಮತ್ತು ಸಾಹಿತ್ಯ ಪರಿಚಾರಕರಾಗಿ ಕನ್ನಡಕ್ಕೆ ಬಹುಮುಖ ಸೇವೆಸಲ್ಲಿರುವ ನಮ್ಮ ನಡುವಣ ಹಿರಿಯರು.


ಹಾ. ಮಾ. ನಾಯಕರು ಹುಟ್ಟಿದ್ದು (5-2-1931) ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆ. ರೈತಾಪಿ ಕುಟುಂಬದಲ್ಲಿ ಜನಿಸಿದ ನಾಯಕರು ಮೇಗರವಳ್ಳಿ, ತೀರ್ಥಹಳ್ಳಿಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮುಗಿಸಿ ಶಿವಮೊಗ್ಗೆಯಲ್ಲಿ ಇಂಟರ್ ಮುಗಿಸಿದರು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಗಳಿಸಿದ ನಂತರ ತುಮಕೂರು, ಶಿವಮೊಗ್ಗೆಗಳಲ್ಲಿ ಅಧ್ಯಾಪಕರಾಗಿದ್ದು 1961ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸೇರಿದರು. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಸಂಗ ವೇತನ ಪಡೆದು ಕಲ್ಕತ್ತೆ ವಿಶ್ವವಿದ್ಯಾನಿಲಯದಲ್ಲಿ ಭಾಷಾ ವಿಜ್ಞಾನದಲ್ಲಿ ಎಂ.ಎ. ಸ್ನಾತಕೋತ್ತರ ಪಡೆದರು. ಫುಲ್‌ಬ್ರೈಟ್ ವಿದ್ಯಾರ್ಥಿ ವೇತನ ಗಳಿಸಿ 'ಕನ್ನಡ ಸಾಹಿತ್ಯ ಮತ್ತು ಆಡು ಭಾಷೆ' ಮಹಾಪ್ರಬಂಧವನ್ನು ಸಾದರಪಡಿಸಿ ಅಮೆರಿಕದ ಇಂಡಿಯಾನ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದರು. ಸುಮಾರು ಹದಿನಾರು ವರ್ಷಗಳ ಕಾಲ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿದ್ದ ಹಾ. ಮಾ. ನಾಯಕರು 1984ರಲ್ಲಿ ಕಲ್ಬುರ್ಗಿ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕಗೊಂಡರು. ತಜ್ಞ ಪ್ರಾಧ್ಯಾಪಕರಾಗಿ ಕನ್ನಡದಲ್ಲಿ ಪದವೀಧರರು ಮತ್ತು ಸ್ನಾತಕರ ಪಡೆಯನ್ನೇ ಬೆಳೆಸಿದ ನಾಯಕರು ದಕ್ಷ ಆಡಳಿತಗಾರರಾಗಿ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಕಲ್ಬುರ್ಗಿ ವಿಶ್ವವಿದ್ಯಾನಿಲಯದ ಸರ್ವಾಂಗೀಣ ಪ್ರಗತಿಗೆ ಶ್ರಮಿಸಿದ ಕೀರ್ತಿಗೆ ಪಾತ್ರರಾದವರು.

ಸಣ್ಣ ಕಥೆ, ಪ್ರಬಂಧ, ವಿಮರ್ಶೆ, ವ್ಯಕ್ತಿ ಚಿತ್ರಗಳು, ಜಾನಪದ, ಅನುವಾದ, ಅಂಕಣ ಬರಹಗಳು-ಹೀಗೆ ಹಾ. ಮಾ. ನಾಯಕರ ಸೃಜನಶೀಲ ಬರವಣಿಗೆಯ ಬೀಸು ದೊಡ್ಡದು. ರಾಜ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ನಾಯಕರನ್ನು ಅರಸಿ ಬಂದಿವೆ. ನಾಯಕರು, ಬೀದರ್‌ನಲ್ಲಿ ನಡೆದ ಐವತ್ತೇಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಪಾತ್ರರಾದವರು. ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ ಮೊದಲಾದ ಮೌಲಿಕ ಬರವಣಿಗೆ ಜೊತೆಗೆ ಕನ್ನಡದಲ್ಲಿ ಅಂಕಣ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವನ್ನೂ ಮನ್ನಣೆಯನ್ನೂ ತಂದುಕೊಟ್ಟ ಕೀರ್ತಿ ನಾಯಕರದು. ಅವರ 'ಸಂಪ್ರತಿ' ಕನ್ನಡದಲ್ಲಿ ಮೊಟ್ಟಮೊದಲಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಮನ್ನಣೆ ಗಳಿಸಿದ ಅಂಕಣ ಬರಹಗಳ ಸಂಪುಟ. ಈಗ ಹಾ. ಮಾ. ನಾಯಕರಿಗೆ ಪಾವಿತ್ರ್ಯ ಹಾಗೂ ಪ್ರತಿಷ್ಠೆ ದೃಷ್ಟಿಯಿಂದ ಕನ್ನಡದ ಜ್ಞಾನಪೀಠ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮಾಸ್ತಿ ಪ್ರಶಸ್ತಿಯ ಗೌರವ. ನಾಯಕರಿಗೆ ಮಯೂರಾಭಿನಂದನೆಗಳು.

ಮಯೂರ
ಲಾಸ್ಯ

ಜುಲೈ 1998
ಸಂಪುಟ 31
ಸಂಚಿಕೆ 7

ಲೇಖನ



ಕಥೆ



ವಿದ್ಯಾರ್ಥಿ ಕಥೆ

ಕಾವ್ಯ ವಿನೋದಿನಿ

50
ಸುವರ್ಣ ವರ್ಷ
1948 - 1998



ಕಾದಂಬರಿ

ವಿನೋದ

ಓದುಗರ ವಿಭಾಗ

ಸ್ಥಿರ ಶೀರ್ಷಿಕೆಗಳು

ಮುಖಪುಟ

ಕಲೆ-ವಿನ್ಯಾಸ: ಮೋನಪ್ಪ



ತೃಪ್ತಿ ನೀಡಿದ ಸಂಚಿಕೆ

ಜೂನ್ ಮಯೂರದ ಆಕರ್ಷಕ ಮುಖಪುಟ, ಮಯೂರ ನೋಟ ಮತ್ತು ಹೊದಿಕೆಯ ಹಿಂಬದಿ ಚಿತ್ರಗಳೆಲ್ಲಾ ಕಣ್ಮನ ಸೆಳೆದು ತಣಿಸಿದವು. ಇನ್ನು ಒಳಾಂಗಣವನ್ನು ಇಣುಕಿದಾಗ ಸಂತೃಪ್ತ ಸ್ವಾದ ಸಿಕ್ಕಿತು.

ಸೊರಬ **ಸಂತೇಬೆನ್ನೂರ ಮಂಜಪ್ಪ**

'ಛಾಪಕನ ಛಾಪು' ಅಂಕಣದಲ್ಲಿ ಶೇಷನಾರಾಯಣರವರು ಉಕ್ಕಿನ ಮನುಷ್ಯ ಎಂದೇ ಹೆಸರಾದ ಕೆ. ವಿ. ಅಯ್ಯರ್‌ರವರ ವ್ಯಕ್ತಿತ್ವವನ್ನು ಮನಮುಟ್ಟುವಂತೆ ನಿರೂಪಿಸಿದ್ದಾರೆ. ಅಯ್ಯರ್‌ರವರು ಬರದದ್ದು ಕಡಿಮೆಯಾದರೂ, ಬರೆದುದೆಲ್ಲವೂ ಗಟ್ಟಿ ಸಾಹಿತ್ಯವೇ, ಸಾಹಿತ್ಯ ಕ್ಷೇತ್ರಕ್ಕೆ ಮಹತ್ತ್ವದ ಕಾಣಿಕೆ ನೀಡಿರುವ ಕೆ. ವಿ. ಅಯ್ಯರ್ ಕನ್ನಡಿಗರು ಮರೆತ ಮಹಾನುಭಾವರಲ್ಲಿ ಒಬ್ಬರು ಎನ್ನುವುದು ವಿಷಾದದ ಸಂಗತಿ.

ದಾವಣಗೆರೆ **-ಎನ್ಕೆ ಮಳಲಕೆರೆ**

ಅಂದು-ಇಂದಿನ ನಡುವೆ

ನನ್ನ ಪ್ರೀತಿಯ ಬಾಲ್ಯದ ಅಂದಿನ ಪ್ರಶಾಂತ ಬೆಂಗಳೂರನ್ನು ಮತ್ತೊಮ್ಮೆ ಕೆ. ವಿ. ಅಯ್ಯರ್‌ರವರ "ದೈಯ್ಯದ ಮನೆ" ಕಣ್ಮುಂದು ನಿಲ್ಲಿಸಿದೆ. ಆ ಕಥೆಯಲ್ಲಿನ ವಾತಾವರಣದಲ್ಲಿ ಎಲ್ಲಿಯೋ ನಾನೂ ಸುಳಿದಾಡಿದ್ದ ಅಂದಿನ ಬಾಲ್ಯದ ನೆನಪುಗಳಿಗೆ "ಕಚಗುಳಿ" ಇಟ್ಟಂತಾಗಿ ನನ್ನ ಹೃದಯ, ಮನಸ್ಸು ಹರ್ಷದಿಂದ ಹುಚ್ಚೆದ್ದಂತಾಗಿದೆ. ಅದೇ ಹಳೆಯ ಧರ್ಮಾಂಬುಧಿ ಕೆರೆ, ಅರಳೇಪೇಟೆ, ಅಕ್ಕಿಪೇಟೆ, ಗರಡಿ ಮನೆಗಳು, ಹೃದಯವಂತಿಕೆಯಿಂದ ಸಹಜೀವನ ನಡೆಸುತ್ತಿದ್ದ ಅಂದಿನ ಜನ... ಹೀಗೆ ಎಲ್ಲವನ್ನೂ ನೆನೆದು "ಅಯ್ಯೋ ಹೋಯಿತೆ ಆ ನಾಕ, ಅಯ್ಯೋ ಬಂದಿತೆ ಈ ನರಕ" ಎಂದು ಇಂದಿನ ಬೆಂಗಳೂರನ್ನು ಕಂಡು ಹಲಬುತ್ತಿದ್ದೇನೆ.

ಎಲ್ಲಕ್ಕಿಂತ ಮುಖ್ಯವಾಗಿ, ಈಗಲೂ ಸುಬೇದಾರ್ ಛತ್ರಂ ರಸ್ತೆಯಲ್ಲಿ, ರಾಮಕೃಷ್ಣ ಲಂಚ್‌ಹೋಂ (ಮೂವಿಲ್ಯಾಂಡ್ ಎದರು)ನ್ನು ದಾಟಿ ಆನಂದರಾವ್ ಸರ್ಕಲ್ ಕಡೆ ಹತ್ತು ಹೆಜ್ಜೆ ನಡೆದರೆ, ಈಗಿನ ಸಿಟಿ ಬಸ್‌ಸ್ಟ್ಯಾಂಡಿಗೆ ಹೋಗುವ ಗಲ್ಲಿ ಒಂದು ಸಿಗುತ್ತದೆ. ಅದಕ್ಕೆ ಅಂಟಿಕೊಂಡೇ ಮೂಲೆಯಲ್ಲಿ ಒಂದು ಕಲ್ಲಿನ ಕಟ್ಟಡ- ಒಂದು ಮನೆ... (ಸ್ವಲ್ಪ ಕಾಲ ಛತ್ರವೂ ಆಗಿತ್ತು) -ಇದೆ. ಇದೇ ಐಯ್ಯರ್ ಅವರ ಮುಖ್ಯ ಪಾತ್ರಧಾರಿ "ದೆಯ್ಯದ ಮನೆ", ಇಂದಿಗೂ ಯಾರಿಗಾದರೂ ಕಥೆಯ ಸ್ವಾರಸ್ಯವನ್ನು ಸ್ವತಃ ಅನುಭವಿಸುವ ಚಪಲ ಇದ್ದರೆ ಪ್ರಯತ್ನಿಸಬಹುದು- ಇನ್ನೇನು "ಆಷಾಢ ಬಹುಳ ಅಮಾವಾಸ್ಯೆ" ಹತ್ತಿರ ಬರುತ್ತಿದೆ.

ಬೆಂಗಳೂರು **ಎಸ್. ಸೂರ್ಯನಾರಾಯಣರಾವ್**

ಕನ್ನಡ ಸಾಹಿತ್ಯಕ್ಕೆ ಮಹತ್ವಪೂರ್ಣ ಕೃತಿಗಳನ್ನು ನೀಡಿದ ಕೆ. ವಿ. ಅಯ್ಯರ್‌ರವರ ಬಗೆಗಿನ ಸಂಪಾದಕೀಯ ಸಕಾಲಿಕ, ದೆಯ್ಯದ ಮನೆ ಓದಿ ಬಹಳ ದಿನವಾಗಿತ್ತು. ಹಳೆಯ ಕತೆಗಳು ಎಷ್ಟು ಸುಂದರವಾಗಿರುತ್ತದೆ ಎನ್ನುವುದಕ್ಕೆ ದೆಯ್ಯದ ಮನೆಯೇ ಸಾಕ್ಷಿ. ಅಯ್ಯರ್‌ರವರ ಜನ್ಮ ಶತಮಾನೋತ್ಸವ

ಯೋಗ್ಯ ರೀತಿಯಲ್ಲಿ ಆಚರಿಸುವಂತಾಗಬೇಕು. ತಮ್ಮ ಮೈಕಟ್ಟಿನಷ್ಟೇ ಸಧೃಡ ಸಾಹಿತ್ಯ ನೀಡಿದ ಅಯ್ಯರ್‌ರವರಿಗೆ ಕನ್ನಡಿಗರು ತಕ್ಕ ರೀತಿಯ ಗೌರವ ನೀಡಬೇಕಾಗಿದೆ.

ಚಾಮರಾಜನಗರ **-ಎಸ್ ಲಕ್ಷ್ಮೀನರಸಿಂಹ**

ಮನೋಜ್ಞ ಕಾದಂಬರಿ

ನಿರಂಜನ ಅವರ 'ಚಿರಸ್ಮರಣೆ' ಕಾದಂಬರಿ ಕ್ರಾಂತಿಕಾರರ ಸಾಮ್ರಾಜ್ಯ ಶಾಹಿಯನ್ನು ದ್ವೇಷಿಸುವವರ ಮನಮಿಡಿಯುವ ಕತೆ. ಇಂತಹ ಉತ್ತಮವಾದ ಕಾದಂಬರಿಯನ್ನು ಆಯ್ಕೆ ಮಾಡಿದ ಶ್ರೀ ಈಶ್ವರ ಚಂದ್ರ ಅವರಿಗೆ ಅನಂತ ಧನ್ಯವಾದಗಳು.

ಈ ಕಾದಂಬರಿಯಿಂದ ತಿಳಿದು ಬರುವ ಮುಖ್ಯ ಅಂಶವೆಂದರೆ ಆಗಿನ ಬ್ರಿಟಿಷ್ ಸರಕಾರದ ಪೊಲೀಸರಿಗೂ ಇಂದಿನ ಪೊಲೀಸರಿಗೂ ಯಾವುದೇ ವ್ಯತ್ಯಾಸವಿಲ್ಲ. ಸ್ವಾತಂತ್ರ್ಯ ಸಿಕ್ಕು ಐವತ್ತು ವರ್ಷ ದಾಟಿದರೂ ಸಹ ಬಡವರು ಬಡವರಾಗುತ್ತ ಶ್ರೀಮಂತರು ಇನ್ನು ಶ್ರೀಮಂತರಾಗುತ್ತಾ ಸಾಗಿರುವ ಈ ದೇಶಕ್ಕೆ ಮುಕ್ತಿಯೆನ್ನುವುದೇ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ.

ಗಂಗಾವತಿ **-ಅಬ್ದುಲ್ ವಹಾಬ ಮುಲ್ಲ**

ಉತ್ತಮ ಕಥೆ

ಎಸ್. ಜೆ. ಸುಜಾತಾ ಅವರ ಕಥೆ 'ಉಡುಗೊರೆ' ತುಂಬಾ ಚೆನ್ನಾಗಿತ್ತು. ತಾನು ಸಾಯುವ ಮುಂಚೆ ಅನಾಥ ಮಗುವೊಂದಕ್ಕೆ ಆಶ್ರಯ ಕೊಡಿಸಿ ತನ್ನ ಸಾವಿನಿಂದ ಅನಾಥರಾಗಿದ್ದ ತನ್ನ ತಂದೆ ತಾಯಿಯರನ್ನು ಅನಾಥರಾಗದಂತೆ ಮಾಡಿದ ಕೀರ್ತಿಯ ಪಾತ್ರ ಹಿಡಿಸಿತು.

ಎಚ್. ಜಿ. ಸಣ್ಣ ಗುಡ್ಡಯ್ಯ ಅವರ 'ತೆಂಗು' ಜಿಜಾಪುರಿ ಯವರ 'ಎಲೆ ಚೆಲುವೆ' ತುಂಬಾ ಸೊಗಸಾದ ಮತ್ತೆ ಮತ್ತೆ ಓದಿಸಿಕೊಂಡ ಕವನಗಳು ಈ ಸಂಚಿಕೆಯ ವಿಶೇಷಗಳಾಗಿದ್ದವು.

ಗಂಗಾವತಿ **-ತಟ್ಟೆ ಕಾಶೀಮ ಅಲಿ**

ಉಡುಗೊರೆ ಕಥೆಯಲ್ಲಿ ಕ್ಯಾಥರೀನ್ ಕೊಡುವ

ನವಿಲುಗಾನ್ನಡಿ

ಉಡುಗೊರೆ ಏನೆಂದು ಊಹಿಸಿ ನನಗೆ ನಾನೇ ಶಹಬಾಶ್‌ಗಿರಿ ಕೊಟ್ಟುಕೊಂಡಿದ್ದೆ. ಅದು ಅನಾಥಶಿಶುವೆಂದು ತಿಳಿದಾಗ ಬೇಸ್ತುಬಿದ್ದೆ.

ತುಮಕೂರು **ತರಂಗಿಣಿ**

ವಾಸ್ತವಕ್ಕೆ ಹತ್ತಿರ

ಎನ್. ವಿ. ಅನಂತರಾಂ ಅವರು ಬರೆದ "ಧರ್ಮ ದೇಶದ ದುರಂತ" ವಾಸ್ತವಿಕತೆಗೆ ಹಿಡಿದ ಕನ್ನಡಿಯಾಗಿದೆ. ಇಂದಿನ ಭಾರತದ ಪರಿಸ್ಥಿತಿಯೂ ಇದೇ. ಭ್ರಷ್ಟಾಚಾರ ಎಲ್ಲಿ ನಡೆಯುತ್ತದೆ ಹೇಗೆ ನಡೆಯುತ್ತದೆ ಎಂಬುದನ್ನು ಲೇಖಕರು ಚೆನ್ನಾಗಿ ವಿವರಿಸಿದ್ದಾರೆ. ಭ್ರಷ್ಟಾಚಾರ ನಿರ್ಮೂಲನ ಮಾಡುವ ಸಮಿತಿಯು ನಡೆಸುವ ಮೀಟಿಂಗು ವೈಭವ ಅಲ್ಲಿ ನಡೆಯುವ ಐಷಾರಾಮ ಇವೆಲ್ಲವುಗಳು ನಡೆಸಲು ಬೇಕಾದ ಖರ್ಚು ಸರಿತೂಗಿಸಲು ಮಾಡುವ ಮಸಲತ್ತು ಎಲ್ಲ ಕೂಡಿ ಕಥೆ ರಂಜಿಸುತ್ತದೆ.

ಕೊಪ್ಪಳ **-ಸಿ. ಆರ್. ರೋಣದ ಮಠ**


ಚೊಕ್ಕ ಕಥೆಗಳು

ವಿ. ಎಸ್. ಸತ್ಯನಾರಾಯಣ ರಾವ್‌ರವರ "ಕತ್ತಲೆಯ ಬದುಕು" ಹಾಗೂ ಕೆ. ವಿ. ರಾಜಲಕ್ಷ್ಮೀಯವರ "ಅನಿರೀಕ್ಷಿತ" ಎರಡೂ ಕಥೆಗಳೂ ಚಿಕ್ಕವಾದರೂ ಚೊಕ್ಕವಾಗಿ ಮೂಡಿಬಂದಿವೆ. "ಕತ್ತಲೆಯ ಬದುಕು" ಮೊದಲು ಕುತೂಹಲ ಹುಟ್ಟಿಸಿದರೂ ಅರ್ಧ ಓದಿದ ನಂತರ, ಮುಕ್ತಾಯವನ್ನು ಕೆಲವು ಓದುಗರಂತೂ ಊಹಿಸಿಯೇ ಬಿಡುತ್ತಾರೇನೋ ಅನ್ನಿಸುತ್ತದೆ.

-ಗಣೇಶಗುಡಿ **ಭಾರತಿ ಕುಲಕರ್ಣಿ**

ಮರುಳಸಿದ್ದಪ್ಪ ಅವರು ಬರೆದ ಗಾಂಧಿ ವಿರುದ್ಧ ಗಾಂಧಿ ಲೇಖನ ಅತ್ಯುತ್ತಮವಾಗಿತ್ತು.

ದಾಂಡೇಲಿ **ಅ.ರಹೆಮಾನ್**



ಈ ಬಾರಿ ಕಲ್ಪನೆಗೆ ಸೂಚಿಸುವ ಚಿತ್ರ; ನಿಮ್ಮ ಕಲ್ಪನೆ ನಮ್ಮ ಕೈ ಸೇರಲು ಕೊನೆಯ ದಿನ ಜುಲೈ 20, 1998
ವಿಳಾಸ: ಮಯೂರ ಕಲ್ಪನೆ ವಿಭಾಗ, 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001.

ಚಿತ್ರ: ಜಿ. ಎಂ. ಹೆಗಡೆ ಬೊಮ್ನಳ್ಳಿ,

ಮೇ 1998



ಮೂಕ ಬಸವಗಳು

ಸುಡು ಬಿಸಿಲಿನ
ತಾಪತ್ರಯಕ್ಕೆ ಕೊಂಚ
ನೆರಳಾದರೂ ಸಿಕ್ಕೀತೆಂದು
ಇಲ್ಲಿಗೆ ಬಂದೆವು.
ಹಳ್ಳದ ಬದುವು
ತಂಪ ನೀಡಿತ್ತೆಂದರೆ
ಕಾದ ಮರಳು ಬರಿಗಾಲಲ್ಲೇ
ಚುರುಗುಟ್ಟಿದಾಗ ನಾನಂತೂ
ಬಂಡಿ ಹತ್ತಿ ನಿಂತು ಬಿಟ್ಟೆ
ಪಾಪ ಪ್ರಾಣಿಗಳು ಏನು ಮಾಡಿಯಾವು?
ಸಾಗಿ ಬಂದ ದಾರಿಯುದ್ದಕ್ಕೂ
ಜಾಲಿ ಬೆಳೆದ ಗಿಡಗಂಟಿಗಳು,
ನೆಲಕ್ಕೇ ಹಸಿಯಿಲ್ಲ
ಇನ್ನೆಲ್ಲಿಯ ಹಸಿರು.

ಅಪ್ಪ ಅವ್ವ ಹೋದ ದಾರಿಗುಂಟ
ಕಾಯುತ್ತಿವೆ ಮೂಕ ಬಸವಗಳು
ಇನ್ನು ಬರಬಾರದೆ ಅಪ್ಪ
ಮೇವು ಹುಡುಕಿಕೊಂಡು ಹೋದವ,
ಇನ್ನು ಬರಬಾರದೇ ಅವ್ವ
ನೀರು ಹುಡುಕಿಕೊಂಡು ಹೋದವರು.

-ಪ್ರಕಾಶ್ ಗ ಖಾಡೆ.

ಬಾಳ ಪಯಣ

ಕಮಾನು ಕಟ್ಟಿದ ಕನಸಿನ ಲೋಕದಿ
ವಾಸ್ತವ ಸ್ಥಿತಿ-ಗತಿ ಇಲ್ಲುಂಟೊ
ಬೆವರನು ಸುರಿಸಿ ಬೆಳೆದ ಫಸಲಿಗೆ
ನೀಯತ್ತಿನ ಬೆಲೆ ಎಲ್ಲುಂಟೊ!

ಖಾಲೀ ಹೊಟ್ಟೆಯ ಬಸವನ ಹಾಗೆ
ಕನಸಿನ ಹುಡುಗನೂ ಕಂಗಾಲು
ಪೇಟೆಗೆ ಹೋದ ಅಪ್ಪನು ಬಾರದೆ
ಹಸಿದ ಹೊಟ್ಟೆಗಿದೆ ಬರಗಾಲು!

ಬದುಕಿನ ಬಂಡಿಯು ಗಾಲಿ ಉರುಳುವವು
ಸುಖ ತಾಣವದು ಎಲ್ಲಿದೆಯೊ
ತಕ್ಕಡಿ ಹಿಡಿದ ನ್ಯಾಯದೇವತೆಯ
ಕಣ್ಣಲ್ಲಿ ಬೆಳಕು ಹ್ಯಾಗಿದೆಯೊ!

ಕಲ್ಲಿನ ಗೋಡೆ ಕಂಬದ ಮೇಲೆ
ಕಾಂಕ್ರೀಟಿನ ರಸ್ತೆ ಮಲಗಿದೆಯೊ
ಕಣ್ಣ ನಿರೀಕ್ಷೆಯ ಪರೀಕ್ಷೆಗಳೆಲ್ಲವೂ
ಬೆಂಕಿಗೆ ಬಿದ್ದಿರುವ ತರಗೆಲೆಯೊ!

ಬೆಳ್ಳಿ ಮೋಡಗಳು ಕಪ್ಪಾಗುತ್ತಲೇ
ಮುತ್ತಿನ ಮಳೆ ಹನಿ ಉದುರುವವೊ
ಬಾಳ ಪಯಣದಲಿ ಮುನ್ನಡೆವಾಗ
ಸುಖದ ಕ್ಷಣಗಳೆದುರಾಗುವವೊ!

-ಚಿತ್ರಶೇಖರ ಕಂಠಿ

ಇದುವರೆಗೆ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಸಭಾ ಸದನವಾಗಿದ್ದ 'ಮೇಯೋ ಹಾಲ್' ಕಟ್ಟಡವನ್ನು ಇನ್ನು ಮುಂದೆ ಪ್ರಾಚ್ಯ ವಸ್ತು ಸಂಗ್ರಹಾಲಯವಾಗಿ ಮಾಡುವ ನಿರ್ಧಾರವನ್ನು ಪ್ರಕಟಿಸಲಾಗಿದೆ.

–ಈ ಸಂಗ್ರಹಾಲಯದಲ್ಲಿ ಮಾಜಿ ಪಾಲಿಕೆ ಸದಸ್ಯರು ಕೂಡ ಪ್ರದರ್ಶಿತರಾಗುತ್ತಾರೆಂಬ ವರದಿ ಶುದ್ಧ ಕುಹಕ.

ಕೇಂದ್ರ ನೀರಾವರಿ ಸಚಿವ ಬಾಬಾ ಗೌಡ ಪಾಟೀಲರಿಗೆ ತಮ್ಮ ಖಾತೆಯ ಬಗ್ಗೆ ತಿಳಿವಳಿಕೆ ಸಾಲದು ಎಂದು ರಾಜ್ಯ ಅರ್ಥ ಸಚಿವ ಹಾಗೂ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದ್ದಾರೆ.

–ಅರ್ಥ ಮಂತ್ರಿಯಾದ ಸಿದ್ಧರಾಮಯ್ಯನವರಿಗೆ ನೀರಾವರಿಯ ಬಗ್ಗೆ ಎಲ್ಲವೂ ಗೊತ್ತಿದೆ ಎಂದು ನಾವು ಖಚಿತವಾಗಿ ಹೇಳಬಹುದು.

ಹಿಂದುಳಿದ ವರ್ಗಗಳ ಆಯೋಗಕ್ಕೆ ಸದಸ್ಯರನ್ನು ಇನ್ನೂ ನೇಮಕ ಮಾಡದಿರುವುದನ್ನು ವಿಧಾನಪರಿಷತ್ತಿನಲ್ಲಿ ಸದಸ್ಯರೊಬ್ಬರು ಪ್ರಸ್ತಾಪಿಸಿದ್ದಾರೆ.

–ಹೀಗೆ ಸದಸ್ಯರಾಗಲು ಅರ್ಹರಾದವರು ಸಾಕಷ್ಟು ಸಂಖ್ಯೆಯಲ್ಲಿ ಮುಂದೆ ಬರುತ್ತಿಲ್ಲ ಎಂದು ಸರ್ಕಾರವು ಬಹಿರಂಗವಾಗಿ ಹೇಳಿಲ್ಲ.

ಕಳ್ಳಭಟ್ಟಿ ಮದ್ಯವನ್ನು ಮಾರುತ್ತಿದ್ದ ಮೂವರು ಖೂಳರನ್ನು ಆಂಧ್ರಪ್ರದೇಶದಲ್ಲಿ ಕ್ರುದ್ಧ ಮಹಿಳೆಯರು ಅಟ್ಟಿಸಿಕೊಂಡು ಹೋಗಿ ಹಿಡಿದು, ಕಂಬಕ್ಕೆ ಕಟ್ಟಿ, ಅವರ ತಲೆಯನ್ನು ನುಣ್ಣಗೆ ಬೋಳಿಸಿದರೆಂಬ ದಿಟ್ಟ ವರದಿ ಬಂದಿದೆ.

–ಮಹಿಳೆಯರು ನಿರ್ಭಿಡೆಯಿಂದ ಈ ವಿಪರೀತವನ್ನು ಕೈಗೊಳ್ಳಲು ಕಾರಣವೆಂದರೆ ಅವರು ಕಳ್ಳಭಟ್ಟಿಯನ್ನು ಸೇವಿಸಿದ್ದೇ ಆಗಿದೆ ಎಂದು ಗುಮಾನಿ ಪಟ್ಟಿರುವ ಗಂಡಸರು ಈಗ ಓಡಿ ಹೋಗಿರುವ ಕಳ್ಳಭಟ್ಟಿ ವಿಕ್ರಮಾದಿತ್ಯರನ್ನು ಹುಡುಕುತ್ತಿದ್ದಾರಂತೆ.

ವಿವಾಹ ವಿಚ್ಛೇದನಗಳು ತೀವ್ರವಾಗಿ ಹೆಚ್ಚಿರುವಾಗ ಇದನ್ನು ತಪ್ಪಿಸಲು ಸಿಂಗಪುರ ಸರ್ಕಾರವು ಭಾವೀ ದಂಪತಿಗಳಿಗೆ ದಾಂಪತ್ಯ ಜೀವನದ ಕುರಿತು ವಿವಾಹಪೂರ್ವದ ಆರು ತಿಂಗಳ ತರಬೇತಿ ನೀಡುವ ಉದ್ದೇಶವನ್ನು ಪ್ರಕಟಿಸಿದೆಯಂತೆ.

–ಈ ತರಬೇತಿಯಲ್ಲಿ ಪಾಲ್ಗೊಳ್ಳಲು ಅಪೇಕ್ಷಿಸಿರುವವರಿಂದ ಬಂದ ಭಾರೀ ಸಂಖ್ಯೆಯ ಅರ್ಜಿಗಳಿಂದ ಗಾಬರಿಗೊಂಡಿರುವ ಸರ್ಕಾರವು– ವಿವಾಹಪೂರ್ವದ ತರಬೇತಿಯಲ್ಲಿ ಮಲಗುವ ಕೋಣೆಯಲ್ಲಿ ಗಂಡು ಮತ್ತು ಹೆಣ್ಣು ಏಕಾಂತವಾಗಿರುವುದಕ್ಕೆ ಸುತರಾಂ ಅವಕಾಶವಿಲ್ಲ ಎಂದು ಪದೇ ಪದೇ ಸ್ಪಷ್ಟನೆ ನೀಡುತ್ತಿದೆಯಂತೆ.

"ವಾಜಪೇಯಿ ಸರ್ಕಾರದ ಭದ್ರತೆಗೆ ಯಾವುದೇ ಅಪಾಯವಿಲ್ಲ"— ಅತಿರಥ–ಮಹಾರಥ ನಾಯಕರ ಪುಂಖಾನುಪುಂಖವಾದ ಹೇಳಿಕೆ.

–ಸಾಲದು. ಈ ಸರ್ಕಾರದಿಂದ ಭಾರತದ ಜನತೆಯ ಭದ್ರತೆಗೆ ಯಾವುದೇ ಅಪಾಯವಿಲ್ಲ ಎಂಬ ಸ್ಪಷ್ಟವಾದ ಆಶ್ವಾಸನೆ ಈಗ ಅಗತ್ಯ.

ವಿದ್ಯಾದಾನಕ್ಕಿಂತಲೂ ರಕ್ತದಾನವು ಶ್ರೇಷ್ಠವಾದುದೆಂದು ರಾಜ್ಯದ ಸಣ್ಣ ಕೈಗಾರಿಕಾ ಸಚಿವ ಬಿ ಎ ಮೊಯಿದೀನ್ ಅವರು ಮಂಗಳೂರಿನಲ್ಲಿ ಹೇಳಿದ್ದಾರೆ.

–ಇದರಲ್ಲಿ ವಾದ-ವಿವಾದವಾದರೂ ಯಾಕೆ? ಯಾರ ಬಳಿ ಯಾವುದಿದೆಯೋ ಅದನ್ನೇ ಅವರು ದಾನ ಮಾಡುವುದು ಸಹಜ.

ಮತದಾರರ ಆರನೇ ಜ್ಞಾನೇಂದ್ರಿಯವು ದೇಶಕ್ಕೆ ಸುಭದ್ರ ಸರ್ಕಾರ ಕಟ್ಟಲು ಅಗತ್ಯವಾದ ವಿವೇಕವನ್ನು ಹೊಂದಿದೆ ಎಂದು ಕೆಲವಾರು ಪತ್ರಿಕೆಗಳು ಆಶೆ ವ್ಯಕ್ತಪಡಿಸಿವೆ.

–ನಮ್ಮ ಆಶಯವೂ ಅದೇ ಆದರೂ, ತಮ್ಮ ಉಳಿದ ಐದು ಜ್ಞಾನೇಂದ್ರಿಯಗಳನ್ನು ವಿವೇಚನೆಯಿಂದ ಹಾಗೂ ಸಮಗ್ರ ರೀತಿಯಲ್ಲಿ ಬಳಸಿ, ಸಾರಾ ಸಾರ ವಿವೇಕವುಳ್ಳವರಾಗಿ ಮತದಾನ ಮಾಡುವುದೇ ಈಗ ವಿಹಿತ.

ಎರಡು ಕೋತಿಗಳ ವಿವಾಹವನ್ನು ಮೊನ್ನೆ ಅತ್ಯಂತ ಅದ್ದೂರಿಯಿಂದ ಸಾಂಗೋಪಾಂಗವಾಗಿ, ನೂರಾರು ಅತಿಥಿಗಳ ಸಮ್ಮುಖದಲ್ಲಿ ಮಾಡಲಾಯಿತೆಂಬ ವರದಿ ಜಪಾನಿನಿಂದ ಬಂದಿದೆ.

–ಮನುಷ್ಯನ ಕೋತಿ ಚೇಷ್ಟೆಯು ಕೋತಿಗಳ ಚೇಷ್ಟೆಗಿಂತಲೂ ವಿಪರೀತವಾಗಿರುತ್ತದೆ ಎಂಬುದಕ್ಕೆ ಇದು ಉದಾಹರಣೆ.

ನಿಮ್ಮಲ್ಲಿ ಕೆಲವರು ಭಾವಿಸಿರುವಂತೆ ನಾನು ಉದ್ಧಾರಕಿಯಾಗಲಿ, ರಕ್ಷಕಿಯಾಗಲಿ ಅಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಪಕ್ಷದ ಸದಸ್ಯರಿಗೆ ಕಿವಿಮಾತು ಹೇಳಿದ್ದಾರೆ.

–ಈ ಹೇಳಿಕೆ ನೀಡುವ ಸತ್ಯ ಪರಾಯಣವಾದ ನಿಷ್ಕಳಂಕ ವ್ಯಕ್ತಿತ್ವದಿಂದ ಅವರು ಶೋಭಿಸುತ್ತಾರೆ ಎಂದು ಸಂತೋಷದಿಂದ ಒಪ್ಪಬಹುದು.

ತಾವೆಂದರೆ ಜನತಾ ದಳ, ಜನತಾ ದಳ ಎಂದರೆ ತಾವು ಎಂಬ ವಿಪರೀತ, ಭಾವನೆ ಎಚ್ ಡಿ ದೇವೇಗೌಡರಿಗೆ ಇದ್ದಂತಿದ್ದು, ಎಲ್ಲವೂ ತಮ್ಮ ತಲೆಯ ಮೇಲಿದೆ ಎಂದು ಅವರು ಭಾವಿಸಿದಂತಿದೆ ಎಂದು ಸ್ವಲ್ಪ ಕಾಲದ ಹಿಂದೆ ಕಾಂಗ್ರೆಸ್ ಸೇರಿದ ಮಾಜಿ ದಳ ನಾಯಕ ಆರ್ ಎಲ್ ಜಾಲಪ್ಪ ಟೀಕಿಸಿದ್ದಾರೆ.

–ಮಾನ್ಯ ಜಾಲಪ್ಪನವರ ಟೀಕೆ ಅವಸರದ್ದಾಗಬಹುದು. ಅವರಹಾಗೇ ಜನತಾ ದಳ ತ್ಯಜಿಸಿ ಹೋಗುತ್ತಿರುವವರ ನೂಕು ನುಗ್ಗಲನ್ನು ಗಮನಿಸಿದಾಗ ಕೊನೆಗೆ ದೇವೇಗೌಡರು ಪಕ್ಷದ ಬಗ್ಗೆ ಹೊಂದಿರುವ ಅನನ್ಯ ಏಕೋಭಾವವು ಯಥಾರ್ಥವಾಗಿ ಬಿಡಬಹುದು.

ಮೊನ್ನೆ ಭಾರತವು ಐದು ಅಣು, ಪರಮಾಣು ಸಾಧನಗಳನ್ನು ಸಿಡಿಸಿ, ಇನ್ನು ಮುಂದೆ ಯಾವ ದೇಶವೂ ತನ್ನ ಮೇಲೆ ಧಾಳಿ ಮಾಡುವುದಕ್ಕೆ ಹಿಂದು ಮುಂದೆ ನೋಡಬೇಕೆಂಬ ಅಂಶವನ್ನು ಜಗತ್ತಿಗೇ ಮನವರಿಕೆ ಮಾಡಿಕೊಟ್ಟಿತಲ್ಲಾ, ಆಗ ತಕ್ಷಣ ಅವಸರದ ಅಸಂಬದ್ಧ ಹೇಳಿಕೆಗಳನ್ನು ನೆರೆಯ ಪಾಕೀಸ್ತಾನ ನೀಡಿದಾಗಲೂ, ಚೈನ ಮಾತ್ರ ಗಂಭೀರ ಮೌನವ್ರತ ಪಾಲಿಸಿದ್ದು ಏಕೋ ಎಂದು ಒಬ್ಬರು ವಿಸ್ಮಯಪಟ್ಟಿದ್ದಾರೆ.

–ಯಾಕೆಂದರೆ ಪಾಕೀಸ್ತಾನಕ್ಕೆ ತಾನು ಏನು ಮಾಡುತ್ತಿದ್ದೇನೆಂಬ ಅರಿವು ಇರಲಿಲ್ಲ; ಚೈನಕ್ಕೆ ಏನು ಮಾತಾಡುವುದೆಂದು ತಿಳಿಯದೆ ಬಾಯಿ ಕಟ್ಟಿತ್ತು. ಈ ಎರಡೂ ಪ್ರತಿಕ್ರಿಯೆಗಳಿಗೆ ಮುಖ್ಯ ಕಾರಣ ಭಾರತಕ್ಕೆ ತಾನು ಏನು ಮಾಡಿದೆ ಎಂಬುದು ನಿಚ್ಚಳವಾಗಿ ತಿಳಿದಿತ್ತು ಎಂಬುದೇ ಆಗಿದೆ.

ದೂರವಾಣಿಯೇನೋ ಈಗ ಸರಿಯಾಗಿ ಕೆಲಸ ಮಾಡುತ್ತಿದೆ. ಆದರೆ ಯಾರಿಂದಲೂ ಕರೆ ಮಾತ್ರ ಬರುತ್ತಿಲ್ಲ ಎಂದು ಜನತಾ ದಳ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಹೇಳಿದ್ದಾರೆ.

–ದೂರವಾಣಿ, ಕೆಟ್ಟು ಕುಳಿತಿದ್ದಾಗ ಬರುತ್ತಿದ್ದ ಅಸಂಖ್ಯ ಕರೆಗಳು 'ರಾಂಗ್ ನಂಬರ್' ಕರೆಗಳೇ ಆಗಿದ್ದವು ಎಂಬುದನ್ನು ಒಪ್ಪಿಕೊಳ್ಳಲು ದ್ರಾವಿಡ ಪ್ರಾಣಾಯಾಮದ ಈ ಬಡಿವಾರವಾದರೂ ಯಾಕೆ?

ಕೆಂಬೂತ

'ಕವಿ ಹೇಳಿದ್ದು- ಕರೆ ಆಡಿದ್ದು'



ಆಫೀಸು ಇದೆಯೆಂದು
ಹೋಗುವೆನು ನಿತ್ಯ
ಬರೆಯುವೆನು ಅಲ್ಲೇ
ಸುಮ್ಮನೊಂದು ಪದ್ಯ

ಕಬ್ಬಿಗಿತಿ ನಾನೆಂದು
ನಡೆಸಿ ಸಂದರ್ಶನ
ಕಂಡಿತು Societyಯಲಿ
ನನ್ನ ಕುರಿತೊಂದು ಕಥನ

ಅಭಿನಂದನೆ ಕರೆಗೆಲ್ಲ
ಕಿವಿ ನಿಮಿರಸಿದ್ದೆ
ಕವಿ ಆಗಿಬಿಟ್ಟೆನೆಂದು
ಉಬ್ಬುತ್ತಲಿದ್ದೆ

ಇತ್ತೊಂದು ಸಂದೇಶ
ನಾನಿಲ್ಲದಿರುವಾಗ
ಮುಂಬೈ ಪೇಟೆಯಿಂದ
ಫೋನೈಸಿದ್ದನಂತೆ

ಹೆಸರು ಉತ್ತರನಂತೆ
ಆಗಾಗ ಫೋನಂತೆ
ಬಿಟ್ಟಿಲ್ಲ ನಂಬರ್ರು
ನಾ ಮತ್ತೆ ಫೋನೈಸಲು

ಆಫೀಸಿನ ನಿಂದನೆಯೇ
ಲೇಖನಕೆ ಅಭಿನಂದನೆಯೇ
ಸಿಕ್ಕಿಬಿದ್ದ ಗುಂಗಲ್ಲಿ
ಮಧ್ಯೆ ಮತ್ತೊಮ್ಮೆ ರಿಂಗು

'ಕಡೆಗೂ ಸಿಕ್ಕರಲ್ಲ'
ಎಂದ ಇಂಗ್ಲಿಷಿನಲಿ
'ಇದ್ದರಂತೆ ಟೂರಲ್ಲಿ-
ಹೌದು, ನಾನೇ, ನಾನು ನಾನು.'

ಕಾವ್ಯವಿನೋದಿನಿ

ಓಹೋ ಈತನೇ ಆತ
ಏನಾಗಬೇಕಿತ್ತು
ಉಸರುವಷ್ಟರಲ್ಲಿಯೇ
ಕದಪು ರಂಗೇರಿತ

'ನೀನು ಕವಿಯಂತೆ'
ಹೌದೇ ಬರಿಕಂತೆ
'ನಿನ್ನ ಚಿತ್ರವೂ ಚಂದ'
ಆ... ಆ... ಏನಂದ?!

ಅಭಿಮಾನಿ ತಾನಂತೆ
ನನಗಿಲ್ಲ ಚಿಂತೆ
ಅದಂತೆ ಇದಂತೆ
ನಾ ಏನೆಲ್ಲವಂತೆ

ನಿಂತಿರುವರು ಯಾರ್‍ಯಾರೋ
ನಾ ಮುಂದು ತಾ ಮುಂದು
ನೀಡಬೇಕಂತೆ ನನಗೆ
ತಮ್ತಮ್ಮ ತಯ್ಯಾರು

ಸೀರೆ ನೇಯ್ಗೆಯವರು
ಶೃಂಗಾರ ಸುಗಂಧದವರು
ಮೈಕಟ್ಟು ಮಾಡುವವರು
ವಿದೇಶೀ ಉಡಿಗೆಯವರು

ಹಲವೇ ಆಯ್ದವರಲ್ಲಿ ನಾನು
ಸ್ವೀಕರಿಸಬೇಕಿನ್ನು
ಕಳಿಸುವರಂತೆ ಮನೆಗೆ
ಎಲ್ಲ; ಯಾವಾಗ, ಎಲ್ಲಿಗೆ?

ಆಳತೆ, ಬಣ್ಣ, ಕೇಳಿದನವ
ಹೇಳಿದೆ ಎಲ್ಲ ಮುಜುಗರದಿ
ಇರುವೆನೆಂದ ಆಫೀಸಲ್ಲೇ
ತರುವೆನೆಂದ ಇಷ್ಟರಲ್ಲೇ

ಅಮೇರಿಕದ ಒಳ ಉಡುಪಿನಲಿ
ವ್ಯಾಯಾಮದ ಮೈಕಟ್ಟಿನಲಿ
ವಯ್ಯಾರದ ಸೀರೆಯಲಿ
ಪರಿಮಳವು ತೇಲುತಲಿ

ಕಣ್ಣಮುಂದೆ ಸುಳಿದಳು
ಕಾವ್ಯ ಕನ್ನಿಕೆಯು
ಪದಗಳ ಪೋಣಿಸುತ
ಕೈ ಮಾಲೆ ಒಲ್ಲೈಸುತ

ಬೆಚ್ಚಿ ಬಿದ್ದೆನು ನಾನು
ಅಟ್ಟಹಾಸದ ನಗುವಿಗೆ
ಗಟ್ಟಿಯಾಗಿ ಮೇಳೈಸಿದ
ಆ ಉತ್ತರ ಕುಮಾರ

ವೆರಿ ಸಾರಿ ಡಿಯರ್
ನಾ ಏಮಾರಿಸಿಬಿಟ್ಟೆ
ಈವರೆಗೆ ಆಡಿದ್ದೆಲ್ಲ
ಪರಿಶುದ್ಧ ಲೊಟ್ಟೆ

ಸಾಲು ಬರೆದ ಮಾತ್ರಕ್ಕೆ
ಕವಿ ಆಗಿ ಬಿಟ್ಟೆಯೇನು
ನಿನ್ನ ಚಿತ್ರ ಚೆನ್ನಿದ್ದರೇನು
ಮಿನುಗು ತಾರೆಯೇನು

ಬರೆ ಬುರುಡೆ ಮಾತಿಗೇ
ಬೀಳುವೆಯಾ ಬೇಸ್ತು
ಕವಿ ಆಗುವ ಕನಸಿಗೆ
ಬೆಚ್ಚಗೆ ಹೊದಿಗೆ ಹೊದಿಸು

-ವಸಂತ ಕಲ್‌ಬಾಗಲ್

ಶೇಷಣ್ಣ ಮತ್ತು ಗಾಂಧೀಜಿ

ಇದು ಸ್ವಾತಂತ್ರ್ಯ ಪೂರ್ವದ ಮಾತು. ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ಏರ್ಪಾಡಾಗಿತ್ತು. ಈ ಅಧಿವೇಶನದ ಅಧ್ಯಕ್ಷರು ಗಾಂಧೀಜಿಯವರು.

ಕಾಂಗ್ರೆಸ್ ಅಧಿವೇಶನದ ವ್ಯವಸ್ಥಾಪಕರು ಮೈಸೂರಿನ ಮಹಾರಾಜರಿಗೆ ಪತ್ರವೊಂದನ್ನು ಬರೆದು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಂಡವೊಂದನ್ನು ಕಳಿಸಿಕೊಡಬೇಕೆಂದು ವಿನಂತಿಸಿಕೊಂಡರು. ಅದರಂತೆ ಏರ್ಪಾಡುಗಳು ನಡೆದವು. ಅರಮನೆ ವಿದ್ವಾಂಸರ ವಾದ್ಯವೃಂದ, ಅದರ ನೇತೃತ್ವ ಗುರು ವೆಂಕಟಗಿರಿಯಪ್ಪ ಅವರದು, ಇನ್ನಿತರ ಕೆಲವು ಸಂಗೀತ ವಿದ್ವಾಂಸರು- ಬೆಳಗಾವಿಗೆ ಹೊರಡುವುದೆಂದು ನಿಶ್ಚಯ ವಾಯಿತು. ಈ ಪಟ್ಟಿಯಲ್ಲಿ ಶೇಷಣ್ಣನವರ ಹೆಸರು ಸೇರ್ಪಡೆಯಾಗಿರಲಿಲ್ಲ. ಶೇಷಣ್ಣನವರಿಗೆ ಈ ಹೊತ್ತಿನಲ್ಲಿ ಇಳಿವಯಸ್ಸು. ಜತೆಗೆ ಅವರು ಅತ್ಯಂತ ಉನ್ನತ ಮಟ್ಟದ ವೈಣಿಕರು; ನಾದಯೋಗಿ ಬಹುಶಃ ಅವರ ವೃದ್ಧಾಪ್ಯವನ್ನೂ, ಸ್ಥಾನಮಾನಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಹಾರಾಜರು ಹೀಗೆ ಮಾಡಿದ್ದಿರಬೇಕು.

ಶೇಷಣ್ಣನವರಿಗೆ ಈ ಎಲ್ಲ ಸಮಾಚಾರವೂ ತಿಳಿಯಿತು. ಅವರು ನೊಂದುಕೊಂಡರಂತೆ "ಎಲಾ, ದೇಶವನ್ನು ಸ್ವತಂತ್ರಗೊಳಿಸಬೇಕು, ನಮ್ಮ ಗುಲಾಮಗಿರಿ ತೊಡೆದುಹಾಕಬೇಕು ಅಂತ ಈ ಮಹಾತ್ಮ ಹಗಲಿರುಳೂ ಶ್ರಮ ಪಡುತ್ತಾ ಇದ್ದಾನೆ... ಅಂಥ ದೊಡ್ಡ ವ್ಯಕ್ತಿ ಇದೀಗ ನಮ್ಮ ಮೈಸೂರು ಸೀಮೆಗೇ ಬಂದಿದ್ದಾನೆ... ಈ ಪುಣ್ಯಾತ್ಮನ್ನ ನೋಡುವ ಯೋಗ ನನಗಿಲ್ಲದೆ ಹೋಯಿತೇ?

ನನಗೂ ವಯಸ್ಸಾಗಿ ಹೋಯ್ತು... ಇನ್ನೆಷ್ಟು ದಿನ ತಾನೇ ಬದುಕಿಯೇನು?... ನನ್ನ ಜೀವನದಲ್ಲಿ ಇನ್ನೊಂದು ಸಾರಿ ಗಾಂಧಿ ಮಹಾತ್ಮನ್ನ ನೋಡೋ ಯೋಗ ನನಗೆ ಸಿಕ್ಕೀತೇ?"

ಶೇಷಣ್ಣನವರು ಹೀಗೆ ಕೊರಗುತ್ತಿರುವುದು ಮಹಾರಾಜರಿಗೆ ಮೂರನೆಯವರೊಬ್ಬರ ಮುಖಾಂತರ ತಿಳಿಯಿತು. ಅವರು ಮುಗುಳ್ನಕ್ಕು



ನುಡಿದರು- "ಇಷ್ಟೇಯೇ? ಶೇಷಣ್ಣೋರ ಅಭಿಪ್ರಾಯ ಹೀಗಿದ್ದರೆ, ಅದು ಖಂಡಿತ ಹಾಗೇ ನಡೆಯಲಿ. ಕಾರ್ಯಕ್ರಮದ ಪಟ್ಟಿಯಲ್ಲಿ ಅವರ ಹೆಸರನ್ನೂ ಸೇರಿಸಿ... ಪ್ರಯಾಣಕ್ಕೆ ಅವರಿಗೆ ಪ್ರಥಮದರ್ಜೆ ಅನುಕೂಲವನ್ನೂ, ನೋಡಿಕೊಳ್ಳಲು ಸಿಬ್ಬಂದಿಯನ್ನೂ ಏರ್ಪಾಡು ಮಾಡಿ."

ಅಂದು ಗಾಂಧೀಜಿಯವರ ಮೌನಾಚರಣೆಯ ದಿವಸ. ಬೆಳಿಗ್ಗೆ ಒಂಬತ್ತು ಗಂಟೆಗೆ ಸರಿಯಾಗಿ ಶೇಷಣ್ಣನವರು ಗಾಂಧೀಜಿಯವರ ಮುಂದೆ ವೀಣೆ ನುಡಿಸುವುದೆಂದೂ ಅವರಿಗೆ ನಿಗದಿಯಾದ ಕಾಲಾವಕಾಶ ಹತ್ತು ನಿಮಿಷಗಳೆಂದೂ ಮೊದಲೇ ಸೂಚಿತವಾಗಿತ್ತು.

ಶೇಷಣ್ಣನವರು ಉಲ್ಲಸಿತರಾಗಿ ವೇದಿಕೆಯಲ್ಲಿ ಆಸೀನರಾದರು. ಅಂದು ಅವರಿಗೆ ಕಾಪಿರಾಗದಲ್ಲಿ ಲಹರಿ. ಗಂಭೀರ ಶೈಲಿಯ ಕಾಪಿರಾಗ ಶೇಷಣ್ಣನವರಿಂದ ನವುರಾಗಿ ನಿರೂಪಿತ ಆಗತೊಡಗಿತು. ವಾತಾವರಣದ ತುಂಬ ಉಲ್ಲಾಸ... ಶಾಂತಿ... ನಾದ ಸುಖ!


ಹತ್ತು ನಿಮಿಷ ಮುಗಿಯುತ್ತಿದ್ದಂತೆ ಗಾಂಧೀಜಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ ಅಲ್ಲಿಗೆ ಬಂದರು. ಸಂಜ್ಞೆಯನ್ನರಿತು ಶೇಷಣ್ಣನವರು ರಾಗಾಲಾಪನೆಗೆ ಮುಕ್ತಾಯವನ್ನು ತೋರಿಸಿದರು. ಕಣ್ಣು ಮುಚ್ಚಿ ವೀಣಾವಾದನದ ಆನಂದವನ್ನು ಸವಿಯುತ್ತಿದ್ದ ಗಾಂಧೀಜಿ ಥಟ್ಟನೆ ಕಣ್ಣು ತೆರೆದರು. ಮಹದೇವ ದೇಸಾಯಿ ಬಾಗಿ ಬಾಪೂಜಿಯ ಕಿವಿಯಲ್ಲಿ ಉಸುರಿದರು.

"ಬಾಪೂಜಿ, ಮೀಟಿಂಗ್‌ಗೆ ಹೊತ್ತಾಗುತ್ತಾ ಇದೆ. ತಾವು ದಯಮಾಡಿ ಬರಬೇಕು."

ಸಂಗೀತದ ಸುಮಧುರ ಗುಂಗಿನಿಂದ ಹೊರಬರದ ಬಾಪೂಜಿ ಚೀಟಿಯಲ್ಲಿ ಹೀಗೆ ಬರೆದರು-

*aa*Meeting can wait: please ask Sheshanna to continue for another ten minutes*ffm*

[ಮೀಟಿಂಗ್ ಕಾಯುತ್ತದೆ: ಶೇಷಣ್ಣನವರು ದಯಮಾಡಿ ಮತ್ತೂ ಹತ್ತುನಿಮಿಷ ನುಡಿಸಲಿ!]



ಶೇಷಣ್ಣನವರ ಸಂತೋಷ ಹೇಳಲಾಗದಷ್ಟು! ಅವರು ಭಾವೋದ್ರೇಕರಿಂದ ಮತ್ತೆ ವೀಣೆಯನ್ನು ಮಡಿಲಲ್ಲಿ ಅಲಂಕರಿಸಿಕೊಂಡರು... ಅವರದೇ ಆದ ಮನೋಜ್ಞ ಶೈಲಿಯಲ್ಲಿ ವೀಣಾನಾದ ಮತ್ತೆ ಕೇಳುಗರ ಅಂತರಂಗಗಳನ್ನು ಮೋದದಿಂದ ಮೀಟತೊಡಗಿತು...

ಶೇಷಣ್ಣನವರಿಗೆ ಕೊಟ್ಟ ವೇಳೆ ಮುಗಿಯಿತು. ಗಾಂಧೀಜಿ ಸಂತೃಪ್ತರಾದರು. ಮಹದೇವ ದೇಸಾಯಿಯವರಿಗೆ ಹೀಗೆ ಸಂದೇಶ ಬರೆದರು-

*aa*It is divine! please tell Sheshanna that his veena has given lot of solace to my troubled mind!*ff*

[ದೈವಿಕವಾದ ಸಂಗೀತ! ಶೇಷಣ್ಣನವರ ವೀಣೆ ನನ್ನ ಅಶಾಂತ ಮನಸ್ಸಿಗೆ ತಂಪನ್ನೆರೆಯಿತು. ದಯವಿಟ್ಟು ಈ ಮಾತನ್ನು ಅವರಿಗೆ ತಿಳಿಸಿ.]

ಇಂಥ ನಾದಯೋಗಿ ಶೇಷಣ್ಣನವರು ನಮ್ಮವರೆಂಬುದು ನಮ್ಮೆಲ್ಲರ ಹೆಮ್ಮೆ. ಈ ವೀಣಾ ಚಕ್ರವರ್ತಿಯ ವೈಯಕ್ತಿಕ ಬದುಕಿನ ಬಗ್ಗೆ ಒಂದು ಮಾತನ್ನು ಹೇಳಬೇಕು.

ಶೇಷಣ್ಣನವರು ನಾದಯೋಗಿ: ನಿಜ. ಆದರೆ ಬದುಕಿನಲ್ಲಿ ಅವರು ಭೋಗಿಗಳಲ್ಲ... ಸಂಸಾರದಲ್ಲಿ

ಸುಖ ಉಂಡವರಲ್ಲ. ಜೀವನ ಅವರಿಗೆ ಕೊಟ್ಟದ್ದು ಸಿಹಿಗಿಂತ ಹೆಚ್ಚಾಗಿ ಕಹಿಯನ್ನೇ! ಆದರೂ ಈ ನಾದಯೋಗಿ, ಕರ್ಮಯೋಗಿ ತಮ್ಮೆಲ್ಲ ಸೌಖ್ಯವನ್ನು ವೀಣೆಯ ತಪಸ್ಸಿನಲ್ಲಿ ಕಂಡುಕೊಂಡರು. ಎಷ್ಟೋ ಬಾರಿ ಅವರು ತಮ್ಮ ನಾದ ಶೈಲಿಗೆ ತಾವೇ ಮರುಳಾಗುತ್ತಿದ್ದುದೂ ಉಂಟು! ಹಾಗೆ ಅವರು ವೀಣೆಯ ಬರುಡೆಗೆ ವಿವಶರಾಗಿ, ತಲೆಯಾನಿಸಿ ರಾಗ ಭಾವದೊಡನೆ ಐಕ್ಯರಾಗುವಾಗ ವಾಸುದೇವಾಚಾರ್ಯರು ಮನಸ್ಸು ತುಂಬಿ ಉದ್ಗರಿಸುತ್ತಿದ್ದರಂತೆ:

"ಇಂತಹ ನಾದಯೋಗಿಯನ್ನು ಮತ್ತೆಲ್ಲಿಂದ ತರೋಣ?"

ಬದುಕು ಯಾರಿಗೂ ಶಾಶ್ವತವಲ್ಲ. ಪರಿಪಕ್ವ ಜೀವನವನ್ನು ನಡೆಸಿ, ಜೀವಮಾನದುದ್ದಕ್ಕೂ ನಾದಸುಧೆಯನ್ನು ಹರಿಸಿದ ಮಹನೀಯ ಶೇಷಣ್ಣನವರು ಕಡೆಗೊಂದು ದಿನ ತಾವು ನಂಬಿದ ನಾದದಲ್ಲಿ ಐಕ್ಯರಾದರು. ತಮ್ಮ ಸಾಧನೆಯಿಂದ ಅಮರರಾದರು.

ಶೇಷಣ್ಣನವರ ನಿಧನದ ಸಂದರ್ಭದಲ್ಲಿ ಸಹೃದಯ ಪತ್ರಿಕೆಯೊಂದು ಬಹು ಸಮಂಜಸವಾಗಿ ಶೋಕಿಸಿತು-

"ಸರಸ್ವತಿಯ ಮನೆಯಲ್ಲಿ ಕಳವು"

-ಭಾರತೀ ಕಾಸರಗೋಡ್



ಮಯೂರ



ಜನ ಯಾವತ್ತೂ ಹೇಳ್ತಿದ್ರು..ಏನಾದ್ರೂ 'ಕಾಣುವಂತ' ಕೆಲಸ ಮಾಡಿಸ್ರಿ ಎಂದು..

ಆಸ್ಫೋಟನ

* ವನಮಾಲಾ ಕಟ್ಟೇಗೌಡರ



ನೀಲತ್ತೆಯ ಸಾವಿನಿಂದ ನೊಂದ ಮಡದಿಯನ್ನು ಸಮಾಧಾನಿಸಲು ಬಂದ ಗಂಡನ ಮೇಲೆ ಪಾರ್ವತಿ ದಾಳಿ ಮಾಡಿದ್ದೇಕೆ?

ಪಾರ್ವತಿ ತಲಿಯೊಳಗ ಗುಂಗೀಹುಳ ಹೊಕ್ಕೊಂಡಂಗಾಗಿ ತಲಿಯೆಲ್ಲಾ ಗುಂಯಿಗುಡಾಕತ್ತಿತ್ತು. ಮುಂಜೇಲಿಂದ ಬಸ್ಸಿನೊಳಗ ಕುಂತೂ- ಕುಂತೂ ಬೆನ್ನು ಬಿಗ್ಯಾಕತ್ತಿತ್ತು. ಬೆಂಗಳೂರಿನ ಲಕ್ಷುರಿ ಬಸ್ಸು ಗದಗ ಮುಟ್ಟೊದ ತಡಾ ಲಗೂಲಗೂನ ಇಳದು ಡಂಬಳ ಬಸ್ಸಿನ ಹುಡುಕಾಟ ನಡಸೀದ್ಲು ಪಾರ್ವತಿ. ಆಕಿ ಗಂಡ "ನೀ ಒಂದ್ಕಡೆ ನಿಂತ್ಕೋ ನಾ ನೋಡ್ಕಂಡ್ ಬರ್ತಿನೆ' ಅಂದ್ರೂ ಕೇಳ್ದ ಬಸವನ ಹಿಂದಿನ ಬಾಲದಂಗ ಹಿಂದಿಂದ ಸುತ್ತತ್ತಿದ್ಲು. ಅಷ್ಟ ಪುಣ್ಯಾಕ ಡಂಬಳ ಬಸ್ಸು ನಿಲ್ದಾಣದ ಒಂದು ಮೂಲ್ಯಾಗ ನಿಂತಿತ್ತು. ಪಾರ್ವತಿ ಗಂಡನೊಂದಿಗೆ ಅವಸರದಿಂದ್ಲೇ ಬಸ್ಸು ಹತ್ತಿ ಕುಂತ್ಲಾದ್ರೂ ಡ್ರೈವರಣ್ಣ ಚಾ ಕುಡ್ಯಾಕ ಹೋಗಿದ್ರಿಂದ ಒಂದಿಷ್ಟ ಹೊತ್ತು ಕಾಯೂದು ಅನಿವಾರ್ಯವಾಯಿತು.



ಹಂಗ ನೋಡಿದ್ರ ಈಗ ಪಾರ್ವತಿ ಡಂಬಳದಾಗಿದ್ದು ಹಳೇ ಮಾತಾಗ್ಬೇಕಾಗಿತ್ತು. ನಿನ್ನೆ ಮುಂಜೇಲೆ ಹತ್ತ ಘಂಟೆ ಸುಮಾರಿಗೆ ಒಂದು ಮುಟ್ಟಿತು 'ತಂತಿ' ಆಕಿಗೆ. ಆ ತಂತಿಯೊಳಗ ಇರೋ ಸುದ್ದಿ ಅಂದಾಜಿದ್ರೂ ನಡುಗುವ ಕೈಗಳಿಂದ ಅದನ್ನ ಒಡದು ಓದಿದ್ಲು. ಓದಿ ಕುಸುದು ಕುಂತು ಅಳಾಕ ಶುರು ಮಾಡಿದ್ಲು. ಪಾರ್ವತಿಗೆ ಎದಿ ಬಡದಂಗಾಗಿ ಒನ್ನಮೂನಿ ಮೈಯೆಲ್ಲಾ ತಲ್ಲಣ ಅವರಿಸಿ ಹಾಸಿಗೆ ಮ್ಯಾಲ ಬೋರ್ಲ ಬಿದ್ದು ಅತ್ಲು. ಅದ್ರ ಆಕಿ ಆ ದೆವ್ವನಂಥ ಮನ್ಯಾಗ ಯಾರಿದ್ರು ಕೇಳಾಕ? ಆಕಿ ಗಂಡ ಒಂಬತ್ತ ಘಂಟೇಕ ನಾಸ್ಟಾ ಮಾಡಿ ಮೈಸೂರಿಗೆ ಹೋಗಿದ್ದ. ಇಕಿ ಅಳೂದು ಕೇಳಿ ಆಜೂಬಾಜೂ ಮನಿಯವ್ರನ ಬಂದು ಮಾತಾಡ್ಸಿ ಸಮಾಧಾನ ಮಾಡಾಕ ಅದೇನು ಡಂಬಳದಂಥ ಹಳ್ಳೀನ? ಅದೂ ಪಾರ್ವತಿಯಂಥಾ ಹಳ್ಳಿ ಗುಗ್ಗುನ್ನ ಯಾರು ಕೇಳ್ಬೇಕಲ್ಲೆ ನಮ್ಮ ನಾಡಿನ ರಾಜಧಾನಿಯೊಳಗ! ಪಾರ್ವತಿ ಒಬ್ಬಕೆ ಅತ್ಲು, ಅತ್ತ, ಅತ್ಲು ಎದಿ ಹಗುರಾಗಿಂದ ಗಂಡನ ಪೋನ್ ಹಚ್ಚಿದ್ಲು ಗಂಡ ಕಾಲೇಜನ್ಯಾಗ ಇಲ್ಲಾ ಅನ್ನೂ ಖಬರ ಇಲ್ವ! 'ಥೂ ಈ ಮರೆವಿಗೆ ಒಂದಿಷ್ಟು ಬೆಂಕಿ ಹಾಕ!' ಎಂದು ಹತಾಶಳಾಗಿ ನೆಲದ ಮ್ಯಾಲ ಕುಕ್ಕರಬಡುದು ಗಂಡನ ದಾರಿ ಕಾಯಾಕುಂತ್ಲು. ಈ 'ಕಾಯುವಿಕೆ'ಯೊಳಗ ಇಷ್ಟೊಂದು ಹಿಂಸೆಯಿದೆಯೆಂದು ಆಕಿಗೆ ಅದ ಮೊದ್ಲು ಸಾರಿ ಅನುಭವವಾಗತೊಡಗಿತ್ತು...

"ಯಾರ್ರಿ ಟಿಕೀಟು... ಟಿಕೀಟು..." ಕಂಡಕ್ಟರಣ್ಣನ ಕರ್ಕಶ ಕೂಗಿಗೆ ಬೆಚ್ಚಿ ಪಾರ್ವತಿ ವಾಸ್ತವಕ್ಕಿಳಿದ್ಲು. ಗಲ್ಲದ ಮ್ಯಾಲ ಹನಿಯಾಕುಂತ ಕಣ್ಣೀರು ಒರಸಿಕೊಳ್ಳೋ ಖಬರ ಸೈತ ಇಲ್ದ ಸುಮ್ನ ಕುಂತ್ಲು. ಪಾರ್ವತಿಯ 'ಬಹಿರಂಗ ಅಳು' ಶೇಖರನ ದೃಷ್ಟಿಯೊಳಗ ಒಂದು 'ಅನಾಗರಿಕ' ನಡವಳಿಕೆ. ಆದ್ರೂ ಆತ ಪಾರ್ವತಿಗೆ ಏನೂ ಹೇಳ್ದ ಸುಮ್ನಿದ್ದ. ಕೆಲವು ವಿಷಯಗಳಲ್ಲಿ ಹೆಂಡತಿ ಹಠಮಾರಿತನ ಆತನಿಗೆ ಗೊತ್ತಿದ್ದಿದ್ದ ಇತ್ತಲ್ಲ!

ಬಸ್ಸು ಗದಗ ಪಟ್ಟಣ ದಾಟಿ ಡಂಬಳ ಹಾದಿ ಹಿಡೀತು. ರಸ್ತೆಯ ಆಜೂಬಾಜೂ ಹೊಲದೊಳಗ ಹಿಂಗಾರಿ ಬೆಳಿ ತುಂಬಿ ನಿಂತಿತ್ತು. ಒಂದು ಕಡ್ಲಿ ಹೊಲಾ ಅಂತೂ ನವತಾರುಣ್ಯದ ಹೆಣ್ಣಿನಂಗ ನಳನಳಸಾಕತ್ತಿತ್ತು. ಆ ಕಡ್ಲಿ ಹೊಲಾ ನೋಡಿದ ಕೂಡ್ಲೆ ಪಾರ್ವತಿಗೆ ನೀಲತ್ತೆ ತಮ್ಮ ಹೊಲಕ್ಕ ಕರ್ಕೊಂಡ್ಹೋಗಿ ಕಡ್ಲಿಗಿಡಾ ಸುಟ್ಟು ತಿನಿಸಿದ್ದು ನೆಪ್ಪಾಗಿ ಇನ್ನಷ್ಟು ಅಳು ಒತ್ತಿ ಬಂತು. 'ನೀಲತ್ತಿ 'ಮಣ್ಣು' ಆಗಿ ಹೋಗಿದ್ದೀತು. ನಿನ್ನೆ ನಸೀನ್ಯಾಗ ಜೀವಾ ಬಿಟ್ಟರೆನ್ನ ಇಷ್ಟು ಹೊತ್ತು ಹ್ಯಾಂಗ ಇಟ್ಟಾರು...?' ಅಂದುಕೊಂಡ ಪಾರ್ವತಿ ಗಂಡನತ್ತ ನೋಡಿದ್ರ ಆತ ಆರಾಮಾಗಿ ನಿದ್ದಿ ಹೊಡ್ಯಾಕತ್ತಿದ್ದ!

* * *

ಡಂಬಳ ಅನ್ನೋ ಡಂಬಳದಂಥಾ ಊರಿಗೆ 'ಗೌಡಕಿ' ಮಾಡ್ಕೊಂಡು ಇದ್ದಿದ್ದ ಮನೆತನ ಪಾರ್ವತಿ ಅಪ್ಪಂದು. ಆದ್ರ ಆ ಮನಿಗೆ ಏನ ಬಡ್ಕೊಂಡಿತ್ತೋ ಏನೋ ಸಡ್ಯಾಕ ಬಂದ ಸೊಸ್ತೇರು ಒಂದ ಹತ್ತ ವರ್ಷನಾದ್ರೂ ಬಾಳೇ ಮಾಡ್ದ ಒಂದು-ಎರಡು ಹಡದು ಶಿವನ ಪಾದಾ ಸೇರ್ತಿದ್ರು! ಪಾರ್ವತಿ ಮುತ್ತಜ್ಜಿ ಪಾರ್ವತಿ ಅಜ್ಜನ್ನ ಹಡದು ಕಣ್ಮುಚ್ಚಿದ್ರ ಪಾರ್ವತಿ ಅಜ್ಜಿ ಪಾರ್ವತಿ ಅಪ್ಪ ಸದಾಶಿವಪ್ಪ ಹಾಗೂ ನೀಲವ್ವನ ಹಡದು ಗಾಡಿ ಬಿಟ್ಟದ್ಲು. ಇನ್ನ ಪಾರ್ವತಿ ತಾಯಿ ಚಂದ್ರೂನ್ನ-ಪಾರ್ವತಿನ್ನ ಹಡದು ಸಂತಿ ಮುಗುಸಿದ್ಲು. ಪಾರ್ವತಿ ಅವ್ವ ಸತ್ತಾಗ ಇನ್ನೂ ನಾಕ ತಿಂಗ್ಳ ಕೂಸು. ಹೆಂಣ್ತಿ ಚಿಂತಿ ಹಚಗೊಂಡು ನೆಲಾ ಹಿಡಿದ ಪಾರ್ವತಿ ಅಪ್ಪ ಆರು ತಿಂಗ್ಳಾದ್ರೂ ಮ್ಯಾಕ ಎದ್ದಿದ್ದಿಲ್ಲ. ಬರೇ ಹೆಂಣ್ತಿ ಸತ್ತ ಚಿಂತಿ ಅಲ್ಲ ಮದುವಿ ಆದ ಐದು ವರ್ಷಕ್ಕ ಗಂಡನ್ನ ಕಳ್ಕೊಂಡು ಹಣೆ, ಮೂಗು, ಕತ್ತು... ಬೋಳ ಬೋಳ ಮಾಡಿಕೊಂಡು ತವ್ರಮನಿ ಸೇರಿದ ತಂಗಿ ನೀಲವ್ವನ ಚಿಂತಿನೂ ಸೇರಿ ಅಂವ ಇನ್ನಷ್ಟು ಹೈರಾಣಾಗಿ ಮೂಳೆಚಕ್ಕಳಾಗಿ ಬಿಟ್ಟಿದ್ದ. ಹಿಂತಾದ್ರ ನಡುವ ಪಾರ್ವತಿ ದಿನದಿನಕ್ಕ ಮೈ ಒಡದು ಗುಂಡಗುಂಡಗ ಬೆಳ್ಯಾಕ ನಿಂತ್ಲು. ಉಂಗುಷ್ಠದಿಂದ ನೆತ್ತಿತನಕಾ ಆಕಿ ಅವ್ರ ಅವ್ವನ ತದ್ರೂಪು. ಮನುಷ್ಯಾರ-ಮನುಷ್ಯಾರ ನಡುವ ಇಷ್ಟಹೋಲಿಕೆ ಇರಾಕ ಶಕ್ಯನ?! ಅಂತ ಪಾರ್ವತಿ ಅಪ್ಪಗ, ಪಾರ್ವತಿ ಅತ್ತಿ ನೀಲವ್ವಗ ಸೋಜಿಗ ಆಕ್ಕಿತ್ತು. ಅಂತೂ ಪಾರ್ವತಿ ಅಪ್ಪ ಹ್ಯಾಂಗೋ ಚೇತರಿಸಿಕೊಂಡ ಮಗಳ ಮಾರಿ ನೋಡಿ! ಅದೂ ಅಲ್ದ ಹರೇದ ತಂಗಿ ಜವಾಬ್ದಾರಿನೂ ಅಂವ್ನ

ಮ್ಯಾಲೆ ಇತ್ತಲ್ಲ?!

ಪಾರ್ವತಿ ತಾಯಿ ಕಳ್ಕೊಂಡ್ರೂ ಆ ಸ್ಥಾನವನ್ನು ಸಮರ್ಥವಾಗಿ ತುಂಬಿದ್ಲು ಪಾರ್ವತಿ ಅತ್ತಿ ನೀಲವ್ವ. ಪಾರ್ವತಿನ್ನ ಒಂದ ಮಗಳಕಿಂತ ಹೆಚ್ಚಾಗಿ ಹೂವಿನಂಗ ಅಂಗೈಯಾಗ ಹಿಡ್ದು ಬೆಳಸಾಕತ್ತಿದ್ಲು. ಒಂದುವ್ಯಾಳೆ ಆಕಿಗೊಂದು ಮಗಳಿದ್ರೂ ಹಿಂಗ ಬೆಳಸ್ತಿದ್ಲೊ ಇಲ್ಲೋ?! ಅದ್ರ ಪಾರ್ವತಿ ಅಪ್ಪಗ ಮಾತ್ರ ಹರೀದ ತಂಗಿ ಬಾಳು ಹಿಂಗ ದೀಪ ಉರದಂಗ ಉರುದು ಹೋಗೋದು ಸೈರಣಿ ಆಗ್ಲಿಲ್ಲ. ಆತ 'ಗೌಡಕಿ' ಮನತನದಂವ ಇದ್ರೂ ಸೈತ ಬಸವಣ್ಣನವರ ಪ್ರಗತಿಪರ ವಿಚಾರಗಳನ್ನ ಒಂದಿಷ್ಟು ಬೆಳಿಸಿಕೊಂಡಿದ್ದ. ಹಿಂಗಾಗಿ ಒಂದಿನಾ ತಂಗಿನ್ನ ಮಗ್ಗಲದಾಗ ಕುಂಡ್ರುಸಿಗೊಂಡು 'ಮರು ಮದುವಿ' ಪ್ರಸ್ತಾಪ ಎತ್ತಿದ. ಆದ್ರ ಅಣ್ಣನ ಮಾತ ಕೇಳಿ ನೀಲವ್ವ ಸೋಜಿಗ ಪಟಗೊಂಡ್ಲು. ಅದ ಸೋಜಿಗದಾಗ "ಈಗ ಮದುವಿ ಹರಕತ್ತು ನನಗಿಂತ ನಿನ್ನ ಹೆಚ್ಚ ಐತಿ, ಹಾಂತಾದ್ರಾಗ ನೀ ನನಗ ಮದ್ವಿ ಮಾಡ್ಕೊ ಅಂತಿಯಲ್ಲ?!" ಅಂತ ಕೇಳಿದ್ಲು. ಪಾರ್ವತಿ ಅಪ್ಪ ತಂಗಿ ಮಾತ ಕೇಳಿ ತಣ್ಣಗ ಹೇಳ್ದ. "ನನ್ನ ಹರಕತ್ತನ್ನ ನಿನ್ನ ಅತ್ತಿಗೆ ಯಾವಾಗ್ಲೋ ತೀರಿಸ್ಯಾಳ. ಇವು ಎರಡು ಮಕ್ಕಳನ್ನು ಇಟಗೊಂಡು ನಾ ಹಾಂಗೋ ಕಾಲಾ ಹಾಕ್ತಿನಿ. ನಿನ್ನ ಬದುಕಿನ ಬಗ್ಗೆನೂ ಒಂಚೂರು ಯೋಚ್ನೆ ಮಾಡು ನಿಂದೂ ಒಂದ ಸಂಸಾರ ಅಂತ ಇರೂದು ಬೇಡಾ...?" ಅಣ್ಣನ ಮಾತಿಗೆ ನೀಲವ್ವನೂ ಅಷ್ಟು ತಣ್ಣಗ ನುಡುದ್ಲು "ಮಕ್ಳ-ಮರಿ ಇದ್ರ್ಯ ಒಂದು ಬುದುಕು-ಇಲ್ಲಿದ್ರ ಇಲ್ಲಾ ಅಂತ ಯಾಕ ಅನ್ಕೋಬೇಕು? ಸತ್ತೋರ ಹಿಂದ ಯಾರೂ ಸಾಯಂಗಿಲ್ಲ ಖರೆ. ಅಕ್ಕ ಸತ್ತರ ಅಮಾಸೆ ನಿಲ್ಲಂಗಿಲ್ಲ. ಅದ್ರ ಸತ್ತೋವು ಬರೇ ಸತ್ತಿರಂಗಿಲ್ಲಲ್ಲ! ಮದುವಿ ಆಗ್ಬೇಕಂದ್ರ ಇವೆರಡು ಮಕ್ಕೇನ ಅಡ್ಡ ಅಕ್ಕಿದ್ವನು ನಿನಗ? ಮುಖ್ಯ ನಿನಗ ಅತ್ತಿಗೆಯುನ್ನ ಮರ್ತು ಇರೋದು ಆಗಂಗಿಲ್ಲ. ನಿನ್ನಂಗ ನನ್ಗೂ ನಿನ್ನ ಭಾವನ್ನ ಮರ್ತು ಇರೋದು ಆಗಂಗಿಲ್ಲ. ಈ ಸುದ್ದಿ ಇನ್ನೊಂದ್ಸಲ ಎತ್ತಬ್ಯಾಡ..." ಅಂತ ಖಡಾ ಖಂಡಿತವಾಗಿ ಅಂದ ಬಿಟ್ಳು. ತಂಗಿ ಮಾತ ಕೇಳಿ ಪಾರ್ವತಿ ಅಪ್ಪ ದಿಗ್ಭ್ರಮೆಗೊಂಡ! ವಾತ್ಸಲ್ಯದಿಂದ ತಂಗಿಯ ತಲೆ ನೇವರಿಸಿ ಹೆಗಲ ಮ್ಯಾಗಿನ ವಲ್ಲೀಲೆ ಕಣ್ಣ ಒರಸಗೊಂತ ಹೊರನಡೆದ. ಅವತ್ತ ಕೊನೆ, ಮತ್ತೆಂದೂ ಆತ ಈ ಸುದ್ದಿನ ಎತ್ಲೇ ಇಲ್ಲ...!

ಹಿಂಗ ನೀಲತ್ತೆಯ ಆರೈಕೆ, ವಾತ್ಸಲ್ಯ, ತಾಯ್ತನದ ತುಂಬು ಪ್ರೀತಿಯೊಳಗ ದಿನಕ್ಕ ದಿನಾ ಹುಣ್ಣಿವಿ ಚಂದಪ್ಪನಂಗ ಬೆಳ್ಯಾಕುಂತ್ಲು ಪಾರ್ವತಿ. ತಿದ್ದಿತೀಡಿದಂಗ ಇರೋ ಮೂಗು- ಬಾಯಿ ಕಡೆದ ಮೂರ್ತಿಹಂಗಿರೋ ಪ್ರಮಾಣಬದ್ಧ ಅವಯುವಗಳು, ಜಲಪಾತದಂಗ ಇಳೇ ಬಿದ್ದ ಕಪ್ಪ ಕೂದಲ ರಾಶಿ... ಒಟ್ಟಿನ್ಯಾಗ ಹೆಣ್ಣಿನ ಬಗ್ಗೆ ನಿರಾಸಕ್ತಿ ಬೆಳಿಸಿಕೊಂಡ ಬೈರಾಗಿ ಸೈತ ಪಾರ್ವತಿನ್ನ ಒಮ್ಮೆ ನೋಡಿದ್ರ ಇನ್ನೊಮ್ಮೆ ನೋಡ್ಬೇಕು! ಹಂಗಿದ್ಲು ಬಂಗಾರದ ಪುತ್ಥಳಿ ಹಂಗ...!

ಪಾರ್ವತಿ ಮ್ಯಾಟ್ರಿಕ್ ಪರೀಕ್ಷಾ ಮುಗಿಸಿ ಗದಿನ್ಯಾಗ ಜೆ. ಟಿ. ಕಾಲೇಜ್ ಸೇರಿದ್ಲು ಪಿ.ಯು.ಸಿ ಕಲ್ಯಾಕಂತ. ಆದ್ರ ಶುದ್ಧ ಹಳ್ಳಿ ಹುಡಿಗ್ಯಾದ ಆಕಿಗೆ ಪ್ಯಾಟಿ ಹುಡುಗಿಯರ ಥಳುಕು-ಬಳಕು ಕಂಡು ಉಸುರು ಸಿಕ್ಕೊಂಡಂಗಾತು. ಹ್ಯಾಂಗೋ ಎರಡ ವರ್ಷ ಮುಗುಸಿ 'ಸಾಕಪ್ಪೋ ಇದರ ಸಹವಾಸ' ಅಂತ ಕಾಲೇಜಿಗೆ ಕೈ ಮುಗಿದ್ರೂ ಆಕಿ ಅಣ್ಣ ಚಂದ್ರೂ ಇದ್ದ ಒಬ್ಬ ತಂಗಿ ಒಂದು ಡಿಗ್ರಿನರ ಮುಗುಸ್ಲಿ ಅಂತ ದುಂಬಾಲುಬಿದ್ದು ಮತ್ತ ಕಾಲೇಜಿಗೆ ಅಟ್ಟಿದ. ಪಾರ್ವತಿ ಕಾಟಾಚಾರಕ್ಕೆ ಎರಡ ದಿನ ಹೋದಂಗ ಮಾಡಿ ನಾಕ ದಿನಾ ಬಿಟ್ಟಂಗ ಮಾಡಿ ಅದನ್ನೂ ಮುಗುಸಿದ್ಲು!

ನಂಬಿಕೆ

ಶತದಡ್ಡರೂ
ಪರೀಕ್ಷೆಗಳಲ್ಲಿ
ಪಾಸಾಗುವದನ್ನು
ಕಂಡಾಗಲೇ
ನನಗೆ
ಪವಾಡಗಳಲ್ಲಿ
ನಂಬಿಕೆ ಹುಟ್ಟಿದ್ದು!

-ಅಮೃತೇಶ್ ತಂಡರ

ಹಿಂತಾ ಹಳ್ಳಿ ಹುಡುಗಿ ಪಾರ್ವತಿ ಒಂದಿನ ತಮ್ಮ ಹತ್ತಿರ ಬಳಗದವರ ಲಗ್ನಕ್ಕಂತ ನೀಲತ್ತಿ ಜೊತಿ ಧಾರವಾಡಕ್ಕ ಹೋದ್ಲು. ಲಗ್ನದಾಗ ಚಿಗರಿ ಮರಿಹಂಗ ಓಡಾಡಕೊಂತ ಇದ್ದ ಆಕಿನ್ನ ಯಾರೋ ಒಬ್ಬ ಸುಂದರ ಯುವಕ ಒಂದ ಸವನ ನೋಡ್ತಿದ್ದ. ಆದು ಪಾರ್ವತಿ ಗಮನಕ್ಕೂ ಬಂದು "ಯಾವ್ದಿದು ಮೂಳ! ಎಂದರ ಹೆಣ್ಮಕ್ಳನ್ನು ಕಂಡ್ಯೆತೋ ಇಲ್ಲೋ?!" ಅಂದುಕೊಂಡು ತನ್ನ ಪಾಡಿಗೆ ತಾನಿದ್ಲು. ಆ ಯುವಕ ಒಂದೆರಡ ಸರ್ತಿ ಇಕಿನ್ನ ಮಾತಾಡ್ಸಾಕಂತ ಹುರುಕಾಡ್ಸಿದ್ರೂ ತಪ್ಪಿಸಿ ಓಡಾಡಿದ್ಲು. ಲಗ್ನಾ ಮುಗಿಸಿ ಡಂಬಳಕ್ಕ ಬಂದಿಂದ 'ಪೀಡೆ ಕಳೀತು' ಅಂತ ನೆಮ್ಮದಿಯ ಉಸಿರುಬಿಟ್ಲು. ಆದ್ರ ಪಾಪ ಆಕಿಗೇನು ಗೊತ್ತಿತ್ತು ಮೊಂದೊಂದು ದಿನ ಇದ ಪೀಡೆ ಜೊತಿಗೆ ಬಾಳೇ ಮಾಡೋ ಪ್ರಸಂಗ ಐತಿ ಅಂತ!

ಧಾರವಾಡದ ಮದುವಿ ಮುಗುಸಿ ಬಂದ ಒಂದೂವರಿ ತಿಂಗ್ಳದಾಗ ಬೆಂಗಳೂರಿನ ಒಂದ 'ವರಾ' ಪಾರ್ವತಿನ್ನ ನೋಡಾಕ ಬಂತು. ಬೆಂಗಳೂರಿನೊಳಗ ಯಾವ್ದೋ ಒಂದು ಕಾಲೇಜಿನ್ಯಾಗ ಮನಃಶಾಸ್ತ್ರದ ಉಪನ್ಯಾಸಕನಂತೆ, ಬಾಳ ಚಂದ ಅದಾನಂತೆ, ತಂದಿ- ತಾಯಿಗೆ ಒಬ್ಬನ ಮಗನಂತೆ, ಬೆಂಗಳೂರಾಗ ಒಂದು ದೊಡ್ಡ ಮನಿ ಐತಂತೆ, ಅವನ ಅಪ್ಪಾ ಅಮ್ಮಾ ಅಲ್ಲೇ ಬೆಂಗಳೂರಿನ ಸಮೀಪದ ಒಂದು ಹಳ್ಯಾಗ ಇರ್ತಾರಂತೆ..! ಹಿಂಗ ಅಂತೆ- ಕಂತೆಗಳ ಸುರಿಮಳೆಯಲ್ಲಿ ಕಕ್ಕಾ-ಬಿಕ್ಕಿಯಾದ ಪಾರ್ವತಿ ತುಸು ಹೆದ್ರಿಕಿಯಿಂದ ಕನ್ಯಾ ಪರೀಕ್ಷೆಗೆ ಕುಂತ್ಲು. ಮೆಲ್ಲಕ ವಾರಿಗಣ್ಣಿಲೆ ಹುಡುಗುನ್ನ ನೋಡಿದ್ಲು. ನೋಡಿ ಬೆಚ್ಚಿ ಬಿದ್ಲು! ಧಾರವಾಡದ ಮದುವ್ಯಾಗ ಆಕಿನ್ನ ಹರಕೊಂಡು ತಿನ್ನೋರಂಗ ನೋಡ್ತಿದ್ದ ಯುವಕನ ಸಕ್ಕೋಂತ ಕುಂತಿದ್ದ ಅಲ್ಲೆ! ಕ್ಷಣಾರ್ಧದೊಳಗ ಪಾರ್ವತಿಗೆ ಎಲ್ಲಾನೂ ಅರ್ಥ ಆಗಿ ಹಣೆಮ್ಯಾಗ ಬೆವರಿನ ಮುತ್ತುಗಳು ಕಾಣಿಸಿಕೊಂಡ್ವು. ವರದ ಬಗಲಾಗ ಕುಂತಿದ್ದ ಊರ ಐನೋರು ಪಾರ್ವತಿ ಹಣೆಮ್ಯಾಗಿನ ಬೆವರು ನೋಡಿ "ಯಾಕಬೇ ತಂಗಿ ಹುಡುಗುನ್ ನೋಡಿ ಇಷ್ಟ ಬೇವರಾಕತ್ತಿ, ಈಗ ಹಿಂಗಾದ್ರ ಮದುವಿ ಆಗಿಂದ ಇನ್ನ್ಯಾಂಗ?!" ಅಂದ್ರು. ಆ ಅಯ್ಯನ ಮಾತಿಗೆ ಅಲ್ಲಿದ್ದೋರೆಲ್ಲ ಗೊಳ್ಳಂತ ನಕ್ರ ಪಾರ್ವತಿ ಮಾತ್ರ ಮುಖಾ ಎಲ್ಲಾ ಕೆಂಪಗ ಮಾಡಿಕೊಂಡು ತಲಿ ತಗ್ಗಿಸಿ ಕುಂತ ಬಿಟ್ಲು.

ಹಿಂಗ ಬೆಂಗಳೂರಿನ ಹುಡುಗ ಸೋಮಶೇಖರ ಡಂಬಳ ಹುಡುಗಿ ಪಾರ್ವತಿಗೆ ತಾಳಿ ಕಟ್ಟಿ, ತನ್ನವಳನ್ನಾಗಿ ಮಾಡಿಕೊಂಡು ಬೆಂಗಳೂರ ಬಸ್ಸ ಹತ್ತಿದ್ದ. ಹತ್ತದ ಬಿಟ್ಟಾನ? ಬಂಗಾರದ ಪುತ್ಥಳಿಯನ್ನ! ಅದ್ರ ಪಾರ್ವತಿ ಶುದ್ಧ ಹಳ್ಳಿ ಹುಡುಗಿ ಅಂತ ಮದುವಿ ಆದ ಮ್ಯಾಲೆ ಅವ್ನಿಗೆ ಗೊತ್ತಾದದ್ದು! 'ಪರವಾಗಿಲ್ಲ ಇದೇನ್ ಮಹಾ? ದಾರಿಗೆ ತರಬಹುದು' ಅಂದುಕೊಂಡ. ಅಂದುಕೊಂಡಷ್ಟ ಲಗೂನ ಕಾರ್ಯಪ್ರವರ್ತನಾಗಿ ಒಂದಿನ ಸಂಜೀಮುಂದ ಬ್ಯೂಟಿಪಾರ್ಲಗೆ ಕರಕೊಂಡು ಹೋದ. ಪಾರ್ವತಿ ಏನೂ ತಿಳೀದ ಕಣ್ಣ ಕಣ್ಣ ಬಿಟ್ಟ ಕುಂತರೆ- ಧಡೂತಿ ಹೆಂಗಸೊಬ್ಬ್ಳು ಕೈಯೊಳಗ ಕತ್ತಿ ಹಿಡಿಕೊಂಡ ಆಕಿದು ಉದ್ದನ್ನ ಜಡಿ ಕತ್ರಸಾಕ ಬಂದಾಗ ಮಾತ್ರ ರೌದ್ರಾವತಾರ ತಾಳಿ ಹೊರಗ ಬಂದಬಿಟ್ಳು! ಶೇಖರ ತಂದಕೊಟ್ಟ ಚೂಡಿದಾರನಂತೂ ಒಂದ ಘಳಗಿ ಹಾಕೊಂಡಂಗ ಮಾಡಿ ಮೂಲ್ಯಾಗ ಒಗದ್ಲು. ಅಂವ ಇದು ರಿಪೇರಿ ಅಗ್ದ ಗಾಡಿ ಅನಕೊಂಡು ಸುಮ್ಮನಾದ. ಅದ್ರ ರಾತ್ರಿ ಸೈತ ಆಕಿ ಅವನ ಸಲ್ಲಾಪಕ್ಕ ಒಲಿಯದ 'ಮುಟ್ಟಿದರ ಮುನಿ' ಹಂಗ ಮುದುಡಿ ಕುಂತಾಗ ಮಾತ್ರ ತಲಿಮ್ಯಾಲೆ ಕೈಹೊತ್ತು ಕುಂತ! ಇನ್ನ ಇದನ್ನ ಹಿಂಗ ಬಿಟ್ರ ಬರೋಬ್ಬರಿ ಅಂಗಂಗಿಲ್ಲಂತ ಒಂದಿಷ್ಟು ಸಿಟ್ಟೀಲೆ "ಏನಿದು ವಿಪರೀತ? ಯಾವ್ದುಕ್ಕಾಗಿ ಒಂದು ಮಿತಿ ಇರ್ಬೇಕು, ಈ ಸಡಗರಕ್ಕ ನಾನಿನ್ನ ಮದುವೆಯಾಗಿದ್ದಾ...?" ಎಂದು ಹಾರಾಡಿ ನಾಲ್ಕಾರು ದಿನ ಗಂಭೀರವಾಗಿ ಇದ್ದುಬಿಟ್ಟ! ಪಾರ್ವತಿಗೆ ಈಗ ಖರೇವಂದ್ರ ಕಳವಳ ಶುರು ಆತು. "ನಾ ಹಿಂಗ ಪ್ರತಿಯೊಂದಕೂ ಮಂಡತನ ಮಾಡಿದ್ರ ಅವ್ರರ ಏನು ಮಾಡ್ಬೇಕು? ನಾನ ಅವ್ರನ ದೂರ ಮಾಡಿದ್ರ ಇನ್ಯಾರತ್ರ ಹೋಗ್ಬೇಕು?" ಎನಿಸಿಯೋ ಅಥವಾ ಇಂಥಾ ವಿಚಾರದಾಗ ಗಂಡನ ಮನಸು ನೋಯಿಸ ಬಾರ್ದು ಎನಿಸಿಯೋ ಅಂತೂ ಪಾರ್ವತಿ ಗಂಡನ ಕೂಡ ರಾಜಿ ಆಗಾಕ ತಯಾರಾದ್ಲು. ಅದ್ರ ಶೇಖರ ಆಕಿಗೊಂದು ಪುಸ್ತಕ ತಂದುಕೊಟ್ಟು "ಇದನ್ನ ಓದು ಒಂಚೂರು ಬುದ್ಧಿನಾದ್ರೂ

ಬರ್ಲಿ..." ಅಂದ. ಪಾರ್ವತಿಗೆ ಅಷ್ಟು ಇಷ್ಟು ಕಥಿ ಕಾದಂಬರಿ ಓದೋ ಚಾಳಿ ಇದ್ದಿದ್ರಿಂದ ಇದ್ಯಾವುದೋ ಒಳ್ಳೆ ಕಾದಂಬರಿ ಇರ್ಬೇಕು ಅಂದಕೊಂಡಿದ್ಲು. ಆದ್ರೆ ಪುಸ್ತಕ ಓದಕೊಂತ ಹೋದಂಗೆಲ್ಲಾ ಆಕಿಗೆ ತಲಿ ತಿರುಗಿ ಬೀಳೂ ಹಂಗಾತು! "ಥೂ ಇದು ಎಂಥಾ ಪುಸ್ತಕಾ! ಕೊಳಕು" ಅಂದುಕೊಂಡು ಅದನ್ನ ಮೂಲ್ಯಾಗ ಒಗದ್ಲು. ಮತ್ತು ಅವತ್ತ ರಾತ್ರಿ ಹೆಂಡತಿ ಬಗ್ಗೆ ಬಾಳ ನಿರೀಕ್ಷೆ ಇಟಗೊಂಡ ಬಂದ ಶೇಖರನ ಚೊಲೋತೆಂಗ ಬೈದು ಮಾರಿ ಮ್ಯಾಗ ನೀರಿಳಿಸಿದ್ಲು! ಮತ್ತೆ ಅಂವ ಮಂಕಾಗಿ ಕುಂತಾಗ ಸಣ್ಣ ಹುಡುಗುರ್ನ ರಮಿಸೋ ಹಂಗ ರಮಿಸಿ ಸಂತೈಸಿದ್ಲು!! ಆಕಿನ್ನ ಅವತಾರ ನೋಡಿ ಶೇಖರನ 'ನೀರಿನೊಳಗಿನ ಮೀನಿನ ಹೆಜ್ಜೀನಾದ್ರೂ ಗುರ್ತು ಹಿಡೀಬಹುದು ಆದ್ರ ಹೆಣ್ಣಿನ ಮನಸ್ಸು ತಿಳಿಯಾಕ ಸಾಧ್ಯ ಇಲ್ಲಾ' ಅಂತ ಯಾರೋ ಹೇಳಿದ ಮಾತು ನೆಪ್ಪಾಗಿ ಆ ಮಾತು ನೂರಕ್ಕೆ ನೂರು ಖರೇ ಅನಿಸಿತು!

ಪಾರ್ವತಿ ಗಂಡನ ಕೂಡ ಎಷ್ಟ ಹೊಂದಿ ಕೊಂಡು ಇದ್ರೂ ಸೈತ ಕೋತಿ ಮನಸ್ಸಿನ ಅವನ ನಿರೀಕ್ಷೆಗಳ ಬ್ಯಾರೆ ಇದ್ವು! ಹೀಗಾಗಿ ಆತ ಏನೋ ಅಸಮಾಧಾನ, ಅತೃಪ್ತಿಯಿಂದ ಒದ್ದಾಡಿ, ಕಡೀಕ ಒಂದು ಕ್ಯಾಸೆಟ್ ತಂದು ಪಾರ್ವತಿ ಕೈಯಾಗ ಕೊಟ್ಟು "ಈ ‹ಫಿಲಂ› ನೋಡು, ಮಜ-ಮಜಾ. ನಿಂಗೊತ್ತಿಲ್ಲದ ಮಜಾ ನೋಡು...' ಅಂದ. "ಹಾಂ! ಯಾರಾದ್ರೂ ಬಂದ್ರೆ ಟಿ.ವಿ. ಆಫ್ ಮಾಡಿ ಬಾಗಿಲು ತೆಗಿ" ಎಂದೂ ಸೇರಿಸಿದ. ಪಾರ್ವತಿ ಕ್ಯಾಸೆಟ್‌ನ್ನು ಹಿಂದೆ ಮುಂದೆ ತಿರುವಿ ನೋಡಿ ಇದ್ರಾಗೇನ್ ಮಜಾ ಐತಪಾ ನನ್ನ ಗೊತ್ತಿಲ್ಲದ್ದು ಅಂದುಕೊಂಡು ಕ್ಯಾಸೆಟ್ ಹಾಕಿ ಕುತೂಹಲದಿಂದ ಟಿ.ವಿ. ಮುಂದೆ ಕುಳಿತಳು. ಆ ಟಿ.ವಿ.ಯೊಳಗಿನ ಚಿತ್ರಗಳು ಮೂಡತಿದ್ದಂಗ ಆಕಿಗೆ-ಬವಳಿ ಬಂದು ಬೀಳಹಂಗಾತು! ಥೂ-ಥೂ ಇದು ಒಂದು ಸಿನಿಮಾನ? ಇಂಥಾ ಸಿನಿಮಾನೂ ಇರ್ತಾವ...?! ಅಂತ ಆಕಿಗೆ ಅಚ್ಚರಿಯೊಂದಿಗೆ ಅಸಹ್ಯವಾಯಿತು. ಮತ್ತು ಗಂಡನ ಬಗ್ಗೆ ನಖಶಿಖಾಂತ ಸಿಟ್ಟೂ ಬಂದು ಮೈಯೆಲ್ಲಾ ಉರ್ಯಾಕ ಶುರು ಆತು. ಅವತ್ತ ಅಂಥಾ ಕೊಳಕಂದು ಪುಸ್ತಕ ತಂದಕೊಟ್ಟಾ ಇವತ್ತ ನೋಡಿದ್ರ ಇಂಥಾ ಅಸಹ್ಯಂದು ಕ್ಯಾಸೆಟ್ ತಂದು ಕೊಟ್ಟಾನ, ಎಂಥಾ ಹೊಲಸ ಮನಷ್ಯಾ ಅದಾನಿವ?! ಅನಿಸಿ ಆಕಿಗೆ ವಾಕರಿಕಿ ಬಂದಂಗಾಗಿ ಎದ್ದು ಹೋಗಿ ಟಿ.ವಿ. ಆರ್ಸಿಬಿಟ್ಟು ಮನಿಯೊಳಗಿನ ಗೋಡೆಗಳೆಲ್ಲ ತನ್ನನ್ನು ನಗ್ನವಾಗಿ ನೋಡ್ತಾವೇನೋ ಅನ್ನೂ ಭ್ರಮೆ ಬಂದು ಮೈತುಂಬ ಸೆರಗು ಹೊದ್ದು ಮುದುರಿ ಕುಂತ್ಲು!

ಅವತ್ತು ರಾತ್ರಿ ಶೇಖರ ಒಂಚೂರು ತಡಾ ಆಗೇ ಮನೀಗೆ ಬಂದ. ಒಂದಿಷ್ಟು ಕುಡುಕೊಂಡೂ ಬಂದಿದ್ನಿಂತ ಕಾಣತೈತಿ ಅವ್ನ ಬಾಯೊಳಗಿಂದ ಕೆಟ್ಟ ವಾಸನಿ ಬರ್ತಿತ್ತು. ಬಂದವನ ಬಟ್ಟೆ ಸೈತ ಬದ್ಲಾಯಿಸದ "ಫಿಲ್ಮ್ ನೋಡಿದ್ಯಾ? ಹೇಗಿತ್ತು...?" ಅಂತ ಕೇಳಿ ಹಸಿದ ಹುಲಿ ಜಿಂಕಿ ಮರಿನ್ನ ನೋಡೂಹಂಗ ಆಕಿನ್ನ ನೋಡ್ದ. ಗಂಡನ ಮಾತಿಗೆ ಪಾರ್ವತಿ ಟಿ ವಿ ಸ್ಟಾಂಡ್ ಮ್ಯಾಗಿನ ಕ್ಯಾಸೆಟ್ ತೊಗೊಂಡು ಬೀಸಿ ಮೂಲ್ಯಾಗ ಒಗುದು "ಇದು ಒಂದು ಸಿನಿಮಾನ? ಇಷ್ಟು ಓದಿಕೊಂಡಿರಿ. ಇಷ್ಟ ಒಳ್ಳೆಯವರಂಗ ಕಾಣ್ತರಿ, ಇಂಥಾ ಸಿನಿಮಾ ನೋಡಾಕ ನಾಚ್ಕೆ ಆಗಂಗಿಲ್ಲ? ನೀವು ಇಂಥಾ ಕೊಳಕ ಅದಿರಿ ಅಂತ ಮೊದ್ಲೆ ಗೊತ್ತಿದ್ರ ನಾ ನಿಮ್ಮನ್ನ ಮದುವೀನ ಆಕ್ತಿದ್ದಿಲ್ಲ, ಥೂ...!" ಅಂತ ಜೋರಾಗಿ ಬೈಕೊಂತ ಅತಗೊಂತ 'ಧಡಾರ್' ಅಂತ ಕೋಣೆಯ ಬಾಗ್ಲಾ ಹಾಕ್ಕೊಂಡ್ ಬಿಟ್ಲು! ಪಾರ್ವತಿ ಆರ್ಭಟಕ್ಕೆ ಶೇಖರ ಒಂಚೂರು ಬೆಪ್ಪ ಅದಂಗ ಕಂಡ್ರೂ ಮುಗುಳುನಗಿಯೊಂದು ಅವ್ನ ಮುಖದ ಮ್ಯಾಲೆ ತೇಲತಿತ್ತು!

ದಿನಗಳೆದಂತೆಲ್ಲ ಶೇಖರ 'ಪಾರ್ವತಿ' ಅನ್ನೋ 'ವೀಣೆ'ಯನ್ನ ಪಳಗಿಸಿ ಸಡ್ಲಾಗಿರಬೇಕಾಗಿದ್ದ ತಂತಿಯನ್ನ ಬಿಗಿಮಾಡಿ, ಬಿಗಿಯಾಗಿರಬೇಕಾಗಿದ್ದ ತಂತಿಯನ್ನ ಸಡ್ಲಮಾಡಿ ತನಗೆ ಬೇಕಾದ ರಾಗಾ ನುಡಿಸೇ ಬಿಟ್ಟ! ಅದು ಕರ್ಕಶ ಆಗಿದ್ರೇನು? ಅಸಭ್ಯವಾಗಿದ್ರೇನು? ಒಟ್ಟಿನಲ್ಲಿ ಅದು ಅವನಿಗೆ ಇಷ್ಟವಾದ ರಾಗವಾಗಿತ್ತು ಅಷ್ಟೆ!

ಹಿಂಗ ಪಾರ್ವತಿ ಗಂಡನ ಕೈಯೊಳಗಿನ ವೀಣೆಯಾಗಿ ಕರ್ಕಶ, ಅಸಭ್ಯ... ಮುಂತಾದ ಅರವತ್ನಾಲ್ಕು ರಾಗಗಳನ್ನು ಹೊರಡಿಸಿಕೊಂತ ಅವನಿಗೆ ಖುಶಿಕೊಡುವ 'ಸಾಧನ'ವಾಗಿ ಇರೂವಾಗ ನೀಲತ್ತೆ ಅನಾರೋಗ್ಯದ ಪತ್ರ ಬಂತು. ಪತ್ರ ಓದಿದ್ದ ತಡಾ ಪಾರ್ವತಿ ನಿಂತ

ಕಾಲಮ್ಯಾಲೆ ಗಂಡನ್ನ ಹೊರಡಿಸಿಗೊಂಡು ಡಂಬಳಕ್ಕೆ ಧಾವಿಸಿದ್ಲು. ಮೂಳೆ ಚಕ್ಕಳಾಗಿ ಹಾಸ್ಗಿ ಹತ್ತಿಹೋಗಿದ್ದ ನೀಲತ್ತೆನ್ನ ಕಂಡು ಘಾಬರಿದ್ಲು. ಏನೋ ಚಳಿಗಾಲ್ದಾಗ ಅಷ್ಟಷ್ಟು ಕಾಡಿ ಹೋಕ್ತಿದ್ದ ದಮ್ಮು ಮೈಯೆಲ್ಲಾ ಅವರಿಸಿಕೊಂಡು ಆಕಿನ್ನ ಹೀರಿ ಒಗದಿತ್ತು! ನೀಲತ್ತೆ ಅವಸ್ಥೆ ಕಂಡು ಪಾರ್ವತಿ ತಲ್ಲಣಗೊಂಡ್ಲು. ನೀಲತ್ತೆ ಬಾಳೆದಿಂಡಿನಂಥಾ ತೋಳು ಒಣಗಿ ಕಡ್ಡಿಯಾಗಿದ್ವು. ಹುಣ್ಣಿವಿ ಚಂದಪ್ಪನಂತಾ ಮುಖಾ ಕಪ್ಪಡ್ರಿ ಸುಕ್ಕುಗಟ್ಟಿ ಕಳೆಗುಂದಿತ್ತು. ಆಕಿನ್ನ ನೋಡ್ತಿದ್ದಂಗ ಪಾರ್ವತಿಗೆ 'ಏನೈತಿ ಈ ದೇಹದೊಳಗ? ಕಾಲನ ದಾಳಿ ಒಂದ ಹೊಡ್ತಕ್ಕ ಇಷ್ಟು ನಜ್ಜುಗಜ್ಜಾಗುವ ಈ ದೇಹದ ಬಗ್ಗೆ ನಾವ್ಯಾಕ ಇಷ್ಟೊಂದು ವ್ಯಾಮೋಹ ಬೆಳೆಸಿಗೊಂತಿವಿ?' ಅನ್ನೋ ಪ್ರಶ್ನೆಗಳು ಕಾಡಾಕ ಶುರುವಾದ್ವು! ಪಾರ್ವತಿ ಅಪ್ಪಂತೂ ನನ್ನ ತಂಗಿ ಏಷ್ಟ ಒಳ್ಳೇಕಿ! ಆಕಿಗೆ ಇಂಥಾ ಪರಿಸ್ಥಿತಿ ಯಾಕ ತಂದ ದೇವ್ರು? ಅಂತ ಹಳಹಳಿಸಿ, ದೇವ್ರು ಅದಾನೋ ಇಲ್ವೋ? ಇದ್ರ ಹಿಂಗ್ಯಾಕ ಆಕ್ತಿತ್ತು? ಅಂತ ದೇವ್ರ ಬಗ್ಗೆನ ಜಿಜ್ಞಾಸೆ ಹುಟ್ಟಿಕೊಳ್ಳಾಗಿನ ಗುಂಡಗಳ್ಳಿಗಿ ತಗದು ದೇವ್ರ ಮನ್ಯಾನ ಗೂಟಕ್ಕ ಹಾಕಿ ಲಿಂಗಪ್ಪಗ ನೀರ ಹಾಕೂದ ಬಿಟ್ಟಿದ್ದ!

ತಾಯಿಯ ಕೊರತೆ ನೀಗಿಸಿ. ತನ್ನನ್ನ ಹೂವಿನಂಗ ಅಂಗೈಯಾಗ ಹಿಡ್ದು ಜ್ವಾಪಾನಾ ಮಾಡಿದ ನೀಲತ್ತೆ ಸೇವಾ ಮಾಡಾಕ ಟೊಂಕ ಕಟ್ಟಿ ನಿಂತ್ಲು ಪಾರ್ವತಿ. ಒಂಚೂರೂ ಹೇಸ್ಗಿ ಮಾಡ್ಕೊಳ್ಳದಂಗ ಅತ್ತಿ ಚಾಕರಿ ಮಾಡಿದ್ಲು ನೀಲತ್ತೆ ವಿಚಾರದಾಗ ವೈದ್ಯರೂ ತಲಿ ಅಡ್ಸಿಬಿಟ್ಟಿದ್ರಿಂದ ಪಾರ್ವತಿ ಅತ್ತಿ ಕೊನೆಗಾಲದಾಗ ಆಕಿ ಹತ್ರ ಇರೋ ನಿರ್ಧಾರ ತೊಗೊಂಡ್ಲು. ಆದ್ರ ಶೇಖರ ಮಾತ್ರ ಹದಿನೈದು ದಿವ್ಸದೊಳಗ ಎರಡು ಸರ್ತಿ ಡಂಬಳಕ್ಕ ಬಂದ. ಎರಡನೇ ಸರ್ತಿ ಬಂದಾಗ "ನನಗೆ ಊಟದ್ದೇ ತೊಂದರೆ, ನಾನು ಪಾರೂನ್ನ ಕರ್ಕೊಂಡು ಹೋಕ್ತಿನಿ" ಎಂದು ಜೋಲು ಮೋರೆ ಹಾಕಿದ. "ಊಟಕ್ಕೇನು ಊರ ತುಂಬ ಖಾನಾವಳಿ ಅದಾವಲ್ಲ. ನೀವೇನು ಖಾನಾವಳಿ ಊಟಾ ಮಾಡಂಗಿಲ್ಲನ? ಕಳ್ಳಗೊಂದು ಪುಳ್ಳಿನೆವಾ ಅಂತ ನಿಮ್ಮ ತೊಂದ್ರಿ ನನ್ಗೆಲ್ಲಾ ಗೊತ್ತೈತಿ ಹೋಗ್ರಿ. ನಾ ಬರಂಗಿಲ್ಲ..." ಅಂತ ಪಾರ್ವತಿ ಮಾರಿ ತಿರಿವಿದ್ಲು. ಕಡೀಕ

ಬದಲಾವಣೆ

ಮದುವೆಗೆ ಮೊದಲು
ಚಕ್ರವರ್ತಿಯಂತಿದ್ದ ಗಂಡ,
ಮದುವೆಯ ನಂತರ ಪತ್ನಿಗೆ
ಕಪ್ಪ ಕಾಣಿಕೆ ನೀಡುವ
ಮಾಂಡಲಿಕ ಅರಸನಾದ

-ಅಮೃತೇಶ್ ತಂಡರ


ಪಾರ್ವತಿ ಅಪ್ಪ, ಅಣ್ಣ ಅಲ್ದ ಸ್ವತಾ ನೀಲತ್ತೇನ ಸಮಾಧಾನಾ ಮಾಡಿ ಕಳ್ಸಿದ್ಲು ಅಲ್ಲೇ ಹಾಸ್ಗಿನೊಳಗ ಮೊಕ್ಕೊಂಡಲ್ಲೇ! ಪಾರ್ವತಿ ನಿರ್ವ ಇಲ್ದ ಹೊಂಟ್ಲು ಗಂಡನ ಹಿಂದ-ಕಟಗನ ಒಂದೆ ಕುರಿ ಹೊಂಟಂಗ... ಬಿಕ್ಕ, ಬಿಕ್ಕ ಅತಗೊಂತ...

* * *

ಬಸ್ಸು ಡಂಬಳ ಮುಟ್ಟಿದಾಗ ಆಗ್ಲೇ ಕತ್ಲಾಗಾಕತ್ತಿತ್ತು. ಚಳಿಗಾಲವಾದ್ದರಿಂದ ಕತ್ತಲು ಆದಷ್ಟು ಜಲ್ದೀನ ಒಕ್ಕರಿಸಿತ್ತು. ಬಸ್‌ನಿಲ್ದಾಣ ದೊಳಗ ಮನಿ ಆಳು ಕಂಚಜ್ಜನ ಜೊತಿ ಇವ್ರ ದಾರಿ ಕಾಯ್ಕೊಂತ ನಿಂತಿದ್ದ ಚಂದ್ರಣ್ಣ ಬಸ್ಸಿನ ಬಾಗಿಲದೊಳಗ ಬಂದು ತಂಗಿ ಕೈಯೊಳಗಿನ ಸೂಟಕೇಸ್ ಇಸುಗೊಂಡು ಕಣ್ಣಿಗೆ ಒಲ್ಲಿ ಒತ್‌ಗೊಂಡ. ಕೆಂಚಜ್ಜ- "ಇವತ್ತ ಮುಂಜೆಲೆ ಹತ್ತ ಘಂಟೆ ತನಕಾ ದಾರಿ ನೋಡಿ ಮಣ್ಣ ಮಾಡಿದ್ರವ್ವಾ... ಸಾಯೂಮುಂದ ನೀಲವ್ವ ನಿಮ್ಮನ್ನ ಬಾಳ ನೆನಸ್ತು...!" ಅಂದು ಅತ್ತ. ಕೆಂಚಜ್ಜನ ಮಾತು ಕೇಳಿ ಪಾರ್ವತಿಗೆ ಸಿಡ್ಲಬಡದಂಗಾತು. ರಾತ್ರಿಯೆಲ್ಲಾ ನೀಲತ್ತೆಯ ಹೆಣ ತನ್ನ ದಾರಿಕಾಯ್ದ ಸಂಗತಿಯಿಂದ ಆಘಾತಗೊಂಡ ಪಾರ್ವತಿ ತೀಕ್ಷ್ಣವಾಗಿ ಗಂಡನ ಮುಖಾ ನೋಡಿದ್ಲು. ಅಂವ ಸುಮ್ನೆ ತಲಿ ತಗ್ಗಿಸಿಕೊಂಡು ಮುಂದ ಮುಂದ ಹೊಂಟ.

ನೀಲತ್ತೆ ಇಲ್ಲದ ಪಾರ್ವತಿಯ ತವರು ಬಿಕೋ ಅಂತಿತ್ತು. ಪಾರ್ವತಿಗೆ ತಾ ಸಣ್ಣಕಿದ್ದಾಗ, ನೀಲತ್ತೆ ಎತಗೊಂಡು ಓಡಾಡಿದ್ದು, ರಾತ್ರಿ ಹೊತ್ತಿನ್ಯಾಗ ಚಂದಪ್ಪನ್ನ ತೋರಿಸಿಗೊಂತ ಉಣಿಸಿದ್ದು. ಅತ್ತಾಗ ರಮಿಸಿ ಮುದ್ದಾಡಿದ್ದು, ರಾಜಾ-ರಾಣಿ ಕಥಿ ಹೇಳಕೊಂತ, ಹಾಡ ಹಾಡಕೊಂತ ಮಲಗಿಸಿದ್ದು... ಎಲ್ಲಾ ನೆಪ್ಪಾಗಿ ಹೊಟ್ಯಾಗ ಸಂಕ್ಟ ಅತು. ನೀಲತ್ತೆ ಜೀವಾ ಬಿಟ್ಟ ಜಗಾದಾಗ ಒಂದು ಚರಿಗಿ ತುಂಬಿಟ್ಟು ದೀಪಾ ಹಚ್ಚಿಟ್ಟಿದ್ರು. ಪಾರ್ವತಿ ಒಂದಸಮನ ಆ ದೀಪಾನ ನೋಡಕೊಂತ ಕುಂತ್ಲು. ಸ್ವತಃ ತಾನುರಿದು, ಸುತ್ತಲೆಲ್ಲ ಬೆಳಕನ್ನು ಹರಡಿ, ತನ್ನ ಬುಡದಲ್ಲೇ ಕತ್ತಲನ್ನು ಉಳಿಸಿಕೊಂಡ ಆ ದೀಪ ಥೇಟ್ ನೀಲತ್ತೆಯ ಬದುಕಿನ ಪ್ರತೀಕವಾಗಿತ್ತು! ತಾಯ್ತನದ ಪ್ರೀತಿ ಉಣಿಸಿ, ತನ್ನ ಸರ್ವಸ್ವವನ್ನೂ ತನಗರ್ಪಿಸಿದ ನೀಲತ್ತೆಯ ಕೊನೆಗಾಲದಲ್ಲಿ ಒಂದಿಷ್ಟು ಸೇವಾ ಮಾಡಿ. ಒಂದ್ಹಿಡಿ ಮಣ್ಣ ಹಾಕೂದು ಅಗ್ಲಿಲ್ಲಾಂತ ಒಂದು ಕೊರಗಿದ್ರ, ನಿನ್ನೆ ರಾತ್ರಿ ಬರಾಕ ಸಾಕಷ್ಟು ಅವಕಾಶವಿದ್ದಾಗ್ಲೂ ನನಗೆ ಕಾಲಕಿತ್ತಿ ಬರೋದು ಆಗಲಿಲ್ಲವಲ್ಲಾ ಅನ್ನೋ ಸಂಕಟವೇ ಹೆಚ್ಚಾಗಿ, ರಾತ್ರಿಯ ಘಟನೆಯಿಂದ ಪಾರ್ವತಿಗೆ ಅಸಹ್ಯವೆನಿಸಿ ಮಂಡಿಯೊಳಗೆ ಮುಖ ಹುದುಗಿಸಿದಳು...

ಅವತ್ತು ಸೆಮಿನಾರು ಮುಗಿಸಿಕೊಂಡು ರಾತ್ರಿ ಮನೆಗೆ ಬಂದ ಶೇಖರ "ಇಂಥಾ ಸೆಮಿನಾರುಗಳಿಂದ ಉದ್ಧಾರ ಆದಂಗ! ಪಠ್ಯದೊಳಗ ಲೈಂಗಿಕ ಶಿಕ್ಷಣ ಅಳವಡಿಸಿ ಮಕ್ಕಳಿಗೆ ತಿಳಿವಳಿಕೆ ಕೊಡಾಕ ಈ ಜನ ಇಷ್ಟ ಮಡಿವಂತಿಕೆ ತೋರಿದ್ರೆ ಉದ್ಧಾರ ಆದಂಗ!" ಅನಕೊಂತ ಬಟ್ಟೆ ಬದ್ಲಾಯಿಸುತ್ತಿದ್ದ. ಬ್ಯಾರೆ ಸಂದರ್ಭ ಆಗಿದ್ರ ಪಾರ್ವತಿ "ಅವ್ರು ಏನೂ ಉದ್ಧಾರ ಅಗ್ದಿದ್ರೂ ಚಿಂತಿಲ್ಲ. ಆದ್ರ ಏಡ್ಸನಂಥಾ ರೋಗಾವನ ಹುಟ್ಟಹಾಕಿಲ್ಲಲ್ಲ..." ಅಂತಿದ್ಲೋ ಏನೋ?! ಯಾಕಂದ್ರ ಆಕಿಗೆ ಎಷ್ಟೋಸಲ ಶೇಖರನ ಸೋಶಿಯಲಿಸಂ... ಮುಕ್ತವಾತಾವರಣ ಮುಂತಾದ ವಿಷಯಗಳ ಹಿಂದಿನ ಸೋಗಲಾಡಿತನ ಕಂಡು ಅಚ್ಚರಿ ಅಕ್ಕಿತ್ತು. ಆತನ ಸ್ನೇಹಿತ ವಲಯದಲ್ಲಿನ ಹಲವಾರು ಮಂದಿಯ ಕೀಳು ಅಭಿರುಚಿ, ಅಕ್ರಮ ಸಂಬಂಧಗಳು, ಕೊಳಕು ಪಾರ್ಟಿಗಳು... ಮತ್ತೆ ಆ ಕೊಳಕು ಜನರೇ ಲೈಂಗಿಕ ಶಿಕ್ಷಣದ




ಜಾಹಿರಾತು ಪ್ರಭಾವ. ಸಾಫ್ಟ ಡ್ರಿಂಕ್ಸ್ ಕುಡಿದು ಹತ್ತು ಜನರಿಗೆ ಚಚ್ಚುತಾನಲ್ಲ ಇವನೂ ಮಾಡಲು ಹೋಗಿ ಹೀಗೆ ಆಗಿದ್ದಾನೆ.

ಬಗ್ಗೆ ಉದುರಿಸುವ ನುಡಿಮುತ್ತುಗಳು... ಎಲ್ಲ ವಿಚಿತ್ರವೆನಿಸುತ್ತಿತ್ತು. ಸ್ವತಃ ತಾವೇ ಲೈಂಗಿಕ ಶಿಸ್ತಿಗೆ ಒಳಪಡದ ಈ ಜನರಿಗೆ ಲೈಂಗಿಕ ಶಿಕ್ಷಣದ ಬಗ್ಗೆ ಮಾತನಾಡಲು ಯಾವ ನೈತಿಕ ಹಕ್ಕಿದೆ...? ಎಂದುಕೊಳ್ಳುತ್ತಿದ್ದ ಅವಳು ತನ್ನ ಗಂಡನೊಂದಿಗೆ ಯಾವ ಪಾರ್ಟಿಗೂ ಹೋಗುತ್ತಿರಲಿಲ್ಲ. ಒಂದೆರಡು ಸರ್ತಿ ಆಕಿನ್ನ ಒತ್ತಾಯ ಮಾಡಿದ್ದ ಶೇಖರ. ನಂತರ ಆಕಿನ್ನ ಪಾರ್ಟಿಗೆ ಕರೆಯೋದ ಬಿಟ್ಟಿದ್ದ.

ಹಿಂಗಾಗಿ ಈಗಿನ ಸಂದರ್ಭನ ಬ್ಯಾರಿ ಇದ್ದು ಪಾರ್ವತಿ ತಲಿತುಂಬ ನೀಲತ್ತೆ ಸಾವಿನ ಆಘಾತ ತುಂಬಿಕೊಂಡಿದ್ರಿಂದ ಪಾರ್ವತಿ ಗಂಡನ ಮಾರಿ ಕಂಡ ಕೂಡ್ಲೆ ಜೋರಾಗಿ ಅಳಾಕತ್ಲು. ಗೊಣಗಾಡಕೊಂತ್ಲೆ ಬಟ್ಟೆ ಬದಲಾಯಿಸುತ್ತಿದ್ದ ಶೇಖರ ಹೆಂಡ್ತಿ ಅಳೋದು ನೋಡಿ ಗಾಬರಿಯಾಗಿ "ಯಾಕೆ ಪಾರೂ? ಯಾಕಳ್ತೀಯಾ? ಏನಾಯ್ತು?" ಅನಕೊಂತ ಆಕಿಹತ್ರ ಬಂದಾ. ಪಾರ್ವತಿ ಅತಗೊಂತ ಗಂಡನ ಕೈಯಾಗ ತಂತಿ ಕೊಟ್ಲು. ತಂತಿ ಓದಿದ ಶೇಖರ "ಥತ್. ಇದು ಒಂದ ಘಂಟೆ ಮೊದ್ಲ ಬರಬಾರ್ದಿತ್ತ. ನಾ ಒಂಬತ್ತ ಘಂಟೇಕ ಮನೆ ಬಿಟ್ಟೆ. ಸೆಮಿನಾರಿನಲ್ಲೆ ಬೇರೆ ಇವತ್ತು ಸಿಕ್ಕಾಪಟ್ಟೆ

ಡಿಸ್‌ಕಸ್ ಮಾಡಿ ಮಾಡಿ ತಲೆನೋವು ಬಂದಿದೆ..." ಅನಕೊಂತ ಪಾರ್ವತಿ ಭುಜದ ಮ್ಯಾಲೆ ಕೈಯಿಟ್ಟು "ಅಳ್ಬೇಡ ಪಾರೂ ನೀಲತ್ತೆಯವ್ರ ಪರಿಸ್ಥಿತಿ ಎಷ್ಟು ಕಠಿಣವಾಗಿತ್ತು! ಅವ್ರು ಎಷ್ಟೊಂದು ಕಷ್ಟಪಡ್ತಿದ್ರು ಪಾಪ. ದೇವ್ರು ಕರ್‍ಕೊಂಡಿದ್ದು ಒಳ್ಳೆಯದಾಯ್ತು. ಎಲ್ಲಾ ಆಗಿತ್ತು, ಹೋಗಿತ್ತು..." ಅಂತ ಸಮಾಧಾನ ಮಾಡಾಕುಂತ. ಪಾರ್ವತಿಗೆ ಕೇಳಬೇಕನಿಸ್ತು, ಏನ ಆಗಿತ್ತು? ಅಂತ. ಆದ್ರ ಕೇಳ್ಲಿಲ್ಲ- ಮುಖ್ಯ ಆಕಿಗೆ ಡಂಬಳ ಸೇರೂದು ಬೇಕಾಗಿತ್ತು. ಆಕಿ ಮುಂಜೇಲೇ ಬಟ್ಟೆ ಬರಿ ತುಂಬಿ ಸಜ್ಜ ಮಾಡಿಟ್ಟ ಸೂಟಕೇಸ ಹಿಡಕೊಂಡು ಊರಿಗೆ ಹೋಗಾಕ ತಯಾರಾದ್ಲು. ಹೆಂಡ್ತಿ ಊರಿಗೆ ಹೊಂಟ ನಿಂತಿದ್ದನ್ನ ಕಂಡ ಶೇಖರ "ಈಗ ತುಂಬ ರಾತ್ರಿಯಾಗಿದೆ ಪಾರೂ... ಹೇಗಿದ್ರೂ ನಮಗೆ ನೀಲತ್ತೆ ಮಣ್ಣು ಸಿಗೋಲ್ಲ. ಬೆಳಿಗ್ಗೆ ಹೋದ್ರೆ ಆಯ್ತಲ್ಲ...?" ಅಂದು ಹೆಂಡ್ತಿ ಮುಖಾ ನೋಡಿದ. ಪಾರ್ವತಿ ಕುಸಿದು ಕುಂತು ಅತ್ಲು. ಶೇಖರ ಆಕಿನ್ನ ಎಬ್ಬಿಸಿಕೊಂಡು ಹೋಗಿ ಸಮಾಧಾನ ಮಾಡಿ ಎರಡು ತುತ್ತು ತಿನಿಸಿ ತಾನೂ ತಿಂದು ಮಕ್ಕೊಂಡ. ಹಂಗ ಮೆಲ್ಲಕ ಪಾರ್ವತಿ ಸೊಂಟ ಬಳಸಿ ತನ್ನ ಕಡೆ ತಿರುಗಿಸಿ ಕೊಂಡ. ಗಂಡನ ವರ್ತನೆಯಿಂದ ಪಾರ್ವತಿಗೆ ಅಚ್ಚರಿಯಾಯ್ತು! ಆಕಿ ಕೊಸರಿ ಮಕ್ಕೊಂಡ್ಲು. ಶೇಖರ ಮೆಲ್ಲನೆ ಆಕಿ ಕಿವಿಹತ್ರ ಬಾಯಿ ತಂದು "ಪಾರೂ..." ಅಂತ 'ಶೃತಿ' ಸರಿ ಮಾಡಿ ವೀಣಾ ನುಡಿಸೇಬಿಟ್ಟ! ಎಷ್ಟೆಂದರೂ ಆತ 'ನುರಿತ' ವೈಣಿಕನಲ್ಲವೆ?! ಪಾರ್ವತಿ ನಿರ್ಭಾವುಕವಾಗಿ ನುಡುದ್ಲು- ಇದು ನನ್ನ ಕರ್ತವ್ಯ ಅನ್ನೂ ಹಂಗ! ಇದು ನನ್ನ ಕರ್ಮ ಅನ್ನೂ ಹಂಗ!!


ದೀಪದ ಮುಂದ ಕುಳಿತ ಪಾರ್ವತಿ ಮನಸ್ಸು ರಾಡಿ ಎದ್ದು ಹೋಗಿತ್ತು. ಇಲ್ಲೆ ನೀಲತ್ತೆ ಹೆಣ ಇಡೀ ರಾತ್ರಿ ನನಗಾಗಿ ಕಾದ್ರ ಅಲ್ಲೆ ನಾನು ನನ್ನ ಗಂಡನ ಜೊತೆ... ಥೂ ಥೂ ಅನಿಸಿ ಆಕಿ ಮೈ ನಡುಗಿತು. ನನ್ನ ಗಂಡ ಇಷ್ಟ ಕೀಳಮಟ್ಟಕ್ಕ ಯಾಕ ಇಳದಾ?' ಅನಿಸಿ ಗಂಡನ ಬಗ್ಗೆ ಅಸಹ್ಯವಾಗಿ ತಿರಸ್ಕಾರ ಮೂಡತೊಡಗಿತು. ಮಂಡಿಯೊಳಗ ಮುಖಾ ಹುದುಗಿಸಿ ಮೈ ನಡುಗಿಸಿಕೊಂತ ಕುಂತ ಪಾರ್ವತಿಯ ಬಳಿ ಬಂದ ಶೇಖರ ಆಕಿ ಭುಜ ಹಿಡಿದು "ಪಾರೂ... ಅಳ್ಬೇಡ



ಬಡವನಾದ್ರೂ ನನ್ನ ಚಟಗಳೆಲ್ಲಾ ಶ್ರೀಮಂತ ಚಟಗಳು.

ಸುಮ್ನಿರು. ಈಗ ಎಷ್ಟ ಅತ್ರೂ ನೀಲತ್ತೆ ಬರ್‍ತಾರ...?" ಅಂತ ಸನಮಂತ ಮಾಡಾಕ ಬಂದ. ಗಂಡನ ಮಾತು ಕೇಳ್ದಕೆ ಪಾರ್ವತಿ ಮಂಡಿಯೊಳಗಿನ ತಲಿ ಎತ್ತಿ ದುರಗುಟ್ಟಿಕೊಂಡು ಅಂವ್ನ ಮುಖಾ ನೋಡಿದ್ಲು. ಅಚ್ಚರಿ ಅಂದ್ರ ಆಕಿ ಕಣ್ಣಾಗ ಒಂದು ಹನಿ ನೀರಿರಲಿಲ್ಲ! ಕೊಳಗಳಾಗಿರಬೇಕಾಗಿದ್ದ ಪಾರ್ವತಿ ಕಣ್ಣುಗಳು ಬೆಂಕಿ ಉಗುಳತಿದ್ವು! ಆ ವ್ಯಾಳೆದಾಗ ಆಕಿ ಶೇಖರನ ಹ್ಯಾಂಗ ಕಂಡ್ಲೋ ಏನೋ, ಆದ್ರ ಮನ್ಸ್ಯಾನ ಮಂದಿಗೆ ಮಾತ್ರ ಡಂಬಳ ಕೇರಿ ದುರುಗವ್ವ ಕಂಡಂಗ ಕಂಡ್ಲು! ಪಾರ್ವತಿ ಕತಕತ ಕುದುಕೊಂತ ಎದ್ದ ನಿಂತಕೆ ಗಂಡನ್ನ ಝಾಡ್ಸಿ ದಬ್ಬಿದ್ಲು! ಆಕಿ ದಬ್ಬಿದ ರಭಸಕ್ಕೆ ಆತ ಅಷ್ಟು ದೂರ ಹೋಗಿ ಕುರ್ಚಿಮ್ಯಾಲೆ ಬಿದ್ದ. ಅಂವ ಆಯತಪ್ಪಿ ಬಿದ್ದ ರಭಸಕ್ಕೆ ಕುರ್ಚಿಸೈತ ಅಂವ್ನ ಕೂಡ ಕೆಳಗ ಉಳ್ಳಿ ಅದ್ರದೊಂದು ಕಾಲು ಅಂವ್ನ ಪಕ್ಕಿಗೆ ತಿವಿತು. ಅನಿರೀಕ್ಷಿತ ದಾಳಿಯಿಂದ ಕಕ್ಕಾಬಿಕ್ಕಿಯಾದ ಶೇಖರ ಪಕ್ಕಿ ಹಿಡಕೊಂಡು ನೋವಿನಿಂದ ಮುಖಾ ಕಿವುಚಗೊಂತ ಮ್ಯಾಕ ಎದ್ದು "ಪಾರೂ... ಏನಾಯ್ತು ನಿನಗೆ? ಯಾಕೆ ಹೀಗೆ ಮಾಡ್ತಿಯಾ?!" ಅನಕೊಂತ ಆಕಿ ಹತ್ರ ಬರಾಕ ನೋಡ್ತಿದ್ದಂಗ ಪಾರ್ವತಿನ ಗಂಡನ ಹತ್ರ ಬಿರುಗಾಳಿ ನುಗ್ಗಿದಂಗ ನುಗ್ಗಿ ಅಂಗಿ ಕಾಲರ್ ಹಿಡ್ದು "ನೀನೂ ಒಬ್ಬ ಮನುಷ್ಯನಾ? ನಿನಗೂ ಒಂದು ಮನಸ್ಸನ್ನೋದು ಐತಾ? ನಿನ್ನ ತಂದಿ

ತಾಯಿ ಸತ್ತಿದ್ರ ಹಿಂಗ ಮಾಡ್ತಿದ್ಯಾ? ನಿನ್ನ ಬಯಕೆಗಳು ಮಾತ್ರ ಆದಾವು. ಭಾವನೆಗಳ ಇಲ್ಲಾ! ನನ್ಗ ಒಂತೊಟ್ಟು ವಿಷ ಕೊಟ್ಬಿಡು, ಕುಡ್ದು ಸಾಯ್ತಿನಿ, ನಿನ್ನಂಥ ಗಂಡನ್ನ ಪಡ್ದು ನಾ ಮಾಡಿದ ಪಾಪಕ್ಕೆ ಇದ ಪ್ರಾಯಶ್ಚಿತ..." ಅಂತ ಚೀರಾಡಾಕುಂತ್ಲು. ಪಾರ್ವತಿ ಅಪ್ಪ, ಅಣ್ಣ ಎದ್ದ ಬಂದೋರ ಆಕಿನ್ನ ಕಸುವೀಲೆ ಬಿಡಿಸಿಕೊಂಡು "ಪಾರೂ... ಎನಾತವ್ವ ನಿನ್ನ... ಸಂಭಾಳಿಸ್ಕೋ ತಾಯಿ... ಅಂತ ಗಾಭರಿಯಾಗಿ ಅಳಾಕುಂತ್ರು. ಕೆದರಿದ ತಲಿ, ಬೆವರಿನ್ಯಾಗ ಕರಗಿ ಆಕಾರ ಕಳ್ಕೊಂಡ ಕುಂಕುಮ, ನೋವಿನಿಂದ ಕಳೆಗುಂದಿ ಕಪ್ಪಿಟ್ಟ ಮುಖಾ... ಪಾರ್ವತಿ ಥೇಟ್ ಹುಚ್ಚಿಯಂತಾಗಿದ್ಲು! "ನನ್ನ ಬಿಡ್ರಿ. ನಾ ಸಾಯಬೇಕು- ನಾ ಪಾಪಿ..." ಪಾರ್ವತಿ ಚೀರಿ ಚೀರಿ ಕೊಸರಾಡತಿದ್ಲು. ಇಬ್ಬರು ಘನವಾದ ಗಣಮಕ್ಕಳಿಗೂ ಅಸಗೋಳ್ದ! ಮನ್ಯಾಗ ಸೇರಿದ ಬಳಗದ ಹೆಣ್ಮಕ್ಕಳು ಎಲ್ಲಾರೂ "ಜ್ವಾಪಾನಾ ಮಾಡಿದ ಕಳ್ಳು ಎಲ್ಹೋಕೈತಿ! ಅವ್ರ. ಅತ್ತಿಗೆ ಒಂದ್ಹಿಡಿ ಮಣ್ಣ ಹಾಕ್ಲಿಲ್ಲಾಂತ ಎಷ್ಟು ಮನಸಿನ ಮ್ಯಾಗ ತೊಗೊಂಡೈತೆ ನೋಡು ಪಾರೂ...! ಆಕಿ ಗಂಡಗ ಎನ ಕೆಲ್ಸ ಇತ್ತೋ ಏನೋ ಪಾಪ, ದೊಡ್ಡ ಕೆಲ್ಸದಾಗ ಅದಾರ, ದೂರಲ ದಾರಿ ಬ್ಯಾರೆ! ವ್ಯಾಳೆಕ ಹ್ಯಾಂಗ ಒದಗತಾರ...?!" ಅಂತ ಮಾತಾಡಿ ಕೊಳ್ಳಾಕತ್ರು. ಆ ಹೆಣ್ಮಕ್ಕಳ ಮಾತ ಕೂಡ್ಲಾ ಹಿಡದು ಹೊಡ್ಲಾಕತ್ಲು. ಪಾರ್ವತಿ ಅವತಾರ ಕಂಡು ಅಲ್ಲಿದ್ದ ಹೆಣ್ಮಕ್ಕೆಲ್ಲಾ ಹೆದ್ರಿಕೊಂಡು ಚೆಲ್ಲಾಪಿಲ್ಲಿಯಾದ್ರು. ಪಾರ್ವತಿ ಅಪ್ಪ-ಅಣ್ಣಾ ಓಡಿಹೋಗಿ ಆಕಿನ್ನ ಕಸುವಿಲೇ ಹಿಡುಕೊಂಡು ಒಳಗ ಕರ್ಕೊಂಡು ಹೋಗಾಕ ವ್ಯರ್ಥ ಪ್ರಯತ್ನ ನಡಸಾಕತ್ತಿದ್ರು. ಸ್ವತಾ ಮನಶಾಸ್ತ್ರ ಓದಿಕೊಂಡ ಶೇಖರಂತೂ ಆಕಿ 'ಆಕ್ರೋಶ'ದ ಮೂಲ ಹುಡುಕಾಕ ತಿಣಕ್ಯಾಡಾಕತ್ತಿದ್ದ! ಪಾರ್ವತಿ ಮಾತ್ರ "ನನ್ನ ಬಿಡಿ... ನಾ ಸಾಯ್ತಿನಿ... ನಾ ಪಾಪಿ..." ಅಂತ ಚೀರ್ಯಾಡ್ತಿದ್ಲು... ಕೊಸರಾಡ್ತಿದ್ಲು... ಇದ್ಯಾವುದರ ಪರಿವೆ ಇಲ್ಲದ ಚಳಿಗಾಲದ ರಾತ್ರಿ, ಸುತ್ತೂ ನಾಲ್ಕು ದಿಕ್ಕಿಗೆ ತನ್ನ ಕರಾಳ ಛಾಯೆಯನ್ನು ಚೆಲ್ಲತೊಡಗಿತ್ತು. ಅದರ ನಡುವ ನೀಲತ್ತೆ ಸತ್ತ ಜಗಾದಾಗ, ಮಣ್ಣಿನ ಹಣತೆಯೊಳಗ ಹಚ್ಚಿಟ್ಟ ದೀಪದ ಬೆಳಕು ಆ ಕತ್ತಲೆಯನ್ನು ಓಡಿಸುವ ಪ್ರಯತ್ನ ನಡೆಸಿತ್ತು...!!



ನಮಗೆ ನೆಲವೇ ಹಾಸಿಗೆ..., ಆಕಾಶವೇ ಚಪ್ಪರ, ಇತ್ಯಾದಿ ಡೈಲಾಗ್ ಹೇಳ್ತಿರಲ್ಲಾ, ಈ ಮರಗಳನ್ನೇ 'ಪ್ರೇಯಸಿ' ಎಂದು ತಬ್ಬಿಕೊಳ್ಳಿ.

ಅಪಾಯದ ಅಂಚಿನ ಬದುಕು

ವಿಶಿಷ್ಟ ಕಥಾ ವಸ್ತುವನ್ನು ಹೊಂದಿದ್ದ ವಸುಮತಿ ಉಡುಪರ "ಕಾಕಿ ಗಿಡ" ಓದಿದಾಗ ಒಂದು ಒಳ್ಳೆಯ ಕಥೆ ಓದಿದ ಅನುಭವವಾಗುತ್ತದೆ. ತನ್ನದೇ ಆದ ವ್ಯಕ್ತಿತ್ವ ಹೊಂದಿದ್ದ ಇಂದಿರಾ ಈ ಕತೆಯ ನಾಯಕಿ. ಕಥೆಯ ನಿರೂಪಿಕೆಗೆ ಮೊದಮೊದಲು ಇಂದಿರಾ ಬಗ್ಗೆ ಅಸೂಯೆ ಅನ್ನಿಸಿದರೂ ಅನಂತರ ಅವಳ ಬದುಕು ಹಾಗೂ ಮಾತುಗಳು ಶಾಕ್ ನೀಡುತ್ತವೆ. ಈ ಇಂದಿರಾ ಒಂದುರೀತಿ ಪುರಾಣದ ಕುಂತಿ, ದ್ರೌಪತಿ ಹಾಗೂ ಅಹಲ್ಯೆಯರನ್ನು ನೆನಪಿಸುತ್ತಾಳೆ. ವಿಪರ್ಯಾಸವೆಂದರೆ ಇದು ಇತ್ತೀಚಿನ ಶಿಷ್ಟ ಭಾರತದ ನಾರಿಯ ಕಲ್ಪನೆಗೆ ತದ್ವಿರುದ್ಧವಾದದ್ದು. ಬದುಕಿನ ಬಗ್ಗೆ ಅಪಾರ ಪ್ರೀತಿ ಹಾಗೂ ಸಮಾಜದ ರೀತಿ ರಿವಾಜುಗಳನ್ನು ಬುಡಮೇಲುಗೊಳಿಸುವ ಉದ್ದೇಶದ ಜಾನಪದದ ಸೊಗಡನ್ನು ಮೈಗೂಡಿಸಿಕೊಂಡಿರುವ ಪಾತ್ರ ಅದು.

ಸುಂದರಿ ಹಾಗೂ ಜಾಣೆ (ಪರೀಕ್ಷೆಯಲ್ಲಿ ಫೇಲು!) ಇಂದಿರಾ ಹೈಸ್ಕೂಲಿನ ಕೊನೆಯ ವರ್ಷದಲ್ಲಿ ರವಿಯ ಪ್ರೀತಿಗೆ ಒಲಿಯುತ್ತಾಳೆ. ಅಷ್ಟೊಂದು ಒಳ್ಳೆಯ ಮನೆತನದ ಹಿನ್ನೆಲೆ ಹೊಂದದ ರವಿಯ ಜೊತೆಗಿನ ವಿವಾಹಕ್ಕೆ ಎದಿರಾಗುವ ವಿರೋಧದ ಮಧ್ಯದಲ್ಲೂ ಇಂದಿರಾಳ ಹಟದಿಂದಾಗಿ ಮದುವೆ ಜರುಗುತ್ತದೆ. ಅವಳಿ ಜವಳಿ ಮಕ್ಕಳನ್ನು ಪಡೆದ ಇಂದಿರಾ ಸ್ವರ್ಗದಂಥ ಸಂಸಾರ ನಡೆಸುವಾಗಲೇ ರವಿ ಅಕಾಲ ಮೃತ್ಯುವಿಗೆ ಈಡಾಗುತ್ತಾನೆ. ಎಂಥವರನ್ನೂ ಧೃತಿಗೆಡಿಸುವ ದುರಂತದಿಂದ ಇಂದಿರಾ ಗಟ್ಟಿಯಾಗಿ ಹೊರಬಂದು ಬದುಕನ್ನು ಧೈರ್ಯದಿಂದ ಎದಿರಿಸುತ್ತಾಳೆ. ಅನಂತರ ಅವಳು ಸ್ವೀಕರಿಸುವ ಸಂಬಂಧ ಸಮಾಜಕ್ಕೆ ಅನೈತಿಕ ಅನ್ನಿಸಿದರೂ, ಎಲ್ಲೊ ಒಂದು ಕಡೆ ಮಹಾ ಮೋಹದ ಆಳದಲ್ಲೇ ಅದೆಲ್ಲದರಿಂದ ಪ್ರತ್ಯೇಕಗೊಂಡು ನಾಶವಾಗದ ವ್ಯಕ್ತಿತ್ವವಾಗುವ ಚಿತ್ರಣ ಇಲ್ಲಿದೆ.

ಹೀಗೆ ಅಪಾಯದ ಅಂಚಿನಲ್ಲೇ ಬದುಕುತ್ತಾ, ಬದುಕಿನ ಕ್ಷಣಗಳನ್ನು ಅತ್ಯಂತ ಭಾವಪರವಶಳಾಗಿ ಸವಿಯುವ ವ್ಯಕ್ತಿತ್ವ ಇಂದಿರಾದ್ದು. ಅವಳ ಇಂಥ ಬದುಕನ್ನು ಸಾಧ್ಯವಾಗಿಸುವುದು ಅವಳ ಆರ್ಥಿಕ ಸ್ವಾತಂತ್ರ್ಯ ಕೂಡ ಎನ್ನುವ ಕಟುಸತ್ಯವನ್ನು ಕಥೆಗಾರರು ಜಾಣ್ಮೆಯಿಂದ ತೋರಿಸಿದ್ದಾರೆ. ಆದರೆ ಪರಿಣಾಮಕ್ಕಾಗಿಯೇ ಕೆಲವು ಮಾತುಗಳನ್ನು ಆಡಿಸಲು ಹೋಗಿ ಎಡವುತ್ತಾರೆ. ಉದಾಹರಣೆಗೆ ಇಂದಿರಾ ಹೇಳುವ "ಗಂಡ ಸತ್ತಕ್ಕಡ್ಲೆ ಏನು ಊಟ ಬಿಟ್ನಾ? ತಿಂಡಿ ಬಿಟ್ನಾ? ನಿದ್ದೆ ಬಿಟ್ನಾ? ಇದನ್ನು ಯಾಕೆ ಬಿಡ್ಬೇಕು? ಉಳಿದದ್ದೆಲ್ಲಾ ಆಗತ್ತೆ..." ರೆಟರಿಕ್ ಆಗಿ, ಸರಳೀಕೃತ ಹುಸಿ ಕ್ರಾಂತಿಕಾರೀ ಧೋರಣೆ ಎನಿಸಿಕೊಳ್ಳುತ್ತದೆ. ಆದರೂ ಬೇರೆಯವರಿಗೆ ಆತ್ಮವಿನಾಶ ಅನ್ನಿಸುವ ತನ್ನ ವೈಯಕ್ತಿಕ ಬದುಕಿನ ಬಗ್ಗೆ ಖಚಿತ ನಿಲುವು ಹೊಂದಿರುವ ಗಟ್ಟಿ ಪಾತ್ರ ಅಪರೂಪವಾದದ್ದು. ನಿರೂಪಿಕೆಯ ಸುರಕ್ಷಿತ ಬದುಕಿನ ಹಿನ್ನೆಲೆಯಲ್ಲಿ, ವಿಧಿ ಹಾಗೂ ಸಮಾಜ ಮತ್ತು ಇವೆರೆಡರ ಅಪಾಯಗಳನ್ನು ಮುಖಾಮುಖಿ ಆಗಿಸುವ ಇಂದಿರಾಳ ಪಾತ್ರ ಪೋಷಣೆ ಸಮರ್ಥವಾಗಿ ಮೂಡಿಬಂದು ಹೃದಯ ಕಲಕುತ್ತದೆ.

-ಎಚ್ ಎಸ್ ಪ್ರಭಾ

ಕತೆಯ ಉದ್ದೇಶವೇನು?

ಶ್ರೀಮತಿ ಉಡುಪರ ಕತೆ "ಕಾಕಿಗಿಡ" ಓದಿದ ಮೇಲೆ ನನಗೆ ಆದ ಕುತೂಹಲವೆಂದರೆ, ಆ ಕತೆಯ ಉದ್ದೇಶವಾದರೂ ಏನು ಎಂಬುದು. ಏಕೆಂದರೆ ಕತೆಯ ವಸ್ತು ತೀರ ಸಾಮಾನ್ಯವಾದದ್ದು. ಓದಿಸಿಕೊಂಡು ಹೋಗುವ ಗುಣ ಬಿಟ್ಟರೆ, ಕೊನೆಯವರೆಗೂ ಅದರಲ್ಲಿ ಹೊಸತೇನೂ ಕಾಣಬರುವುದಿಲ್ಲ. ನಾಯಕಿ ಇಂದಿರೆ ಹಳ್ಳಿಯ ವಾತಾವರಣದಲ್ಲಿ, ಅನುಕೂಲಸ್ಥರ ಒಬ್ಬಳೇ ಮಗಳಾಗಿ, ಸುಂದರಿಯಾಗಿ ತನ್ನ ಸ್ನೇಹಿತೆಯೊಡನೆ ಆರಾಮಜೀವನ ನಡೆಸುತ್ತಾ ಹೈಸ್ಕೂಲಿನಲ್ಲಿದ್ದಾಗಲೇ, ಅದೇ ಊರಿನ ರವಿ ಎಂಬುವನೊಡನೆ ಪ್ರೇಮದ ಹುಚ್ಚಿಗೆ ಸಿಲುಕುವುದು ಕತೆಗೇನೂ ಅಷ್ಟು ಹೊಸ ವಸ್ತುವಾಗದ ವಿಚಾರ. ಆ ಹುಚ್ಚು ಬೆಳೆದು ಮರವಾಗಿ, ಮನೆಯವರನ್ನು ಎದುರಿಸಿ ಹಠಹಿಡಿದು ರವಿಯನ್ನು ಮದುವೆ ಆಗುತ್ತಾಳೆ. ಗಂಡನೊಡನೆ ಏಕವಚನದಲ್ಲಿ ವ್ಯವಹರಿಸುತ್ತಾ ಒಂದು ಗಂಡು,

ವಿಮರ್ಶೆ

ಒಂದು ಹೆಣ್ಣು ಅವಳಿ ಮಕ್ಕಳ ತಾಯಿಯಾಗಿ, ತನ್ನ ಸ್ನೇಹಿತೆ ಅವಳ ಸುಖಿ ಸಂಸಾರವನ್ನು ಮೆಚ್ಚುವಷ್ಟು ರೀತಿಯಲ್ಲಿ ಸಂತೋಷ ಜೀವನ ನಡೆಸುತ್ತಾಳೆ. ಅವಳ ಸ್ನೇಹಿತೆ ತನ್ನ ಮನೆಯ ಸಂಪ್ರದಾಯ ಬದ್ಧ ಜೀವನರೀತಿ ನೀತಿಗಳನ್ನು ಹೀಯಾಳಿಸಿ ತನಗೂ ರವಿಯಂತಹ ಗಂಡ ಸಿಗಬಾರದೇ ಎಂದು ಆಶಿಸುತ್ತಾಳೆ. ಆದರೆ ರವಿ ಆಕಸ್ಮಾತ್ ಸಾವಿಗೀಡಾದಾಗ, ಆ ಸ್ನೇಹಿತೆ ಕಂಗಾಲಾಗಿ ಇಂದಿರೆಯನ್ನು ನೋಡ ಬಯಸಿ, ಆತಂಕದಿಂದ ಅವಳನ್ನು ಬೇಟಿಯಾದಾಗ ಇಂದಿರೆ ತನ್ನ ಸಮತೋಲನವನ್ನು ಕಳೆದುಕೊಳ್ಳದೆ ಇರುವುದನ್ನು ಕಂಡು ಆಶ್ಚರ್ಯಪಡುತ್ತಾಳೆ. ಅವಳ ಸುಖಿ ಜೀವನ, ಕಟ್ಟುಪಾಡಿಲ್ಲದ ಬದುಕುಗಳನ್ನು ಮೆಚ್ಚಿದ್ದ ಸ್ನೇಹಿತೆ ರವಿಯ ಸಾವಿನ ಬಗ್ಗೆ ಸಾಂತ್ವನ ನೀಡಲೂ ಹಿಮ್ಮೆಟ್ಟುತ್ತಿದ್ದಾಗ, ಇಂದಿರೆ ತಾನಾಗಿಯೂ ಆ ವಿಚಾರವನ್ನು ಎತ್ತುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ಆ ಊರಿನ ಜನ ಆಡಿಕೊಳ್ಳುತ್ತಿದ್ದಂತೆ, ತಾನು ಕೀಳುಜಾತಿಯ ತೋಟಗಾರನೊಡನೆ ಸಂಸಾರ ನಡೆಸುತ್ತಿದ್ದುದನ್ನು ಯಾವ ಎಗ್ಗೂ ಇಲ್ಲದೆ ಹೇಳಿಕೊಳ್ಳುತ್ತಾಳೆ. ತನ್ನ ಈ ನಡವಳಿಕೆಯ ಸಮರ್ಥನೆಗೆ, ತಾನು ರವಿಯ ಸಾವಿನ ನಂತರ ಅನ್ನ, ನೀರು ಯಾವುದನ್ನೂ ಬಿಡದೆ ಜೀವಿಸಿರುವಾಗ, ಗಂಡಸಿನ ಒಡನಾಟ ಏಕೆ ಇಟ್ಟುಕೊಳ್ಳಬಾರದೆಂದು ಹೇಳಿಕೊಳ್ಳುತ್ತಾಳೆ.

ಕೊನೆಗೆ ಈ ಕತೆಗೆ ತಿರುವು ಮತ್ತು ಮುಖ್ಯಾಂಶವೇನೋ ಎಂಬಂತೆ, ತಾನು ಮದುವೆಯಾದ, ಸಂಸಾರಸ್ಥ ಗಂಡಿನ ಜೊತೆ ಜೀವನ ನಡೆಸುವುದಿಲ್ಲವೆಂದೂ, ಹಾಗೇನಾದರೂ ತಾನು ಜೊತೆಗೂಡಿದ ಗಂಡು ಮದುವೆಯಾದಲ್ಲಿ, ಮದುವೆಯಾಗದವನನ್ನು ಆರಿಸಿಕೊಳ್ಳುವೆನೆನ್ನುತ್ತಾಳೆ.

ಹೆಣ್ಣಿನ ಸ್ವಾತಂತ್ರ್ಯ, ಸ್ವಾವಲಂಬನೆ ಮುಂತಾದ ವಿಚಾರಧಾರೆ ಜನಮನದಲ್ಲಿ ತುಮುಲ ಎಬ್ಬಿಸುತ್ತಿರುವ ಈ ಕಾಲದಲ್ಲಿ ಕೂಡ ಇಂದಿರೆ ಆರಿಸಿಕೊಂಡ ಸ್ವಾತಂತ್ರ ಜೀವನ ಕ್ರಮ ಸಮಾಜದ ಮನವೊಲಿಸುವುದರಲ್ಲಿ ಸೋಲನ್ನೇ ಕಂಡೀತೆಂದು ನನ್ನ ಅನಿಸಿಕೆ. ಸ್ವಾತಂತ್ರ ಸ್ವೇಚ್ಛೆಯಾಗಬಾರದು. ತಾನು ಆರಿಸಿಕೊಂಡ ದಾರಿ ನೀತಿ ಬಾಹಿರವಾಗಬಾರದು. ನೀತಿಬಾಹಿರ ಸ್ವೇಚ್ಛಾ ಜೀವನ ಎಂದಿಗೂ ಆದರ್ಶವಾಗಲಾರದು. "ಕಾಮಾತುರಣಾಂ ನಲಜ್ಜಾ, ನ ಭಯಂ" ಎಂಬ ಹೇಳಿಕೆಯಂತೆ ಇಂದಿರೆ ತಾನು ಕಾಮಾಭಿಲಾಷೆಯಿಂದ ಪರಪುರುಷ ಸಂಪರ್ಕ ಬೆಳೆಸಿಕೊಂಡು ಈ ಬದುಕು ಹೆದರುವವರನ್ನು ಕಂಡರೆ ಹೆದರಿಸುತ್ತೆ, ಎದುರಿಸುವವರನ್ನು ಕಂಡರೆ ಹೆದರುತ್ತೆ ಎಂದು ತನ್ನ ನಡವಳಿಕೆಯನ್ನು ಸಾರ ಬಯಸುವುದು ಈ ಕತೆಯ ಉದ್ದೇಶವಾಗಿದ್ದರೆ- ಅದು ಅಂತಹ ಮೆಚ್ಚುವ ಅಥವಾ ಮಹಿಳಾ ಜಾಗ್ರತೆಯ ಕಡೆ ನಡೆದ ದಾರಿಯಾಗಲಾರದು. ಇದು ವಿಧವಾ ವಿವಾಹ ಚಳವಳಿಯ ಇನ್ನೊಂದು ಮುಖವೂ ಅಲ್ಲ! ಧೈರ್ಯವೆಂದು, ಕೆಟ್ಟ ಧೈರ್ಯದ ಧೋರಣೆಯಲ್ಲಿ ಸಮಾಜ ಎದುರಿಸುತ್ತಿದ್ದೇನೆಂದು, ಸ್ವೇಚ್ಛೆಯ ನಿಲುವು ತಾಳುವುದು, ಸಮಾಜ ಸುಧಾರಕರೂ ಒಪ್ಪುವಂತಹುದಲ್ಲ.

-ಸು ವೆಂ ಸುಬ್ಬರಾವ್

ವಿಮರ್ಶೆ

ಮೇ ತಿಂಗಳ ಮಯೂರದಲ್ಲಿ ಪ್ರಕಟವಾಗಿದ್ದ ವಸುಮತಿ ಉಡುಪ ಅವರ 'ಕಾಕೀಗಿಡ' ಕಥೆಯ ಓದುಗರ ವಿಮರ್ಶೆ

ಆಸ್ಫೋಟ

ಈ ಬಾರಿ ವಿಮರ್ಶೆಗೆ ಸೂಚಿಸುವ ಕಥೆ ವನಮಾಲ ಕಟ್ಟೇಗೌಡರ ಅವರ 'ಆಸ್ಫೋಟ'. ನಿಮ್ಮ ವಿಮರ್ಶೆ ನಮ್ಮ ಕೈ ಸೇರಲು ಮೊನೆಯ ದಿನ ಜುಲೈ 20, 1998.

ಪರಶುರಾಮಕ್ಷೇತ್ರ- ಇಲ್ಲಿ ಜನ ಸದಾ 'ಕೊಡಲಿ', 'ಕೊಡಲಿ' ಎಂದು ಕೂಗುತ್ತಿರುತ್ತಾರೆ.

ಪರಸ್ತ್ರೀ- ಬಣ್ಣಿಸಲಸಾಧ್ಯವಾದ ಹೆಂಗಸು.

ಪರಾನ್ನಂ- ಪ್ರಾಣರಕ್ಷಣಂ.

ಪರಾರಿ- ಶತ್ರುವಿನ ಶತ್ರು, ಅಂದರೆ, ಮಿತ್ರ.

ಪರಿಚಿತ- ಈತನಿಂದ ಕೈಸಾಲ ಪಡೆಯಬಹುದೇ ಹೊರತು ಕೊಡಬಾರದು.

ಪರಿವಾರ- ನಮ್ಮ ಪರಿವಾರವನ್ನೂ ಕುಟುಂಬದೊಂದಿಗೆ ಕರೆದುಕೊಂಡು ಬರುವಂತೆ ಆಹ್ವಾನಿಸುತ್ತಾರೆ. ಹಲವರು ಮದುವೆಗಳಿಗೆ... ಆದರೆ, ಅವನ್ನು ಜಮಾಯಿಸಿ, ಅಲ್ಲಿಗೆ ಸಾಗಿಸದೆ ಇರುವುದೇ ಮೇಲು.

ಪರಿಹಾರ- ಕೊಂದ ಪಾಪ ತೀರಬೇಕಾದರೆ ಕೊಂದದ್ದನ್ನು ತಿಂದೇಬಿಡಬೇಕಂತೆ.

ಪರಿಹಾಸ- ನಮಗಾಗದವರನ್ನು ನಾವು ಟೀಕಿಸುವ ಬಗೆ.

ಪರೀಕ್ಷುಬ್ಧ- ಪರೀಕ್ಷೆಯಿಂದ ಕಳವಳಗೊಂಡ.

ಪರೀಕ್ಷೆ- ಚಿಕ್ಕದೇವರಾಜನ ಆಳ್ವಿಕೆಯಲ್ಲಿ ದೀಪದೊಳ್ ಸ್ನೇಹಹಾನಿ, ರತ್ನದೊಳ್ ಪರೀಕ್ಷೆ: ಅಂದರೆ ರತ್ನಗಳಿಗೆ ಮಾತ್ರ ಪರೀಕ್ಷೆ: ಅಂದರೆ, ಸೆಲೆಕ್ಷನ್ ಎಕ್ಸಾಮಿನೇಷನ್ ಇತ್ತು ಎಂದಾಯಿತು.

ಪರೋಪಕಾರ- ಬೆಕ್ಕಿಗೆ ಆಹಾರ, ಇಲಿಗೆ ಪರೋಪಕಾರ: ನಾವು ಇತರರಿಗೆ ಸಹಾಯ ಮಾಡಬೇಕು ಎಂದು ನಮಗೆ ಹೇಳುತ್ತಾರೆಯೇ ವಿನಾ, ಅವರಿಗೆ ಅದೇ ರೀತಿ ಉಪದೇಶಿಸುವವರು ಒಬ್ಬರೂ ಇಲ್ಲವಲ್ಲಾ...

ಪಲಗಂಡ- ಇಟ್ಟಿಗೆ ಕೆಲಸದವರಿಗೆ ಈ ಕೆಟ್ಟ ಹೆಸರು ಯಾಕೆ ಬಂತೋ ತಿಳಿಯದು.

ಪಲಾಯನಸೂತ್ರ- ಮತ್ತೆ ದಂಡೆತ್ತಿ ಬಂದು ಶತ್ರುವನ್ನು ಜಯಿಸುತ್ತೇನೆ ಎಂಬ ಛಲದಿಂದ, ಅದಕ್ಕಾಗಿ ಅತಿವೇಗವಾಗಿ ಹೋಗುವ ಪದ್ಧತಿ.

ಪರ್ವತ- ಪರ್ವತವನೇರಿದಡೆ ಗರ್ವ ತನಗೇಕಯ್ಯ? ಎಂಬ ಸರ್ವಜ್ಞನ ಮಾತನ್ನು ಜನ ಈಚೆಗೆ ಗೌರವಿಸುತ್ತಿಲ್ಲ.

ಪಶ್ಚಾತ್‌ಪಾಪ- ಅನಂತರ ಆ ವೇಳೆಯಲ್ಲಿ ಎಂಥ ಅವಸರವನ್ನು ಕಳೆದುಕೊಂಡೆ ಎಂದು ಪಾಶ್ಚಾತ್ತಾಪಿಸಿ ಪಾಪವನ್ನು ಮಾಡುವುದು.

ಪಶ್ಚಿಮಬುದ್ಧಯಃ- ಪಾಶ್ಚಾತ್ಯ ದೇಶದಲ್ಲೇ ನಾಗರಿಕತೆ ಎಂಬ ತಪ್ಪು ಬುದ್ಧಿ.

ಪಶು- ಹುಟ್ಟುವಾಗ ಶಿಶು, ಬೆಳೆದಾಗ ಪಶು.

ಪಸಂದ್‌ಕಾಲ- ಮನೋರಾಜ್ಯದ ವಸಂತಕ್ಕಾಲ.

ಪಾಕರಿಪು- ಅಡಿಗೆ ಮುಗಿಯುವ ತನಕ ಕಾಯಲು ತಾಳ್ಮೆ ಇಲ್ಲದೆ ಬಳಸುಗ್ಗಿ ಬಡಿಸು ಎನ್ನುವವ.

ಪಾಕರಿಪು ತನಯ- ಅಡಿಗೆಯುವನ ಮಗ.

ಪಾಕಶಾಸನ- ಹೋಟಲ್‌ಗಳಲ್ಲಿ ಊಟ- ತಿಂಡಿಗಳ ಸಂಖ್ಯೆ, ಬೆಲೆ, ಪ್ರಮಾಣ ಮುಂತಾದವುಗಳನ್ನು ನಿರ್ಣಯಿಸುವ ಶಾಸನ.

ಪಾಕಶಾಸನಿ- ಹೆಂಡತಿ, ಅಡಿಗೆ ಏನು ಎಂದು ಶಾಸನ ಮಾಡುವವಳು.

ಪಾಕಶಾಸ್ತ್ರ- ಶಾಕಾದಿಗಳನ್ನು ಹಾಳುಮಾಡುವ ವಿಧಾನ: ನಾರಿಕೇಳಪಾಕ, ದ್ರಾಕ್ಷಾಪಾಕ ಮುಂತಾದವುಗಳನ್ನು ಇತ್ಯರ್ಥಪಡಿಸುವ ಶಾಸ್ತ್ರ.

ಪಾಕಸ್ಥಾನ- ಸಾಹಿತಿಯ ಕೊರಡಿ.

ಪಾಕ್ಚಾತುರ್ಯ- ಪಾಕಿಸ್ಥಾನದ ರಾಜನೀತಿ.

ಪಾಕಿಸ್ಥಾನ- ಜಿನ್ನಡಿಯೊಳಗಣ ಗಂಟನ್ನು ಪಡೆದ ಬಗೆ.

ಪಾರ್ಕೋಟಕ- ಪಾರ್ಕುಗಳಲ್ಲಿ ಕುಳಿತಿರುವವರನ್ನು ಕಾಡಿಸುವ ಭಿಕ್ಷುಕ.

ಪಾಠದೋಷ- ನಮಗೆ ಅರ್ಥವಾಗದ ಪಾಠಭಾಗ.

ಅನರ್ಥಕೋಶ
ಕಸ್ತೂರಿಕಂಪು

ಪಾಣಿಗ್ರಹಣ- ಕೈಕೊಟ್ಟರೆ, ತೀರಿತು.

ಪಾಣಿಪೀಡನ- ವಧೂವರರು ಕೈ ಕೈ ಹಿಸುಕಿಕೊಳ್ಳುವುದು.

ಪಾತರಗಿತ್ತಿ- ಬಣ್ಣ ಹಾಕಿಕೊಂಡು ಕುಣಿಯುವ ಒಂದು ತರದ ಹುಳ.

ಪಾದಚಾರಿ- ಹಳೆಯ ಕಾರನ್ನು ಅಗ್ಗವಾಗಿ ಕೊಂಡುಕೊಂಡ ಅವಿವೇಕಿ: ಗಂಡುಮಕ್ಕಳಿರುವ ಕಾರೊಡೆಯ; ಲಾರಿಗಳೆಲ್ಲ ಈತನನ್ನೇ ಹಿಂಬಾಲಿಸ ಹತ್ತುವುವು.

ಪಾದಪೂಜೆ- ಒದ್ದು ಕಳುಹಿಸುವುದು.

ಪಾಪ- 'ಪಾಪವೆಂಬುವದೇನು ಸುಲಭಸಾಧನೆಯಲ್ಲ' (ಮಂಕುತಿಮ್ಮ) ಪಾಪದ ನಿಜಸ್ವರೂಪವನ್ನರಿಯದವರು ಶಪಿಸುತ್ತಾರೆ, ಅರಿತವರು ಶಾಪವಿಮೋಚನೆಗೆ ಉಪಾಯ ಹೇಳುತ್ತಾರೆ.

ಪಾಪಿ- ಪಾಪಿ ಬಸ್ಸಿಗೆ ಹೋದರೆ, ಪೆಟ್ರೋಲೇ ನಾಸ್ತಿ (ಗಾದೆ). ಸಮುದ್ರವನ್ನು ಈತ ನಡೆದೇ ದಾಟಬಲ್ಲ: ಏಕೆಂದರೆ, ಅವನು ಸಮುದ್ರಕ್ಕೆ ಹೋದರೆ, ನೀರು ಮೊಣಕಾಲದ್ದವೇ: ಪಾಪಿ ಬಸ್ಸಿನಲ್ಲಿ ಕೂತರೆ, ಮೊಣಕಾಲ ಮಡಿಸಲು ಜಾಗ ಇಲ್ಲ (ಗಾದೆ).

ಪಾಮರ- ಇದನ್ನು ಕಡಿದು ಬೀಳಿಸಲು ಪಂಡಿತರೆಲ್ಲರೂ ಶ್ರಮಿಸುತ್ತಾರೆ.

ಪಾಮರಜನ- ಇವರಿಗೆ ಯಾವುದು ರುಚಿಸುತ್ತದೆ ಎಂಬುದು ಸಿನಿಮಾ ನಿರ್ದೇಶಕರಿಗೆ ಮಾತ್ರ ಚೆನ್ನಾಗಿ ಗೊತ್ತಂತೆ.

ಪಾಯಸ- ಪಾಯಸ ಕುಡಿದನಂತರದ ಆಯಾಸ.

ಪಾರಿಜಾತ- ಶ್ರಮ ಒಬ್ಬರಿಗೆ; ಫಲ ಮತ್ತೊಬ್ಬರಿಗೆ ಎಂಬ ಆರ್ಥಿಕ ತತ್ವಕ್ಕೆ ಉದಾಹರಣೆ.

ಪಾಲು- ದಶರಥನ ಪುತ್ರಕಾಮೇಷ್ಟಿಯಾಗದಂದಿನಿಂದ, ಪಾಲಿಗೆ ಬಂದದ್ದೇ ಪರಮಾನ್ನ ಎಂಬುದೇ ಸ್ತ್ರೀಯರ ಅಭಿಮತ: ಪಾಲಾದ ಕೂಡಲೇ ಪೋಲು (ಗಾದೆ).

ಪಾವಕ- ನೈನಂ ದಹತಿ ಪಾವಕಃ ಎಂದು ಕಲ್ನಾರಿನ ವಿಷಯವಾದ ಉಕ್ತಿ ಇದೆ; ಆದ್ದರಿಂದ, ಆತ್ಮನೂ ಕಲ್ನಾರ್ ಸ್ವರೂಪ ಎಂದ ಹಾಗಾಯಿತು.

ಪಾಶ್ಚಾತ್ಯರು- ಆಕಾಶದಲ್ಲಿ ಹಾರಬಲ್ಲವರು, ನೀರೊಳಗಿಂದ ತೂರಬಲ್ಲವರು, ಆದರೆ, ನೆಲದ ಮೇಲೆ ಬಾಳಲರಿಯದವರು.

ಪಾಷಂಡಿ- ನಮ್ಮ ದಾರಿಯನ್ನು ಹಿಡಿಯದೆ, ಸ್ವರ್ಗಕ್ಕೆ ಬೇರೆ ದಾರಿ ಹುಡುಕುವವ.

ಪಾಸು- ಕಾಲೇಜು ಜೀವನದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಕೆಲವರು ಇದನ್ನು ಮಾಡಿ ಬಿಡುತ್ತಾರೆ; ಶ್ರೀಮಂತ ಹುಡುಗರು ಪರೀಕ್ಷೆ ಪಾಸು ಮಾಡುವುದಕ್ಕಿಂತ, ಮುಂದೆ ಹೋಗುವ ಕಾರನ್ನು ಪಾಸು ಮಾಡುವುದೇ ಶ್ರೇಷ್ಠ ಎಂದು ಭಾವಿಸಿ ಧಾವಿಸುತ್ತಾರೆ.

ಪಾಸಂಡಿ- ಪಾಸನ್ನು ದುರುಪಯೋಗಿಸಿ ಪ್ರಯಾಣ ಮಾಡುವವ.

ಪಿಂಗ್‌ಪಾಂಗ್- ಚೇನೀ ರಾಜಕಾರಣಪಟುಗಳ ಆಟ.

ಪಿಟೀಲು- ಇದನ್ನು ಬಾರಿಸುವವರು ಕುತ್ತಿಗೆ ತನಕ ಸಂಗೀತದಲ್ಲಿ ಮುಳುಗಿರುತ್ತಾರೆ. ಹಲವರು ಇದನ್ನು ಹಿಡಿದು ಕುಳಿತಾಗ, ಇನ್ನೂ ಆಯ್ಯೋ, ಕುಯ್ಯುತ್ತಾರಲ್ಲಾ ಎನಿಸುತ್ತದೆ.

ಪಿಡುಗ- ಕಡುಬಿನೊಂದಿಗೆ ಬರುವವ.

ಪಿತಾ- ನರಳುವ ಜೀವವೊಂದರ ಜನ್ಮದಾತಾ; ಹಿಂದಿನ ಜನ್ಮದಲ್ಲಿ ಸಾಲ ತೀರಿಸದವ.

ಪಿತೃಪಕ್ಷ- ಗಂಡಹೆಂಡಿರ ಜಗಳದಲ್ಲಿ ತಂದೆಯ ಪಕ್ಷ ವಹಿಸುವ ಮಗು.

ಪಿತ್ತಭ್ರಮೆ- ಪಿತ್ತ ತಲೆಗೇರಿದಾಗ ಉಂಟಾಗುವ ಚಿತ್ತಭ್ರಮೆ.

ಪಿತ್ತಮೂಂಗ- ತಲೆ; ಪಿತ್ತ ಇಲ್ಲಿಗೇ ಏರುವುದು.

ಪಿತ್ತಶುದ್ಧಿ- ಲಿವರ್ ಟಾನಿಕ್.

ಪಿತ್ತವಿಲಾಸಪ್ರಹಸನ- ಭಂಡವಾಳಶಾಹಿ; ಹಿಟ್ಲರ್ ಮುಂತಾದವರ ಜೀವನ.

ಕೈರಣೇಲಯ ಸ್ಮಾರಕಗಳು



ದಿವ್ಯಲಿಂಗೇಶ್ವರ ದೇವಾಲಯ- ಹರದನಹಳ್ಳಿ

ಚಾಮರಾಜನಗರದಿಂದ 8 ಕಿಲೋಮೀಟರ್ ದೂರದಲ್ಲಿರುವ ಹರದನಹಳ್ಳಿಯು ಕರ್ನಾಟಕ- ತಮಿಳುನಾಡು ಗಡಿಯ ಒಂದು ಗ್ರಾಮ. ವಿಶಾಲವಾದ ಬಿಳಿಗಿರಿ ರಂಗನಬೆಟ್ಟದ ಸೆರಗಿನಲ್ಲಿ ನಿಶ್ಶಬ್ದವಾಗಿ ಮಲಗಿದಂತೆ ಕಾಣುವ ಈ ಊರು ಒಂದಾನೊಂದು ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿದ ಪಾಳೆಯ ಪಟ್ಟಿನ ಕೇಂದ್ರವಾಗಿತ್ತು. ಹೊಯ್ಸಳರ ಅಮಾತ್ಯ ಮಾಧವ ದಂಡನಾಯಕ ಹುಟ್ಟಿದ್ದು ಇಲ್ಲಿಯೇ. ಕ್ರಿಸ್ತಶಕ 1340ರ ಹೊಯ್ಸಳ ಶಾಸನಗಳಲ್ಲಿ ಈ ಊರು 'ಮಗೆಯ' ಎಂದು ಉಲ್ಲೇಖಿತವಾಗಿದೆ. ಅದಕ್ಕೆ ಮುಂಚಿನಿಂದಲೂ ತಮಿಳುನಾಡಿನೊಡನೆ ವಾಣಿಜ್ಯ ವ್ಯವಹಾರ ನಡೆಸುತ್ತಿದ್ದ ಅನೇಕ ವರ್ತಕರು ಈ ಊರಿನಲ್ಲಿದ್ದರಂತೆ. 'ಹರದ' ಎಂದರೆ ವ್ಯಾಪಾರ ಎಂದರ್ಥ. ಈ ಕಾರಣದಿಂದ ಹರದನಹಳ್ಳಿ ತನ್ನ ಹೆಸರನ್ನು ಪಡೆದಿರಬೇಕು. ಚಿತ್ರದಲ್ಲಿರುವುದು ದಿವ್ಯಲಿಂಗೇಶ್ವರ ದೇವಾಲಯ. ಕ್ರಿಸ್ತಶಕ 1316ರಲ್ಲಿ ಹೊಯ್ಸಳ ಚಕ್ರವರ್ತಿ ಮೂರನೆಯ ಬಲ್ಲಾಳನಿಂದ ನಿರ್ಮಿಸಲ್ಪಟ್ಟ ಈ ದೇವಸ್ಥಾನವು ಬಳಿಕ ವಿಜಯನಗರ ಹಾಗೂ ಮೈಸೂರು ಅರಸರ ಕಾಲದಲ್ಲಿ ಅಭಿವೃದ್ಧಿ ಹೊಂದಿತು. ಆದರೆ ಅದಕ್ಕೆ ಮುಂಚೆಯೇ ಮೈಸೂರಿನಿಂದ ತಮಿಳುನಾಡಿನ ಮಧುರೆಗೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುತ್ತಿದ್ದ ವೀರಶೈವ ವರ್ತಕರುಗಳು ಈ ದೇವಸ್ಥಾನವನ್ನು ನಿರ್ಮಿಸಿರಬಹುದೆಂಬ ಅಭಿಪ್ರಾಯವೂ ಇದೆ. ಆಗ ಇದಕ್ಕೆ 'ಅಮೃತೇಶ್ವರ' ಎಂಬ ಹೆಸರಿತ್ತಂತೆ. ಏನೇ ಇರಲಿ, ಈ ದೇವಾಲಯವು ಒಂದು ಕಾಲಕ್ಕೆ ಸಕಲ ವೈಭವಗಳಿಂಥ ಕೂಡಿ ಒಂದು ಮಹಾ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದ್ದುದಂತೂ ನಿಜ. ವಿಜಯನಗರ ಕಾಲದ ಬೃಹತ್ ರಾಯಗೋಪುರವನ್ನುಳ್ಳ ಈ ದೇವಾಲಯದ ಮುಂಭಾಗದ ಇಕ್ಕೆಲದಲ್ಲೂ ಇರುವ ಕಲ್ಲಿನ ಮಂಟಪಗಳು ಇಲ್ಲಿಯ ವಿಶೇಷ ಆಕರ್ಷಣೆ. ವಿಶೇಷ ಸಂದರ್ಭಗಳಲ್ಲಿ, ದೇವಾಲಯದಿಂದ ತಂದ ಉತ್ಸವಮೂರ್ತಿಗಳನ್ನು ಈ ಮಂಟಪಗಳಲ್ಲಿಟ್ಟು ಪೂಜಿಸುತ್ತಿದ್ದಿರಬಹುದು. ಮುಂಭಾಗದಲ್ಲಿದ್ದ ಎತ್ತರವಾದ ದೀಪಸ್ತಂಭವು ಸಿಡಿಲು ಬಡಿದು ಛಿದ್ರವಾಗಿದೆ. ಪರಿಪೂರ್ಣ ದೇವಾಲಯವೊಂದರ ಎಲ್ಲ ಲಕ್ಷಣಗಳನ್ನು ಹೊಂದಿರುವ ದಿವ್ಯಲಿಂಗೇಶ್ವರ ದೇವಾಲಯದಲ್ಲಿ ಮುಖ ಮಂಟಪ, ನಂದಿಮಂಟಪ, ಕಲ್ಯಾಣ ಮಂಟಪ ಹಾಗೂ ದೇವ ದೇವತೆಗಳ ಅನೇಕ ಶಿಲ್ಪಗಳಿವೆ.

ಮೇಲು ಛಾವಣಿಯಲ್ಲಿ ವಿಜಯನಗರ ಕಾಲದ ಭಿತ್ತಿ ಚಿತ್ರಗಳಿದ್ದು ಈಗ ಮಸುಕಾಗಿವೆ. ಟಿಪ್ಪುಸುಲ್ತಾನನ ಕಾಲದವರೆಗೆ ಈ ದೇವಾಲಯ ಅತಿ ಶ್ರೀಮಂತವಾಗಿತ್ತು. 1792ರಲ್ಲಿ ನಡೆದ 3ನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷರಿಗೆ ಸೋತ ಟಿಪ್ಪು ಅವರೊಡನೆ ಸಂಧಿ ಮಾಡಿಕೊಂಡ. ಆಗ ಆದ ಕರಾರಿನಂತೆ ಅವನು ಬ್ರಿಟಿಷರಿಗೆ 3 ಕೋಟಿ 30 ಲಕ್ಷ ರೂಪಾಯಿಗಳನ್ನು ತೆರಬೇಕಾಯಿತು. ಅರ್ಧ ಹಣವನ್ನು ತೆತ್ತ ಸುಲ್ತಾನನು ಉಳಿದರ್ಧ ಹಣವನ್ನು ಕೂಡಿಸಲು ಒಂದು ವರ್ಷ ಸಮಯ ಕೇಳಿದ. ಅದುವರೆಗೆ ತನ್ನಿಬ್ಬರು ಗಂಡುಮಕ್ಕಳನ್ನು ಬ್ರಿಟಿಷರ ಬಳಿ ಒತ್ತೆಯಿಡಬೇಕಾಯಿತು. ಆ ಸಂಕಟದ ಸಮಯದಲ್ಲಿ ಟಿಪ್ಪುವು ದಿವ್ಯಲಿಂಗೇಶ್ವರ ದೇವಸ್ಥಾನದ ಬೆಲೆಬಾಳುವ ಆಭರಣ ಮತ್ತಿತರ ಅಮೂಲ್ಯ ವಸ್ತುಗಳನ್ನು ತನ್ನ ಬೊಕ್ಕಸಕ್ಕೆ ಸೇರಿಸಿಕೊಂಡನೆಂದು ದೇವಸ್ಥಾನದ ದಾಖಲೆ ಹೇಳುತ್ತದೆ. ಹರದನಹಳ್ಳಿಯು ಒಂದು ಕಾಲಕ್ಕೆ ಪ್ರಮುಖ ವೀರಶೈವ ಕೇಂದ್ರವಾಗಿತ್ತು. ತೋಂಟದ ಸಿದ್ಧಲಿಂಗೇಶ್ವರ ಹಾಗೂ ಮಲೆ ಮಹದೇಶ್ವರರು ಈ ಊರಿನ ವೀರಶೈವ ಮಠದ ಗುರುಗಳಾಗಿದ್ದರು.

ಅಕ್ಕ

ಭಾಗ್ಯಶ್ರೀ ಶರತ್

ಅಕ್ಕ ಆರಿಸಿಕೊಂಡ ದಾರಿಗೆ ನಾವೇ ಅವಳನ್ನು ತಳ್ಳಿದೆವೆ?



ಹೀಗೆಯೇ ಒಂದು ಅನೂಹ್ಯ ಗಳಿಗೆಯಲ್ಲಿ ಅಕ್ಕನನ್ನು ಮುಂದೊಂದು ದಿನ ಕಂಡೇನು ಎಂದು ಬದುಕಿನ ಯಾವುದೇ ಘಟ್ಟದಲ್ಲಿ ನಾನು ಅಂದುಕೊಂಡಿರಲಿಲ್ಲ. ಯಾರ ನೆನಪನ್ನು ಹೊರಲಾರದೆ ಜೀವ ತಣ್ಣಗಾಗುವರೆಗೂ ಹೊತ್ತು ಅಪ್ಪ ಮರೆಯಾದರೋ, ಯಾರ ಸ್ಮೃತಿಯನ್ನು ಸ್ಮೃತಿಪಟಲದಲ್ಲಿ ತಂದುಕೊಳ್ಳಲು ಕೋಪ- ವೇದನೆ ಅಸಹಾಯಕತೆಯಲ್ಲಿ ಅಮ್ಮ ಹಿಂಜರಿದರೋ ಅಂತಹ ಒಂದು ವ್ಯಕ್ತಿಯನ್ನು, ಅಪ್ಪನ ಅಸ್ತಿಯನ್ನು ಭದ್ರೆಗೆ ಚೆಲ್ಲಿ ಭಾರವಾದ ಹೃದಯದೊಂದಿಗೆ ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಗ್ವಾಲಿಯರ್‌ಗೆ ಹೊರಟ ನಿಃಸತ್ವ ಸ್ಥಿತಿಯಲ್ಲಿ ನಾನು ಕಾಣಬೇಕಾಗುವುದು ಎಂದು ಭಾವಿಸಿರಲಿಲ್ಲ. ರೈಲು ಬುಸಾವಲ್ಲಿನಲ್ಲಿ ನಿಂತಿತಷ್ಟೇ. ನೀರು ತುಂಬಿಸಿಕೊಂಡು ಫ್ರೂಟಿಯ ಎರಡು ಪ್ಯಾಕೆಟ್ಸ್ ಹಿಡಿದು ಬೋಗಿಯ ಒಳಹೊಕ್ಕು ಸೀಟಿಗೆ ಕಣ್ಣು ಮುಚ್ಚಿಕೊಂಡು ಒರಗಿದ ಅಮ್ಮನನ್ನು ನೋಡಿ, ತಿರುಗಿ ಫ್ರೂಟಿಯನ್ನು ಕೆಳಗೆ ಚೀಲದ ಮೇಲಿಟ್ಟು, ಮೇಲೆದ್ದವಳಿಗೆ ತೀರಾ ಅಚಾನಕಾಗಿ ಕಿಟಕಿಯಿಂದ ಹೊರಬಿದ್ದ ದೃಷ್ಟಿಗೆ ನಾನು ಮರಗಟ್ಟಿ ಹೋದೆ.



ಸಾಧಾರಣ ಎತ್ತರ, ಬಿಳಿಯೂ ಅಲ್ಲದ ತೀರಾ ಕಪ್ಪು ಅಲ್ಲದ ಮೈ ಬಣ್ಣ, ಸುಂದರತೆಯ ಪರಿಧಿಯೊಳಗೆ ಖಚಿತತೆಯಲ್ಲಿ ನಿಲ್ಲದ ಅದೇ ಮುಖಚರ್ಯೆ... ಒಂದು ಕೈಯಲ್ಲಿ ಬಟ್ಟೆಯ ಸುಂದರ ಕೈ ಚೀಲ, ಇನ್ನೊಂದು ಕೈಯಲ್ಲಿ ಹೆಚ್ಚೇನೂ ದೊಡ್ಡದಲ್ಲದ ಸೂಟ್‌ಕೇಸ್, ಜೊತೆಗೆ ವಾಟರ್ ಕ್ಯಾನೊಂದು ಬಗಲೇರಿಸಿಕೊಂಡು ರೈಲು ಸಾಗುತ್ತಿದ್ದ ವಿರುದ್ಧ ದಿಕ್ಕಿಗೆ ನಡೆದುಬರುತ್ತಿದ್ದವಳು ಅಕ್ಕನಲ್ಲವೆಂದು ನಿರ್ಧರಿಸದೆ ಇರಲು ಯಾವುದೇ ಕಾರಣವಿರಲಿಲ್ಲ. ಹೀಗೆಂದು ನಾನು ನನ್ನಲ್ಲೇ ತೀರ್ಮಾನಿಸಿ ಕೊಳ್ಳುವುದಕ್ಕೂ, ರೈಲು ಹೊರಟು ನಿಲ್ಲುವುದಕ್ಕೂ, ಅವಳು ನನ್ನನ್ನು ನೋಡಿ ಕಲ್ಲಿನಂತೆ ನಿಂತುಬಿಡುವುದಕ್ಕೂ ಸರಿಯಾಗಿತ್ತು. ಒಂದು ಸ್ತಬ್ಧ ಚಿತ್ರದಂತೆ ನಾನು ಕೂತೇ ಇದ್ದೆ.

ಅಕಸ್ಮಾತ್ ರೈಲು ಹೊರಡದಿದ್ದಿದ್ದರೆ ಹನ್ನೊಂದು ವರ್ಷದಿಂದ ಮೋರೆಯೇ ನೋಡದಿದ್ದ ಒಡಹುಟ್ಟಿದ ಅಕ್ಕನನ್ನು ಹಿಡಿದು ನಿಲ್ಲಿಸುತ್ತಿದ್ದೆನೆ? ಹಾಗೆ ನಿಲ್ಲಿಸಿದವಳೊಟ್ಟಿಗೆ ಮಾತನಾಡುವುದಾದರೂ ಏನಿತ್ತು? 'ಪಪ್ಪ ಹೋಗಿಬಿಟ್ಟರಲ್ಲೇ ನಿಯತಿ' ಅವಳ ಹೆಗಲಿಗೆ ಜೋಲು ಬಿದ್ದು ಅಮ್ಮನ ಎದುರಿಗೆ ಅತ್ತು, ಅವಳನ್ನು ಮತ್ತಷ್ಟು ನೋವಿನ ಮಡಿಲಿಗೆ ತಳ್ಳಲಾರದೆ ಹಿಡಿದಟ್ಟು ಹೆಪ್ಪುಗಟ್ಟಿಸಿ ಕೂರಿಸಿದ್ದ ದುಃಖವನ್ನು ಚೆಲ್ಲುತ್ತಿದ್ದೆನೆ? ಯಾರ ನೆನಪು ಈ ಹನ್ನೊಂದು ವರ್ಷದ ಹಾದಿಯಲ್ಲಿ ನಡುನಡುವೆ ಸಿಗುತ್ತಾ ನೋವು, ಆಕ್ರೋಶದಲ್ಲಿ ಅಪ್ಪನನ್ನು ಕೃಶವಾಗಿಸಿತೋ, ಅಂಥವಳ ಮುಂದೆಯೇ ನಾನು ಮಾಡುವ ಅವರ ಸಾವಿನ ಶೋಕಾಚರಣೆಯನ್ನು ಅಪ್ಪನ ಪ್ರೇತಾತ್ಮ ಒಪ್ಪಿಕೊಂಡೀತೆ? ನನ್ನ ಒಳಮನಸ್ಸಿನ ಅಪೇಕ್ಷೆಗೆ ಹೊಂದಿಕೊಂಡೇ ಆ ಹೊತ್ತಿಗೆ ಸರಿಯಾಗಿ ರೈಲು ಹೊರಟುಬಿಟ್ಟಿತೆ? ಹೀಗೆ ಕಣ್ಣ ಮುಂದೆಯೇ ಹಾದು ಹೋದ ಮಗಳನ್ನು ಅಮ್ಮನಿಗೆ ತೋರಿಸಬೇಕಿತ್ತೆ? ಅದನ್ನಾಕೆ ಜೀರ್ಣಿಸಿಕೊಳ್ಳುತ್ತಿದ್ದಳೆ? ಹಲವು ಪ್ರಶ್ನೆಗಳ ಮಧ್ಯ, ದ್ವಂದ್ವಗಳ ಮಧ್ಯ ಅಮ್ಮನನ್ನು ನೋಡಿದೆ. ಕಣ್ಣು ತೆರೆದು ಎತ್ತಲೋ ನೋಡುತ್ತಿದ್ದು, ಆಕೆಯ ಎಲುಬು ಗೂಡಾದ ಶರೀರದಲ್ಲಿ ಗುಹೆಯೊಳಗಿನಿಂದ ಇಣುಕುತ್ತಿದ್ದಂತೆ ತೋರಿದ ನೋಟದಲ್ಲಿ ನನಗೆ ಉತ್ತರ ಸಿಕ್ಕಿದಂತೆನಿಸಿತು.

'ಯಾವ ಸ್ಟೇಷನ್ ಹೋಯಿತು?' ಅಮ್ಮ ಈ ಲೋಕಕ್ಕೆ ಇದೀಗ ಬರುತ್ತಿರುವವಳಂತೆ ಕೇಳಿದಳು. ಉಗಿಬಂಡಿಯ ಸ್ವರದ ಬೆನ್ನಿಗೆ ಅವಳ ದನಿ ಎಲ್ಲಿಂದಲೋ ಬಂದಂತೆ ಕೇಳಿಸಿತು. ಹೇಳಿದೆ. ಹೇಳುವಾಗ ನನ್ನ ದನಿ ನಡುಗುತ್ತಿದ್ದುದು ಅಮ್ಮನ ಗಮನಕ್ಕೆ ಬರುವ ಸಂಭವವಿರಲಿಲ್ಲ. ಅವಳು ಕೇಳುವುದಕ್ಕೇನೋ ಕೇಳಿದ್ದಳು. ಅವಳ ಮನಸ್ಸು ಮತ್ತೆಲ್ಲೋ ಇದೆ ಅನಿಸಿತು. ಆದರೆ ಈ ಬಾರಿ ಅವಳನ್ನು ಸಮಾಧಾನಿಸಲು ನನ್ನಲ್ಲಿ ಮಾತುಗಳಿರಲಿಲ್ಲ.

ನನ್ನಲ್ಲಿ ನನ್ನದೇ ತುಮುಲಗಳಿದ್ದವು. ಯಾರಿಗೂ ಕಾಣಿಸದ ಸಂಘರ್ಷಗಳಿದ್ದವು. ಹೀಗೆ ಎರಡು ಬಾರಿ ಕದ ತಟ್ಟಿ, ಹೊಸ್ತಿಲು ದಾಟಿ ಒಳ ಬರಬಹುದಾಗಿದ್ದ ಅಕ್ಕನಿಗೆ ನನ್ನ ಅಥವಾ ನನ್ನವರುಗಳ ಮನದೊಳಗೆ ಪ್ರವೇಶ ಸಿಕ್ಕದಂತೆ ತಡೆದವಳ ಪಾಪಪ್ರಜ್ಞೆ ಇತ್ತು. ಹಾಗೆ ತಡೆಯುವ ಅಧಿಕಾರ ನನ್ನಲ್ಲಿ ಇತ್ತೆ? ಹಾಗೊಂದು ಪಕ್ಷ ನಾನು ತಡೆಯದಿದ್ದಲ್ಲಿ ಸಂಪೂರ್ಣ ಚಿಂದಿಯಾದ ಸಂಬಂಧ ಭಾವನೆಗಳ ಜಾಲದಲ್ಲಿ ಸಿಕ್ಕಿ ಮತ್ತೊಮ್ಮೆ ಹೊಸೆದುಕೊಳ್ಳುವ ಸಾಧ್ಯತೆಯಿತ್ತೆ? ಅಪ್ಪ, ಅಮ್ಮ, ತಂಗಿಯ ಕಣ್ಣೆದುರೇ ಕವಲೊಡೆದು ಅಪ್ರಾಮಾಣಿಕತೆಯ ಹಾದಿಯಲ್ಲಿ ಪ್ರೀತಿಸಿದವರನ್ನು ಪೆದ್ದರನ್ನಾಗಿಸಿ, ಮೋಹವನ್ನು ಅರಸಿಕೊಂಡು ಸಾಗಿದಳೋ ಎಂದು ನಂಬಿಕೊಂಡು ಆಂತರಿಕ ಪರಿಶುದ್ಧತೆಯಲ್ಲಿ ನಾನು ನನ್ನನ್ನು ಕೂರಿಸಿಟ್ಟಿದ್ದೇನೆಂದು ಬಗೆದದ್ದು ಸುಳ್ಳೆ? ನನ್ನಲ್ಲಿ ನಡೆಯುತ್ತಿದ್ದ ಮಾನಸಿಕ ತೊಳಲಾಟಕ್ಕೆ ಯಾವ ಅರ್ಥ ಕೊಡಲಾರದೆ ಹೋದೆ. ಗ್ವಾಲಿಯರ್ ಬರಲು ಇನ್ನೂ ಐದಾರು ಸ್ಟೇಷನ್‌ಗಳಿದ್ದವು. ಎದುರಿನ ಅಪ್ಪರ್ ಬರ್ತ್ ಖಾಲಿ ಇತ್ತು. ಸಿಡಿಯುತ್ತಿದ್ದ ತಲೆಗೆ ವಿಶ್ರಾಂತಿ ಬೇಕಿತ್ತು. ಹೋಗಿ ಅಡ್ಡವಾದೆ.

ಒಂದಷ್ಟು ತುಂಡು ತುಂಡು ಕನಸುಗಳು. ಅರೆ ಎಚ್ಚರದಲ್ಲಿ, ಅರೆ ನಿದ್ರೆಯಲ್ಲಿ- ರೈಲಿನಿಂದ ಇಳಿದು ಹೋಗಿ ಅಕ್ಕನ ಭುಜವನ್ನು ಗಟ್ಟಿಯಾಗಿ ಅಲುಗಾಡಿಸುತ್ತಾ 'ಅಪ್ಪನನ್ನು ಕೊಂದು, ಅಮ್ಮನನ್ನು ಮನೋರೋಗಿಯಾಗಿ ಮಾಡಿ ಈಗ

ತಮಾಶೆ ನೋಡಲಿಕ್ಕೆ ಬಂದೆಯಾ?' ಎಂದೆಲ್ಲಾ ನಾಲಿಗೆ ತಿರುಗಿದ ಹಾಗೆ ನಾನು ಒದರಿದಂತೆ, ಸ್ಟೇಷನ್‌ನಲ್ಲಿ ಅಕಸ್ಮಾತ್ತಾ ಹುಟ್ಟಿಕೊಂಡ ಸನ್ನಿವೇಶದ ಮಜ ಅನುಭವಿಸಲು ಒಂದಷ್ಟು ಜನ ಸೇರಿದಂತೆ, ನಟ್ಟ ನಡುವೆ ಒಂದು ಬದಿ ಅಮ್ಮನೂ, ಮತ್ತೊಂದು ಬದಿ ಅಕ್ಕನೂ ಬಿಕ್ಕಿ ಬಿಕ್ಕಿ ಅಳುತ್ತಾ ನಿಂತಂತೆ- ಇದೆಲ್ಲವೂ ಕನಸೇ ಆಗಿದ್ದರೂ ಇದೆಲ್ಲದಕ್ಕೂ ತಲೆಬುಡವಿತ್ತು. ಏಕೆಂದರೆ ಅಕ್ಕನನ್ನು ಯಾವ ತರಹದಲ್ಲಿ ನಾನು ಕ್ಷಮಿಸಲು ಸಿದ್ಧಳಿರಲಿಲ್ಲ.

ಇಂದೋರಿನಲ್ಲಿ ನಾನು ಎಂ.ಬಿ.ಎ.ಯ ಮೊದಲ ಸೆಮಿಸ್ಟರ್‌ನಲ್ಲಿದ್ದಾಗ ಒಂದು ಮಧ್ಯಾಹ್ನ ತೀರಾ ಅನಿರೀಕ್ಷಿತವಾಗಿ ಬಂದ ಅಪ್ಪನ ಫೋನ್ ಕರೆ. ಅದರಲ್ಲಿ ಬೆಚ್ಚಿಬೀಳಿಸುವಂಥ ಸುದ್ದಿ. ಹೀಗೆ ಮೊದಲ ಬಾರಿ ಅಕ್ಕ ಮನೆ ಬಿಟ್ಟು ಹೋದ ಸಂಗತಿ ಯಾವ ಸೂಚನೆಯಿಲ್ಲದೆ ತಟ್ಟನೆ ಬಂದೆರಗಿದಾಗಲೂ ಬರದಿದ್ದಂಥ ಅಕ್ಕನ ಮೇಲಿನ ಸಿಟ್ಟು, ನಾನು ಮದುವೆಯಾಗಿ ಶಶಿಯೊಟ್ಟಿಗೆ ಬೊಂಬಾಯಿ ಸೇರುತ್ತಿದ್ದಂತೆ ಬಂದಿತ್ತು. ಮಾಥೆರಾನ್‌ನ ಹನಿಮೂನಿನಲ್ಲಿ ಅಷ್ಟೇನೂ ಕಾಡದಿದ್ದ ಅಪ್ಪ ಅಮ್ಮನ ನೆನಪು ಸಯಾನಿನ ಮನೆಯಲ್ಲಿ ನಿತ್ಯ ಚಟುವಟಿಕೆ ಶುರುವಾಗುತ್ತಿದ್ದಂತೆ ಹಿಂಡತೊಡಗಿತ್ತು. ಅಕ್ಕ ತಾನೊಂದೇ ಬರಿದೇ ಹೋಗಲಿಲ್ಲ. ಅಪ್ಪ-ಅಮ್ಮನ ನೆಮ್ಮದಿಯನ್ನು ಜೊತೆಗೆ ಕೊಂಡೊಯ್ದಿದ್ದಾಳೆ ಎಂದು ಅವರುಗಳ ನೆನಪು ಬಂದಾಗಲೆಲ್ಲಾ ಅನಿಸುತ್ತಿತ್ತು. ಇಲ್ಲದಿದ್ದಲ್ಲಿ ಅಷ್ಟೊಂದು ನಿರೀಕ್ಷೆಯಲ್ಲಿ ಸಾಕಷ್ಟು ಹುಡುಕಿ ತೆಗೆದು, ಅಪೇಕ್ಷಿಸಿದಂತೆ ಸಿಕ್ಕಿದ ಶಶಿಯ ಸಂಬಂಧವನ್ನು ಸ್ವೀಕರಿಸುವಾಗ ಅಪ್ಪನ ಮುಖದಲ್ಲಿ ತೃಪ್ತಿಯ ಹೊಳಪನ್ನು ನಾನು ಕಾಣುತ್ತಿರಲಿಲ್ಲವೆ? ಮದುವೆಯಲ್ಲಿ ಹುಡುಗನ ಕಡೆಯವರ ದಿಬ್ಬಣವನ್ನು ಎದುರು ಗೊಳ್ಳುತ್ತಿರುವ ಅಪ್ಪ ಅಮ್ಮನಲ್ಲಿ ಸಣ್ಣ ಪ್ರಮಾಣದ ಸಂಭ್ರಮವನ್ನಾದರೂ ನನಗೆ ಗುರುತಿಸಲು ಸಾಧ್ಯವಾಯಿತೆ?

ಅಕ್ಕ ಮನೆ ಬಿಟ್ಟು ಹೋದ ಹತ್ತನೇ ದಿನಕ್ಕೆ 'ನನ್ನ ಮಗಳಾಗಿದ್ದ ನಿಯತಿ ಸತ್ತು ಹೋದಳು' ಎಂದು ಮಹೇಶ್ವರಿಯಲ್ಲಿ ಪಿಂಡ ಹಾಕಿ ಬಂದಿದ್ದ ಅಪ್ಪ ಮೊದಲಿನ ಜೀವಂತತನ ಕೊನೆಯವರೆಗೂ ಪಡೆಯಲಿಲ್ಲ. ತಮ್ಮ ಇಡೀ ಬದುಕಿನ ಸೋಲಿನ ರೂಪ ಅಕ್ಕನ ಕ್ರಿಯೆಯಲ್ಲಿ ಕಂಡುಕೊಂಡಂತೆ ನಿಸ್ತೇಜರಾಗಿಬಿಟ್ಟರು. ತಾವು ನಂಬಿಕೊಂಡಿದ್ದ ಸಿದ್ಧಾಂತವು ಅಧಃಪತನ ಹೊಂದಿ ತಮ್ಮ ಮೇಲೆಯೇ ಅಧಿಪತ್ಯ ಸ್ಥಾಪಿಸುವುದನ್ನು ಸಹಿಸಲಾರದೆ ಕಂಗಾಲಾದರು. ಸಂಬಂಧ ಪಡದವರ ವ್ಯಂಗ್ಯ- ಕುಚೋದ್ಯ ಉಪೇಕ್ಷೆಗಳಿಗೆ ಉತ್ತರಿಸಲು ಇಳಿದುಹೋಗಬೇಕಾದ ತಮ್ಮ ದುಸ್ಥಿತಿಯನ್ನು ಅಪ್ಪ ಅಮ್ಮ ಇಬ್ಬರೂ ಅರಗಿಸಿಕೊಳ್ಳದಾದರು. ಓದುವಾಗಲೆಲ್ಲಾ ಮೂರು ದಿನಕ್ಕೊಮ್ಮೆ ಮನೆಯಿಂದ ಬರುತ್ತಿದ್ದ ಪತ್ರ, ಫೋನ್‌ಗಳು ಅಕ್ಕ ಮನೆಯಿಂದ ಹೋದನಂತರ ಒಮ್ಮೆಲೇ ನಿಂತುಹೋದವು. ಹೋದ ಅಕ್ಕನ ನೆನಪಲ್ಲಿ ತಂಗಿ ಮರೆತೇ ಹೋದಳೇ? ಅಪ್ಪನವರು ಅಕ್ಕನನ್ನು ಕಳೆದುಕೊಂಡರು; ನಾನು ಅವರನ್ನೇ ಕಳೆದುಕೊಂಡೆನೆ? ಎಂದೆಲ್ಲಾ ಮನಸ್ಸಿಗೆ ಕಸಿವಿಸಿಯಾಗುತ್ತಿದ್ದರೂ ಅಕ್ಕ ನಡೆದುಕೊಂಡ ರೀತಿಯಲ್ಲಿ ಅವರು ಘಾಸಿಗೊಂಡ ಬಗೆಯನ್ನು ನೆನೆದು ನನ್ನಲ್ಲೇ ಮೌನವಾಗಿದ್ದೆ.

ಹಾಗೆ ಘಾಸಿಗೊಂಡವರು ಮತ್ತೆ ಚೇತರಿಸಿಕೊಳ್ಳಲೇ ಇಲ್ಲ. ನಾನು ಬಿ.ಇ., ಎಂ.ಬಿ.ಎ. ಮುಗಿಸಿ ಪರ್ಫೆಕ್ ಕಂಪ್ಯೂಟರ್ಸ್‌ನಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿ ಹೆಮ್ಮೆಯ ಸ್ಥಾನದಲ್ಲಿದ್ದೆ. ಅಪ್ಪನೇ ಆರಿಸಿದ ಸುಂದರ, ಸುಶಿಕ್ಷಿತ, ಅರ್ಹ ವ್ಯಕ್ತಿಯೊಂದಿಗೆ ಮದುವೆಯಾಗಿ ಗಂಡು ಮಗುವಿನೊಟ್ಟಿಗೆ ನೆಮ್ಮದಿಯ ಸಂಸಾರವನ್ನು ನಡೆಸುತ್ತಿದ್ದೆ. ಆದರೆ ನನ್ನ ಸಾಧನೆಯಲ್ಲಿ, ನನ್ನ ಸುಖದಲ್ಲಿ ಅಕ್ಕನಿಂದ ಪಡೆದ ಹತಾಶೆಯನ್ನು ಅವರು ಮರೆಯದಾದರು. ಸಮಾಜದಲ್ಲಿ ಆತ್ಮಾವಿಶ್ವಾಸದಿಂದ, ಹೆಮ್ಮೆಯಿಂದ ನಿಲ್ಲಬಹುದಾದ ವ್ಯಕ್ತಿಯನ್ನಾಗಿ ಮಾಡಿ, ತಮ್ಮ ಖಾಸಗಿ ಆಸೆ- ಕನಸುಗಳನ್ನು ನಮ್ಮಗಳಿಗೆ ತೊಡಿಸಿ ಕೃತಾರ್ಥರಾದೆವೆಂದುಕೊಂಡ ಅವರುಗಳ ಪ್ರೀತಿ-ವಿಶ್ವಾಸವನ್ನು ಮನಃಪೂರ್ವಕವಾಗಿ ನೆನದುಕೊಳ್ಳುವ ಬಗೆಯನ್ನು ಹುಡುಕುತ್ತಾ ಸಾಗುತ್ತಿದ್ದ ಸಮಯದಲ್ಲಿ ಎದುರಾದ ಅಕ್ಕನ ಕ್ರಿಯೆ ನನ್ನನ್ನು ದಂಗುಬಡಿಸಿತು. ನಾನು ಬದುಕಿನಿಂದ ಪಡೆದ ವಿಜಯದಲ್ಲಿ ಅಪ್ಪ ಅಮ್ಮನಿಗೆ ತೃಪ್ತಿ

ಕಾಣಿಸಬೇಕೆಂದು ಹೊರಡುತ್ತಿರುವಾಗ ನಡುವೆ ಬಂದ ಅಕ್ಕನ ಪ್ರಯತ್ನ, ಆ ಪ್ರಯತ್ನದಲ್ಲಿ ನನ್ನ ಮತ್ತು ನನ್ನ ಸಿದ್ಧಿಯನ್ನು ಅವರು ಅಮಾಯಕರಾಗಿ ತಟ್ಟಿಸಿಕೊಳ್ಳದ ರೀತಿ ನನ್ನನ್ನು ನಿರಾಶೆಗೊಳಿಸಿತು. ಅಪ್ಪ, ಅಮ್ಮ ಅನುಭವಿಸುತ್ತಿದ್ದ ನೋವು ಒಂದು ಕಡೆ, ಅಕ್ಕನ ಕಾರಣದಿಂದಾಗಿ ಅವರನ್ನು ತೃಪ್ತ ಜೀವಿಗಳನ್ನಾಗಿಸದ ನನ್ನ ಅಸಫಲತೆ ಮತ್ತೊಂದು ಕಡೆ. ಅಕ್ಕ ನೀನೇಕೆ ಹೀಗೆ ಮಾಡಿದೆ? ಅಪ್ಪ-ಅಮ್ಮನ ಪ್ರೀತಿ ದೂಡಿಕೊಂಡು ನಿನ್ನನ್ನು ಅದ್ಯಾವ ಶಕ್ತಿ ಕರೆದೊಯ್ದಿತು? ಹಾಗೆ ಹೋಗುವಾಗ ಒಮ್ಮೆ ಹಿಂತಿರುಗಿ ನೋಡಬಾರದಿತ್ತೆ? ಅಷ್ಟೊಂದು ನಿಷ್ಠುರತೆಯಲ್ಲಿ ಮನೆ ಬಿಡುವಾಗ ಒಂದೇ ಒಂದು ಸಲವಾದರೂ ಮನೆಯವರ ಪ್ರೀತಿಯ ಸೆಲೆ ನಿನ್ನನ್ನು ಸೆಳೆಯದಾಯಿತೆ? ಇಳಿ ವಯಸ್ಸಿನಲ್ಲಿ ಅಪ್ಪ-ಅಮ್ಮನನ್ನು ಅಲುಗಾಡಿಸಬಹುದಾದ ನೋವು ಒಂದು ಬಾರಿಯಾದರೂ ನಿನಗೆ ತಟ್ಟದಾಯಿತೆ? ಉತ್ತರಿಸಲು ಅಕ್ಕ ಅಲ್ಲಿರಲಿಲ್ಲ.

ಮುಂದೆ ಬದುಕಿನ ಹಾದಿಯಲ್ಲಿ ಗಾಯಕ್ಕೆ ಮೆಣಸು ಎರಚಲು ಸಾವಿರ ಜನರಿಂದ ಸಾವಿರ ಬಗೆಯ ಕುತೂಹಲಗಳು, ಪ್ರಶ್ನೆಗಳು, ಆ ಸಮಯದಲ್ಲಿ ಅಪ್ಪ ರಾಯಪುರದಲ್ಲಿ ಎ. ಸಿ. ಎಫ್. ಆಗಿದ್ದರು. 'ಸೌತಿಗೆ ಹೋಗಿದ್ದಾಳೆ. ಅಲ್ಲಿ ಪಿ.ಜಿ. ಸೀಟು ಸಿಕ್ಕಿತು' ಎಂದೆಲ್ಲಾ ಹೇಳಿ ಇಲ್ಲಿಯ ಜನರಿಂದ ಕೈ ತೊಳೆದುಕೊಳ್ಳುವುದು ಸುಲಭವಿತ್ತು. ಆದರೆ ನಮ್ಮವರೆಂದು ಸಾರಿಕೊಳ್ಳುವ ಊರಿನ ಜನರಿಂದ ತಪ್ಪಿಸಿಕೊಳ್ಳುವುದು ಅಷ್ಟೇನೂ ಸುಲಭವಿರಲಿಲ್ಲ. ಅಲ್ಲಿಯವರಿಂದ ಅವಮಾನ ಕಟ್ಟಿಟ್ಟ ಬುತ್ತಿಯಾಗಿತ್ತು. ವರ್ಷಕ್ಕೊಂದೆರಡು ಬಾರಿ ಮದುವೆ, ಮುಂಜಿಗಳಿಗೆಂದು ಬೆಳೆದ ಎರಡು ಹೆಣ್ಣುಮಕ್ಕಳ ಪಾಲಕರಾಗಿ ತಗ್ಗಿ ಬಗ್ಗಿ, ಗಂಟು ಇಟ್ಟುಕೊಂಡವರ ಹಾಗೆ ಹುಸಿ ಪ್ರದರ್ಶನ ನಡೆಸಿ ಹಿಂದಿರುಗುತ್ತಿದ್ದ ಅಪ್ಪನವರು, ಕೊನೆಗೆ ಅಲ್ಲಿಯವರ ಬಾಯಿಗೆ ಆಹಾರವಾಗಲಿಚ್ಛಿಸದೆ ಎಲ್ಲವನ್ನೂ ಕೈದು ಮಾಡಿದ್ದರು. ನಂತರ ಅವರಿಬ್ಬರಿಗೆ ಮನೆಯೇ ಪ್ರಪಂಚವಾಗಿತ್ತು. ಯಾತನಾಯುಕ್ತ ನೆನಪುಗಳೇ ಹರಡಿ ನಿಂತ ಬದುಕಾಗಿತ್ತು.

ಮುಂದೆ ನನ್ನ ಓದು, ಕೆಲಸ, ಮದುವೆಗಳಿಂದ, ಕೊನೆಗೆ ಮೊಮ್ಮಗ ಶಶಾಂಕನಿಂದಲೂ ಚಿಗುರಿಸಲಾಗದ ಅವರುಗಳ ಯಾಂತ್ರಿಕ ಜೀವನದಿಂದ ನಾನು ಹೆಚ್ಚು ನಿರೀಕ್ಷಿಸುವ ಹಾಗಿರಲಿಲ್ಲ. 'ಬೊಂಬಾಯಿಗೆ ಬನ್ನಿ' ಎಂದು ಪ್ರತಿ ಬಾರಿಯೂ ಅವರನ್ನು ಕರೆಯುತ್ತಿದ್ದೆವು. ಪ್ರತಿಬಾರಿಯೂ ನಕರಾತ್ಮಕ ಉತ್ತರ ಸಿಗುತ್ತಿತ್ತು. ಅಥವಾ ಬಂದರೂ ನಾಲ್ಕು ದಿನಕ್ಕಿಂತಲೂ ಹೆಚ್ಚು ನಿಲ್ಲಲು ಅವರಿಂದ ಆಗುತ್ತಿರಲಿಲ್ಲ. ಆದರೆ ಗ್ವಾಲಿಯರ್‌ನಲ್ಲಿ ಹೀಗೆ ಇಬ್ಬರೇ ಮನೆಯಲ್ಲಿದ್ದಾಗ ಮೊದಲ ಬಾರಿಗೆ ಅಪ್ಪನಿಗೆ ಅಟ್ಯಾಕ್ ಆದಾಗಂತೂ ನಾನು ಅತ್ತು ರಂಪಾಟ ಮಾಡಿದೆ; 'ಹೀಗ್ಯಾಕೆ ನೀವು ಮಾಡ್ತೀರಿ? ಅಕ್ಕನ ಮೇಲಿನ ಹಗೆ ಸಾಧಿಸಿಕೊಳ್ಳಬೇಕಾದರೆ ನಿಮ್ಮನ್ನು ನೀವು ಸಂತೋಷದಲ್ಲಿಡಬೇಕು. ನೀವು ನಮ್ಮ ಜೊತೆ ಇರಬೇಕು'. ಆ ಗಳಿಗೆಗೆ ಅಪ್ಪನಿಂದ ಯಾವ ಉತ್ತರವಿಲ್ಲ. ನಂತರ ನಿಧಾನವಾಗಿ ಹೇಳಿದ್ದರು. "ನನಗೆ ಯಾರ ಮೇಲೂ ಹಗೆ ಸಾಧಿಸಲು ಅಧಿಕಾರವಿಲ್ಲ" ನನಗದೂ ಅರ್ಥವಾಗದೆ ಅಮ್ಮನನ್ನು ನೋಡಿದ್ದೆ. ಅವಳು ಎಲ್ಲದಕ್ಕೂ ನಿರುತ್ತರೆ.

ಆ ಸಲ ಬೊಂಬಾಯಿಗೆ ಹೊರಡುವಾಗ ಕಣ್ಣೀರಿಡುತ್ತಾ ಅಪ್ಪನಿಗೆ ನಮಸ್ಕರಿಸುತ್ತಿದ್ದಾಗ ತಲೆ ನೇವರಿಸುತ್ತಾ ಹೇಳಿದ್ದರು. "ಅಯ್ಯೋ ಹುಚ್ಚಿ! ನಾನೇನು ಅನಾಥವಾಗಿ ಸಾಯೋದಿಲ್ಲ. ಸಮಯ ಬಂದಾಗ ನಾನೇ ನಿನ್ನನ್ನು ಕರೆಸ್ಕೊತೀನಿ. ಈಗ ನಿಶ್ಚಿಂತೆಯಾಗಿ ಹೋಗು".

ಅಪ್ಪನ ಮಾತು ಈ ಬಗೆಯಲ್ಲಿ ಪೂರೈಸಬಹುದು ಎಂದು ನಾನು ಎಣಿಸಿದ್ದೆನೆ? "ಊರ ಬದಿ ಹೋಗಬೇಕೆನಿಸುತ್ತಿದೆ. ಜೊತೆಗೆ ನೀನೂ ಬೇಕು. ನಿನಗೆ ರಜೆ ಸಿಗುವಾಗ ಹೇಳು..." ಒಂದು ದಿನ ಬಂದ ಅಪ್ಪನ ಪತ್ರ ಈ ರೀತಿಯಲ್ಲಿ ಮುಕ್ತಾಯ ಹೇಳುತ್ತದೆ ಎಂದು ಅಂದುಕೊಂಡಿದ್ದೆನೆ? ಅಪ್ಪ ಯಾವುದನ್ನೂ ಸಾಮಾನ್ಯವಾಗಿ ಬಯಸುವುದಿಲ್ಲ. ಅವರು ಬಯಸಿದ್ದೇ ತಡ ನಾನು ಬಿಡುವು ಮಾಡಿಕೊಂಡೆ. ಶಶಾಂಕನಿಗೆ ಶಾಲೆ ತಪ್ಪಿಸಿ ಹೊರಡಿಸುವುದರಲ್ಲಿ

ಅರ್ಥವಿರಲಿಲ್ಲ. ಶಶಿಯ ತಲೆಗೆ ಮನೆ ಮತ್ತು ಮಗನ ಜವಾಬ್ದಾರಿ ಹೊರಿಸಿ ಹೊರಟಿದ್ದೆ. ಹಾಗೆ ಹೊರಟದ್ದು ಅಪ್ಪನ ಅಂತಿಮಯಾತ್ರೆ ಕೈಗೊಳ್ಳಲಿಕ್ಕೆ ಎಂದು ಯಾರಿಗೆ ಗೊತ್ತಿತ್ತು? ಆದರೆ ಅಪ್ಪ ಮಾತ್ರ ಸಾವಿಗೆ ಸಿದ್ಧರಾಗಿಯೇ ಹೊರಟಿದ್ದರೆ? ಅದನ್ನು ಬಯಸಿ ಆಹ್ವಾನಿಸಿಯೇ ಪಡೆದುಕೊಂಡರೆ?

ಗ್ವಾಲಿಯರ್ ಸ್ಟೇಷನ್‌ನಲ್ಲಿ ಬೆಳಗಿನ ಜಾವ ಇಬ್ಬರೇ ಇಳಿಯುವಾಗ ಎದೆಯಲ್ಲಿ ಒಂದಷ್ಟು ಭಾರವನ್ನು ಹೊತ್ತುಕೊಂಡ ಅನುಭವ. ಯಾರು ಯಾರನ್ನು ಸಂತೈಸುವುದು?

ಈ ಬಾರಿ ಮನೆಯನ್ನು ಖಾಲಿ ಮಾಡಿ ದೈನ್ಯವಾಗಿ ಅಮ್ಮನನ್ನು ನನ್ನೊಟ್ಟಿಗೆ ಬರಲು ಕೇಳಿಕೊಂಡೆ. ಅಮ್ಮ ಮೌನ ಸೂಚಿಸಿದಳು. ಪ್ರತಿಭಟಿಸದೆ ಇದ್ದದ್ದರಿಂದ ಒಪ್ಪಿಗೆ ಎಂದು ಬಗೆದು ಮೂರು ನಾಲ್ಕು ದಿನ ಇಲ್ಲೇ ಇದ್ದು ಕೆಲವು ಅಗತ್ಯ ಕೆಲಸಗಳನ್ನು ಪೂರೈಸಿ ಹೊರಡುವುದೆಂದುಕೊಂಡೆ.

ಅಪ್ಪ ಇಲ್ಲದ ಮನೆಯಲ್ಲಿ ನಾಲ್ಕು ದಿನವೇ ಆಗಲಿ ಇರುವುದು ಅಷ್ಟು ಸುಲಭದ ವಿಷಯವಾಗಿರಲಿಲ್ಲ. ಅಮ್ಮ ಇದಕ್ಕಾಗಿಯೇ ನನ್ನೊಂದಿಗೆ ಬರಲು ಮನಸ್ಸು ಮಾಡಿರಬೇಕು ಅನಿಸಿತು. ನನಗೆ ತಿಳಿದ ಕೆಲವು ಸಂಪರ್ಕಗಳ ಮೂಲಕ ಸಾಮಾನುಗಳನ್ನು ಆದಷ್ಟು ಇಲ್ಲಿಯೇ ಡಿಸ್‌ಪೋಸ್ ಮಾಡಲು ತೀರ್ಮಾನಿಸಿದೆ. ಒಂದೊಂದು ಸಾಮಾನಿನ ಹಿಂದೆ ಒಂದೊಂದು ನೆನಪುಗಳು. ಸಾಮಾನುಗಳು ಖಾಲಿ ಆಗುತ್ತಿದ್ದವೇ ವಿನಾ ಅದರ ಹಿಂದೆ ಅಂಟಿಕೊಂಡ ನೆನಪುಗಳಲ್ಲ.

ಮರದ ಸಾಮಾನುಗಳನ್ನೆಲ್ಲಾ ಹೊರಗೆ ಮಾರುವುದಿತ್ತು ಅಪ್ಪನ ದೊಡ್ಡ ರೈಟಿಂಗ್ ಟೇಬಲ್. ಅದರ ಎರಡೂ ಬದಿಯಲ್ಲಿ ಟೇಬಲ್ಲಿನ ಮತ್ತೊಂದು ಕೋನಕ್ಕೂ ಹರಡಿಕೊಂಡ ನಾಲ್ಕು ದೊಡ್ಡ ದೊಡ್ಡ ಡ್ರಾಯರ್‌ಗಳು- ಅದರಲ್ಲಿನ ಬೇಕಾದ ಬೇಡದ ವಸ್ತುಗಳನ್ನು ತೆಗೆದಿರಿಸುತ್ತಿದ್ದೆ; ನೋಡುತ್ತಿದ್ದ ಹಾಗೆಯೇ ಒಂದು ಡ್ರಾಯರಿನ ಅಡಿಯಲ್ಲಿ ನೀಲಿಬಣ್ಣದ ತೆಳುವಾದ ದೊಡ್ಡ ಪ್ಲಾಸ್ಟಿಕ್ ಕವರೊಂದು ಸಿಕ್ಕಿತು. ಅದನ್ನು ಬಿಡಿಸುವಾಗ ಒಮ್ಮೆ ಕೈ ಬೆರಳುಗಳು ನಡುಗಿದಂತಾಗಿದ್ದು ಸತ್ಯವೋ ಭ್ರಮೆಯೋ



50 ವರ್ಷಗಳಿಂದ ಭಾರತದ ಆಡಳಿತ ನಿಮ್ಮಂಥವರ ಕೈನಲ್ಲಿದ್ದರೂ ಇನ್ನೂ ದೋಚುವುದಕ್ಕೆ ಉಳಿಸಿದ್ದೀರಲ್ಲಾ!

ತಿಳಿಯಲಿಲ್ಲ. ಕವರಿನ ಒಳಗಿರುವುದನ್ನು ನೋಡುತ್ತಲೇ ನಿಶ್ಚಲಳಾದೆ.

ಕವರಿನಷ್ಟೇ ದೊಡ್ಡ ಸೈಜಿನ ಅಕ್ಕನ ಒಂದು ಕಲರ್ ಫೋಟೋ! ಅವಳ ಇಷ್ಟು ದೊಡ್ಡ ಫೋಟೋವನ್ನು ನಾನು ನೋಡಿಯೇ ಇರಲಿಲ್ಲ. ಫೋಟೋವೇನೋ ನನಗೆ ತಿಳಿದ ಹಾಗೆ ಅವಳ ಕಾಲೇಜು ದಿನಗಳಲ್ಲೇ ತೆಗೆದದ್ದು. ಆದರೆ ಈ ರೀತಿ ಎನ್‌ಲಾರ್ಜ್ ಮಾಡಿಸಿಕೊಂಡು ಅಪ್ಪ ತಮ್ಮಲ್ಲಿ ಇಟ್ಟುಕೊಂಡದ್ದೇಕೆ? ಫೋಟೋಕ್ಕೆ ಅಂಟಿಕೊಂಡ ರಟ್ಟಿನಲ್ಲಿ ಸ್ಟುಡಿಯೋ ಹೆಸರಿನ ಜೊತೆ 1992ರ ಮುದ್ರೆ ಇತ್ತು. ಅಂದರೆ ಸುಮಾರು ನಾಲ್ಕೈದು ವರ್ಷಗಳ ಹಿಂದಿನದು... ಅಂದರೆ ಅಕ್ಕ ಮನೆ ಬಿಟ್ಟು ಹೋಗಿ ಸುಮಾರು ಐದಾರು ವರ್ಷಗಳ ನಂತರ ದೊಡ್ಡದು ಮಾಡಿಸಿದ್ದಾರಂತಾಯಿತು. ಮನದಲ್ಲಿ ಅಷ್ಟೊಂದು ಕೋಪ, ಅಸಡ್ಡೆಯನ್ನು ತುಂಬಿಸಿಕೊಂಡಿದ್ದ ಅಪ್ಪನಿಗೆ ಹಾಗೆ ದೊಡ್ಡದು ಮಾಡಿಸುವ ಪ್ರಮೇಯ ಏಕೆ ಬಂತೂ... ಅಥವಾ ಅಕ್ಕನ ಪಾಲಿಗೆ ಅಪ್ಪನ ಕೋಪ-ಅಸಡ್ಡೆಗಳುಂಟು ಎಂದು ಭಾವಿಸಿದ್ದು ಬರೇ ನನ್ನ ಅನ್ನಿಸಿಕೆಯೆ? ಮುಂದೆ ಯೋಚಿಸಲಾಗಲಿಲ್ಲ. ಅಪ್ಪನ ನೋವು, ಹತಾಶೆಯ ಮೂಲ ಇನ್ನೊಂದೇ ಇದೆ ಎಂದು ಒಪ್ಪಿಕೊಳ್ಳಲು ಸಾಧ್ಯವಾಯಿತು.

"ನನಗೆ ಯಾರ ಮೇಲೂ ಹಗೆ ಸಾಧಿಸಲು ಅಧಿಕಾರವಿಲ್ಲ" ಎಂದೊಮ್ಮೆ ಹೇಳಿದ್ದ ಅಪ್ಪನ ಮಾತಿನ ಬೇರನ್ನು ಅಗೆಯತೊಡಗಿದೆ. ಇಷ್ಟರವರೆಗೂ ಕುಟುಂಬದ ಪರಿಸರದಿಂದ, ಭಾವನೆಯಿಂದ, ಅಭಿಪ್ರಾಯಗಳಿಂದ ಹೊರತಾಗಿ ಉಳಿದೆನೋ ಅಥವಾ ಹೊರತಾಗಿಟ್ಟರೋ ಎಂದೆಲ್ಲಾ ಅನಿಸಿ ಮನದೊಳಗೆ ಅತೀವ ಸಂಕಟ ಆಗತೊಡಗಿತು. ಈ ಬಗ್ಗೆ ಅಮ್ಮನನ್ನು ಕೇಳುವುದೂ ಬೇಡವೆನಿಸಿತು. ನಾನು ಅಲ್ಲಿ, ಇಲ್ಲಿ ಇದ್ದು, ಓದು ಇತ್ಯಾದಿ ಚಟುವಟಿಕೆಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಾಗ ನನ್ನ ಹಿಂದೆ ಸರಿದಿದ್ದಂಥ ಕಾಲವನ್ನು ಹಿಡಿದಿಟ್ಟು ಇದೀಗ ಜಾಲಾಡಬೇಕಿತ್ತು. ಇದಕ್ಕೆ ನನಗೆ ನಿಯತಿಯ ಜಾಗದಲ್ಲಿ ನನ್ನನ್ನೂ ಕೂರಿಸಿಕೊಂಡು ನೋಡಬೇಕಿತ್ತು. ನೆನಪನ್ನು ಹಿಂದೆ ಹಿಂದೆ ಸರಿಯುತ್ತಾ ನನ್ನಿಂದ ನಾನು ಹೊರಬರತೊಡಗಿದೆ...

ನನಗಿಂತ ನಾಲ್ಕು ವರ್ಷ ದೊಡ್ಡವಳು. ನನ್ನ ಅಕ್ಕ ನಿಯತಿ. ಲೆಕ್ಕದಲ್ಲಿ ನಾಲ್ಕೇ ವರ್ಷ ಅಂತರವಿದ್ದರೂ ಮನೆಗೆ ಹಿರಿಮಗಳಾಗಿದ್ದ ಕಾರಣಕ್ಕೋ, ಅವಳ ಸ್ವಭಾವಕ್ಕೋ ಒಟ್ಟಿನಲ್ಲಿ ಎಲ್ಲರ ಮನಸ್ಸಿಗೂ ಅವಳು ಬೇಗ ದೊಡ್ಡವಳೆನಿಸಿಬಿಟ್ಟಳು. ಅಡಿ ನಲಿಯಬೇಕಿದ್ದ ಅವಳ ಬಾಲ್ಯ ಮನೆಯಲ್ಲಿ ನನ್ನ ಪ್ರವೇಶ ನಡೆಯುತ್ತಿದ್ದ ಹಾಗೆ ಕರಗಿಬಿಟ್ಟಿರಬಹುದೆ? "ನೀನು ದೊಡ್ಡವಳಲ್ವಾ?". "ಇದು ಪರಿಣಿತಿಗಿರಲಿ". "ನೋಡಿ ನೋಡಿ ಪರಿಣಿತಿ ಇಲ್ವಾ ಇವತ್ತು...!" ಈ ಬಗೆಯದೇ ಮಾತುಗಳು ಅವಳನ್ನು ತುಂಬಿಕೊಂಡಿರಬಹುದೆ? ಆದರೆ ಇಷ್ಟರವರೆಗೂ ಸ್ವಲ್ಪ ಅಸ್ಪಷ್ಟವೆನಿಸಿದರೂ ಮುಂದಿನದಂತೂ ತಿಳಿ ಮನಸ್ಸಿನಲ್ಲಿ ಯೋಚಿಸಿದರೆ ನನ್ನ ಅರಿವಿಗೆ ಬರಬಹುದಾದಂಥ ಸತ್ಯ- ಮನೆಯಲ್ಲಿಯೂ, ಮನೆಯಿಂದ ಹೊರಗೂ ನಾನು ಚುರುಕಾಗಿದ್ದೆ. ಓದುವುದರ ಜೊತೆಗೆ ಹತ್ತು ಹಲವು ಚಟುವಟಿಕೆಗಳನ್ನು ಬೆನ್ನಿಗಂಟಿಸಿಕೊಂಡು ಉತ್ಸಾಹಿಯಾಗಿದ್ದೆ. ನನ್ನನ್ನು ಸುತ್ತುವರಿದ ಪ್ರಪಂಚವೂ ನನ್ನಲ್ಲಿ ಭರವಸೆಯನ್ನು ಹುಟ್ಟುಹಾಕಿದ್ದಿರಲೂಬಹುದು. ನಾನಂತೂ ಗೆಲುವಿನ, ಮೂಲವಾಗಿದ್ದೆ. ಗೆಲುವು ವಿಶ್ವಾಸ ಕೊಟ್ಟಿತು. ಲವಲವಿಕೆ ಕೊಟ್ಟಿತು. ಚೆಲುವೂ ಕೊಟ್ಟಿತು. ಆತ್ಮವಿಶ್ವಾಸ ಕಳೆದುಕೊಂಡಿದ್ದ ಅಕ್ಕನನ್ನು ಯಾರೂ ಮುಂದೆ ದೂಡಲಿಲ್ಲ. ಅವಳು ಹಿಂದೆಯೇ ಉಳಿದಳು. ಮತ್ತಷ್ಟೂ ಕಳೆದುಹೋದಳು.

ಒಂದೊಂದೇ ನೆನಪಿಗೆ ಬರುತ್ತದೆ, ಗ್ವಾಲಿಯರ್‌ನ ಮುರಾರಿನಲ್ಲಿನ ಮನೆಯ ಗೃಹಪ್ರವೇಶದ ಸಂಜೆ ನನ್ನ ಭರತನಾಟ್ಯ ಪ್ರದರ್ಶನ ಇತ್ತು. ನಮ್ಮ ನಮ್ಮವರೇ ಎಂದರೂ ಸಾಕಷ್ಟು ಜನ ಸೇರಿತ್ತು. ಸೇರಿದ್ದ ಸುಮಾರು ಜನರು ನನ್ನೆದುರೇ ಅಕ್ಕನನ್ನು ಕೇಳಿದ್ದರು, "ನೀನು ಮಾಡ್ತಾ ಇಲ್ವಾ?" "ನಿನ್ನದು ಏನೂ ಇಲ್ವಾ?" ಕಪ್ಪು ಕಪ್ಪಾಗಿದ್ದ ಅಕ್ಕನ ಮುಖವನ್ನು ನೆನಪಿಸಿಕೊಂಡರೆ ಈಗಲೂ ಸ್ಪಷ್ಟವಾಗಿ ಕಣ್ಣ ಮುಂದೆ ನಿಲ್ಲುತ್ತದೆ. ಇಂಟರ್‌ಮೀಡಿಯಟ್‌ನಲ್ಲಿ ಅಕ್ಕನಿಗೆ ಲಭ್ಯವಾದದ್ದು ಎರಡನೆ ದರ್ಜೆ. ಯಾರಿಂದಲೂ ಯಾವುದೇ ಮಹತ್ವ ಸಿಗದೆ ಮೊದಲ ಬಿಎಗೆ ಪಾದಾರ್ಪಣೆ. ಕೆಲವು ವರ್ಷಗಳಲ್ಲಿ ಅದೇ ಜಾಗಕ್ಕೆ ಬಂದಿದ್ದ ನನ್ನಿಂದ ವಿಜ್ಞಾನ ವಿಭಾಗದಲ್ಲಿ ಹದಿನೆಂಟನೆಯ ರ್‍ಯಾಂಕ್. ಭೋಪಾಲಿನ ಮೌಲಾನ ಆಜಾದ್ ಕಾಲೇಜಿನಲ್ಲಿ ನಾನೇ ಆರಿಸಿ ಸೇರಿದ ಇಂಜಿನಿಯರಿಂಗ್.

ಇಷ್ಟರವರೆಗೂ ಅಪ್ರತ್ಯಕ್ಷವಾಗಿ ನಡೆಯುತ್ತಿದ್ದ ಮುಖಾಮುಖಿ ನಾನು ಭೋಪಾಲ್ ಸೇರುತ್ತಿದ್ದ ಹಾಗೆ ಕಮ್ಮಿಯೇನೂ ಆಗಲಿಲ್ಲ. ಒಂದೊಂದು ಸೆಮಿಸ್ಟರ್ ಮುಗಿಸಿ ರಜೆಗೆ ಮನೆಗೆ ಬರುವಾಗ ನನಗೆ ಸಿಗುತ್ತಿದ್ದ ರಾಜ ಮರ್ಯಾದೆ. "ಮಗಳು ಬಂದಿದ್ದಾಳೆ" ಎಂದು ಪಪ್ಪ. ಅಮ್ಮನಲ್ಲಿ ಕಾಣುತ್ತಿದ್ದ ಹಬ್ಬದ ಸಡಗರ. ಮದುವೆಯಾಗಿ ತವರುಮನೆಗೆ ಬಂದಾಗ ಆಕೆಗೆ ಸಿಗಬೇಕಾದ ಆದರ, ಮದುವೆಯಾಗದೆ ಸಿಕ್ಕದೆ ಹೋಗಿ ಅದನ್ನು ಇನ್ನೊಂದು ರೀತಿಯಲ್ಲಿ ನಾನು ಪಡೆಯುವಂತಾದಾಗ ಅವಳಿಗೆ ಹೇಗೆದ್ದಿರಬಹುದು? ಉತ್ತರದಲ್ಲಿ ನಿಂತು ಊರಿನ ಸಂಬಂಧವನ್ನು ಅಕ್ಕನಿಗೆ ಹುಡುಕುವುದು ಸುಲಭವಿರಲಿಲ್ಲ. ಪ್ರಯತ್ನವೇನೋ ನಡೆಯುತ್ತಿತ್ತು. ಆದರೆ ಸೆಳೆಯುವ ಸೌಂದರ್ಯ, ಇರದಿದ್ದ ನೌಕರಿ, ಸುರಿಯದ ವರದಕ್ಷಿಣೆ ಎಲ್ಲವೂ ಅಕ್ಕನ ಒಂಟಿಜೀವನಕ್ಕೆ ಪೂರಕ ಆಗಿದ್ದವು. ಅಕ್ಕ ಮತ್ತಷ್ಟೂ ಬಿಳಿಚಿಕೊಂಡಳು. ಪ್ರತಿಬಾರಿಯೂ ಅಕ್ಕನನ್ನು ನೋಡುವಾಗ ಹೆಚ್ಚು ಹೆಚ್ಚು

ಒಗಟಾಗಿತೊಡಗಿದಳು.

ಅವಳ ಇಪ್ಪತ್ತೈದನೆಯ ಹುಟ್ಟುಹಬ್ಬದ ಸಮಯಕ್ಕೆ ನನಗೆ ಎಂಬಿಎಗೆ ದೇವಿ ಅಹಿಲ್ಯಾ ಯುನಿವರ್ಸಿಟಿಯಲ್ಲಿ ಸೀಟು ಸಿಕ್ಕಿ, ಇಂದೋರಿನಲ್ಲಿದ್ದೆ. ಶುಭಾಶಯ ತಿಳಿಸಲು ಫೋನಿಸಿದಾಗ ಆ ಬದಿಯಿಂದ ರಿಸೀವರ್ ಹಿಡಿದಿದ್ದ ಅಕ್ಕ ಯಾವುದೇ ಪ್ರತಿಕ್ರಿಯೆ ತೋರಿಸಲಿಲ್ಲ. ಖುಶಿಯ ಅಮಲಿನಲ್ಲಿ ತೇಲುತ್ತಿದ್ದ ನನಗೆ ನೆಲಕ್ಕೆ ಅಪ್ಪಳಿಸಿದ ಹಾಗಾಗಿ ಸಾಕಷ್ಟು ಕೋಪ ಬಂದಿತ್ತು. ಆ ಗಳಿಗೆಯಲ್ಲಿ ಕೂಡ ನನ್ನ ವಿಜಯದ ಸಂಭ್ರಮಕ್ಕಿಂತಲೂ ಅವಳ ಸೋಲಿನ ಹತಾಶೆ ಹೆಚ್ಚಿನದು ಎಂದು ನಾನೇಕೆ ಗ್ರಹಿಸಲಿಲ್ಲ? ಎಲ್ಲರ ಕಣ್ಣೆದುರಿಗೆ ಧೀಮಂತವಾಗಿ ಬೆಳೆಯತೊಡಗಿದ ನನ್ನ ಪ್ರತಿಭೆ ಅಕ್ಕನ ವಿಕಾಸವನ್ನು ಕುಂಠಿಸಗೊಳಿಸಿತೆ? ಬದುಕಿನಲ್ಲಿ ಅನುಭವಿಸ ಬೇಕಾದ ಕಾಲದಲ್ಲಿ ಮನೆಯಿಂದ ಹೊರಗೆ ಇದ್ದಾಳೆ, ಹಾಸ್ಟೆಲು ಇತರ ಕಡೆಗಳಲ್ಲಿ ನಾಲ್ಕು ಜನರೊಟ್ಟಿಗೆ ಸೇರಿಕೊಂಡು ಬದುಕುವಾಗ ಸೌಲಭ್ಯಗಳ ಕೊರತೆ ಕಾಣಬಾರದು. ಜೊತೆಯವರ ಎದುರು ಹಿಡಿಯಾಗಬಾರದು... ಎಂಬುದರ ಹೆಸರಿನಲ್ಲಿ ನನಗೆ ಸಿಗುತ್ತಿದ್ದ ಪರಿಪೂರ್ಣ ಬದುಕು ಅಕ್ಕನ ಜೀವನ ಖಾಲಿ ಖಾಲಿಯಾಗಲು ಸಹಕಾರಿ ಆಯಿತೆ? ಅಕ್ಕ ಅರ್ಥವಾಗದೆ ಉಳಿದಿದ್ದರಲ್ಲಿ ನನ್ನ ಪಾಲು ಇತ್ತೆ? ಮಜಬೂರಿಯಲ್ಲೇ ಸಣ್ಣತನದ ಹಾದಿ ಅವಳು ತುಳಿದಳೆ? ಅವಳು ಆರಿಸಿಕೊಂಡ ದಾರಿಗೆ ಅವಳನ್ನು ನಾವೇ ಎಳೆದೆವೆ? ತನ್ನ ಡ್ರೆಸಿಂಗ್ ಟೇಬಲ್ಲಿನ ಕನ್ನಡಿಯ ಮೇಲೆ "ನನ್ನನ್ನು ಹುಡುಕಬೇಡಿ" ಎಂದು ಬರೆದಿದ್ದ ಸಣ್ಣ ಚೀಟಿಯೊಂದನ್ನು ಸಿಕ್ಕಿಸಿ ಒಂದು ಮಧ್ಯಾಹ್ನ ಯಾರಿಗೂ ಪಥಾ ಕೊಡದಂತೆ ಮನೆ ಬಿಟ್ಟು ಅವಳು ಹೊರಟಾಗಲೂ ಬದುಕಿನ ಸ್ಪರ್ಧಾತ್ಮಕ ಓಟದಲ್ಲಿ ಓಡುತ್ತಿದ್ದ ನಮಗ್ಯಾರಿಗೂ ಈ ಬಗೆಯ ಸಣ್ಣ ಸಂದೇಹ ಹುಟ್ಟಲಿಲ್ಲವೇಕೆ? ಕೋಪದಲ್ಲಿ ಹಿಡಿಶಾಪ ಹಾಕುತ್ತಲೇ ಅಕ್ಕನ ಶ್ರಾದ್ಧ ಮಾಡಿ ಬಂದಿದ್ದ ಅಪ್ಪನಿಗೆ ಮಾತ್ರ ಅಡಗಿಕೊಂಡಿದ್ದ ಈ ಸತ್ಯವನ್ನು ತಡವಾಗಿಯಾದರೂ ತೋರಿಸಿಕೊಟ್ಟ ಸಂದರ್ಭ ಯಾವುದು?

ಮತ್ತೊಮ್ಮೆ ಅಪ್ಪನ ಡ್ರಾದೊಳಗೆ ಭದ್ರವಾಗಿಟ್ಟುಕೊಂಡಿದ್ದ ಅಕ್ಕನ ಪಟ ಬಿಡಿಸಿ ದಿನಾಂಕ ನೋಡಿದೆ- ಜನವರಿ 1992! ನನ್ನ ಮದುವೆ ಸಮಯ! ಆ ಹೊತ್ತಿನಲ್ಲಿ ಅಪ್ಪನ ಮುಖದಲ್ಲಿ ಹುಟ್ಟಿ ಬಂದಿರಬಹುದಾದ ನೋವಿನ ಛಾಯೆಯ ಮೂಲ ಸ್ವರೂಪ ಇದೇ ಆಗಿತ್ತೆ?

> **ಅಮಲಾಕ್ಷಿ**
>
> ನಿನ್ನ ಕಣ್ಣುಗಳು
> ಬರೀ ಕಣ್ಣುಗಳಲ್ಲ ಕಣೇ...
> ಮತ್ತೆರಿಸುವ
> ಮಧ್ಯದ ಬಟ್ಟಲುಗಳು!
>
> -'ಅಮೃತೇಶ್ವರ' ತಂಡರ

ಕಂಪನಿಯ ಹಿರಿಯ ಸಹೋದ್ಯೋಗಿಯೊಬ್ಬರು ಕೆಲಸದ ನಿಮಿತ್ತ ಬುಸಾವಲ್ಲಿಗೆ ತೆರಳಿದ್ದಾಗ ಸಿವಿಯರ್ ಹಾರ್ಟ್ ಅಟ್ಯಾಕ್ ಆಗಿ ಆಸ್ಪತ್ರೆಗೆ ಸೇರಿದಂಥ ಸಂದರ್ಭದಲ್ಲಿ ಅವರನ್ನು ನೋಡಿ ಬರಲು ಹೋದಾಗ, ಓಪಿಡಿಯಲ್ಲಿ ಆಯಾಳ ಬಾಯಲ್ಲಿ ಅನಿರೀಕ್ಷಿತವಾಗಿ 'ನಿಯತಿ ಪರವೇಜ್'ನ ಹೆಸರು ಮೊದಲ ಬಾರಿ ಕೇಳಿದಾಗಲೂ ವಿಚಾರಿಸುವ, ಹುಡುಕುವ ಸಣ್ಣ ಪ್ರಯತ್ನವೂ ಮಾಡದ, ಬುಸಾವಲ್ಲಿನ ಸ್ಟೇಷನ್‌ನ ಪ್ಲಾಟ್‌ಫಾರ್ಮಿನಲ್ಲಿ ಎದುರಾದ ಅಕ್ಕನನ್ನು ತಡೆಯುವ ಯತ್ನವೂ ನಡೆಸದ ನನ್ನ ನೀಚತನವನ್ನು ನನ್ನದೇ ಮನಃಸಾಕ್ಷಿಯ ಎದುರಲ್ಲಿ ಈಗ ಹೇಗೆ ಮುಚ್ಚಿಕೊಳ್ಳಲಿ?

ಸಾಮಾನೆಲ್ಲಾ ಟ್ರಕ್ಕಿನಲ್ಲಿ ಮುಂಬಯಿಗೆ ಹೊರಟಾಗಿತ್ತು. ಶಶಿಗೆ ಫೋನಿಸಿ ನಮ್ಮ ಅನಿವಾರ್ಯ ವಿಳಂಬದ ಬಗ್ಗೆ ಹೇಳಿದೆ: "ಕಾರಣ ಮತ್ತೆ ಹೇಳ್ತೇನೆ" ಎಂದೆ.

"ಯಾಕೆ ತಡ? ನಾವು ನಾಳೆಯೇ ಬೊಂಬಾಯಿಗೆ ಹೊರಡ್ತಿದ್ದೇವಲ್ಲಾ?" ಅಮ್ಮನ ಬರಡು ಮುಖದಲ್ಲಿ ಜೀವಂತತನದ ದ್ಯೋತಕವಾಗಿ ಸಾಕಷ್ಟು ಸಮಯದ ನಂತರ ಕುತೂಹಲವೊಂದು ಕಾಣಿಸಿತು. "ನಾವು ನಾಳೆಯೇ ಬುಸಾವಲ್ಲಿಗೆ ಹೋಗ್ತಾ ಇದ್ದೇವೆ. ಅಮ್ಮ ಕಾರಣ ಮತ್ತೆ ಹೇಳ್ತೇನೆ" ಶಶಿಗೆ ಕೊಟ್ಟ ಉತ್ತರವೇ ಕೊಡುತ್ತಾ ಅನಾವರಣಗೊಳ್ಳುತ್ತಿದ್ದ ಅಲ್ಪತನವನ್ನು ಮುಚ್ಚಿಕೊಳ್ಳುವ ಪ್ರಯತ್ನದಲ್ಲಿ ನಿಂತೆ. ✤



ಪ್ರಾಕ್ಸಿ

ಕಾಲೇಜಿನ ದಿನಗಳಲ್ಲಿ ನಮ್ಮನ್ನು ನಾವು ಬಹಳ ಬುದ್ಧಿವಂತರು ಎಂದುಕೊಳ್ಳುತ್ತಿದ್ದೆವು. ಒಂದು ದಿನ ಭೂಗೋಳದ ತರಗತಿಯಲ್ಲಿ ಹಾಜರಿ ತೆಗೆದುಕೊಳ್ಳುತ್ತಿದ್ದಾಗ, ನನ್ನ ಮಿತ್ರ ಮುರಳಿ ಬಂದಿರಲಿಲ್ಲವಾದ್ದರಿಂದ ನಾನು ಅವನಿಗೆ ಹಾಜರಿ ಕೊಡಲು ತೀರ್ಮಾನಿಸಿದೆ. ಅವನ ಸಂಖ್ಯೆಯನ್ನು ಅಧ್ಯಾಪಕರು ಕೂಗಿದಾಗ ನನ್ನ "ಯೆಸ್ ಸರ್"ನ ಜೊತೆಗೆ ಇನ್ನೂ ಆರು ಧ್ವನಿಗಳ "ಯೆಸ್ ಸರ್"ಗಳು ಬಂದದ್ದು ಕೇಳಿ ಗಾಬರಿಯಾಯಿತು. ಆದರೆ ಅಧ್ಯಾಪಕರು ತಮ್ಮ ಪಾಡಿಗೆ ತಾವು ಮುಂದುವರೆದಿದ್ದರಿಂದ ನಿರಾಳವಾಗಿ ಉಸಿರಾಡಿದೆ.

ಸ್ವಲ್ಪ ಹೊತ್ತಿಗೆ ಮುರಳಿ ತರಗತಿಯೊಳಗೆ ಕಾಲಿರಿಸಿದ ನಾವೆಲ್ಲಾ ಅವನ ಗಮನ ಸೆಳೆಯಲು ವಿಧವಿಧವಾದ ಹಾವಭಾವಗಳನ್ನು ಮಾಡಿದರೂ ನಮ್ಮತ್ತ ನೋಡದೆ ನೇರವಾಗಿ ಅಧ್ಯಾಪಕರ ಬಳಿ ಹೋಗಿ, "ಸರ್, ತಡವಾಯ್ತು, ಕ್ಷಮಿಸಿ, ನನಗೆ ಹಾಜರಿ ಕೊಡಿ. ನನ್ನ ನಂಬರ್ 25" ಎಂದು ಹೇಳಿದ. ಆಗ ಅಧ್ಯಾಪಕರು ಜೋರು ಧ್ವನಿಯಲ್ಲಿ, "ನೀನು ಈ ಲೋಕದವನಾಗಿ ಇರುವುದಕ್ಕೆ ಸಾಧ್ಯವೇ ಇಲ್ಲ. ನೀನು ಅನ್ಯಗ್ರಹಜೀವಿಯೇ ಇರಬೇಕು. ನೀನು ಇಲ್ಲದಿರುವಾಗ ನಿನ್ನ ಏಳು ಅಶರೀರವಾಣಿಗಳು, ನಿನ್ನ ಸಂಖ್ಯೆಗೆ ಹಾಜರಿ ಕೊಟ್ಟವು" ಎಂದು ನಮ್ಮೆಲ್ಲರತ್ತ ತಿರುಗಿ ಹೇಳಿದಾಗ ನಾವೆಲ್ಲಾ ಸುಸ್ತು.

-ಅಭಿಜಿತ್ ಗೋಗಿ

ವಿಶ್ರಾಂತಿಗಾಗಿ ವ್ಯಾಪಾರ

ನಾನು ನನ್ನ ದೊಡ್ಡಮ್ಮ ಮತ್ತು ಅತ್ತೆಯೊಂದಿಗೆ ಮಾರುಕಟ್ಟೆಗೆ ಹೋಗಿದ್ದೆ. ಮಧ್ಯಾಹ್ನದ ಸಮಯವಾದ್ದರಿಂದ ಬಹಳ ಬಿಸಿಲಿತ್ತು.

ವ್ಯಾಪಾರ ಮುಗಿದ ಮೇಲೆ ಅವರು ಒಂದು ರೇಷ್ಮೆಸೀರೆ ಅಂಗಡಿಯ ಒಳ ಹೊಕ್ಕರು. ಅಲ್ಲಿ ಆರಾಮವಾಗಿ ಕುಳಿತು ಸುಮಾರು ಮುಕ್ಕಾಲು ತಾಸು ಸೀರೆಗಳನ್ನು ನೋಡಿದರು.



ಅಂಗಡಿಯವ "ಯಾವ ಸೀರೆ ಬೇಕು ಮೇಡಮ್?" ಎಂದಾಗ ಅತ್ತೆ- "ಯಾವ ಸೀರೇನೂ ಬೇಡ. ಮಾರುಕಟ್ಟೆಗೆ ಬಂದಾಗ ಬಹಳ ಬಿಸಿಲಿತ್ತು. ಸ್ವಲ್ಪ ಹೊತ್ತು ಕುಳಿತುಕೊಳ್ಳೋಣ ಅಂತ ಬಂದೆವು. ಸುಮ್ಮನೆ ಕುಳಿತುಕಳ್ಳೋದೇನು. ಅಂತ ಸೀರೆ ನೋಡಿದೆವು" ಎಂದಾಗ ಅಂಗಡಿಯುವನಿಗೆ ಹೇಗಾಗಿರಬೇಡ.

-ಎಲ್ ಎಮ್ ಕ್ಷಮಾ

ಅಂಗೈಯಲ್ಲಿ ಅರಮನೆ



ಸಾಧ್ಯವಿಲ್ಲ

ಅಂದು ನನ್ನ ಮಗಳು ಪುಟ್ಟಿ ಮನೆಯಲ್ಲಿ ತನ್ನ ಅಜ್ಜನೊಂದಿಗೆ ಚರ್ಚೆ ಮಾಡುತ್ತಿದ್ದಳು. ಅವಳ ಕುತೂಹಲದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಅವಳ ಅಜ್ಜ ಅವಳನ್ನು ರೇಗಿಸಲು ತಮ್ಮ ಕನಸಿನ ವಿಷಯ ಹೇಳಿದರು.

"ನಿನ್ನೆ ರಾತ್ರಿ ನಾನೊಂದು ಕನಸು ಕಂಡೆ. ಕನಸಿನಲ್ಲಿ ನಾನು ಭಗವದ್ಗೀತೆಯ ಪುಸ್ತಕದಲ್ಲಿನ ಎರಡನೆ ಅಧ್ಯಾಯ ಓದುತ್ತಿದ್ದೆ. ಸ್ವಲ್ಪತಪ್ಪಾಗಿ ಓದಿದ್ದುದರಿಂದ ಸಾಕ್ಷಾತ್ ಶ್ರೀಕೃಷ್ಣ ದೇವರು ಬಂದು ಕೋಪ ಮಾಡಿದರು. ಅದಕ್ಕೆ ಪುಟ್ಟಿ ನೀನೂ ಪಾಠ ತಪ್ಪಾಗಿ ಓದಬೇಡ ಗುರುಗಳು ಸಿಟ್ಟು ಮಾಡುತ್ತಾರೆ" ಅಜ್ಜನ ಮಾತಿಗೆ ಪುಟ್ಟಿ ಅಲ್ಲಗೆಳೆಯುತ್ತ 'ನೀವು ಕನಸಿನಲ್ಲಿ ಭಗವದ್ಗೀತೆಯನ್ನು ಓದಲು ಸಾಧ್ಯವೆ ಇಲ್ಲ" ಎಂದು ಚಪ್ಪಾಳೆ ತಟ್ಟಿದಳು.


"ಏಕೆ...!" ಅಜ್ಜನ ಮಾತಿಗೆ ಪುಟ್ಟಿ ನಕ್ಕು 'ಏಕೆಂದರೆ ನೀವು ನಿನ್ನೆ ರಾತ್ರಿ ಮಲಗುವಾಗ ಕನ್ನಡಕ ಹಾಕಿರಲಿಲ್ಲವಲ್ಲ ಅದಕ್ಕೆ..."

ಪುಟ್ಟಿಯ ಮಾತಿಗೆ ಆಕೆಯ ಅಜ್ಜ ಬೊಚ್ಚುಬಾಯಲ್ಲಿ ಬಿದ್ದು ಬಿದ್ದು ನಕ್ಕರು.

—ಎಂ ಜಿ ದೇಶಪಾಂಡೆ

'ಚೀಟಿ ಕಳೆದೋಯ್ತು'

ಅಂದು ನಮ್ಮ ಶಾಲೆಯ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ. ಮೂರು ದಿನಗಳ ಪರ್ಯಂತ ನಾವು ಶಿಕ್ಷಕರು ಹಾಗೂ ಮಕ್ಕಳು. ಸಮೀಪದ ಹಳ್ಳಿಯಲ್ಲಿ ಶಿಬಿರ ಏರ್ಪಡಿಸಿದ್ದೆವು. ಯಶಸ್ವಿಯಾಗಿ ಮುಗಿದ ಶಿಬಿರದ ವ್ಯಾಪಕ ಚರ್ಚೆ ಸಮಾರೋಪ ಸಮಾರಂಭದಲ್ಲಿ ನಡೆಯುತ್ತಿತ್ತು. ಎಲ್ಲರೂ ತಮ್ಮ ತಮ್ಮ ಅನಿಸಿಕೆಗಳನ್ನು ತಿಳಿಸುತ್ತಿದ್ದರು. ಕೊನೆಗೆ ಮಕ್ಕಳ ಸರದಿ, ಶಿಕ್ಷಕರು ಮಕ್ಕಳಿಗೆ ತಮ್ಮ ಅನಿಸಿಕೆ



ತಿಳಿಸಲು ಪುಸಲಾಯಿಸುತ್ತಿದ್ದರು. ಒಬ್ಬ ಶಿಕ್ಷಕಿಯಂತೂ ತಮ್ಮ ನೆಚ್ಚಿನ ಶಿಷ್ಯೆಗೆ ಅಭಿಪ್ರಾಯ ತಿಳಿಸುವಷಂತೆ ತುಂಬಾ ಒತ್ತಾಯಿಸುತ್ತಿದ್ದರು. ತುಂಬಾ ಪುಸಲಾಯ್ಸಿದ ನಂತರ, ಆ ಪುಟ್ಟ ಹುಡುಗಿ, 'ಅಭಿಪ್ರಾಯ ಹೇಳುತ್ತಿದ್ದೆ ಮಿಸ್, ಆದರೆ, ನೀವು ಅಭಿಪ್ರಾಯ ಬರೆದುಕೊಟ್ಟ ಚೀಟಿ ಕಳೆದುಕೊಂಡಿದ್ದೇನೆ' ಎನ್ನುವುದೇ? ಆ ಶಿಕ್ಷಕಿಯ ಪರಿಸ್ಥಿತಿ ಹೇಗಾಗಿರಬೇಡ.


-ಬಿ ಎ ಶುಭಾ, ಹುಂಚ

ಶೀಘ್ರಲಿಪಿಗಾರನಾಗ ಬಯಸಿ ಶಿಕ್ಷಕನಾದೆ

ಮೈಸೂರು ಮಹಾರಾಜಾಸ್ ಕಾಲೇಜಿನಿಂದ ಬಿ.ಎ., ಪದವೀಧರನಾಗಿ ಹೊರಬಿದ್ದೆ. ಬೆಂಗಳೂರಿನ ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆದು ಉನ್ನತ ಪರೀಕ್ಷೆಗೆ ಕುಳಿತೆ. ಬೆರಳಚ್ಚು ಪರೀಕ್ಷೆಯಲ್ಲಿ ಮೊದಲನೆ ಶ್ರೇಣಿಯಲ್ಲಿ ಉತ್ತೀರ್ಣ- ರಾಜ್ಯಕ್ಕೆ ಎರಡನೆ ಸ್ಥಾನ. ಶೀಘ್ರಲಿಪಿಯಲ್ಲಿ ಎರಡನೆ ಶ್ರೇಣಿಯಲ್ಲಿ ಉತ್ತೀರ್ಣ. ಸರಿ, ಉದ್ಯೋಗಕ್ಕಾಗಿ ಬೇಟೆ- ಅರ್ಜಿಗಳನ್ನು ಗುಜರಾಯಿಸಿ ಸಾಕಾಯಿತು. ಆರು ತಿಂಗಳಾದರೂ ಏನೂ ಇಲ್ಲ. ಕೆಳಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವನು, ತಾಪತ್ರಯ. ಯಾರೋ ಹೇಳಿದರು, -ವಿಶ್ವೇಶ್ವರಪುರದ ಡಾ. ಪಾಲ್ ಚಿನ್ನಪ್ಪನವರ (ಅವರೇ ಸ್ಥಾಪಕರು ಮತ್ತು ಪ್ರಾಂಶುಪಾಲರು) ಪ್ರೌಢಶಾಲೆಯಲ್ಲಿ 'ಇಂಗ್ಲಿಷ್-ಚರಿತ್ರೆ' ಶಿಕ್ಷಕನ ಹುದ್ದೆ ಖಾಲಿ ಇದೆ'' ತಕ್ಷಣ ಭೇಟಿಯಾದೆ ಪ್ರಾಂಶುಪಾಲರನ್ನು. ತಿಂಗಳಿಗೆ ಯೂವತ್ತು ರೂಪಾಯಿ ಸಂಬಳದ ಮೇಲೆ ಕೆಲಸ ದೊರೆಯಿತು. ಎಂಟು ದಿನಗಳಾಗಿರಬಹುದು; ಶಿಕ್ಷಕರ ಕೊಠಡಿಯಲ್ಲಿ ಇತರರ ಜೊತೆ ನಾನಿದ್ದಾಗ, ಡಾ. ಪಾಲ್ ಚಿನ್ನಪ್ಪನವರೇ ಬಂದು ಇಪ್ಪತ್ತೆರಡು ವರ್ಷ ವಯಸ್ಸಿನ ನನ್ನ ಬೆನ್ನು ತಟ್ಟಿ, "ಏನೋ, ಎಲ್ಲ ಹುಡುಗರೂ ಏನ್ ನಿನ್ನ ಹೊಗಳಿದ್ದೂ ಹೊಗಳಿದ್ದೆ ಇವತ್ತು. ಚರಿತ್ರೆ-ಇಂಗ್ಲಿಷ್ ಪಾಠ ನಿನ್ನ ಹಾಗೆ ಯಾರೂ ಹೇಳೊಲ್ಲವಂತಲ್ಲಯ್ಯಾ; ಭೇಷ್- ಕೀಪ್ ಇಟ್ ಅಪ್'' ಅಂದರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ- ಸ್ವರ್ಗ ಮೂರು ಗೇಣು. ಆ ಕ್ಷಣ ನನ್ನ ಮನಸ್ಸು ಬದಲಾವನೆ. ಮಾರನೆಯ ವರ್ಷವೇ ಮೈಸೂರಿನಲ್ಲಿ ಬಿ.ಟಿ. (ಈಗಿನ ಬಿ.ಎಡ್.) ತರಗತಿಗೆ ಸೇರ್ಪಡೆ. ಪರೀಕ್ಷೆಯಲ್ಲಿ ಪ್ರಪ್ರಥಮ ಸ್ಥಾನ, ಎರಡು ಪಾರಿತೋಷಕಗಳು ಬೇರೆ. ತಲೆಗೆ ಹೊಸ ಕೊಂಬು.

ಮುನಿಸಿಪಲ್ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯನಾಗಿ ಕೆಲಸ ಸಿಕ್ಕಿತು. ಅನೇಕ ಪತ್ರಿಕೆಗಳಲ್ಲಿ ಶಿಕ್ಷಣದ ಬಗ್ಗೆ ನನ್ನ ಲೇಖನಗಳು. ನನ್ನ ಮೂರು ಪುಸ್ತಕಗಳು ಪ್ರೌಢಶಾಲೆಯ ವಿವಿಧ ತರಗತಿಗಳಿಗೆ ಪಠ್ಯಪುಸ್ತಕಗಳಾದುವು.. (ಆಗ ಪಠ್ಯಪುಸ್ತಕಗಳ ರಾಷ್ಟ್ರೀಕರಣವಿರಲಿಲ್ಲ) 1966ರಲ್ಲಿ ಡಾ. ರಾಧಾಕೃಷ್ಣನ್‌ರವರಿಂದ 'ರಾಷ್ಟ್ರ ಪ್ರಶಸ್ತಿ' ಸ್ವೀಕಾರ. ನಿವೃತ್ತನಾಗಿರುವ ನಾನು ಎಂಬತ್ತು ವರ್ಷ ವಯಸ್ಸಿನ ವೃದ್ಧ. ಆತ್ಮತೃಪ್ತಿಯಿದೆ. ಶೀಘ್ರಲಿಪಿ, ಬೆರಳಚ್ಚುಗಳ ನನ್ನ ಜ್ಞಾನ ನಿಷ್ಪ್ರಯೋಜಕವಾಯಿತು. ಆದರೆ, ದಾಸರೇ ಹೇಳಿಲ್ಲವೆ, "ಆದದ್ದೆಲ್ಲ ಒಳಿತೇ ಆಯಿತು" ಅಂತ!

ಆಚಾರ್ಯ



ಓದಿದ್ದು ಐಟಿಐ ಮಾಡಿದ್ದು ಕೋಳಿ ಫಾರ್ಮ



ನಾನು ಎಸ್‌ಎಸ್‌ಎಲ್‌ಸಿ ಮುಗಿಸಿ ಐಟಿಐ ಸೇರಿದೆ. ಅಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದೆ.

ಮುಂದೆ ನನ್ನ ಊರಾದ ಗದಗದಿಂದ ಹುಬ್ಬಳ್ಳಿಗೇ ಟ್ರಾವಲಿಂಗ್ ಮಾಡುತ್ತಾ ಪ್ರೈವೇಟ್ ಕಂಪನಿಯಲ್ಲಿ ತಿಂಗಳಿಗೆ 500/- (ಐದನೂರು ರೂಪಾಯಿ)ಗಳಿಗೆ ಕೆಲಸಕ್ಕೆ ಸೇರಿದೆ. ಕಂಪನಿಯಲ್ಲಿ ನಾನು ಡೇಲಿ ಟ್ರಾವಲಿಂಗ್ ಮಾಡುವುದನ್ನು ನೋಡಿ ಮರುಗಿದವರು ನನ್ನ ಗೆಳೆಯ ಪಂಚಾಕ್ಷರಿ. ಅವರದು ಸಣ್ಣ ಪ್ರಮಾಣದಲ್ಲಿ ಮನೆಯ ಹಿತ್ತಲಲ್ಲಿ ಕೋಳಿ ಫಾರ್ಮ ಇತ್ತು. ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿ ಕಂಪನಿ ಕೆಲಸ ಬಿಟ್ಟು ಕೋಳಿ ಫಾರ್ಮ ಮಾಡಲಿಕ್ಕೆ ತಿಳಿಸಿದನು.

ನಾನು 250 ಕೋಳಿ ಮರಿಗಳನ್ನು ತಂದು ಫಾರ್ಮ ಪ್ರಾರಂಭ ಮಾಡಿದೆ. 250 ಕೋಳಿ ಸಾಕಾಣಿಕೆಯಲ್ಲಿ ಅಂದು ಯಶಸ್ವಿಯಾಗಿ ಇಂದು 8000 ಬಾಯಲರ್ ಕೋಳಿ ಸಾಕಾಣಿಕೆಯು ಒಡೆಯನಾಗಿದ್ದೇನೆ ಇಂದು ನನ್ನ ಗೆಳೆಯರೆಲ್ಲ ನನ್ನ ಸಲಹೆ ಪಡೆದು ಕೋಳಿ ಫಾರ್ಮ ಪ್ರಾರಂಭ ಮಾಡಿದ್ದಾರೆ.

ಸುರೇಶ ಶಿ ಬೇಂದ್ರೆ



ಗಂಡ ಯಾರು

ಸ್ವರ್ಗದ ಬಾಗಿಲಲ್ಲಿ ಒಬ್ಬಳು ನಿಂತು ದ್ವಾರಪಾಲಕನಲ್ಲಿ ಹೇಳಿದಳು- "ಅಯ್ಯಾ ನನ್ನನ್ನು ಒಳಕ್ಕೆ ಬಿಡು, ಅರ್ಜೆಂಟಾಗಿ ನನ್ನ ಗಂಡನನ್ನು ಕಾಣಬೇಕಾಗಿದೆ."

"ಹಾಗೆ ಸಾಧ್ಯವಿಲ್ಲ" ದ್ವಾರಪಾಲಕ ಹೇಳಿದ.

"ಯಾಕೆ ಸಾಧ್ಯವಿಲ್ಲ? ನಾನು ನನ್ನ ಗಂಡನನ್ನು ನೋಡಲಿಕ್ಕೆ ಸಾಧ್ಯವಿಲ್ಲ ಅಂದ್ರೆ ಏನರ್ಥ?" ಅವಳು ಪ್ರಶ್ನಿಸಿದಳು.

"ಇಲ್ಲಿನ ನಿಯಮದ ಪ್ರಕಾರ ಯಾರನ್ನು ಹಾಗೆ ಒಳಗೆ ಬಿಡಲು ಸಾಧ್ಯವಿಲ್ಲ. ಏನೋ ಬಹಳ ಹೊತ್ತಿನಿಂದ ಕೇಳ್ತಾ ಇದ್ದೀಯಾಂತ ಬೇಕಾದರೆ ನಿನ್ನ ಗಂಡನನ್ನು ಇಲ್ಲಿಗೆ ಕರೆಯಿಸುವ ಪ್ರಯತ್ನ ಮಾಡುವೆನು. ಹೇಳು, ಅವನಾರು ಎಂದು?" ದ್ವಾರಪಾಲಕ ಹೇಳಿದ.

"ಗುಂಡಾ."

"ಅರರೇ, ಗುಂಡಾ ಎನ್ನುವ ಹೆಸರಿನವರು ಇಲ್ಲಿ ಬಹಳ ಮಂದಿ ಇದ್ದಾರೆ, ಅವರಲ್ಲಿ ಯಾರು ಅಂತಾ?"

"ಅಯ್ಯೋ, ಗುಂಡಾ ಎಂದು ಹೆಸರಿಟ್ಟುಕೊಂಡವರ ಮುಂದೆ ಹೋಗಿ ಹೇಳು, ಹೊರಗೆ ನಿಮ್ಮ ಹೆಂಡತಿ ವಾರಿಜ ಬಂದಿದ್ದಾಳೆ ಎಂದು. ಯಾರು ಅಲ್ಲಿಂದ ಓಡಿಹೋಗುತ್ತಾರೋ ಅವರೇ ಸ್ವಾಮಿ ನನ್ನ ಗಂಡ" ವಾರಿಜ ಹೇಳಿದ್ದನ್ನು ಕೇಳಿ ದ್ವಾರಪಾಲಕ ಸುಸ್ತಾದ.

-ಹರಿಹರಪುರ ಬಾಲಕೃಷ್ಣ

ಎಲ್ರೂ ಹೀಗೇ ಹೇಳೋದು

ಗುಂಡ ತನ್ನ ಪತ್ನಿಯನ್ನು ಚೊಚ್ಚಲು ಹೆರಿಗೆಗೆ ಕಳಿಸಿದ್ದ.

ತಾಯಿ ಮಾಡಿ ಬಡಿಸುತ್ತಿದ್ದ ತಿಳಿಸಾರನ್ನು ಅನ್ನದೊಡನೆ ಕಲೆಸಿಕೊಂಡು ಚಪ್ಪರಿಸಿದ್ದೇ ಚಪ್ಪರಿಸಿದ್ದು ಇನ್ನಷ್ಟು ಮತ್ತಷ್ಟು ಎನ್ನುತ್ತಾ.

"ಯಾರು ಏನೇ ಹೇಳ್ಲಿ, ತಾಯಿ ಕೈ ಊಟವೇ ಚೆಂದ. ಹೆಂಡತಿ ಅಡಿಗೆ ರುಚಿ ಅಷ್ಟಕ್ಕಷ್ಟೇನೆ" ಎಂಬ ಮಗನ ಮಾತಿಗೆ ತಾಯಿ ಅಂಬುಜಮ್ಮ



ಅವರ ಮುಖ ಹಿಗ್ಗಿ ಹೀರೆಕಾಯಿಯಂತೆ ಆಗಿತ್ತು. ಪಕ್ಕದಲ್ಲೇ ಊಟಕ್ಕೆ ಕುಳಿತಿದ್ದ ಗುಂಡನ ತಂದೆ ಶೇಷಪ್ಪ ಹೇಳಿದರು.

"ಖಂಡಿತಾ ನಿಜವಯ್ಯ, ಮದ್ವೆಯಾದ್ಮೇಲೆ ಎಲ್ಲ ಗಂಡಸ್ರೂ ಹೀಗೇನೆ ಹೇಳೋದು" ಅಂಬುಜಮ್ಮನವರ ಮಂದಹಾಸ ಏರಿದಂತೆಯೆ ಇಳಿದಿತ್ತು.

-ಬಿಂಡಿಗನವಿಲೆ ಭಗವಾನ್

ಬುತ್ತಿಚಿಗುರು



ನಿಮ್ಮ ಕೇಸ್ ಏನು?

ಗುಂಡ ಹೊಸದಾಗಿ ಲಾಯರ್‌ಗಿರಿ ಪ್ರಾರಂಭಿಸಿದ್ದ. ಆಫೀಸ್ ತೆಗೆದು ಆರು ತಿಂಗಳಾದರೂ ಯಾವ ಕಕ್ಷಿಗಾರನು ಅವನ ಹತ್ತಿರಬಂದಿರಲಿಲ್ಲ.

ಒಂದು ದಿನ ಗುಂಡ ಮೂಮಾಲಿಯಂತೆ ಆಫೀಸ್ ಬಾಗಿಲು ತೆಗೆದು ಕುಳಿತಿದ್ದಾಗ ವ್ಯಕ್ತಿಯೊಬ್ಬ ಅವನ ಆಫೀಸಿಗೆ ಬಂದ. ವ್ಯಕ್ತಿಯ ಎದುರಿಗೆ ತಾನು ನೊಣ ಹೊಡೆಯುವ ಲಾಯರ್‌ಎಂದುತೋರ್ಪಡಿಸಿಕೊಳ್ಳಬಾರದೆಂದು, ಗುಂಡನು ಬಂದ ವ್ಯಕ್ತಿಗೆ ಕುಳಿತುಕೊಳ್ಳುವಂತೆ ಹೇಳಿ, ಯಾವುದೋ ನಂಬರಿಗೆ ಫೋನ್ ಮಾಡಲಾರಂಭಿಸಿದ.

'ಹಲೋ, ನಿನ್ನೆ ನೀವು ಫೋನ್ ಮಾಡಿದ್ದರಂತೆ. ಏನ್ ಸಮಾಚಾರ?' -ಗುಂಡ ಕೇಳಿದ.

'.....'

'ಇಲ್ಲ ದಯವಿಟ್ಟು ಕ್ಷಮಿಸಿ. ಈಗ ಬಹಳ ಬಿಜಿಯಾಗಿದ್ದೇನೆ. ಇನ್ನು ಒಂದು ತಿಂಗಳು ನಾನು ಯಾವ ಕೇಸನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿಲ್ಲ' -ಎಂದ ಗುಂಡ.

'......'

'ದಯವಿಟ್ಟು ಫೋರ್ಸ್ ಮಾಡಬೇಡಿ. ಒಂದು ಕೆಲಸ ಮಾಡಿ. ಒಂದು ವಾರ ಬಿಟ್ಟು ಪುನಃ ನನಗೆ ಫೋನ್ ಮಾಡಿ' ಎಂದು ಹೇಳುತ್ತಾ ಫೋನನ್ನು ಕೆಳಗಿಟ್ಟು, ಎದುರಿಗೆ ಕುಳಿತಿದ್ದ ವ್ಯಕ್ತಿಯನ್ನು ಕುರಿತು,

'ಈಗ ಹೇಳಿ ನಿಮ್ಮ ಕೇಸ್ ಏನು' ಎಂದ

ಎದುರಿಗೆ ಕುಳಿತಿದ್ದ ವ್ಯಕ್ತಿಯು ಶಾಂತರೀತಿಯಿಂದ, 'ನಂದು ಯಾವ ಕೇಸೂ ಇಲ್ಲ. ನಿಮ್ಮ ಫೋನ್ ಕೆಟ್ಟುಹೋಗಿದೆ ಎಂದು ನಿನ್ನೆ ಕಂಪ್ಲೈಂಟ್ ಮಾಡಿದ್ದರಲ್ಲ. ಅದನ್ನು ರಿಪೇರಿ ಮಾಡಲು ಬಂದಿದ್ದೇನೆ' ಎಂದಾಗ ಗುಂಡ ಸುಸ್ತೋ ಸುಸ್ತು!

-ಜಿ. ಅನಂತನಾರಾಯಣಸ್ವಾಮಿ

ದೇಶಾಭಿಮಾನ!




ಕಿಟ್ಟಿ, ಸೀನಿ ಮತ್ತು ಗುಂಡ ದೇಶಾಭಿಮಾನದ ಬಗ್ಗೆ ಹರಟೆ ಕೊಚ್ಚುತ್ತಿದ್ದರು.

'ನಾನು ವಿದೇಶಿ ವಸ್ತುಗಳನ್ನು ನನ್ನ ಜೀವಮಾನದಲ್ಲಿ ಕೊಳ್ಳುವುದೇ ಇಲ್ಲ', ಎಂದು ಕಿಟ್ಟಿ ನುಡಿದ.

'ನಾನು ವಿದೇಶಿ ಭಾಷಾ ಸಿನಿಮಾಗಳನ್ನು ಖಂಡಿತ ನೋಡುವುದಿಲ್ಲ' ಎಂದ ಸೀನಿ

'ನಾನು ಹತ್ತನೆ ತರಗತಿಯಲ್ಲಿ ಶತಾಯ ಗತಾಯ ಇಂಗ್ಲಿಷ್ ಭಾಷೆಯಲ್ಲಿ ಉತ್ತೀರ್ಣನಾಗಲಾರೆ' ಎಂದ ಗುಂಡ!

ಗೋಪಾಲಕೃಷ್ಣ ಭಟ್. ಜಿ.ಎಂ.



ಜಿ ಪಿ ರಾಜರತ್ನಂ

"ರಾಜರತ್ನಂ ಅವರ ಒಂದು ಪುಸ್ತಕ ಪತ್ಯವಾಗಿದೆ. ಅದ್ದನ್ನು ನೀವು ಮುದ್ರಣ ಮಾಡಬೇಕು. ಇನ್ನು ಎರಡು ದಿನಗಳಲ್ಲಿ ನಾನೇ ಬರುತ್ತೇನೆ. ಕಾಗದ ಇತ್ಯಾದಿಗಳಿಗೆ ವ್ಯವಸ್ಥೆ ಮಾಡುತ್ತೇನೆ..." ಎಂದು ಮೈಸೂರಿನ ಒಬ್ಬ ಪ್ರಕಾಶಕರಿಂದ ಕಾಗದ ಬಂತು.

ಕಾಗದ ಬಂದ ಮಾರನೆಯ ದಿನ, ಮಧ್ಯಾಹ್ನ ನಾನು ಪ್ರೆಸ್ಸಿನಲ್ಲಿ ಇರಲಿಲ್ಲ. ಎಲ್ಲಿಗೋ ಹೋಗಿದ್ದವನು ಹಿಂದಿರುಗಿ ಬಂದರೆ, ರಾಜರತ್ನಂ ನನ್ನ ಎದುರಿನ ಕುರ್ಚಿಯಲ್ಲಿ ಬಂದು ಕುಳಿತುಬಿಟ್ಟಿದ್ದಾರೆ.

"ನಮಸ್ಕಾರ ಸಾರ್. ಮೈಸೂರಿಂದ ಕಾಗದ ಬಂದಿದೆ."

"ಅದಕ್ಕೇ ಬಂದೆ!"

"ಸರಿ, ಅವರು ಬರಲಿ. ಮುದ್ರಣಕ್ಕೆ ತೆಗೆದುಕೊಳ್ಳುತ್ತೇನೆ."

"ಕಾಲಕ್ಕೆ ಸರಿಯಾಗಿ ನೀವು ಮಾಡಿ ಮುಗಿಸಬೇಕು. ಅದು ಇದು ಕಾರಣ ಹೇಳಿ ವಿಳಂಬ ಮಾಡಬಾರದು."

"ಇಲ್ಲ. ಒಪ್ಪಿಕೊಂಡ ಕೆಲಸ ಆ ಸಮಯಕ್ಕೆ ಸರಿಯಾಗಿ ನಾನು ಮುಗಿಸಿಯೇ ಮುಗಿಸುತ್ತೇನೆ."

"ಸರಿ, ಪ್ರೂಫ್ ನಾನು ನೋಡಲೇಬೇಕು: ನೀವು ಕಳಿಸಬೇಕಾಗಿಲ್ಲ. ಸುಮ್ಮನೆ ವಿಳಂಬ ಆಗುತ್ತೆ. ಇಂಥ ಸಮಯಕ್ಕೆ ಬಾ ಎಂದರೆ ನಾನೆ ಬರ್ತೀನಿ."

"ಆಯ್ತು, ಸಾರ್."

ರಾಜರತ್ನಂ ಹೊರಟುಹೋದರು. ಆಮೇಲೆ ಆ ಕೃತಿ ನಮ್ಮಲ್ಲಿ ಅಚ್ಚಾಗಲಿಲ್ಲ. ಆ ಪ್ರಕಾಶಕರೂ ಬರಲಿಲ್ಲ. ಏನು ಕಾರಣವೋ ನನಗೆ ತಿಳಿಯಲಿಲ್ಲ.

ಆ ಬಳಿಕ ಒಂದೆರಡು ಸಣ್ಣ ಪುಸ್ತಕಗಳನ್ನು ರಾಜರತ್ನಂ ನಮ್ಮಲ್ಲಿ ಮುದ್ರಣ ಮಾಡಿಸಿದರು.

ಒಂದು ಸಲ ನಾಲ್ಕೇ ನಾಲ್ಕು ಪುಟಗಳು- ಅದರಲ್ಲಿನ ಕೆಲವು ಅಚ್ಚಿನ ಮೊಳೆಗಳು ಎಂದರೆ ಅಕ್ಷರಗಳು ನಮಗೆ ಬೇಕೇ ಬೇಕಾಯಿತು ಬೇರೊಂದು ಕೆಲಸಕ್ಕಾಗಿ. ಆ ಕೆಲಸ ಆಗಲೇ ಮುದ್ರಣ ಮುಗಿಯಬೇಕಿತ್ತು.

ದೊಡ್ಡ ಪ್ರೆಸ್‌ಗಳಾದರೆ ಪರವಾಯಿಲ್ಲ. ಹಲವು ಕೇಸುಗಳಲ್ಲಿ ಅಚ್ಚಿನ ಮೊಳೆಗಳು ತುಂಬಿಕೊಂಡಿರುತ್ತವೆ. ಸಣ್ಣ ಪ್ರೆಸ್ಸುಗಳಲ್ಲಿ ಫಜೀತಿ. ಇದರಿಂದ ಅದಕ್ಕೆ ಅದರಿಂದ ಇದಕ್ಕೆ

ಭಾಷಕನ ಭಾಷ್ಯ

ಶೇಷನಾರಾಯಣ

ಕಿತ್ತು ಮುಗಿಸಬೇಕು. ಕಾಳಿ ಕಿತ್ತು ಬೋಳಿ, ಬೋಳಿ ಕಿತ್ತು ಕಾಳಿ ಮಾಡಲೇಬೇಕು.

ರಾಜರತ್ನಂ ಅವರ ಸ್ವಭಾವ ತಿಳಿದಿದ್ದರೂ, ಯಾವುದೋ ಬೇರೆ ಕೆಲಸ ತುರ್ತಾಗಿ ಆಗಬೇಕಾಗಿದ್ದು ಅಚ್ಚಿನ ಮೊಳೆಗಳು ಬೇಕೇ ಬೇಕಾಗಿದ್ದುದರಿಂದ ಆ ನಾಲ್ಕು ಪುಟಗಳನ್ನು ಅವರಿಗೆ ತೋರಿಸದೆಯೇ ನಾನು ಅಚ್ಚು ಮಾಡಿಬಿಟ್ಟೆ. "ಸಾರ್, ಹೀಗೆ ಮಾಡಿದೆ" ಎಂದು ಅವರು ಬಂದಾಗ ಹೇಳಿದೆ.

"ನನ್ನನ್ನು ಕೇಳದೆ, ನನಗೆ ತೋರಿಸದೆ, ಅದು ಹ್ಯಾಗೆ ನೀವು ಪ್ರಿಂಟು ಮಾಡಿದಿರಿ?" ಎಂದು ರಾಜರತ್ನಂ ಭಾರೀ ಕೂಗು ಹಾಕಿದರು. ಒಂದೇ ಸಾಲಾದರೂ ಅವರು ನೋಡಲೇ ಬೇಕು. ಇದು ಅವರ ಧೋರಣೆ.

ಬಳಿಕ ಆ ನಾಲ್ಕು ಪುಟಗಳನ್ನು ಅವರು ನಾಲ್ಕು ನಾಲ್ಕು ಸಲ ತಿರುವಿ ತಿರುವಿ ಹಾಕಿದರು. ನನಗೆ ಆ ವಿಷಯದಲ್ಲಿ ಪೂರ್ಣ ನಂಬಿಕೆ. ಎಂಥೆಂಥದೋ ಪ್ರೂಫ್ ತಿದ್ದಿದ್ದೇನೆ; ಪ್ರಿಂಟು ಮಾಡಿದ್ದೇನೆ. ಈ ನಾಲ್ಕು ಪುಟಗಳೇನು ಮಹಾ ಎನ್ನುವುದು ನನ್ನ ಧೋರಣೆ.

"ಪರವಾಯಿಲ್ಲ. ಏನೂ ಉಳಿದಿಲ್ಲ. ಆದರೂ ನೀವು ಹೀಗೆ ಮಾಡಬಾರದಿತ್ತು. ಇನ್ನುಮುಂದೆ ಇಂಥ ಕೆಲಸ ಮಾಡಬೇಡಿ" ಎಂದು ಸಿಡುಕುತ್ತಲೇ ಅವರು ಹೊರಟುಹೋದರು.

ಸರಿಯಾಗಿ ಮಾತೂ ಆಡದೆ; ತರಿಸಿದ್ದ ಕಾಫಿಯನ್ನೂ ಕುಡಿಯದೆ.

ಕೆಲವು ದಿನಗಳು ಕಳೆದಮೇಲೆ ಬಳೇಪೇಟೆಯ ರಸ್ತೆಯಲ್ಲಿ ಹಠಾತ್ತನೆ ಅವರ ಭೇಟಿ.

ತಮ್ಮ ಪುಸ್ತಕಗಳನ್ನು ತಾವೇ ಅಚ್ಚು ಮಾಡಿಕೊಳ್ಳುತ್ತ, ಹತ್ತಾರು ಪುಸ್ತಕಗಳನ್ನು ಕೈ ಚೀಲಕ್ಕೆ ಹಾಕಿಕೊಂಡು, ಅಂಗಡಿಗಳಿಗೆ ಕೊಟ್ಟು ಬಿಲ್ ವಸೂಲಿ ಮಾಡುವುದು ಅವರ ರೂಢಿ. ಹಾಗೆಯೇ ಫುಟ್‌ಪಾತಿನಲ್ಲಿ ಹರಡಿಕೊಂಡಿರುವ ಪುಸ್ತಕಗಳ ಕಡೆಗೆ ಕಣ್ಣು ಹಾಯಿಸಿಕೊಂಡೇ ಹೋಗುವುದು ಸಹ ಅವರ ರೂಢಿಯೇ.

ಅವರು ಈಗ ನನ್ನನ್ನು ಕಂಡು "ಬನ್ನಿ" ಎಂದು ಅಲ್ಲಿನ ಒಂದು ಉಡುಪಿ ಹೋಟೆಲಿಗೆ ಕರೆದೊಯ್ದರು.

ಆ ಹೋಟೇಲಿನವರಿಗೆ ಇವರ ಮೇಲೆ ತುಂಬಾ ಭಕ್ತಿ; ವಿಶ್ವಾಸ. ಎಲ್ಲರೂ ಕುಳಿತುಕೊಳ್ಳುವ ಜಾಗ ಇಲ್ಲದೆ ಪ್ರತ್ಯೇಕ ಒಂದು ಕೊಠಡಿಯಲ್ಲಿ ಕುಳಿತು, ಮಸಾಲೆ ದೋಸೆ ತಿಂದು ಕಾಫಿ ಕುಡಿದು ಹೊರಬಂದೆವು.

ಆ ಹೋಟೇಲಿನ ಮಸಾಲೆ ದೋಸೆ ತುಂಬಾ ಪ್ರಸಿದ್ಧಿ.

ಇವರ ಕೈಯಲ್ಲಿ ಬಿಲ್ ಕೊಡಿಸಬಾರದು ಎಂದು ಕ್ಯಾಷ್ ಬಳಿ ನಾನು ಮುಂದೆ ಬಂದೆ, ಹಣ ಕೊಡಲು ಮುಂದಾದೆ.

ಆದರೆ ರಾಜರತ್ನಂ ಕಣ್ಣುಸನ್ನೆ ಮಾಡಿಬಿಟ್ಟದ್ದರು. ಕ್ಯಾಷ್‌ನಲ್ಲಿರುವವರು ನನ್ನ ಬಳಿ ಹಣ ತೆಗೆದುಕೊಳ್ಳಬೇಕಲ್ಲ.

ಹೋಟೇಲ್ ಬಿಟ್ಟು ಹೊರಬಂದಮೇಲೆ "ನಿಮಗೆ ಮಸಾಲೆ ದೋಸೆ ಯಾಕೆ ಕೊಡಿಸಿದೆ ಗೊತ್ತೆ?" ಎಂದರು, ರಾಜರತ್ನಂ.

"ಯಾಕೆ ಸಾರ್?"

"ಲಂಚ ಕಣ್ರೀ, ಲಂಚ."

ನನಗೆ ಅರ್ಥವಾಗದೆ "ಲಂಚ?" ಎಂದೆ.

"ಅವೊತ್ತು ನಿಮ್ಮ ಮೇಲೆ ನಾನು ಭಾರೀ ರೇಗಾಡಿಬಿಟ್ಟೆ, ನೋಡಿ. ಅದಕ್ಕೇ ಈಗ ಲಂಚ ಕೊಟ್ಟು ಸರಿಮಾಡಿಕೊಳ್ತಾ ಇದೀನಿ. ಪ್ರೆಸ್ಸಿನವರ ದಾಕ್ಷಿಣ್ಯ ನಮಗೆ ಯಾವಾಗಲೂ ಬೇಕೇ ಬೇಕಾಗುತ್ತದಲ್ಲಪ್ಪ..." ಎಂದವರೇ ನನ್ನ ಭುಜದ ಮೇಲೆ ಕೈಹಾಕಿ ಬಳಸಿಕೊಂಡು ದೊಡ್ಡದಾಗಿ ನಕ್ಕುಬಿಟ್ಟರು.

ಇದು ರಾಜರತ್ನಂ ವರಸೆ; ನೋಡಿ.

ಅಯ್ಯರ್ ಗರಡಿಗೆ ಸೇರಿದವರು ರಾಜರತ್ನಂ, ರಾಶಿ, ರಾಜರತ್ನಂ, ಅಯ್ಯರ್– ತ್ರಿಮೂರ್ತಿಗಳ ಹಾಗೆ.


ಅವರ ನಡೆ, ನುಡಿ, ಬರವಣಿಗೆ— ಎಲ್ಲವೂ ಪೈಲ್ವಾನ್.

ಇಂದಿನ ಓದುಗರಿಗೆ ನಿನ್ನೆಯ ಕಾದಂಬರಿಗಳು

ಆಯ್ಕೆ: ಈಶ್ವರಚಂದ್ರ



ಸಂಜೆಹೊತ್ತು ಇಳಿಯುತ್ತ ಬಂದಿತ್ತು: ದಿನವೆಲ್ಲ [illegible] ಆಯಾಸಗೊಂಡು, ನನ್ನ ಮೈತುಂಬ ಬೆವರೂ ಇಳಿಯುತ್ತ ಬ[illegible] ಆ ದಿನ [illegible] ಹಳ್ಳಿಯಿಂದ ಹೊರಟಿದ್ದೆ. ಯಾವುದೋ ಕೆಲಸದ ಸಲುವಾಗಿ ಊರಲ್ಲಿ [illegible] ಸಮನಾಗಿ ಸುಬ್ರಹ್ಮಣ್ಯ ಊರನ್ನು ಸೇರಿದೆ. ಯಾವುದೋ ಒಂದು ಹೋಟೆಲನ್ನು [illegible] ಕೊಟ್ಟದ್ದನ್ನು ಕಾಫಿಯೆಂದು ಕುಡಿದು, ತೃಪ್ತಿಗೊಂಡುದೂ ಆಯಿತು. ತೃಪ್ತಿಯ [illegible] ಇರಲಿಲ್ಲ-ಹಸಿದ ಹೊಟ್ಟೆಗೆ ಏನಾದರಿಷ್ಟು ತಿಂಡಿಯೋ, ತೀರ್ಥವೋ ಬಿದ್ದಿದ್ದರೆ ಸಾಕಾಗಿತ್ತು. ಆ [illegible] ನನ್ನ ಪರಿಚಯಸ್ಥರು ಯಾರೂ ಇಲ್ಲವೆಂಥಲ್ಲ: ಆದರೆ ಕೆಲಸ ಕೈಗೂಡದಂದು, ಮನಸ್ಸಿಗೆ ನೆಮ್ಮ[illegible] ತೋರದಾಗ, ಅವರ ವೇಳೆಯಲ್ಲಿ ಅರಸಿ ಇನ್ನೊಬ್ಬರ ಮನೆಯನ್ನು ನುಗ್ಗಿ, ಅವರ ಒಲೆಯಲ್ಲಿ ಕಿಚ್ಚು ಸ್ಥಾಪನೆಗೊಳ್ಳುವ ಮುಹೂರ್ತವನ್ನು ಇದಿರು ಕಾಯಲು ಮನಸ್ಸು ಉಂಟಾಗಲಿಲ್ಲ. ಆದರಿಂದಾಗಿ ಹೊಟೇಲಿನ ಕಾಫಿ ನೀರಿನಲ್ಲೇ ನಾನು ಅಮೃತವನ್ನು ಅರಸಬೇಕಾಗಿತ್ತು. ಅಲ್ಲೇ ಅಂಗಳದಲ್ಲಿ ಅಗಲವಾದೊಂದು ಮಂಚವಿದ್ದುದನ್ನು ಕಾಣುತ್ತಲೇ, "ಇಲ್ಲಿ ಮಲಗಿಕೊಂಡರೆ ಅಕ್ಷೇಪವಿಲ್ಲವಲ್ಲ"



ಜುಲೈ 1998

ಎಂದೆ. "ಆಕ್ಷೇಪವೇನು?" ಎಂದರು. ಅದು ನನ್ನ ಬಳಲಿದ ಶರೀರಕ್ಕೆ ತುಂಬ ಅನುಕೂಲವಾಗಿಯೂ ಇತ್ತು. ಆದರಿಂದಾದ ತೊಡಕು ಇಷ್ಟೆ; ನನಗೆ ಎಚ್ಚರವಾಗುವಾಗ ನಾಲ್ಕು ಘಂಟೆ ಹೊಡೆದು ಹೋದದ್ದು. ನಾನಿನ್ನು ತೀರ ಅವಸರವಾಗಿ ನಡೆದಲ್ಲಿ; ಅಂದಿನ ಕತ್ತಲು ತುಂಬುವುದರೊಳಗಾಗಿ ಹನ್ನೆರಡು ಮೈಲು ದೂರದ 'ಪಂಜ'ವನ್ನು ಸೇರಬಹುದು ಎಂದು ಬಗೆದು ಹೊರಟೆ. ಬೆಟ್ಟಗಳ ಎಡೆಯಲ್ಲಿ, ನೀಳವಾದ ಉನ್ನತ ವೃಕ್ಷಗಳ ತಂಪಿನಲ್ಲಿ ನಾನು ನಡೆಯುತ್ತಿದ್ದಂತೆ, ಅದೇ ಕಾಡಿನ ಮರೆಯಲ್ಲಿ ಸೂರ್ಯ ನನ್ನನ್ನು ವಂಚಿಸಿದ್ದನ್ನು ಯಾರು ಬಲ್ಲರು? ನಾನು ಬರಿಯ ಒಂದು ತಾಸಿನ ಹಾದಿ ಸರಿದಿದ್ದೇನೆ. ಎನ್ನುವಷ್ಟಕ್ಕೆ ಬಾನು ಕೆಂಪಡರಿದುದು ಕಾಣಿಸಿತು. "ಹೀಗೇಕಾಯಿತು?" ಎಂದು ನನ್ನ ಅರಿಷ್ಟವಾಚನ್ನು ನೋಡಿದರೆ, ಅದು ಸತ್ಯಾಗ್ರಹ ಹೂಡಿತ್ತು. ನಿಂತ ನನ್ನ ಗಡಿಯಾರವನ್ನು ನಂಬಿ ಹೊರಟ ನಾನು ಮೋಸಕ್ಕೆ ಗುರಿಯಾದೆನೆಂದು ಹೇಳಬೇಕೆ?


ಹಾಗೆಂದು, ಕಾಲನ್ನು ತಿರುಗಿಸಿ, ಹೊರಟ ಸುಬ್ರಹ್ಮಣ್ಯದ ಕಡೆಗೇನೆ ಮರಳಲು ಮನಸ್ಸಾಗಲಿಲ್ಲ. ಅತ್ತ ಮರಗಳ ತಂಪು, ಇತ್ತ ನೆಲದ ತಣಸುರಾತ್ರಿ ನನ್ನನ್ನು ಇದಿರು ಕಾದಿದ್ದ ಕಾಡಿನ ಚಳಿಯ ಸೂಚನೆಯನ್ನು ಕೊಟ್ಟವು. ನನ್ನೆಲ್ಲ ಯೋಚನೆಗಳು "ರಾತ್ರಿ ಎಲ್ಲಿಗೆ ಹೋಗಿ ಮಲಗಬೇಕು? ಎಲ್ಲಿ ಬೆಚ್ಚಗಿನ ಚಾವಡಿ ದೊರಕೀತು?" ಎಂಬ ಹಂಬಲದಲ್ಲೇ ಮುಳುಗಿದ್ದುವು. ಈ ಯೋಚನೆಗಳಿಂದ ಭಾರವಾದ ನನ್ನ ಅಡಿಗಳು ತಾಸಿಗೆ ಎರಡು ಮೈಲಿನ ವೇಗದಿಂದಲೂ ಚಲಿಸುತ್ತಿದ್ದಿರಲಾರವು. ಅಷ್ಟರಲ್ಲಿ ನನ್ನ ಬೆಂಗಡೆಯಿಂದ ಯಾರೋ ಗಟ್ಟಿಯಾಗಿ ಮಾತನಾಡುತ್ತ ಬರುವಂತೆ ಕೇಳಿಸಿತು. ಹಿಂದಿರುಗಿ ನೋಡಿದೆ ಹಳ್ಳಿಯ ಗೌಡರಿಬ್ಬರು ಕಂಕುಳಲ್ಲಿ ಕೋಳಿಗಳೆರಡನ್ನು ಸಿಕ್ಕಿಸಿಕೊಂಡು ಬರುತ್ತಿದ್ದರು. ಅವರಲ್ಲೊಬ್ಬನ ಕೈಯಲ್ಲಿ ರುಂಡಹೀನವಾದ ಬೇರೊಂದು ಹುಂಜವೂ ಕುಣಿಯುತ್ತಿತ್ತು. ಆ ದಿನದ ಕೋಳಿಯ ಅಂಕದಲ್ಲಿ ವಿಜಯಿಗಳಾದ ಅವರು, ನನ್ನನ್ನು ಗಮನಿಸದೆ ಮುಂದೆ ಹಾಯ್ದು, ಸರಿದುಬಿಟ್ಟರು. ನಾನೇಕೆ ಅವರನ್ನು ಮಾತನಾಡಿಸದೆ ಸುಮ್ಮನಾದೆ ಎಂದು ನನಗನಿಸಿತು. ನಾನಿದ್ದ ಕಾಡುದಾರಿಯ ನೆನಪಾಗಿ, ಅಂಜಿಕೆ ಹುಟ್ಟಿ, "ಹೋಯ್, ಅಲ್ಲಿಂದ ಪಂಜಕ್ಕೆ ಎಷ್ಟು ದೂರ?" ಎಂದು ಅವರನ್ನು ಕರೆದು ಕೇಳುವಂತಾಯಿತು. "ಪಂಜ... ಇಲ್ಲೆಲ್ಲಿ? ಇದು ಗುತ್ತಿಗಾರು-ಸುಳ್ಯ ರಸ್ತೆಯಲ್ಲವೇ?" ಎಂದರು ಅವರು. ನಾನು ಗಾಬರಿಯಿಂದ ಕಕ್ಕಾಬಿಕ್ಕಿಯಾದೆ. ಅವರೂ ಕಾಲನ್ನು ತಡೆದರು. ನನ್ನ ದಿಗಿಲುಗಾರಿಕೆಯನ್ನು ಕಂಡು "ಎಲ್ಲಿಗೆ ಹೋಗುವವರು ನೀವು? ಪಂಜಕ್ಕೇನು? ಪಂಜದ ಹಾದಿ ಸುಬ್ರಹ್ಮಣ್ಯದಲ್ಲೇ ನಿಮಗೆ ತಪ್ಪಿತು" ಎಂದರು, "ತಿರುಗಿ ಅಲ್ಲಿಗೆ ಹೋಗುವುದೇ ಒಳ್ಳೆಯದು" ಎಂದು ಉಪದೇಶ ಮಾಡಿದರು. ನಾನು ಬೆಪ್ಪಾದೆ. ಸುಮ್ಮನೆ, "ಹೀಗೆ ಹೋದರೆ ಎಲ್ಲಿಗೆ ಹೋಗುತ್ತದೆ?" ಎಂದು ಕೇಳಿದೆ. ಆ ದಿನದ ಸೋಲು ಪರಮಾವಧಿಯ ನಿರಾಶೆಯಲ್ಲಿ ಕೊನೆಗೊಂಡಿತು. "ಇದು ಗುತ್ತಿಗಾರನ್ನು ಸೇರುತ್ತದೆ" ಎಂದರು ಅವರು.

"ಅಲ್ಲಿಗೆ ಎಷ್ಟು ದೂರ?"

"ಅಲ್ಲಿಗೆ ಇನ್ನೂ ಆರೆಂಟು ಮೈಲುಗಳುಂಟು. ಆದರೆ ಕತ್ತಲಾಯಿತಲ್ಲ. ಹಾದಿಯಲ್ಲಿ ಮನೆ ಮಠಗಳೂ ಇಲ್ಲ. ಇದು ರಾತ್ರಿ ಒಬ್ಬೊಬ್ಬರೇ ತಿರುಗುವ ರಸ್ತೆಯೂ ಅಲ್ಲ. ಮೇಲೆ, ಒಂದು ತಿಂಗಳಿನಿಂದಲೂ ಈ ದಾರಿಯಲ್ಲಿ ಹುಲಿಯ ಉಪದ್ರ ಹೆಚ್ಚಿದೆ. ಊರು ಮನೆಯವರಾದ ನಮಗೇನೆ ಹೆದರಿಕೆ ಬರುತ್ತಿರುವಾಗ..." ಎಂದರು. ಅವರು ರಪರಪನೆ ಕಾಲು ತೆಗೆದು ಸಾಗುತ್ತಿದ್ದುದರ ಅರ್ಥ ಈಗ ಚೆನ್ನಾಗಿ ಹೊಳೆಯಿತು. ಆದರೂ ಮಾಡಲೇನು? ನಾನು ಮೂಕನಂತೆ ಅವರಷ್ಟೇ ಬೀಸನೆ ಹೆಜ್ಜೆ ಹಾಕುತ್ತ ಹೊರಟೆ. ಇನ್ನೂ ಪಡುವಣದಲ್ಲಿ ಬಾನಿನ ಹೊಳಪು ಕಾಣಿಸುತ್ತಿತ್ತಾದರೂ, ನನ್ನ ಪಾಲಿಗೆ ಕಗ್ಗತ್ತಲೆಯೇ ಕವಿದಿತ್ತು. ಈಗಾಗಲೇ ಕಾಡಿನ ಮಗ್ಗುಲಿಂದ ಆನೆಗಳು ನನ್ನನ್ನು ಅಟ್ಟಿ ಬರುತ್ತಿರುವಂತೆ ಕಾಣಿಸಿತು. ಹುಲಿಯ ಬೆದರಿಕೆಯೂ ಮನದಲ್ಲಿ ತುಂಬಿತ್ತು. ಇದರಿಂದ ಎದೆಯ ಬಡಿತ, ಗುಡುಗಿಗಿಂತ ಮಿಗಿಲಾದ ಬಿರುಸಿನಿಂದ ಬೆದರಿಸುವಂತೆ ಕಾಣಿಸಿತು.

"ಹತ್ತಿರ ಯಾವ ಪೇಟೆಯೂ ಸಿಗಲಾರದೇ?" ಎಂದು ಕೇಳಿದೆ.

"ಪೇಟೆಯೆಲ್ಲಿಂದ? ಒಂದೆರಡು ಗುಡಿಸಲುಗಳು, ಜೋಪಡಿಗಳು ಸಿಗಬಹುದು. ಆದರೂ ಪರಸ್ಥಳಿಕರು ಹೋಗಿ ಮಲಗಿಕೊಳ್ಳಬಹುದಾದ ತಾವು ಅವಲ್ಲ."



ದೈತ್ಯ ಶಕ್ತಿಯ ಧೀಮಂತ ಚೇತನ

ಕನ್ನಡ ನಾಡಿನ ಹಿರಿಯ ಚೇತನಗಳಲ್ಲಿ ಒಬ್ಬರಾಗಿದ್ದ ಶಿವರಾಮ ಕಾರಂತರು ತಮ್ಮ ನಿಡುಬಾಳಿನಲ್ಲಿ (ಜನನ: 10 ಅಕ್ಟೋಬರ್ 1902, ಮರಣ: 9 ಡಿಸೆಂಬರ್ 1997) ವಿವಿಧ ಕ್ಷೇತ್ರಗಳನ್ನು ಶ್ರೀಮಂತಗೊಳಿಸಿದ್ದಾರೆ. ಅವರ ಸಾಧನೆಯ ಹರಹನ್ನು ತಿಳಿಯಬೇಕಾದರೆ, ಅವರು ಕೆಲಸ ಮಾಡಿದ ಕ್ಷೇತ್ರಗಳನ್ನು ಪಟ್ಟಿ ಮಾಡಿದರೂ ಸಾಕು: ಸಾಹಿತ್ಯ, ಕಲೆ, ಭಾಷೆ, ಸಂಸ್ಕೃತಿ, ಪರಿಸರ ವಿಜ್ಞಾನ, ವಿಜ್ಞಾನ, ಸ್ವಾತಂತ್ರ್ಯ ಹೋರಾಟ, ರಾಜಕೀಯ, ಪ್ರವಾಸ, ಮುದ್ರಣ- ಪ್ರಕಟಣೆ, ಪತ್ರಿಕೋದ್ಯಮ, ಶಿಕ್ಷಣ ಇತ್ಯಾದಿ. ಅದರಲ್ಲಿ ಸಾಹಿತ್ಯ ಕ್ಷೇತ್ರವೊಂದನ್ನೇ ತೆಗೆದುಕೊಂಡರೆ, ಕವಿತೆ, ನಾಟಕ, ಸಣ್ಣಕಥೆ, ಕಾದಂಬರಿ, ಹರಟೆ, ವ್ಯಂಗ್ಯ, ಪ್ರಬಂಧ, ವಿಚಾರ ಸಾಹಿತ್ಯ, ಕೋಶಗಳು, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ, ಬಾಲಸಾಹಿತ್ಯ, ಮಕ್ಕಳಿಗೆ ಪಠ್ಯಪುಸ್ತಕಗಳು, ಕಲೆಯನ್ನು ಕುರಿತ ಕೃತಿಗಳು, ತಾತ್ತ್ವಿಕ ಕೃತಿಗಳು, ಅನುವಾದ, ಸಂಪಾದನೆ ಇಂಗ್ಲಿಷ್ ಕೃತಿಗಳು ಮುಂತಾದ ಪ್ರಕಾರಗಳಲ್ಲಿ ಅಗಣಿತ ಕೃತಿಗಳನ್ನೂ, ಲೇಖನಗಳನ್ನೂ ರಚಿಸಿದ್ದಾರೆ. ಕಲೆಯಲ್ಲಿ ಯಕ್ಷಗಾನ, ನಾಟಕ, ಬ್ಯಾಲೆ, ಚಲನಚಿತ್ರ, ಚಿತ್ರಕಲೆ, ಶಿಲ್ಪಕಲೆ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ದುಡಿದಿದ್ದಾರೆ. ಯಕ್ಷಗಾನದಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ ಅದನ್ನು ವಿಶ್ವಮಟ್ಟಕ್ಕೆ ಒಯ್ದು ಪ್ರದರ್ಶನ ನೀಡಿದ್ದಾರೆ.

'ಒಂದು ಜೀವಿತ ಅವಧಿಯಲ್ಲಿ ಒಬ್ಬ ವ್ಯಕ್ತಿ ಇಷ್ಟೆಲ್ಲಾ ಸಾಧಿಸಲು ಸಾಧ್ಯವೇ ಎಂಬ ವಿಸ್ಮಯ ಹುಟ್ಟುವಷ್ಟು' ಅವರು ಬೆಳೆದು ನಿಂತಿದ್ದಾರೆ. ಕುಂದಾಪುರ ತಾಲ್ಲೂಕಿನ ಕೋಟದಲ್ಲಿ ಜನಿಸಿ ಕಾಲೇಜು ವ್ಯಾಸಂಗದ ಕಾಲದಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ಶಿವರಾಮ ಕಾರಂತರು ಬದುಕಿನಿಂದ ಹಾಗೂ ಸ್ವಾಧ್ಯಯನದಿಂದ ಕಲಿತದ್ದೇ ಹೆಚ್ಚು. ಎಲ್ಲ ಜ್ಞಾನ ಶಾಖೆಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು ಧೀಮಂತರಾಗಿ ಬೆಳೆದ ಕಾರಂತರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಅವರ ಸಾಧನೆಗೆ ಸಂದ ಪ್ರಶಸ್ತಿಗಳೂ ಹಲವಾರು. ಮೈಸೂರಿನಲ್ಲಿ ನಡೆದ 37ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (1955), 'ಯಕ್ಷಗಾನ ಬಯಲಾಟ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1959), ಜಾನಪದ ನೃತ್ಯಕಲೆಗೆ ಸ್ವೀಡಿಷ್ ಅಕಾಡೆಮಿ ಪ್ರಶಸ್ತಿ (1960), ಪದ್ಮಭೂಷಣ (1968. ಇದನ್ನು ಮುಂದೆ ತುರ್ತುಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಹಿಂದಿರುಗಿಸಿದ ಎಂಟೆದೆ ಅವರದು), 'ಮೂಕಜ್ಜಿಯ ಕನಸುಗಳು' ಕೃತಿಗೆ ಜ್ಞಾನಪೀಠ ಪ್ರಶಸ್ತಿ (1977), ಹಲವಾರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟುಗಳು, ಇತ್ಯಾದಿ.

'ಮರಳಿ ಮಣ್ಣಿಗೆ', 'ಚೋಮನ ದುಡಿ', 'ಬೆಟ್ಟದ ಜೀವ', 'ಅಳಿದ ಮೇಲೆ', 'ಕುಡಿಯರ ಕೂಸು', 'ಮೂಕಜ್ಜಿಯ ಕನಸುಗಳು' ಮುಂತಾದ ಶ್ರೇಷ್ಠ ಕಾದಂಬರಿಗಳಲ್ಲಿ ಸಮೃದ್ಧ ಅನುಭವವನ್ನು ಕಡೆದಿಟ್ಟಿರುವ ಕಾರಂತರ ಪಾತ್ರ ಚಿತ್ರಣ ಮನೋಜ್ಞ. ಕಾಡಿನ ನಡುವೆ ಮನೆ ಮಾಡಿಕೊಂಡು, ಕಳೆದುಹೋದ ಮಕ್ಕಳ ಬಗೆಗೆ ಹಂಬಲಿಸುತ್ತಾ ಬದುಕಿನಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳದೆ ಮಧುರ ಜೀವನ ನಡೆಸಿದ ಗೋಪಾಲಯ್ಯ -ಶಂಕರಿ ದಂಪತಿಗಳ ಹೃದ್ಯ ಚಿತ್ರಣ- 'ಬೆಟ್ಟದ ಜೀವ' (1943).

"ನಿಮ್ಮ ಊರ್ಯಾವುದು?"

ಅವರು ಏನೋ ಒಂದು ಹಳ್ಳಿಯ ಹೆಸರನ್ನು ಹೇಳಿದರು. ಅದು ಊರಿನ ಹೆಸರಾಗಿರುವ ಬದಲು. ಅವರ ಮನೆಯ ಸಂದಿನ ಹೆಸರಾಗಿ ನನಗೆ ಕಂಡಿತು. ಅದನ್ನು ಕೇಳಿ ನೆನಪು ಉಳಿಯುವಂತೆಯೂ ಇರಲಿಲ್ಲ.

"ನಿಮ್ಮ ಜತೆಯಲ್ಲಿ ಬಂದರೆ, ರಾತ್ರಿ ಉಳಿದುಕೊಳ್ಳಲು ಒಂದಿಷ್ಟು ಜಾಗ ಕೊಡಿಸುತ್ತೀರಾ?" ಎಂದು ಕೇಳಿದೆ. ನಾನಿಷ್ಟು ದೀನನಾದುದು ನನ್ನ ತಿಳಿವಿಗೇ ಬಂದಿರಲಿಲ್ಲ. ಬಂದರೂ, ನಾನು ಏನನ್ನೂ ಮಾಡುವಂತಿರಲಿಲ್ಲ.

"ಅಯ್ಯೋ, ನೀವು ಬ್ರಾಹ್ಮಣರಾಗಿ ಕಾಣಿಸುತ್ತೀರಿ: ನಾವು ಗೌಡರು. ನಿಮಗೆ ಮಲಗಲು ಒಂದು ದಿಂಬು, ಕಂಬಳಿ, ಚಾಪೆ ಕೊಡುವ ಯೋಗ್ಯತೆ ನಮಗೆಲ್ಲಿದೆ? ನೀವು ಊಟವಿಲ್ಲದೆ ಮಲಗುವ ಹಾಗಿಲ್ಲ. ಹಾಗೆ ಮಲಗಿದರೆ ನಿದ್ದೆಯೂ ಬರಲಾರದು. ನಿಮ್ಮನ್ನು ಕಂಡರೆ ಪೇಟೆ ಶಹರಿನವರಾಗಿ ಕಾಣಿಸುತ್ತೀರಿ."

ನಾನು ಕೇಳಿದ್ದನ್ನು ಸಲ್ಲಿಸುವ ಯೋಚನೆಗಿಂತ, ಅವರು ಕೇಳಿದ್ದನ್ನು ಉತ್ತರಿಸುವ ಪೇಚಾಟಕ್ಕೆ ಸಿಗಬೇಕೆ? ಬಲು ಹೊತ್ತು ಅವರು ಮುಖ ಮುಖ ಕಂಡರು. ಕೊನೆಗೆ ಅವರಲ್ಲೊಬ್ಬನು, ನನ್ನನ್ನು ತೀರ ನಿರಾಶೆಗೊಳಿಸಲಾರದವನಾಗಿ "ಬನ್ನಿ, ಹೋಗುವ. ನನ್ನದೇ ಮನೆಯಲ್ಲಿ ತಾವಿಲ್ಲದೆ ಹೋದರೆ ಹೋಗಲಿ: ಒಂದು ಸೂಡಿ ಹಿಡಿದು, ನಿಮ್ಮನ್ನು ನಮ್ಮ ಭಟ್ಟರ ಮನೆಯವರೆಗೆ ಮುಟ್ಟಿಸಿ ಬರುತ್ತೇನೆ" ಎಂದ.

"ಯಾವ ಭಟ್ಟರ ಮನೆ? ಎಂದು ಕೇಳಿದೆ.

"ಕೆಳಬೈಲಿನ ಗೋಪಾಲಯ್ಯನವರ ಮನೆ ಅಲ್ಲೇ ಸಮೀಪದಲ್ಲಿದೆ: ಏನು ಎರಡು ಮೈಲು ದೂರವೂ ಇಲ್ಲ: ನಮ್ಮ ಮನೆಗೆ ತೀರ ಸಮೀಪ. ಅವರು ಮೊದಲಿನಿಂದಲೂ ತುಂಬ ಅನುಕೂಲಸ್ಥರು. ಸ್ವತಃ ದುಡಿಮೆಯವರಾದುದರಿಂದ, ದೇವರ ದಯೆಯಿಂದ ಅವರಿಗೆ ಏನೂ ಕಡಿಮೆಯಿಲ್ಲ.
ಮನೆಯಲ್ಲಿರುವುದು- ಗಂಡ, ಹೆಂಡತಿ ಮಾತ್ರ. ಅದರಿಂದಾಗಿ ಯಾವ ಗಳಿಗೆಗೂ ಸಮನೆ, ಯಾರು ಬಂದರೂ ಸಮನೆ ಊಟಕ್ಕೆ ಯಾವ ತೊಂದರೆಯೂ ಇಲ್ಲ."

"ನನಗೆ ಊಟ ಬೇಕಿಲ್ಲ. ರಾತ್ರಿಯನ್ನು ಕಳೆದು, ತಿರುಗಿ ರಸ್ತೆ ಹಿಡಿದೆನೆಂದರೆ, ಗುತ್ತಿಗಾರನ್ನು ಸೇರಿ ಅಲ್ಲಿಂದ ಸುಳ್ಯವನ್ನೋ, ಬೆಳ್ಳಾರೆಯನ್ನೋ ಸೇರಿ, ಬಸ್ಸಿನ ಮುಖ ನೋಡಿಬಿಟ್ಟರೆ, ಒಮ್ಮೆ ಈ ಅವಾಂತರದಿಂದ ಬಚಾಯಿಸಿಕೊಳ್ಳುತ್ತಿದ್ದೆ. ಬಟ್ಟಿನಿಂದ, ಮೋಟಾರು ಸಂಚಾರವಿಲ್ಲದೆ ಈ ಸಂದನ್ನು ಸೇರಿಯೇ ಪಜೀತಿಯಾಯಿತು."

"ಅಹುದು ಸ್ವಾಮಿ, ನಮ್ಮ ಕುಳಕುಂದದ ಜಾತ್ರೆಗಾದರೂ ಒಂದೆರಡು ಮೋಟಾರುಗಳು ತಿರುಗಾಡುವುದುಂಟು: ಅದೂ ಈ ದಾರಿಯಲ್ಲಲ್ಲ. ಪಂಜದ ರಸ್ತೆಯಲ್ಲಿ. ಈಗ ಯಾವುದೂ ಇಲ್ಲ! ನೀವು ನಡೆದೇನೆ ಹೋಗಬೇಕು. ನಡೆಯುವವರಿಗೆ ಸುಳ್ಯವೂ ಸಮನೆ, ಬೆಳ್ಳಾರೆಯೂ: ಸಮನೆ: ದೂರ ಎರಡೂ ಒಂದೇ ಆದೀತು."

ನನ್ನ ಕಾಲುಗಳು ನನ್ನ ಜೀವವನ್ನೇ ಸೆಳೆದು ತಿನ್ನುತ್ತಿದ್ದುವು: ಹಿಂದಣ ಎರಡು ದಿನಗಳಲ್ಲೂ ಅವು ಅಲೆದಲೆದು ಸೋತಿದ್ದುವು: ಈಗಂತು ಮಲಗಲು ನನ್ನ ಜೀವ ಅತಿಯಾಗಿ ಹಂಬಲಿಸುತ್ತಿತ್ತು. ಮನೆಯೇ ಬೇಕೆಂದಿರಲಿಲ್ಲ ಮರದ ಮಗ್ಗುಲಲ್ಲೂ ಕಾಲು ಚಾಚಲು ನಾನು ಸಿದ್ಧನಾಗಿದ್ದೆ. ತಡೆಯಲಾರದಷ್ಟು ಹಸಿವು, ನಿರಡಿಕೆಗಳಾಗಿದ್ದುವು. ಅವನ್ನೂ ಮರೆತುಬಿಡುತ್ತಿದ್ದೆ. ಆ ಕಾಡಿನ ಬೆದರಿಕೆಯೊಂದಕ್ಕಾಗಿ ಮನುಷ್ಯನಿರುವ ಗೂಡನ್ನು ಸೇರಲು ಹವಣಿಸಬೇಕಾಗಿತ್ತೇ ವಿನಾ ಬೇರೆಯಲ್ಲ. ಆ ಹಂಬಲದಿಂದಲೇ ಆ ಗೌಡರನ್ನು ಹಿಂಬಾಲಿಸಿದೆ. ಅವರು ಸರಿದತ್ತ ನಾನು ಸರಿದೆ. ಹಾಗೆ ಒಂದು ತಾಸಿನ ಕಾಲು ನಡೆಯಾದರೂ ಸಾಗಿದ್ದಿರಬೇಕು. ರಾಜಮಾರ್ಗವನ್ನು ಬಿಟ್ಟು, 'ರೋಟ'ನ್ನು ಹಿಡಿದು, ಕೊನೆಗೆ ಅದನ್ನೂ ಬಿಟ್ಟು, ಕಾಲುದಾರಿಯನ್ನು ತುಳಿಯತೊಡಗಿದ್ದಾಯಿತು. ನನ್ನ ಮಾರ್ಗದರ್ಶಕರು ಅಲ್ಲೇ ಹುಟ್ಟಿ ಬೆಳೆದವರು: ಆ ಕತ್ತಲೆಯಲ್ಲೂ ಕಾಡಿನ ಹಕ್ಕಿಗಳಂತೆ ಮರ, ಬೇರು ಪೊದೆಗಳ ಎಡೆಗಳಿಂದ ರುಮು ರುಮು ಸಾಗುತ್ತಿದ್ದರು. ಅವರ ಬಾಯಿಯೂ ಸುಮ್ಮನಿರದು: ಅವರು ಅಷ್ಟು ಸಮೀಪದಲ್ಲಿ

ಸರಿಯುತ್ತಿದ್ದರೂ, ನೂರು ಗಜ ದೂರಕ್ಕೆ ಕೇಳಿಸುವಷ್ಟು ಗಟ್ಟಿಯಾಗಿ ಒದರಿಕೊಂಡೇ ನಡೆಯುತ್ತಲಿದ್ದರು. ಒಮ್ಮೊಮ್ಮೆ 'ಇವರು ಕಳ್ಳಕಾಕರೇ' ಎಂಬ ಅನುಮಾನ ನನಗೆ. ಕೊನೆಗೆ, ತಮ್ಮ ಧ್ವನಿಯು ತಮಗೇನೆ ಧೈರ್ಯ ಹುಟ್ಟಿಸಲು, ಹುಲಿಯ ಭೀತಿಯನ್ನು ಪರಿಹರಿಸಲು, ಈ ತೆರ ಬೊಬ್ಬಿಟ್ಟು ಮಾತನಾಡುತ್ತಿರಬೇಕೆಂದು ಅನಿಸಿತು.

ಒಮ್ಮೆಗೇ ಮುಂದೆ ಸಾಗುತ್ತಿದ್ದ ಗೌಡ ನಿಂತುಬಿಟ್ಟ: "ಅಣ್ಣಾ, ನಾಳೆ ಸಿಗುತ್ತೇನೆ" ಎಂದ. ನನ್ನ ನೆನಪಾಗಿ "ಅಣ್ಣೇರೇ (ತುಳು ನುಡಿಯಲ್ಲಿ ಅಣ್ಣನವರೇ ಎಂದರ್ಥ) -ನನ್ನ ಮನೆ ಬಂದಿತು. ನೀವು ನಮ್ಮ ದೇರಣ್ಣನ ಒಟ್ಟಿಗೆ ಹೋಗಿಬಿಡಿ. ನಾಳೆ ನೋಡುವ" ಎಂದು ಹೇಳಿ, ಕಣ್ಮರೆಯಾಗಿಬಿಟ್ಟ. ಅವನು ಅಸ್ತಂಗತನಾದ ನೂರು ಗಜದ ಆಚೆ ಒಂದು ಮಿಣುಕು ದೀಪ ಉರಿಯುತ್ತಲಿತ್ತು. ಅದೇ ಅವನ ಮನೆಯಿರಬೇಕು" ಎನಿಸಿತು.

ಇನ್ನೊಂದು ನೂರು ಗಜ ದೂರ ನಾನು ದೇರಣ್ಣನ ಹಿಂದಿನಿಂದ ಸಾಗಿದೆ. ಗುಡ್ಡದ ದಾರಿಯನ್ನು ಬಿಟ್ಟು ಗದ್ದೆಯ ಏರಿಗೆ ಇಳಿದೆವು. ಆಗಾಗಲೇ ಹನಿಯಿಂದ ಒದ್ದೆಯಾದ ನೆಲ ನನ್ನ ಹಿಮ್ಮಡಿಗಳನ್ನು ಕಚ್ಚತೊಡಗಿತು. ಆಗಿನ ಮುಸುಕು ಕತ್ತಲಲ್ಲಿ, ಗದ್ದೆ ಅಂಚುಗಳ ಅಂಕುಡೊಂಕು, ಎಡಬಲದ ಹಾದಿಯಲ್ಲಿ, ಒಬ್ಬರನ್ನೊಬ್ಬರು ಅಟ್ಟಿಕೊಂಡು ಸರಿಯುವಂತೆ, ದೇರಣ್ಣನ ಹಿಂದೆ ನಾನು ಸರಿದೆ. ಈ ಪಯಣಕ್ಕೂ ಕೊನೆ ಬಂದಿತು. ಎದುರಿಗೊಂದು ನೀರಿನ ತೋಡಿತ್ತು. ಅದನ್ನು ದಾಟಲು ನೀಳವಾದ ಎರಡು ಅಡಕೆ ಮರಗಳನ್ನು ಹಾಸಿ ಸೇತುವೆ ಮಾಡಿದರು. "ಅಯ್ಯಾ, ಜಾಗ್ರತೆ" ಎಂದ ದೇರಣ್ಣ. ದೇರಣ್ಣ, ಜಿಮುಕು ಜಿಮುಕು ಕುಣಿಯುವ ಆ ಅಡಿಕೆ ಮರದ ಸೇತುವೆಯ ಮೇಲೆ, ಜಿಗಿದು ಸರಿದ ನಾನು ಜೀವ ಹಿಡಿದು ನಿಂತೆ; ಕುಳಿತೆ; ಕೊನೆಗೆ ಚತುಷ್ಪಾದ ಪ್ರಾಣಿಯಂತೆ ಅತೀವ ಸಾಹಸದಿಂದ ಆ ನಾಲ್ಕು ಗಜ ದೂರವನ್ನು ದಾಟಿ, ತಿರುಗಿ ಮನುಷ್ಯನಾದೆ. ಹೋಗಿ ಸೇರಿದುದೇ ದೇರಣ್ಣ ಗೌಡನ ಮನೆಯ ಅಂಗಳವನ್ನು ಮನೆಗೆ ಕಾಲಿರಿಸಿದ ಗೌಡ "ಮಗು, ಶೇಷಾ, ಒಂದು ಸೂಡಿ ಮಾಡು" ಎಂದನು. ಒಬ್ಬ ಚಿಕ್ಕ ಹುಡುಗ ಕಾಣಿಸಿಕೊಂಡನು. ಆತ ಹಟ್ಟಿಯ ಬೆಂಗಡೆಯಲ್ಲಿ ಮರೆಯಾಗಿ, ಒಂದು ಪಂಜು ತಯಾರಿಸುವುದು ನನಗೆ ತೋರಿತು. ನಡೆದು ನನಗೆ ಸಾಕಾಗಿಹೋಗಿತ್ತು. ಇನ್ನೂ ನಡೆಯಬೇಕೆಂಬ ಯೋಚನೆಯೇ ಹಿಡಿಸದಾಗಿತ್ತು. "ಇಲ್ಲಿಯೇ ಒಂದಿಷ್ಟು ಜಾಗ ತೋರಿಸಿದರೆ ಒರಗಿಬಿಡುತ್ತೇನೆ. ನನಗೆ ಊಟ ಬೇಡ, ಬಾಯಾರಿಕೆಯೂ ಬೇಡ; ಬರಿಯ ಇಷ್ಟು ಜಾಗ, ಒಂದು-ಅದೂ ಇದ್ದರಾಯಿತು... ಇಲ್ಲದಿದ್ದರೂ" ಎಂದೆ. ಪ್ರತ್ಯುತ್ತರ ಪ್ರತ್ಯಕ್ಷವಾಗಿತ್ತು. ಅವನದು ತೀರ ಕಿರಿಯ ಮನೆ: ಅದರ ಒಳಗಡೆ ಹೇಗಿತ್ತೋ! ಕಾಣಿಸುತ್ತಿರುವ ಹೊರಗಣ ಚಾವಡಿಯಲ್ಲಿ 'ಏಣೆಲು' ಬೆಳೆಯಲು ಬತ್ತದ ರಾಶಿ ಹರಡಿತ್ತು. ಅಂಗಳದಲ್ಲಿ ಚಪ್ಪರ ಹೂಡಿರಲಿಲ್ಲ. "ಬತ್ತ ಕುಟ್ಟಿ ಅಕ್ಕಿ ಮಾಡುವ ತನಕ ಅಲ್ಲಿರುವ ಜಾಗ ಮನೆಯವರಿಗೇನೆ ಸಾಲದು" ಎಂದ ಆತ. ಅಷ್ಟರಲ್ಲಿ ಸೂಡಿಯನ್ನು ಬಿಗಿದು, ಉರಿಸಿಕೊಂಡು ಶೇಷ ಬಂದ. ಅದರ ಬೆಳಕಿನಲ್ಲಿ ನನ್ನ ಮಾರ್ಗದರ್ಶಕನ ಭವ್ಯ ನೀಳ ಶರೀರ, ಬಿಳುಪು ಕರಿಮಿಶ್ರಿತವಾದ ಮೀಸೆಯ ಕೂಡಿ, ತುಸುವೇ ಸಂಜೆ ಬಾನಿನ ಬಣ್ಣತಾಳಿದ ಕಣ್ಣಿನ ಬಣ್ಣ- ಇವುಗಳ ನಿಕಟ ಪರಿಚಯವಾಯಿತು. ಮೇಲೆ ದೇರಣ್ಣನ ಸಮೀಪದ ಉಸಿರೂ ಬೀಸಿತು. ಆಗ ಹವಾಮಾನ ಚೆನ್ನಾಗಿಲ್ಲವೆಂದು ಊಹಿಸಿ ತಿಳಿದೆ. ದೇರಣ್ಣನು "ಯಾಕೆ ಹೆದರುತ್ತೀರಿ? ಗೋಪಾಲಯ್ಯ ಚಿನ್ನದಂಥ ಮನುಷ್ಯರು. ಮನೆಗೆ ಬಂದವರಿಗೆ ದೇವರಂಥ ಸನ್ಮಾನ ಮಾಡುವವರು. ನಮ್ಮ ಮನೆಯಿಂದ ಗಟ್ಟಿಯಾಗಿ ಕೂಗಿದರೆ ಅವರ ತೋಟಕ್ಕೆ ಕೇಳಿಸುತ್ತದೆ" ಎಂದು ಮುಂದಕ್ಕೆ ನಡೆದ. ಅಷ್ಟಾದರೂ ಉಪಕಾರವೆಸಗುವಷ್ಟು ಅವನು ಅಮಲು ರಹಿತನಾಗಿದ್ದುದು ನನ್ನ ಭಾಗ್ಯವೆಂದು ಯೋಚಿಸಿ ಹಿಂಬಾಲಿಸಿದೆ ಬೀಸುವ ಸೂಡಿಯ ಇಳಿ-ಏರು ಬೆಳಕಿನಲ್ಲಿ, ನಾನು ಸಾಗುತ್ತಿರುವುದು ಒಂದು ಬೋಳುಗುಡ್ಡದ ಸೆರಗಿನಲ್ಲಿ- ಎಂಬ ಅನುಭವವಾಯಿತು.

ಮುಂದೆ, ಮುಂದೆ ದಾರಿಯಂತು ತೀರ ಕಿರಿದಾಯ್ತು. ಗುಡ್ಡದಿಂದ ಕೊರ ಕಲ್ಲೊಂದಕ್ಕೆ ಇಳಿಯಿತು. ಆಚೀಚಿನ ಗುಡ್ಡಗಳ ಬರೆ ನನ್ನ ಮೈಯನ್ನು ಸವರುತ್ತಿತ್ತು. ನೆಲ ಇಳಿಜಾರಾಗಿ ತೀರ ನಯವಾಗಿತ್ತು. "ಅಯ್ಯ ಮೆಲ್ಲಗೆ: ಗಂಟಿ ತಿರುಗಾಡುವ ಜಾಗ: ಜಾರುತ್ತದೆ, ಸ್ವಲ್ಪ ಮೆಲ್ಲಗೆ ಇಳಿಯಿರಿ" ಎಂದು ತನ್ನ ದೀವಟಿಗೆಯನ್ನು ತಲೆಗಿಂತಲೂ ಎತ್ತರವಾಗಿ ಏರಿಸಿ ಹಿಡಿದ. ಅದರಿಂದ ಕತ್ತಿನ ತನಕ ಕತ್ತಲೆ

ತುಂಬಿಕೊಂಡಿತು. ನಾನಂತು ತೀರ ಎಚ್ಚರದಿಂದಲೇ ಹೆಜ್ಜೆಯ ಮೇಲೆ ಹೆಜ್ಜೆಯನ್ನಿರಿಸಿ, ಆ ಪ್ರಪಾತವನ್ನು ಇಳಿದೆ. ಎದುರಿಗೆ ಅನುವಾದುದು ಅಡಿಕೆ ಮರದ ಸೇತುವೆ. ಈಗ ಬೆಳಕಿನಲ್ಲಿ ಅದರ ಮಹಿಮೆ ಚೆನ್ನಾಗಿ ಕಾಣಿಸುವಂತಿತ್ತು. ಇನ್ನೊಮ್ಮೆ ನಾನು ಸರ್ಕಸ್ಸಿನ ಪೈಲವಾನನಂತೆ, ಅಲ್ಲ ಅತ್ತೆಯಮನೆಗೆ ಹೋಗುವ ಅಳಿಯನಂತೆ, ಕಪಿಯ ನಡೆಯಲ್ಲಿ ಆ ಸೇತುವೆಯನ್ನು ದಾಟಿಪಾರಾದೆ. ಮುಂದೆ ಸಂಧಿಸಿದುದು ಅಡಿಕೆ ತೋಟವೊಂದು. ಆ ಸುಬ್ರಹ್ಮಣ್ಯ ಸೀಮೆಯ ಚಳಿಯೆಲ್ಲವೂ ಆ ಕಂಗಿನ ತೋಟದ ಆಸರೆಯನ್ನು ಸೇರಿರಬೇಕು ಎಂದೆನಿಸಿತು. ಆ ತೋಟದ ನಡುವೆ ನೇರವಾಗಿ ಸಾಗಿದೆವು ಎದುರೊಂದು ಬಚ್ಚಲುಮನೆ ಬಂದಿತು. ಇದರ ಬಳಿಯಲ್ಲೇ ಗುಳುಗುಳು ಸದ್ದು ಮಾಡಿ ಹರಿಯುವ ದಂಬೆ ನೀರು. ಬಚ್ಚಲುಮನೆಯಲ್ಲಿ ಬೆಂಕಿ ಒಟ್ಟುತ್ತ ಒಬ್ಬರು ಮುದುಕರು ಕುಳಿತಿದ್ದರು. ನಮ್ಮ ದೀಪದ ಬೆಳಕಿಗೆ ಅವರು ಎದ್ದು ನಿಂತರು. ನಡಿಗೆಯ ಸಪ್ಪಳದಿಂದಲೇ ಜನರನ್ನು ಗುರುತಿಸುವವರಂತೆ "ಯಾರು, ದೇರಣ್ಣನೇ? ಯಾರೊ ಪರವೂರವರನ್ನು ಕರೆದುಕೊಂಡು ಬಂದ ಹಾಗಿದೆಯಲ್ಲ" ಎಂದರು. ನಾವು ಸಮೀಪವಾಗುತ್ತಲೇ, ಪರದೇಶಿಯಾದ ನನ್ನನ್ನು ನಮಸ್ಕರಿಸಿ, 'ಬನ್ನಿ' ಎಂದು ಮನೆಯ ಚಾವಡಿಗೆ ಕರೆದೊಯ್ದರು.

ನೀಳವಾದ ಶರೀರ. ನೆರೆತ ತಲೆಗೂದಲು. ಅರೆನೆರೆತ ಗಡ್ಡ ಮೀಸೆಗಳು. ನಡುವಿಗೊಂದು ಪಂಚೆ ಬಿಗಿದು. ಕೂದಲಿಲ್ಲದ ಮೈಗೆ ಎಣ್ಣೆ ಸವರಿ, ಬೆಂಕಿಯ ಮುಂದೆ ಅವರು ನಿಂತಿದ್ದಾಗಲಂತು, ಸಂಜೆ ದೇವನಂತೆಯೇ ಕಾಣಿಸುತ್ತಿದ್ದರು. ಅವರೇ ಗೋಪಾಲಯ್ಯ, ದೇರಣ್ಣನ ಛತ್ರದ ಒಡೆಯರು. ಎಂದು ನನಗೆ ಅನಿಸಿತು. ಆ ವ್ಯಕ್ತಿಯ ನಿಡು ಕಾಯ, ಶಾಂತವೂ ಗಂಭೀರವೂ ಆದ ಮುಖಚರ್ಯೆಗಳನ್ನು ಕಂಡು 'ನಮಸ್ಕಾರ' ಎಂದು ಪ್ರತಿವಂದನೆ ಮಾಡಿದ್ದೂ ಆಯಿತು. ನಾನು ಚಾವಡಿಯನ್ನು ಸೇರುವುದರೊಳಗೆ ಅವಸರದಿಂದ ಒಂದು ಚಾಪೆಯನ್ನು ಹಾಸಿದ್ದಲ್ಲದೆ. "ಇವಳೇ, ಒಂದು ಚಂಬು ನೀರು ತಾ" ಎಂದು. "ಬನ್ನಿ, ಕುಳಿತುಕೊಳ್ಳಿ; ಬೇಡ ಮೊದಲು ಕಾಲು ತೊಳೆದಾಗಲಿ: ತುಂಬ ನಡೆದು ದಣಿದವರ ಹಾಗೆ ಕಾಣಿಸುತ್ತದೆ. ತೃಷೆಗೆ ಏನು ಮಾಡಿಸಲಿ?" ಎಂದು ಉಪಚರಿಸಿದರು. ಮನೆಯಾಕೆ ಸುಮಾರು ಐವತ್ತಕ್ಕೂ ಮೀರಿದ ಸುಮಂಗಲೆ. ಹೊಳೆಯುವ ಹಿತ್ತಾಳೆ ಬಿಂದಿಗೆಯಲ್ಲಿ ಬೆಚ್ಚಗಿನ ನೀರನ್ನು ತಂದಿರಿಸಿದಳು. ಹಾಗೆಯೇ ನಿಂತು ಕ್ಷಣಕಾಲ ನನ್ನನ್ನು ದುರದುರನೆ ನೋಡಿದಳು. ಏನೋ ಅರ್ಥವಾಗಿಯೂ ಆಗದವಳಂತೆ ನಿರಾಶೆಯ ನಿಟ್ಟುಸಿರೊಂದನ್ನು ಸುಯ್ದು, ಒಳಕ್ಕೆ ಹೋದಳು.

ಈ ನಡುವೆ ಗೋಪಾಲಯ್ಯನ ಮುಂದೆ ದೇರಣ್ಣ ಮಹಾ ಹುಮ್ಮಸದಿಂದ ನನ್ನ ಅವನ ಮುಲಾಖತಿನಿಂದ ತೊಡಗಿ, ಅಲ್ಲಿಗೆ ನಾವಿಬ್ಬರು ಬರುವ ತನಕ ನಡೆದ ಯಾವತ್ತು ವಿಷಯಗಳನ್ನು ವಿವರಿಸಿದನು. ಬಳಿಕ "ಇನ್ನು ನಿಮ್ಮ ಜವಾಬುದಾರಿ ಪಾಪ, ಆ ಬ್ರಾಹ್ಮಣರ ಹಸಿದ ಹೊಟ್ಟೆಯನ್ನು ತಂಪುಮಾಡಿ, ನೀವು ಪುಣ್ಯವನ್ನು ಕಟ್ಟಿಕೊಂಡರೆ ನಾನು ಕಟ್ಟಿಕೊಂಡ ಹಾಗೆಯೇ" ಎಂದ. ಅವರು "ಇಲ್ಲಿಲ್ಲ ದೇರಣ್ಣ, ಅದರಲ್ಲಿ ನಿನಗೆ ಅರವಾಸಿಯನ್ನಾದರೂ ಟ್ರಾನ್ಸ್‌ಫರ್ ಮಾಡಲಿಕ್ಕೆ ಹೇಳುತ್ತೇನೆ ದೇವರಿಗೆ" ಎಂದರು ನಗುತ್ತ. ನಾನು ಚಾವಡಿಯಿಂದಿಳಿದು, ಬಿಸಿ ನೀರಿನಿಂದ ಅಂಗಳದಲ್ಲಿಯೇ ಕಾಲು ತೊಳೆದೆ. ಬೆಚ್ಚಗಿನ ನೀರಿನ ಉಪಚಾರದಿಂದ ಕಾಲಿನ ದಣಿವು ಅರ್ಧಕ್ಕರ್ಧ ಅಲ್ಲೆ ಮಾಯವಾದಂತೆ ಕಾಣಿಸಿತು. ದೇರಣ್ಣ, ಚಾವಡಿಯಲ್ಲಿ ಗುರುತಿನ ತಾವಿಗೆ ಕೈಯಿಕ್ಕಿ, ಎಲೆ ಅಡಿಕೆಯ ತಾಂಬಾಣವನ್ನು ಎಳೆದು, ತಾಂಬೂಲ ಸೇವನೆಗೆ ತೊಡಗಿದ. ಗೋಪಾಲಯ್ಯ ನನ್ನನ್ನು ನೋಡಿ, ತಮಗೆ ತಾಂಬೂಲದ ಪರಿಪಾಠವಿದೆಯೆ?" ಎಂದು ಕೇಳಿದರು. ಆ ಮೇಲೆ "ನನಗೆ ರಾತ್ರಿ ಸ್ನಾನದ ಚಟವೊಂದಿದೆ. ತಕ್ಷಣ ಮಿಂದು ಬರಲೆ? ತಮಗೂ ಸ್ನಾನವಾಗಬೇಕಾದರೆ ಕಾಯಿಸಿದ ನೀರು ಉಂಟು; ನಡೆದ ದಣಿವು ಪರಿಹಾರವಾದೀತು" ಎಂದರು. ನಾನು ನನ್ನ ಅಂಗಿಯನ್ನು ಕಳಚಿ, ಗೋಡೆಯಲ್ಲಿದ್ದ ಗೂಟಕ್ಕೆ ಸಿಕ್ಕಿಸಿದೆ. ಮೈ ಬೆವರಿತ್ತು. ಆದರೆ ಅಂಗಿಯನ್ನು ತೆಗೆದುದರಿಂದ ಅಲ್ಲಿನ ಹವೆಗೆ ಚಳಿಯಾಗತೊಡಗಿತು. ಬಿಸಿನೀರ ಸ್ನಾನದಿಂದ ಮೈಗೆ ಹಿತವಾಗಬಹುದು ಎಂದು ತೋರಿದರೂ, ಅನಂತರವಾದರೂ ಬಿಸಿನೀರು ತಣಿಯದಿದ್ದೀತೆ- ಎಂಬ ಅಂಜಿಕೆಯಿಂದ "ಸ್ನಾನವೇನೂ ಬೇಕಿಲ್ಲ. ಮುಖ್ಯವಾಗಿ ಒಂದು ನಿದ್ದೆ ಆಗಬೇಕಿತ್ತು. ದಿಂಬು ಚಾಪೆಯನ್ನು ಕೊಟ್ಟುಬಿಟ್ಟರೆ ಬೆಳಗಿನ ತನಕ ಒರಗಿಬಿಡುತ್ತೇನೆ" ಎಂದೆ.

ಗೋಪಾಲಯ್ಯನವರು ನಕ್ಕರು. "ಹೂಂ, ಒಳ್ಳೆಯ ವ್ಯಾಪಾರ! ಪರಸ್ಥಳದಿಂದ ದಣಿದುಬಂದವರು

ಉಪವಾಸ ಮಲಗುವುದಾದರೆ, ನಮ್ಮ ಮನೆಗೇ ಬರಬೇಕೆಂದಿದೆಯೇನು? ಏನು ದೇರಣ್ಣ! ನೀವು ಕುಳಿತಿರಿ, ನಾನು ತಕ್ಷಣವೇ ಮಿಂದು ಬರುತ್ತೇನೆ. ಅಡುಗೆಯೆಲ್ಲ ತಯಾರಾಗಿದೆ: ನಿಮಗಾಗಿ ಏನು ಹೊಸ ಅಡುಗೆಯಾಗಬೇಕಿಲ್ಲ" ಎಂದು ಅವರು ಸ್ನಾನದ ಮನೆಗೆ ಹೋದರು. ಅವರ ಬೆಂಗಡೆಯಲ್ಲಿ ದೇರಣ್ಣನೂ ಹೊರಟ. ತಿರುಗೊಮ್ಮೆ ಗೋಪಾಲಯ್ಯ "ಯಾರು? ಏನು? ಎಲ್ಲಿಗೆ ಹೊರಟವರಂತೆ?" ಎಂದು ಕೇಳಿದರು. ನನಗೆ ಅಷ್ಟೇ ಗೊತ್ತು. ಅವರ ಮಾತು ಕೇಳಿಸುವಂತಿದ್ದರೂ ನನ್ನ ಕಿವಿ ಮನಗಳಿಗೆ ಕೇಳುವ ಶಕ್ತಿ ಉಳಿದಿರಲಿಲ್ಲ. ಆದರೂ ಹಾಸಿದ ಚಾಪೆಯಲ್ಲಿ ಕುಳಿತು. ಬಳಿಯ ಕಂಬಕ್ಕೆ ಒರಗಿದೆ. ಅಷ್ಟೇ ನನಗೆ ತಿಳಿದ ವಿಷಯ. ಮುಂದೇನಾಯಿತೋ ಯಾರು ಬಲ್ಲ? ಇನ್ನೊಮ್ಮೆ ನನಗೆ ಜ್ಞಾಪಕ ಬಂದುದೆಂದರೆ, ಯಾರೋ ಬಳಿಯಲ್ಲಿ ನಿಂತು- "ಪಾಪ, ನಡೆದು ಎಷ್ಟು ದಣಿದಿದ್ದಾರೆಯೋ! ಎಚ್ಚರ ಮಾಡಿದರೆ ಉಂಡಾದರೂ ಮಲಗಿಕೊಳ್ಳುತ್ತಿದ್ದರು" ಎಂದ ಮಾತು. ಇನ್ನೊಮ್ಮೆ "ನಮ್ಮ ಮಾಣಿಯದೇ ಪ್ರಾಯ ಅದೇ ರೂಪ" ಎಂದಂತೆಯೂ ಕೇಳಿಸಿತು.

ಅನಂತರ ನನ್ನ ಮೈಯನ್ನು ಅಲುಗಿಸಿ, ಮಾತನಾಡಿದರು ಗೋಪಾಲಯ್ಯನವರು. "ಬಾಳೆಯ ಎಲೆ ಹಾಕಿದೆ, ಊಟಕ್ಕೆ ಏಳುತ್ತೀರಾ" ಎಂದು ಕೇಳಿದರು. 'ಹಾಂ' ಎಂದು ದಿಗಿಲುಗೊಂಡು ಎಚ್ಚತ್ತೆ. ನಿದ್ರೆಯ ಅಮಲಿನಿಂದ ಅರಿವು ಬರಲು ಎರಡು ನಿಮಿಷಗಳಾದರೂ ಹಿಡಿದಿರಬೇಕು. "ಮಧ್ಯಾಹ್ನ ಎಲ್ಲಿಂದ ಹೊರಟಿರಿ? ಎಲ್ಲಿ ಊಟವಾಗಿತ್ತು?" ಎಂದು ಕೇಳಿದರು. "ಊಟ ಆಗಿರಲಿಲ್ಲ. ಹೊರಟದ್ದು ಸುಬ್ರಹ್ಮಣ್ಯದಿಂದ" ಎಂದೆ. "ಅಯ್ಯೋ, ಪಾಪವೇ" ಎಂದು ಬೇಗಬೇಗನೆ ನನ್ನನ್ನು ಊಟದ ಮನೆಗೆ ಕರೆದೊಯ್ದರು. ನನ್ನ ಬಳಿಯಲ್ಲಿ, ಮನೆಯಾಕೆ ತಂದಿರಿಸಿದ್ದ ನೀರು ಬರಿದಾಗಿತ್ತು. ಆದರೆ ಬೆಲ್ಲದ ತುಂಡುಗಳು ಬರಿದಾಗದೆ ಉಳಿದುದನ್ನು ಕಂಡು, "ಹೂಂ, ನಿದ್ರೆಯ ಭರದಲ್ಲಿ ಬಾಯಾರಿಕೆಯನ್ನೂ ಮರೆತುಬಿಟ್ಟಿರಿ" ಎಂದು, ನನ್ನ ಶರೀರಾಯಾಸಕ್ಕಾಗಿ ಇನ್ನಷ್ಟು ಕನಿಕರಗೊಂಡರು.

ಊಟದ ಪಡಸಾಲೆಗೆ ಹೊದೆವು. ಎರಡು ಮಣೆಗಳ ಮುಂದೆ ಎರಡು ಎಲೆಗಳನ್ನು ಹಾಕಿದ್ದರು. ಇಬ್ಬರೂ ಕುಳಿತೆವು. ಗೋಪಾಲಯ್ಯ "ಶಂಕರೀ, ಬೇಗ ಬೇಗನೆ ಬಡಿಸು, ನೋಡುವ. ಅವರಿಗೆ ಎಷ್ಟು ಹಸಿವೆ ಆಗಿದೆಯೋ ಏನೋ" ಎಂದರು. ನನ್ನ ಮುಖವನ್ನು ನೋಡಿ "ಬೇಗ ಬೇಗ ಬಡಿಸು- ಎಂದು ನಾನು ಅವಳಿಗೆ ಹೇಳಿದ್ದು. ನೀವು ಸಾವಕಾಶವಾಗಿಯೇ ಊಟ ಮಾಡಬೇಕು. ತಮಗೆ ತುಂಬ ಹಸಿವೆಯಾಗಿರಬೇಕೆಂದು ಹಾಗೆಂದೆ" ಎಂದರು ಆ ಊಟದ ನೆನಪು ನಿಜಕ್ಕೂ ನನಗೆ ಏನೇನೂ ಉಳಿಯಲಿಲ್ಲ. ಅವರು ಏನು ಬಡಿಸಿದರು, ಎಷ್ಟು ಬಾರಿ ಬಡಿಸಿದರು, ನಾವೇನನ್ನು ತಿಂದೆ- ಇವೆಲ್ಲ ಅಮಲಿನಲ್ಲೇ ನಡೆದುಹೋದ ಪ್ರಕರಣಗಳು. ನಾನು ಎಳೆಯನಾಗಿದ್ದಾಗ ಇದೇರೀತಿ ಮಾಡಿದ ಭೋಜನಗಳನ್ನು ನಿರಾಕರಿಸಿ, "ನಾನು ರಾತ್ರಿ ಉಂಡುದೇ ಇಲ್ಲ; ನನ್ನನ್ನು ಬಿಟ್ಟು ನೀವೆಲ್ಲರೂ ಊಟ ಮಾಡಿದಿರಿ" ಎಂದುದುಂಟು. ಪುಣ್ಯವಶಾತ್ ಆ ದಿನ ಅಂಥ ಸ್ಥಿತಿಯಲ್ಲಿರದಿದ್ದುದೇ ದೊಡ್ಡದು.

ಊಟವನ್ನು ಮುಗಿಸಿ ಹೊರಕ್ಕೆ ಬಂದೆವು. ನನಗೆ ಸಮನಾಗಿ ಎಚ್ಚರ ಬಂದುದೂ, ನಾನು ಪ್ರಜ್ಞೆಯಿಂದ ಅವರೊಡನೆ ಮಾತನಾಡಿದುದೂ, ಅವರು ಕೊಟ್ಟ ಚುಟುಕು ನಸ್ಯವನ್ನು ಸೇವಿಸಿದ ಬಳಿಕವೇ. "ನಸ್ಯದ ಅಭ್ಯಾಸವಿದೆಯಾ?" ಎಂದು ನನ್ನನ್ನು ಕೇಳಿದರು. "ಇದೆ ಎಂದರೆ ಇದೆ. ಇಲ್ಲ ಎಂದರೆ ಇಲ್ಲ" ಎಂದಂದು. ಅಳತೆಮೀರಿ ಒಂದು ಚಿಮಿಟಿ ನಸ್ಯವನ್ನು, ಅವರು ನನ್ನ ಮುಂದೆ ಬಿಡಿಸಿ ಹಿಡಿದ ಬಾಳೆ ಪೊಟ್ಟಣದಿಂದ ಎತ್ತಿ, ಮೂಗಿಗೆ ಏರಿಸಿದೆ. ಏರಿಸಿದ್ದೇ ತಡ- ತಿರುಮೇ ಹೋಯಿತು. ಅಷ್ಟದಿಕ್ಕುಗಳೂ ಏಕಕಾಲದಲ್ಲಿ ಕಾಣಿಸಿದವು. ಶೀನಲು ತೆಗೆದ ಬಾಯಿಯ ನರಗಳು ಬಿಗಿದು, ದವಡೆಗಳು ತೆರೆದವು. ಅನಂತರ ಒಮ್ಮೆಗೇ ಬಿರುಗಾಳಿಯನ್ನು ಹೊಮ್ಮಿಸುತ್ತ, ಭರದಿಂದ 'ಹಾಕ್ಷಿ'ಯನ್ನು ಸುರಿದೆ. ಮುಂದೆ 'ಶೀನಿನ ಮೇಲೆ ಶೀನಿನ' ಧಾಳಿಯಾಯಿತು. ಅದನ್ನು ಕಂಡು ಗೋಪಾಲಯ್ಯನವರಿಗೂ ಗಾಬರಿಯಾಯಿತು. "ಏನೇನು! ನಸ್ಯದ ಅಭ್ಯಾಸ ಇಲ್ಲವೇ? ಕಾರ ಹೆಚ್ಚಾಯಿತೇ?" ಎಂದು ಕೇಳಿದರು.

ನನಗೆ ಚೆನ್ನಾಗಿ ತಿಳಿವು ಬಂದು, ನಿದ್ರೆಯ ಕೊಸರು ಸಹ ಕಣ್ಮರೆಯಾಗಿ, ನಾನು ಮೂಗನ್ನೆ ಹಿಂಡುತ್ತ ಕುಳಿತಿದ್ದ ನನ್ನನ್ನು ನೋಡಿ ಗೋಪಾಲಯ್ಯ ನಗುತ್ತ "ನೋಡಿ, ನನಗೆ ಅಂಗಡಿಯ ನಸ್ಯ ಹಿಡಿಸುವುದಿಲ್ಲ;

ಫರಮಾಸಿ ಹೊಗೆಸೊಪ್ಪು ತಂದು, ಮನೆಯಲ್ಲೇ ಪುಡಿ ತಯಾರಿಸುವವ ನಾನು:
ಅದು ಕಾರವಾಗಿ ಕಂಡರೂ, ಒಳ್ಳೆಯ ಹಸುವಿನ ತುಪ್ಪ ಅದಕ್ಕೆ ಬೀಳುವುದರಿಂದ ಕಣ್ಣಿಗೆ ಯಾವ ಕೆಡಕೂ ಇಲ್ಲ'' ಎಂದು ಸಂಭಾಷಣೆ ತೊಡಗಿದರು. "ಹೋಗಲಿ, ಈಗ ನಿಮ್ಮ ಊರು ಮನೆಗಳ ವಿಚಾರವನ್ನು ಹೇಳಿ ನೋಡುವ. ಯಾರಲ್ಲಿಗೆ ಹೋದದ್ದು? ಮೋಟರು ಇಲ್ಲದ ವೇಳೆಯಲ್ಲಿ ನಮ್ಮ ಸುಬ್ರಹ್ಮಣ್ಯವನ್ನು ಏನೆಂದು ಮೆಚ್ಚಿದಿರಿ? ಇದು ಷಷ್ಠಿಯ (ಷಷ್ಠಿಗೆ ಸುಬ್ರಹ್ಮಣ್ಯದಲ್ಲಿ ಹೆಸರಾಂತ ಉತ್ಸವವಿದೆ. ಅದಕ್ಕಿಂತ ಒಂದು ತಿಂಗಳಿಗೆ ಮೊದಲು ಜಾನುವಾರು ಸಂತೆಯಿದೆ) ದಿನವೂ ಅಲ್ಲ, ಜಾನುವಾರ ಸಂತೆಯ ಸಮಯವೂ ಅಲ್ಲ'' ಎಂದರು. ನಾನು ಒಂದೊಂದಾಗಿ ಅವರ ಪ್ರಶ್ನೆಯನ್ನು ಉತ್ತರಿಸುತ್ತಲೇ ಹೋದೆ. ಅವರೂ ನನ್ನ ಮಾತನ್ನು ಆಸಕ್ತಿಯಿಂದ ಕೇಳುತ್ತಿದ್ದರು. ನಡುವೆ ನಡುವೆ "ಏನು? ನಿದ್ರೆ ಬಂದರೆ ದಾಕ್ಷಿಣ್ಯಬೇಡ ಹಾಸುಗೆ ಬಿಡಿಸಿ ಕೊಡುತ್ತೇನೆ. ನನಗೆ ತಮಾಷೆ, ನಿಮಗೆ ಪ್ರಾಣಸಂಕಟವಾಗಬಾರದಲ್ಲ'' ಎನ್ನುತ್ತಿದ್ದರು. "ನಿದ್ರೆಯ ಬೇರೆಲ್ಲ ನಿಮ್ಮ ಈ ನಸ್ಯದಿಂದ ಕಿತ್ತುಹೋಯಿತು'' ಎಂದೆ. ಕೇಳಿ, ಅವರು ನಕ್ಕರು. ಅಲ್ಲಿಯೇ ಅಂಗಳದ ಮಗ್ಗುಲಿಗೆ ಹರಿಯುತ್ತಿದ್ದ ಕಾಲುವೆ ನೀರೂ ಗಹಗಹಿಸುತ್ತಿತ್ತು.

ಎದುರಿಗೆ ಎಲೆ ಅಡಿಕೆಯ ತಾಟನ್ನು ಇರಿಸಿ 'ತಾಂಬೂಲವಾಗಲಿ' ಎಂದು ಮನೆಯಾಕೆಯನ್ನು ಉದ್ದೇಶಿಸಿ 'ಶಂಕರೀ' ಎಂದು ಕರೆದರು. ಆಕೆಯೂ ಊಟ ಮುಗಿಸಿಕೊಂಡು ಚಾವಡಿಗೆ ಬಂದಳು. ಗಂಡನಿಗೆ ಸಮೀಪದಲ್ಲಿಯೇ ಕಾಲುಚಾಚಿ ಕುಳಿತಳು. ಎದುರಿನ ಚಿಮಿಣಿದೀಪದಲ್ಲಿ ಆಕೆಯ ಮುಖದ ಸುಕ್ಕುಗಳು ಚೆನ್ನಾಗಿ ಕಾಣಿಸುತ್ತಿದ್ದವು. ಹಣೆಯಲ್ಲಿ ಕಿರಿದಾದ ಕುಂಕುಮದ ಬೊಟ್ಟಿತ್ತು. ಕಿವಿಗೆ ತೂಗುವ ಬಂಗಾರದ ಓಲೆಗಳು. ಕರಿಮಣಿ ಸರಕ್ಕೆ ಮೇಲುದೆಯನ್ನು ಸಿಕ್ಕಿಸಿಕೊಂಡು, ಅವಳು ಕುಳಿತ ಬಗೆಯಿಂದ, ಏನಾದರೂ, ಗಂಡನಿಗಿಂತ ಮತ್ತೂ ಹತ್ತು ವರ್ಷ ಹೆಚ್ಚಿನವಳಾಗಿ ಕಾಣಿಸುತ್ತಿದ್ದಳು. ಗೋಪಾಲಯ್ಯ ಮಡದಿಯೊಡನೆ ತೋರಿಸಿದ ಸಯವೂ ಅದೇ ಮಾದರಿಯದಿತ್ತು. ದಂಪತಿಗಳಿರ್ವರೂ ಜೀವನ ಸಂಗ್ರಾಮದಲ್ಲಿ ಸಮನಾಗಿ ದುಡಿದವರೆಂದು ಕಂಡರೂ, ಆ ಶ್ರಮವು ಹೆಂಡತಿಯ ಮುಖದ ಮೇಲೆ ಮೂಡಿದಷ್ಟು ಕಟುವಾಗಿ, ಗಂಡನ ಮುಖದಲ್ಲಾಗಲಿ ನಡೆನುಡಿಗಳಲ್ಲಾಗಲಿ ಕಾಣುತ್ತಿರಲಿಲ್ಲ. ಅವಳು ಬಂದು ಕುಳಿತ ಸಂಕೇತವನ್ನು ಅರಿತಂತೆ, ಗೋಪಾಲಯ್ಯ ಎಲೆ ಅಡಕೆಯ ಹರಿವಾಣವನ್ನು ಅವಳ ಎಟುಕಿಗೆ ತಳ್ಳಿ, ಒಂದೆರಡು ಅಡಿಕೆ ಹೋಳುಗಳನ್ನು ಕಲ್ಲುಗಳಲ್ಲಿ ಗುದ್ದಿ 'ಇಕೋ' ಎಂದರು. ಗೋಪಾಲಯ್ಯನ ಹಲ್ಲುಗಳು ಹಸಿ ಅಡಕೆಯ ಹೋಳುಗಳನ್ನು ಕಟಕಟ ಅಗೆಯುವಷ್ಟು ಬಲವಾಗಿದ್ದರೂ, ಅವರ ಭಾರ್ಯೆಗೆ ಅಂಥ ಶಕ್ತಿಯಿದ್ದಿಲ್ಲವೆಂಬುದು ಸ್ಪಷ್ಟ. ಶಂಕರಮ್ಮ ಅಡಿಕೆಹೋಳುಗಳನ್ನು ಮೆಲ್ಲುತ್ತ "ಇವರಿಗೆಲ್ಲಿಯಂತೆ?'' ಎಂದು ಕೇಳಿದಳು. ಈ ದಂಪತಿಗಳಲ್ಲಾದ ಸಂಭಾಷಣೆಯಲ್ಲಾಗಲಿ ಮುಂದಣ ಸಂಭಾಷಣೆಯಲ್ಲಾಗಲಿ ಅವರ ಮಾತಿನಲ್ಲೇ ನಾನು ಹೇಳಲಾರೆ. ನನಗೆ 'ಅದು ಕನ್ನಡವೇ!' ಎನಿಸುವಷ್ಟು ವಿಚಿತ್ರವಾಗಿತ್ತು ಸ್ವತಃ ನನ್ನ ಮನೆಯ ಮಾತೂ ಕನ್ನಡದ್ದೊಂದು ಅಪಭ್ರಂಶವೇ. ಅವರು ಹವ್ಯಕರು. ತಮಗೆ ಸಹಜವಾದ ಹೈಗನುಡಿಯಲ್ಲೇ ಸಲ್ಲಪಿಸುತ್ತಿದ್ದರು. ಗೋಪಾಲಯ್ಯ ನನ್ನೊಡನೆ ಮಾತನಾಡುವಾಗ ಕನ್ನಡವನ್ನೂ, ಮಡದಿಯೊಡನೆ ಹೈಗನುಡಿಯನ್ನೂ ಸರಾಗವಾಗಿ ಹೇಳುತ್ತಿದ್ದರು. ತುಸು ಹೊತ್ತಿನಲ್ಲಿ ನನಗೆ ಅವರ ಮಾತಿನ ಸರಣಿಯ ಪರಿಚಯವಾಯಿತು.

ಶಂಕರಿ ಒಂದೆರಡು ಕ್ಷಣಕಾಲ ತಾಂಬೂಲಚರ್ವಣ ನಡೆಯಿಸಿ, "ನಮ್ಮ ಶಂಭುವಿಗೂ ಇವರದ್ದೇ ಪ್ರಾಯ, ಇದೇ ಬಣ್ಣ, ಇದೇ ರೂಪ-ಅಲ್ಲವೇ?'' ಎಂದಳು. ಇನ್ನೂ ಒಂದೆರಡು ನಿಮಿಷ ಕಳೆಯಲು. "ಏನೋ ಋಣಬೇಕಲ್ಲ'' ಎಂದಳು. ಆ ಮಾತಿನ ಜತೆಯಲ್ಲಿ ಕಣ್ಣಿನ ಕುಡಿಗಳಿಂದ ನೀರು ಮಿನುಗಿದ್ದು ಕಾಣಿಸಿತು. ಆಕೆ ನನ್ನನ್ನು ಮೊದಲನೆಯ ಬಾರಿ ದಿಟ್ಟಿಸಿ ನೋಡಿದ ನೆನಪು ನನಗಾಯಿತು. ಆಗಲೆ ನನಗೆ 'ಯಾವನೋ ಆತ್ಮೀಯ ವ್ಯಕ್ತಿಯ ನೆನಪು ನನ್ನ ನೋಟದಿಂದ ಆಕೆಯ ಮನಸ್ಸಿಗೆ ಹೊಳೆದಿರಬೇಕು' ಎನಿಸಿತ್ತು. 'ಏನು ಸಂಗತಿ?' ಎಂದು ನಾನಾಗಿ ವಿಚಾರಿಸುವ ಬಯಕೆ ಹೊಂದುವುದರೊಳಗೆ, ಪರಕೀಯನ ಮುಂದೆ ಕಣ್ಣೀರು ಮಿಡಿದ ಆಕೆಯ ಮಂಕಿಗಾಗಿ ಗೋಪಾಲಯ್ಯ, "ಶಂಕರಿ, ನಿನಗೆ ವರ್ಷವಾದದ್ದು ಮಣ್ಣಿಗೆ. ಅವನು ಬರುವ ಮಗನಾದರೆ ಎಂದೋ ಬರುತ್ತಿದ್ದ. ನಮ್ಮ ಅಷ್ಟೆಲ್ಲ

ಪ್ರಯತ್ನ ವ್ಯರ್ಥವಾಗುತಿತ್ತೆ? ನಮ್ಮ 'ಲಕ್ಷ್ಮಿ' ದನಕ್ಕೇನಾಯಿತು ನಿನ್ನೆ? ಅದನ್ನು ಹುಲಿ ಹಿಡಿದಂತೆ, ಇವನನ್ನೂ ಯಾವುದೋ ಹೆಣ್ಣು ಹುಲಿ ಹಿಡಿದಿರಬೇಕು' ಎಂದರು. ಈ ಮಾತು ಆಕೆಯ ದುಃಖಕ್ಕೆ ಸಮಾಧಾನವನ್ನು ಉಂಟುಮಾಡುವ ಬದಲು, ಅದನ್ನು ಇಮ್ಮಡಿಸಿತು. ಅಗಲಿದ ಮಗನ ಸಲುವಾಗಿ, ಹುಲಿ ಹಿಡಿದ ದನದ ಉಪಮೆ ಕೊಟ್ಟುದು, ಆ ತಾಯಿಯ ಕರುಳಿಗೆ ಒಗ್ಗಲಿಲ್ಲ. "ಯಾಕೆ ಅಮಂಗಲ ಆಡುತ್ತೀರಿ? ನನ್ನ ಮಗ ಇನ್ನಾದರೂ ಬಂದಾನು. ಅವನಿಗೆ ಅಪ್ಪ ಅಬ್ಬೆಯರ ಹಂಬಲಾದೀತು. ದೇವರ ದಯೆಯಿಂದ ಅವನನ್ನು ಯಾವ ಹುಲಿಯೂ ಹಿಡಿದಿರಲಿಕ್ಕಿಲ್ಲ" ಎಂದಳು.

ಆಕೆಯ ಅತಿ ಮಧುರ ಜೀವನವನ್ನು ಬಲ್ಲವರಾದ ಭಟ್ಟರು "ಆಗಲಿ, ನೀನೀಗ ಒಳಗೆ ಹೋಗಿ ಒಲೆಯ ದಂಡೆ ಶುದ್ಧ ಮಾಡಿ, ಮಲಗಿಕೋ, ನಾವು ಇಬ್ಬರೂ ಚಾವಡಿಯಲ್ಲಿಯೇ ಒರಗುತ್ತೇವೆ. ನೋಡು, ಒಂದು ಜಮಖಾನೆ, ಒಂದು ಕಂಬಳಿಯನ್ನು ಕೊಡು" ಎಂದು ನುಡಿದು, ಆಕೆಯ ಗಮನವನ್ನು ಬೇರೆ ಕಡೆಗೆ ತಿರುಗಿಸಿದರು. ಆಕೆಗೆ ಮುಸುರೆ, ಹೆಪ್ಪು, ಒಲೆಯ ದಂಡೆಗಳ ನೆನಪಾಗಿ ಒಳಕ್ಕೆ ಸರಿದಳು. ಆ ಕೆಲಸ ತೊಡಗುವ ಮುನ್ನ- ಕಂಬಳಿ, ಜಮಖಾನೆ, ಚಾಪೆಗಳನ್ನು ಹೊರಕ್ಕೆ ತಂದಿರಿಸಿ ಹೋದರು. ಗೋಪಾಲಯ್ಯ ಅವನ್ನು ಕೊಡವಿ, ನನಗಾಗಿ ಹಾಸಿ, ಒಂದು ದಿಂಬನ್ನು ಇರಿಸಿ, "ನಿಮಗೆ ರಾಶಿ ದಣಿವಾಗಿರಬೇಕು. ಸ್ವಸ್ಥವಾಗಿ ಮಲಗಿಕೊಳ್ಳಿ, ಬೆಳಗಿನ ಜಾವಕ್ಕೆ ಚಳಿಯಾದೀತು. ಈ ಕಂಬಳಿಯೂ ಹತ್ತಿರವಿರಲಿ" ಎಂದರು. ನನಗೆ ಆಗಲೇ ಚಳಿಯ ನಡುಕು ಹತ್ತಿತ್ತು. ನನ್ನಿಂದ ಎರಡು ಮಾರು ದೂರದಲ್ಲಿ ಅವರೂ ತಮ್ಮ ಚಾಪೆ ಬಿಡಿಸಿದರು. ಗೋಪಾಲಯ್ಯ-ಉರಿಯುವ ದೀಪವನ್ನು ಕಂಡು, "ಈ ದೀಪ ಇದ್ದರೆ ತೊಂದರೆಯೇ?" ಎಂದು ಕೇಳಿದರು. ನನ್ನಿಂದ ಪ್ರತ್ಯುತ್ತರ ಬರುವ ಮೊದಲೇ ಅದನ್ನು ಒಳ ಮನೆಯಲ್ಲಿರಿಸಿ ಬಂದರು. ತಾವು ಚಾಪೆಯ ಮೇಲೆ ಮೈನೀಡುತ್ತ "ಶಂಕರೀ, ನಾನು ಮಲಗಿಕೊಳ್ಳುತ್ತೇನೆ, ಪುಡಿ ಕಟ್ಟು ನನ್ನ ತಲೆ ದೆಸೆಯಲ್ಲಿದೆ" ಎಂದು ಹೇಳಿ, ವಿರಮಿಸಿದರು.

ನಾನು ಮಲಗಿಕೊಂಡುದೇನೋ ನಿಜ. ಆದರೆ ನನಗೆ ನಸ್ಯದಿಂದ ಉಂಟಾದ ಜಾಗರಣೆ ತಿರುಗಿ

ಮೌಲ್ಯ

ಈತ
ಚುನಾವಣೆಯಲ್ಲಿ ಗೆದ್ದರೆ
ಸಂಸತ್ತಿನಲ್ಲಿ
ಭಾರೀ ಬೆಲೆಬಾಳುವ ವ್ಯಕ್ತಿ-
ಯಾಕೆಂದರೆ
ಇವನು ಸ್ವತಂತ್ರ ಅಭ್ಯರ್ಥಿ-



-ಅಮೃತೇಶ್, ತಂಡರ

ಸುಲಭದಲ್ಲಿ ಕೊನೆಗಾಣುವಂತಿರಲಿಲ್ಲ. ನನ್ನ ಮನವೆಲ್ಲ ಆ ಮುತ್ತೈದೆಯ ಮನಸ್ಸನ್ನು ಕೊರೆಯುತ್ತಾ ಇದ್ದುದೇನು ಎಂಬ ಊಹಾ ರಾಜ್ಯಕ್ಕೆ ಸರಿಯಿತು. ಅದೆಷ್ಟು ತೀವ್ರವಾಗಿರಬಹುದೆಂಬುದು ಅವರ ಮೈಮನಗಳಲ್ಲಿ ಹೊಮ್ಮುವಂತಿತ್ತು. ಆದರೂ ಅದರ ಸ್ಪಷ್ಟ ಚಿತ್ರ ಪರಕೀಯನಾದ ನನಗೆ ಆಗುವ ಬಗೆ ಹೇಗೆ? ಆ ಮನೆಯಲ್ಲಿ ಯಾರ್‍ಯಾರು ಇದ್ದಿರಬಹುದು? ದೇರಣ್ಣನೂ ಅಂದಿದ್ದ. ಈಗ ನಾನೂ ಕಂಡಿದ್ದೇನೆ- ಗಂಡಹೆಂಡಿರಿಬ್ಬರದೇ ಗುಡಿಸಲು ಅದೆಂದು. ನಾನು ಹಾಯ್ದು ಬಂದಿದ್ದ ಅಡಿಕೆಯ ತೋಟ ಹಿರಿದಾಗಿಯೇ ಕಾಣಿಸಿತ್ತು. ಆದರೆ ಮನೆಯ ವಠಾರದಲ್ಲಿ ಮಕ್ಕಳ ದನಿಯನ್ನು ಕೇಳಿರಲಿಲ್ಲ. ಅವರ ಮಾತುಗಳಲ್ಲಿ ಮೂಡಿದ ಮಗನೊಬ್ಬನ ಬಿಂಬವನ್ನು ಬಿಟ್ಟು, ಅಲ್ಲಿ ಇತರ ಮಾನವ ರೂಪಗಳು ಮೂಡುವಂತಿರಲಿಲ್ಲ. ಗಂಡಹೆಂಡಿರಿಬ್ಬರೇ ರಾಮನಿಗಾಗಿ ಕಾದು ಕುಳಿತ ಶಬರಿಯಂತೆ, ಬಾರದ ಮಗನೊಬ್ಬನ ಸಲುವಾಗಿ ತಪಿಸುತ್ತಿರುವರೆಂಬುದು, ಅವರ ಮಾತಿನಿಂದ ತೋರುತ್ತಿತ್ತು. ಆದರೆ ಮುಪ್ಪಿನ ಹಿರಿಯರನ್ನು ಇಂಥ ಧ್ಯಾನದಲ್ಲಿ ಕೆಡವಿ ಕಣ್ಮರೆಯಾದ ಆ ಮಗನಾದರೂ ಎಂಥವನಿರಬೇಡ? ಅವನು ದುಶ್ಶೀಲನೇ? ನಿರ್ದಯನೇ? ವ್ಯಸನಿಯೇ- ಹೀಗೆ ನನ್ನ ಅನುಮಾನಗಳು ಒಂದನ್ನೊಂದು ಹಿಂಬಾಲಿಸುವಂತಾಯಿತು. ಆದರೆ ಅವರೇ ಮನಸ್ಸಿನಿಂದ ಮರೆಯಿಸಲು ಯತ್ನಿಸುತ್ತಿದ್ದ ಆ ವಿಚಾರವನ್ನು, ನಾನು ಅವರ ನೆನಪಿಗೆ ತಂದುಕೊಟ್ಟು, ನನ್ನ ಸುದ್ದಿಯ ಹಸಿವನ್ನು ಹಿಂಗಿಸಿಕೊಳ್ಳಬೇಕೆ? ಅದು ಒಪ್ಪಿದ ರೀತಿ ಎನಿಸಲಿಲ್ಲ.

ಬೇಡವೆಂದರೂ ನನಗೆ ನಿದ್ರೆಬರಲೊಲ್ಲದು. ನನ್ನ ಶೀಲವೇ ಅಂತಹದು. ನಿದ್ರೆ ಮಾಡುವುದರಲ್ಲಿ ನಾನು ನಿಸ್ಸೀಮನಾದರೂ, ಒಮ್ಮೆ ಒಂದು ಯೋಚನೆ ಬೆನ್ನು ಹತ್ತಿತೆಂದರೆ, ನಾನೂ ಅದರ ಬೆನ್ನು ಹತ್ತಿ, ಕೊನೆಗೆ ತನ್ನ ಬಾಲದ ಮೇಲಿನ ನೊಣ ಕಚ್ಚುವ ನಾಯಿಯಂತಾಗುವುದು ನನ್ನ ಹಣೆಯ ಬರಹವಾಗಿತ್ತು. ಇಂತಹ ಸ್ಥಿತಿಯಲ್ಲಿ ಸುಮ್ಮನೆ ಕುಳಿತಿರಲಾರದೆ, ಮಾತಿಗೊಂದು ನೆಪ ಸಿಕ್ಕಿದರೆ, ಗೋಪಾಲಯ್ಯನವರನ್ನು ಕೇಳಿಯೇ ಬಿಡಬಹುದಲ್ಲ- ಎಂದು ಹಂಬಲಿಸುತ್ತಿದ್ದೆ.

ಶಂಕರಮ್ಮ ಒಳಗಿಂದ ಏನೇನೋ ಹಾಡನ್ನು ಹಾಡುತ್ತ, ತನ್ನ ಕೆಲಸ ನಡೆಸುತ್ತಿದ್ದಳು. ಕೊನೆಗೆ 'ಉಸ್ಸಮ್ಮ' ಎಂದು ಉಸಿರುಗರೆದುದೂ ಕೇಳಿಸಿತು. ಇದು ಅವಳ ಕೆಲಸ ಮುಕ್ತಾಯವಾದ ಸಂಕೇತವಾಗಿದ್ದಿರಬೇಕು. ಅವಳೂ ಹೊರಕ್ಕೆ ಬಂದಳು. ಗಂಡನ ಬಳಿಗೆ ಬಂದು ಅವರ ತಲೆದಿಂಬಿನ ಬಳಿ ಕೈಯಾಡಿಸಿದಳು. ನಸ್ಯವನ್ನು ಹುಡುಕಿದುದಿರಬೇಕು. ಅದನ್ನು ಸೇವಿಸಿದ ಸದ್ದೂ ಕೇಳಿಸಿತು. ಅಲ್ಲಿಂದ "ಅವರಿಗೆ ಯಾವ ಊರು? ಎಲ್ಲಿಗೆ ಬಂದದ್ದಂತೆ? ಏನು ಕೆಲಸ? ನಡೆದು ನಡೆದು ಎಷ್ಟು ಆಯಾಸವಾಗಿತ್ತೋ ಏನೋ?" ಎಂದು ಒಮ್ಮೆಗೇ ನಾಲ್ಕಾರು ಪ್ರಶ್ನೆಗಳನ್ನು ಕೇಳಿದಳು.

ಗೋಪಾಲಯ್ಯನವರಿಗೂ ಎಚ್ಚರವಿದ್ದಿತು. ಅವರು ಮೆಲ್ಲಗೆ ಒಳದನಿಯಿಂದ "ಸ್ವಲ್ಪ ಮೆಲ್ಲಗೆ ಮಾತಾಡು. ಅವರಿಗೆ ನಿದ್ರೆ ಬಂದಿದೆ. ಎಚ್ಚರವಾಗಬಾರದಲ್ಲ" ಎಂದು, ಹೆಂಡತಿಯು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಸಲಿಸುತ್ತ ಹೋದರು. "ಯಾರೋ ಬ್ರಾಹ್ಮಣರಂತೆ. ಊರು ಪುತ್ತೂರಂತೆ. ಸುಬ್ರಹ್ಮಣ್ಯಕ್ಕೆ ಏನೋ ಕೆಲಸದ ಮೇಲೆ ಹೋಗಿದ್ದರಂತೆ. ಹಿಂದಿರುಗುವಾಗ ಗೊತ್ತಿಲ್ಲದೆ, ಪಂಜದ ರಸ್ತೆ ಹಿಡಿಯುವ ಬದಲು, ಗುತ್ತಿಗಾರು ರಸ್ತೆ ಹಿಡಿದರಂತೆ. ತುಂಬ ಸುತ್ತಿ, ಸುತ್ತಿ ದಣಿದ ಹಾಗಿದೆ; ಹಾಗಾಗಿ ನಾನು ಹೆಚ್ಚಿಗೆ ಅವರನ್ನು ಮಾತಾಡಿಸಲು ಹೋಗಲಿಲ್ಲ."

"ಈಗೀಗ ನಮ್ಮ ಹಳ್ಳಿಗೇ ಆಗಲಿ, ನಮ್ಮ ಮನೆಗೇ ಆಗಲಿ, ಹೆಚ್ಚಾಗಿ ಪರವೂರಿನವರು ಬರುವುದು ಕಡಿಮೆಯಲ್ಲವೇ?"

"ಹೌದು, ಯಾರು ಬರಬೇಕು? ಇದೇನು ರಾಜಮಾರ್ಗವೇ? ಹಿಂದಿನ ದಿನಗಳಲ್ಲಾದರೆ ಗಾಡಿ ಹಾದಿ, ಕಾಲುದಾರಿಯೆಂದು ಜನರು ಅಲ್ಲಲ್ಲಿ ನಿಂತು, ಹಳ್ಳಿಯ ಹಾದಿಯನ್ನು ಹಿಡಿದು ಹೋಗುವಾಗ, ಒಬ್ಬರಲ್ಲ ಒಬ್ಬರು ಮನೆಗೆ ಬರುತ್ತಿದ್ದರು. ಈಗ ಯಾರು ಹಾಗೆ ತಿರುಗಾಡುವರು ಏನಿಲ್ಲವಾದರೆ ಸೈಕಲ್ಲು ಮೆಟ್ಟಿಕೊಂಡು ಕ್ಷಣಕ್ಕೆ ಮುಂದಕ್ಕೆ ಹೋಗಿಬಿಡುತ್ತಾರೆ.

"ಅದೆಲ್ಲ ಯಾಕೆ? ಕಳೆದ ವರ್ಷ ಊರಿಗೆ ಬಂದ ಕೆಲಸದ ಆಳುಗಳು ಈ ವರ್ಷ ಬರುವುದು ಕಷ್ಟ. ಈ ವರ್ಷ ಬಂದವರು ಮುಂದಿಗೆ ಬರುತ್ತಾರೆಂಬ ಧೈರ್ಯವಿಲ್ಲ. ಈ ಜ್ವರದ ಕೊಂಪೆಗೆ ಮರುಳಾಗಿ ಯಾರು ಬರಬೇಕು ಹೇಳು! ಯಾರು ಬರುವುದಾದರೂ, ಹೀಗೆ ಹಾಗೆ ಹಾದಿ ತಪ್ಪಿ ಬರಬೇಕೇ ಹೊರತು

ಅದೂ ನಮ್ಮ ಕೆಳ ಬೈಲಿನ ಸಂದಿಗೆ ಬರಬೇಕಾದರೆ? ಕಾಟು ಮೂಲೆಯಿಂದ ನಾರಾಯಣ ಆಳುಗಳು, ಇಲ್ಲವಾದರೆ ಹೊಗೆಸೊಪ್ಪಿನ ತುಂಡಿಗಾಗಿ ನಮ್ಮ ದೇರಣ್ಣ- ಇಷ್ಟೇ ಮಂದಿ. ಒಮ್ಮೆ ಗಂಡಸರ ಜಾತಿಯಾದರೂ ಅಪ್ಪಿ ತಪ್ಪಿ ಬರುವುದು ಉಂಟು, ಆದರೆ ಮಾತ್ರ, ಹೆಂಗಸರು ಹುಳು ಒಂದೇ ಒಂದು ಸುಳಿಯುವ ಹಾಗಿಲ್ಲ.''

ಅವರ ಮಾತಿನೊಡನೆ ನನ್ನ ಧ್ವನಿಯನ್ನು ಸೇರಿಸಲು ಇದು ತಕ್ಕ ವೇಳೆಯೆಂಬುದನ್ನು ಅರಿತು, ನಾನು ''ನೀವು ಇದೇ ಊರಿನಲ್ಲಿ ಹುಟ್ಟಿ ಬೆಳೆದವರಲ್ಲವೇ'' ಎಂದು ಕೇಳಿದೆ.

''ಹೋ, ನಮ್ಮ ಬಾಯಿಯ ಅಬ್ಬರಕ್ಕೆ ನಿಮಗೆ ಎಚ್ಚರವೂ ಆಗಿಬಿಟ್ಟಿತೇನು? ನೋಡಿದೆಯ ಶಂಕರಿ, ನಿನಗೆ ಬಾಯಿ ಸಣ್ಣದು ಮಾಡು ಅಂದರೆ, ನೀನು ಕೇಳಬೇಕೆ? ನಿನ್ನ ಗಂಟಲು ಅಂದರೆ ದೇವರ ಕೋಣೆಯ ಶಂಖ.''

ತನ್ನ ಮೆಲುಗೊರಳಿಗಾಗಿ ಗಂಡನು ಸಲ್ಲಿಸಿದ ಬಿರುದನ್ನು ಸ್ಮರಿಸಿ ಆಕೆ ನಕ್ಕಳು; ''ಹೌದು, ನಾನು ಮಾತನಾಡಿದ್ದು ಸ್ವಲ್ಪ ಗಟ್ಟಿಯಾಯಿತು, ಅಲ್ಲವೇ'' ಎಂದಳು.

ಅವರ ಸಮಾಧಾನಕ್ಕೂ ನನ್ನ ಕುತೂಹಲಕ್ಕೂ ಸಮನಾಗುವಂತೆ ನಾನೆಂದೆ...

''ಏನಾಯಿತೀಗ? ಊಟ ಮಾಡುವ ಮೊದಲೇ ನನ್ನ ನಿದ್ರೆ ಆಗಿ ಹೋಗಿತ್ತು. ಈಗಂತು ಕಣ್ಣು ಬಾಡುವುದಿಲ್ಲ. ಅಲ್ಲದೆ, ನಿಮ್ಮ ಈ ಊರಿಗೆ ನಾನು ತೀರ ಹೊಸಬ. ರಸ್ತೆಯನ್ನು ಬಿಟ್ಟು ಇಷ್ಟು ದೂರದಲ್ಲಿರುವ ಈ ಕಗ್ಗಾಡಿನ ಸಂದಿನಲ್ಲಿ ನೀವೆಲ್ಲ ಮನೆಮಾಡಿಕೊಂಡಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತಿದೆ. ಇಲ್ಲಿ ಹರಿದಾರಿಗೊಂದು ಒಕ್ಕಲು ಮನೆ ಇದೆಯೋ ಇಲ್ಲವೋ! ಅಲ್ಲಿ, ಇಲ್ಲಿ ಹುಲಿಯ ಉಪದ್ರವ, ಕಾಡಾನೆಗಳ ಸಂಚಾರ ಇದೆ ಎನ್ನುತ್ತಾರೆ! ಇಂಥಲ್ಲಿ ನಿಮ್ಮ ದಿವಸ ಹೇಗೆ ಕಳೆಯುತ್ತದೆ- ಎಂಬ ಯೋಚನೆಯಲ್ಲಿ ನನಗೆ ನಿದ್ರೆಯೂ ಬರಲಿಲ್ಲ.''

ನಮ್ಮದೇನು ಹೆಚ್ಚು? ಇಲ್ಲೇ ಇದ್ದು ಇದೇ ನಮಗೆ ರೂಢಿಯಾಗಿದೆ. ಪೇಟೆಯಿಂದ ಬಂದ ನಿಮಗೆ ಇದೊಂದು ವಿಶೇಷವಾಗಿ ಕಾಣಿಸಬಹುದೇ ಹೊರತು...''

''ಇಲ್ಲಿ ನಿಮಗೆ ಬೇಸರವೂ ಆಗುವುದಿಲ್ಲವೇ?''

''ಬೇಸರ? ಬೇಸರ ಉಂಟು ಎಂದರೆ ಉಂಟು, ಇಲ್ಲ ಎಂದರೆ ಇಲ್ಲ'' ಎಂದರು ಭಟ್ಟರು. ಅದನ್ನು ತಿದ್ದುಪಡಿ ಮಾಡುವವರಂತೆ ಅವರ ಮಡದಿ ಮೇಲುದನಿಯಿಂದ ನಿರುತ್ಸಾಹವಾಗಿ ''ಹಾಗೆ ಬೇಸರವಾಗದೆ ಇರುತ್ತದೆಯೇ? ಮನುಷ್ಯ ಜೀವವಲ್ಲವೇ?'' ಎಂದು ಅರೆಕ್ಷಣದ ಬಳಿಕ ಅಂದರೆ ಅವರು ಗಂಡಸರು. ಅವರಿಗೇನು? ಸೊಂಟಕ್ಕೆ ಕತ್ತಿಯನ್ನು ಸಿಕ್ಕಿಸಿಕೊಂಡು ತೋಟಕ್ಕೆ ನಡೆದಾರು. ಅಲ್ಲಿ ಅಡಿಕೆ ಹೆಕ್ಕಿಯಾರು. ಆಳುಗಳನ್ನು ಕರೆದು 'ಹಾಗೆ ಮಾಡಿ ಹೀಗೆ ಮಾಡಿ' ಎಂದಾರು. ಬೇಸರ ಕಳೆಯಲು ತಾವೂ ಆಳುಗಳೊಡನೆ ಕಾಡಿಗೆ ಹೋಗಿ ಸೊಪ್ಪನ್ನು ಹೆರೆದಾಗ, ಮತ್ತೂ ಹೊತ್ತು ಹೋಗದಿದ್ದರೆ, ದೇರಣ್ಣನಲ್ಲಿಗೋ, ಕಾಟು ಮೂಲೆಗೋ ಹೋಗಿ, ಎಲೆ ಅಡಿಕೆಯ ಹರಿವಾಣ ಬರಿದು ಮಾಡಿಯಾರು. ಮನೆಗೆ ಬಂದು, ಮಿಂದು, ಗಿಂದು, ಜಪ, ದೇವರ ಪೂಜೆಯಾಗುವಾಗ ಹೊತ್ತು ತಿರುಗುತ್ತದೆ. ಊಟ ಮಾಡಿಯಾರು; ಮನಸ್ಸು ಬಂದರೆ ಮಲಗಿಕೊಂಡು ಜಾವಹೊತ್ತಿಗೆ ಸಮನಾಗಿ ಎದ್ದಾರು. ತಿರುಗಿ ತೋಟಕ್ಕೆ ಹೋದರೂ ಹೋದರು. ಅಷ್ಟರಲ್ಲೇ ಆಗುತ್ತದೆ ಸಾಯಂಕಾಲ.

ಹಾಗೆಲ್ಲ ಬೇಸರ, ಕಷ್ಟಗಳು ಎಂದರೆ ನನಗೆ, ಒಂಟಿ ಹೆಂಗಸಿಗೆ. ಇಬ್ಬರ ಅಡುಗೆಗೆ ಎಷ್ಟು ಹೊತ್ತು ಬೇಕು ಹೇಳಿ? ಅಡುಗೆಯ ಕೆಲಸ ಬಿಟ್ಟರೆ, ಬಿಸಿನೀರಿನ ಹಂಡೆಗೆ ನೀರೆರೆಯುವುದು; ಅದೂ–ದಂಬೆಯ ನೀರು; ಇನ್ನು ಹಟ್ಟಿಯ ಕೆಲಸ, ಇಷ್ಟನ್ನು ನೋಡಿಕೊಂಡರಾಯಿತು. ಅವನ್ನು ಮಾಡಲಿಕ್ಕೂ ಆಳುಗಳಿದ್ದಾರೆ. ದಬೆ ನೀರಲ್ಲಿ ಮುಸುರೆ ಪಾತ್ರೆ ಮುಳುಗಿಸಿ, ತೊಳೆಯುವುದಾದರೂ ಒಂದು ಸಂಭ್ರಮದ ಕೆಲಸವೇ?''

ಆಕೆಯು ತನ್ನ ಮುಂದೆ ಒಡ್ಡಿದ, ತನ್ನ ಸವಿಸ್ತಾರ ಸಮಯದ ಅವಿಸ್ತಾರ ದಿನಚರ್ಯೆಯನ್ನು ಕೇಳಿ ನನಗೂ ಬೇಸರವಾಯಿತು. ಇಂಥೊಂದು ಊರಲ್ಲಿ ಬಾಯಿಬಡಕನಾದ ನನ್ನಂಥವನಿಗೆ ವರ್ಷ ಸಲುವ ಮಾತಂತಿರಲಿ, ತಿಂಗಳೂ ಸಲದು; ವಾರವೂ ಕಳೆಯದು; ದಿನವೂ ಹೋಗದು.

ನಾವು ಮಾತನಾಡುತ್ತ ಕುಳಿತ ವೇಳೆಯಲ್ಲಿ, ನಮ್ಮ ಮಾತುಗಳನ್ನು ಕದ್ದು ಇಣಿಕಿ ನೋಡಲೋ

ಎಂಬಂತೆ.ಅಷ್ಟಮಿಯ ಚಂದ್ರ ಮೆಲ್ಲಗೆ ಅಡಿಕೆ ತೋಟದ ಎಡೆಯಿಂದ ಕಾಣಿಸಿಕೊಂಡನು. ಕಂಗುಗಳ ನೀಳವಾದ ಕಾಂಡಗಳ ಬೆಂಗಡೆಯಿಂದ ಮಿಂಚಿ, ಚಾವಡಿಯಲ್ಲಿ ನಮ್ಮ ಮೂವರ ಮೇಲೆ ತಿಂಗಳು ಚೆಲ್ಲಿ ನಕ್ಕೊಡನೆ, ನನಗೆ ಗಂಭೀರ ರಹಸ್ಯವೊಂದರ ಅರಿವಾಗುವಷ್ಟು ಆನಂದವಾಯಿತು. ನಾನು ಚಂದ್ರನಿಗೆ ಮೋರೆ ಮಾಡಲು, ಗೋಡೆಗೆ ದಿಂಬನ್ನಿರಿಸಿ, ಮೂಡಣಕ್ಕೆ ಮುಖಮಾಡಿ ಕುಳಿತುಕೊಂಡೆ. ಆಗಿನದು ಎಂಥ ಪ್ರಶಾಂತ ವಾತಾವರಣ!

ನಾನು ನವಯುಗದ ಬುದ್ಧನಂತೆ, ಬೆಳುದಿಂಗಳಿಂದ ಮಾತು ಬೆಪ್ಪು ಗಟ್ಟಿ, ಚಲನೆ ಹೆಪ್ಪು ಗಟ್ಟಿ, ಬರಿದೆ ಕುಳಿತುದನ್ನು ಕಂಡು ಗೋಪಾಲಯ್ಯನವರೂ ವಿಸ್ಮಿತರಾದರು. "ಏನು ಕುಳಿತೇಬಿಟ್ಟಿರಲ್ಲ!" ಎಂದರು.

"ಯಾಕೋ, ನನ್ನ ಕಣ್ಣಿಗೆ ನಿದ್ದೆ ಬರುವಂತಿಲ್ಲ. ನಿಮಗೆ ನಿದ್ರೆ ಬರುವುದಾದರೆ ಒರಗಿಬಿಡಿ. ನಾನು ಹೀಗೆಯೇ ಬೆಳುದಿಂಗಳನ್ನು ಕಾಣುತ್ತ ಕುಳಿತಿರುತ್ತೇನೆ. ಕಣ್ಣು ದಣಿದೊಡನೆಯೇ ಮಲಗಿಕೊಳ್ಳುತ್ತೇನೆ."

"ಹಾಗೋ, ನಮ್ಮ ನಿದ್ರೆಯ ಮಾತೆನ್ನುತ್ತೀರಿ! ನನಗಾದರೂ ಸಮನೆ, ನಮ್ಮ ಶಂಕರಿಗಾದರೂ ಸಮನೆ, ಮಧ್ಯರಾತ್ರಿ ಕಳೆಯುವ ತನಕ ಚೂರೂ ನಿದ್ರೆ ಬರುವುದಿಲ್ಲ. ಮಾತನಾಡಿ, ಮಾತನಾಡಿ ಗಂಟಲು ಒಣಗಿದರೂ, ಕಣ್ಣು ಬಾಡುವುದಿಲ್ಲ. ಏನೋ, ವಯಸ್ಸಾದ ಹಾಗೆ ನಿದ್ರೆ ಕಡಿಮೆ ಎನ್ನುತ್ತಾರೆ; ಅದು ನಿಜವಿರಬೇಕು. ಒಟ್ಟಾರೆ ನಮಗೆ ದಿನದಲ್ಲಿ ಜಾವ ಹೊತ್ತಿನ ನಿದ್ರೆ ಉಂಟೋ ಇಲ್ಲವೋ! ಅದರಲ್ಲೂ ಹಗಲು ನಿದ್ರೆ ಮಾಡಿಬಿಟ್ಟರೆ, ಇಡಿ, ರಾತ್ರಿ ಜಾಗರಣೆಯೆಂದೇ ಲೆಕ್ಕ. ಹಗಲು ಸಮಯವಾದರೂ ಕಳೆಯುತ್ತದೆ. ನಮ್ಮ ಶಂಕರಿ ಎಂದ ಹಾಗೆ ತೋಟದ ಕೆಲಸವಿದೆ; ಬೇಸರವಾದರೆ ಕಾಟು ಮೂಲೆಗೆ ಹೋದರಾಯಿತು."

"ಕಾಟು ಮೂಲೆ ಎಂದರೆ?"

"ಅದು ನಮ್ಮದೇ ಒಂದು ಜಾಗ. ಅಂದರೆ ನೋಡಿ, ಈ ಇಡೀ ವಠಾರದಲ್ಲಿ ಬೇರೊಂದು ಬ್ರಾಹ್ಮಣರ ಮನೆಯಿಲ್ಲ. ಹಾಗಾಗಿ ನಾನೇ, ನಮ್ಮವರ ಒಬ್ಬ ಹುಡುಗನನ್ನು ಅಲ್ಲಿಯ ತೋಟದಲ್ಲಿತಂದು ಸ್ಥಾಪನೆ ಮಾಡಿಬಿಟ್ಟಿದ್ದೇನೆ. ಅಲ್ಲಿ ನನಗೆ ಒಂದು ಏಳೆಂಟು ಖಂಡಿ ಅಡಕೆಯಾಗುವಷ್ಟು ದೊಡ್ಡ ತೋಟವಿದೆ. ನಮ್ಮ ಕಾಟು ಮೂಲೆಯೆಂದರೆ ಇಲ್ಲಿಗೆ ಸಮೀಪ; ಏನು ಒಂದು ಗಳಿಗೆಯ ದಾರಿಯೂ ಇಲ್ಲ. ನಾನೇ ಕಡಿಸಿ, ಇಡಿಸಿ ನಟ್ಟು, ಮಾಡಿದಂಥ ತೋಟವದು. ಯಾವ ಯಾವ ಒಕ್ಕಲುಗಳನ್ನು ತಂದು ಹಾಕಿ ನೋಡಿದೆ; ಬರಕತ್ತಿಗೆ ಬರಲಿಲ್ಲ. ಸಮನಾಗಿ ಗೈಯುವವರಿಲ್ಲದೆ, ಕಾಡನ್ನು ಸವರಿ ಮಾಡಿದ ತೋಟವೆಲ್ಲ, ತಿರುಗಿ ಕಾಡಿನ ಬಾಯಿಗೇ ಬೀಳುವ ಹಾಗಾಯಿತು. ಒಂದು ಸಾರಿ ಆನೆಗಳ ಹಿಂಡು ಬಂದು ನುಗ್ಗಿಬಿಟ್ಟರೆ, ನಾವು ವರ್ಷ, ವರ್ಷ ಸುರಿಸಿದ ಬೆವರು ನಿಮಿಷದಲ್ಲಿ ದಂಡವಾಗುತ್ತದೆ. ಹೀಗೆಂದು ನಮ್ಮದೇ ಒಂದು ಜನ ಬೇಕು— ಎಂದು ಯೋಚಿಸಿ, ನಮ್ಮ ನಾರಾಯಣನನ್ನು ಅಲ್ಲಿ ತಂದು ಹಾಕಿದೆ."

"ನಾರಾಯಣ ಎಂದರೆ ಎಲ್ಲಿಯವರು? ನಿಮಗೇನಾದರೂ ಸಂಬಂಧವೇ?"

ಸಂಬಂಧವಲ್ಲ, ಮತ್ತೊಂದೂ ಅಲ್ಲ. ನಮ್ಮದೇ ಜಾತಿಯವನು, ಅಷ್ಟೇ. ಪಾಪ, ಎಲ್ಲೋ ಗತಿ ಗೋತ್ರವಿಲ್ಲದೆ ಅಲೆಯುತ್ತಿದ್ದ ಮೊದಲಿಗೆ. ನಾನೇ ಅವನನ್ನು ಕರೆತಂದು, ಅವನಿಗೊಂದು ಲಗ್ನ ಮಾಡಿಸಿದೆ; ಅಲ್ಲಿನ ಮನೆಯಲ್ಲಿದ್ದು ತೋಟ ನೋಡಿಕೊಂಡಿರು ಎಂದುಬಿಟ್ಟೆ. ನನಗೆ ಪ್ರಾಯ ಸಂದಿರುವಾಗ, ನಮ್ಮವರು ಎಂಬುವರು ಒಬ್ಬರಾದರೂ ಹತ್ತಿರವಿರಲಿ— ಎಂದು ಹಾಗೆ ಮಾಡಬೇಕಾಯಿತು. ಅವನು ಬಂದ ಮೊದಲಿಗೆ, ಆ ಕೊಂಪೆಗೆ ಹೆದರಿಕೊಂಡು, ನಾಲ್ಕು ದಿನವೂ ಅಲ್ಲಿ ಇರಲಾರ ಎಂಬ ಹೆದರಿಕೆ ನನಗಿತ್ತು. ಅಂದರೆ, ಅದು ಜ್ವರದ ಮೂಲೆ. ತಿಂಗಳಲ್ಲಿ ಹತ್ತು ದಿನ ಮಲಗಿಕೊಂಡೇ ಇರಬೇಕು. ಆದರೂ ಅವನು ಹಟಮಾಡಿ ಇದ್ದುಬಿಟ್ಟ. ಈಗ ಅವನಿಗೆ ಅಲ್ಲಿನ ಹವೆಯೂ ಹಿಡಿದಿದೆ. ಅಲ್ಲದೆ ಆತ ತನ್ನ ಊರಿಗೆ ಹೋದರೂ, ಗೇಣು ನೆಲ ಎಂಬುದು ಅವನಿಗೆ ಹಿರಿಯರಿಂದ ಬಂದದ್ದಿಲ್ಲ; ಹೀಗಾಗಿ ಊರು, ಮನೆಯೆಂದು ಹೋಗಿ ಏನು ಮಾಡಬೇಕು?

"ಅವನೀಗ ಅಲ್ಲಿದ್ದಾನೆ; ಅಲ್ಲದೆ ಚೆನ್ನಾಗಿ ದುಡಿಯುತ್ತಲೂ ಇದ್ದಾನೆ. ಒಂದು ಸಂಗತಿ

ನಿಮಗೆ ಹೇಳುತ್ತೇನೆ. ನಿಮಗೆ ಹೇಗೆ ಅನಿಸುತ್ತದೆಯೋ, ನನ್ನ ಅಭಿಪ್ರಾಯ ಹೇಳುವುದಾದರೆ ಕಂಗಿನ ತೋಟಕ್ಕೂ, ನಮ್ಮಂಥ ಹವ್ಯಕ ಬ್ರಾಹ್ಮಣರಿಗೂ ಜೋಡಿ ಸಮ. ನಮ್ಮ ಕೈಯಲ್ಲಿ ತೋಟ ಊರ್ಜಿತಕ್ಕೆ ಬಂದ ಹಾಗೆ. ಇನ್ನು ಯಾವ್ಯಾವ ಜನರಿಂದಲೂ ಅದು ಮೇಲಕ್ಕೆ ಬರಲಾರದು. ಈ ನಮ್ಮ ನಾರಾಯಣ ಬರುವ ಮೊದಲು, ಒಬ್ಬಿಬ್ಬರು ಬ್ಯಾರಿಗಳಿಗೆ ಗೇಣಿಗೆ ಕೊಟ್ಟು ನೋಡಿದೆ. ಅವರು ಅಡಿಕೆ ಮರದ ಕುಡಿಯನ್ನು ಕಂಡರೇ ಹೊರತು, ಅದರ ಬುಡವನ್ನು ಕಾಣಲಿಲ್ಲ. ಬುಡಕ್ಕೆ ಈಟು ಬಿದ್ದರೆ ಕುಡಿಯಲ್ಲಿ ಫಲ ಉಂಟೆಂದು ಅವರು ತಿಳಿಯಲಾರರು. ಅಲ್ಲದೆ, ಗೇಣಿಯಾದರೂ ಮನೆಗೆ ಬರುತ್ತಿತ್ತೇ? ಸಾಕು ಸಾಕಾಯಿತು. ಆದರೆ ನಾರಾಯಣನನ್ನು ತಂದು ಹಾಕಿದ ಮೇಲೆ ಆ ಯೋಚನೆ ನನಗಿಲ್ಲ. ತೋಟವನ್ನು ಸಾಬೀತಾಗಿ ಇರಿಸಿಕೊಂಡಿದ್ದಾನೆ. ಅಲ್ಲದೆ ನಮ್ಮಿಂದ ತನಗೊಂದು ಜೀವನವಾಯಿತು ಎಂಬ ಹಂಗೂ ಇದೆ ಮನಸ್ಸಿನಲ್ಲಿ."


ಗೋಪಾಲಯ್ಯನ ಮಾತಿಗೆ ಸೆರಗು ತೊಡಗಿದುದು 'ಬೇಸರ'ದ ವಿಚಾರದಿಂದ. ಅದು ಕ್ರಮೇಣ ಪರಿಣಮಿಸಿದುದು ನಾರಾಯಣನ ವಿಚಾರವನ್ನು ಹೇಳುವುದರಲ್ಲಿ. ನಡುವೆ ಶಂಕರಮ್ಮ ಬಾಯಿ ಹಾಕದೆ ಹೋಗಿದ್ದರೆ, ಇನ್ನೂ ಅದು ಎಲ್ಲೆಲ್ಲಿಗೆ ಹೋಗುವುದಿತ್ತೋ, ಮುಂದೆ ನಾನಾಗಿ ಅವರನ್ನು ಪ್ರಶ್ನಿಸಿ: ವಿಷಯಾಂತರಕ್ಕೆ ಎಡೆ ಮಾಡುವುದರ ಬದಲು, ಅವರು ತಾವಾಗಿ ನುಡಿಯುತ್ತಿದ್ದ ಮಾತುಗಳನ್ನು ಕೇಳತೊಡಗಿದೆ. ತಮ್ಮ ಹೃದಯವನ್ನು ಮರೆಯಿಸುವ ಶೀಲವೇ ಅವರಲ್ಲಿದ್ದಂತೆ ಕಾಣಿಸಲಿಲ್ಲ. ಬದಲು, ದಿನನಿತ್ಯದ ಏಕಾಂತ ವಾಸದಲ್ಲಿ, ತಮ್ಮ ಸುಖ ದುಃಖಗಳನ್ನು ತಾವೇ ತೋಡಿಕೊಂಡು ದಿನಹರಣ ಮಾಡುತ್ತಿದ್ದವರಿಗೆ, ಆಸಕ್ತಿಯಿಂದ ಕೇಳಲು ಕುಳಿತ ನನ್ನಂಥ ಒಬ್ಬ ವ್ಯಕ್ತಿ ದೊರೆಯುವುದೇ ಅಪೂರ್ವ.

ಶಂಕರಮ್ಮ ಮಾತನ್ನು ಮುಂದುವರಿಸಿ ಅಂದಳು; "ನೋಡಿ, ನನಗೆ ನಾರಾಯಣನಿರುವಲ್ಲಿಗೆ ಹೋಗಿ ಆ ಸೊಸೆಯನ್ನು ಕಂಡುಬರಲು, ಕಾಲೂ ಬರುವುದಿಲ್ಲ. ಆ ಗುಡ್ಡವನ್ನು ಹತ್ತಿ ಇಳಿಯುವುದರಲ್ಲಿ ಸಾಕಾಗಿ ಹೋಗುತ್ತದೆ, ನಮ್ಮ ಯಜಮಾನರ ಕಾಲು ಗಟ್ಟಿ, ಈ ಪ್ರಾಯದಲ್ಲೂ ಅವರು ಮನಸ್ಸು ಮಾಡಿದರೆ ಪುತ್ತೂರಿಗೆ ನಡೆದೇ ಹೋಗಿ ಬಂದಾರು.

ಆಳ-ಹಗ್ಗ

ಅನುಭವದ
ಹಗ್ಗವಿಲ್ಲದೇ
ಪ್ರೀತಿಯ ಆಳ
ಗುರುತಿಸಲು
ಸಾಧ್ಯವೇ?

-ರಮೇಶ ದೇಶಪಾಂಡೆ



"ನಾನು ಯಾರ ಮನೆಗೆಂದು ಹೋಗಿ ಮಾತಾಡಲಿ? ನಮ್ಮ ಒಕ್ಕಲು ಮಕ್ಕಳಲ್ಲಿಗೆ ಹೋಗಲೇ? ಅವರೇ ನಿತ್ಯ ಮನೆಗೆ ಬರುತ್ತಾರೆ ಅವರೊಡನೆ ನಾವು ಪಟ್ಟಾಂಗಕ್ಕೆ ಕುಳಿತರೆ ಮನೆಯ ಕೆಲಸಕ್ಕೆಲ್ಲ ತೊಂದರೆ ಹಾಗೆಂದು ಅವರ ಮನೆಗೋ, ದೇರಣ್ಣನ ಮನೆಗೋ ಹೋಗಿ ಮಾತನಾಡು ಎಂದರೆ, ನಮ್ಮ ತೋಟದ ಬರೆಯ ಕರೆಯನ್ನು ದಾಟುವುದೆಂಬುದು ನನಗೆ ಕಾಶಿಯಾತ್ರೆಯಾಗಿಬಿಡುತ್ತದೆ. ಹಾಗೆ ಹೋದರೂ, ದೂರ, ಹಿತ್ತಿಲ ಹೊರಗೆ, ಗದ್ದೆಯ ಅಂಚಿನಲ್ಲೇ ನಿಂತು ಅವರನ್ನು ಮಾತನಾಡಿಸಬೇಕು."

"ಅಂದರೆ ನೋಡಿ-ನಮ್ಮ ಶಂಕರಿಗೆ ಮಡಿ ಮೈಲಿಗೆ ಹೆಚ್ಚು. ಶೂದ್ರರ ಮನೆಯ ಅಂಗಳವನ್ನು ಮೆಟ್ಟಿ ಬಂದರೆ, ಮನೆ ಹೋಗುವ ಮೊದಲು ಸ್ನಾನವಾಗಬೇಕು. ಅವಕ್ಕೆ ಯಾವ ಮಡಿಮೈಲಿಗೆ ಇದೆ? ಮನೆಯಂತಿಲ್ಲ, ಅಂಗಳವಂತಿಲ್ಲ. ಅಡುಗೆ ಮನೆಯಂತಿಲ್ಲ-ಊರೆಲ್ಲಾ ಕೋಳಿಗಳ ಪಿಷ್ಠ. ಅವನ್ನು ಮೆಟ್ಟಬೇಕಾದೀತಲ್ಲ ಎಂದು ಅವಳ ಹೆದರಿಕೆ."

ಈ ಮಾತಿನಿಂದ, ನನಗೆ ಆ ದಿನ ಗೋಪಾಲಯ್ಯನವರ ಮನೆಯ ದರ್ಶನ ಮಾಡಿಸಲು ಕಾರಣವಾದ ದೇರಣ್ಣನ ನೆನಪಾಯಿತು. ಹಾದಿಯಲ್ಲಿ ಬರುತ್ತಿದ್ದಾಗ ಅವನು ತನ್ನ ಕಂಕುಳಲ್ಲಿ ತುರುಕಿಕೊಂಡಿದ್ದ ಹುಂಜವೊಂದರ ನೆನಪೂ ಆಯಿತು. ಅದರಿಂದ ನಾನು ಮನೆಗೆ ಬರುವಾಗ ದಣಿವು ಹೇಳಿ ತೀರದು. ನಿಮ್ಮ ಮನೆಯಲ್ಲೇ ನಾನು ಮಲಗಿರುತ್ತೇನೆ' ಎಂದು ದೇರಣ್ಣನಿಗೆ ಹೇಳಿದೆ. ಆದರೆ 'ಇಲ್ಲೆಲ್ಲ ನಿಮಗೆ ಚೆನ್ನಾಗಿರಲಾರದು. ಮಲಗಲು ಆಗಲಾರದು' ಎಂದು ಅವನಾಗಿಯೇ ಹೇಳಿದ" ಎಂದು ತಿಳಿಸಿದೆ.

ಅಹುದಹುದು: ನಮ್ಮ ದೇರಣ್ಣನ ಸ್ವಭಾವವೇ ಹಾಗೆ. ಅವನು ತಾನಾಗಿ ಹೆಚ್ಚಿನ ತೊಂದರೆಪಟ್ಟುಕೊಳ್ಳುವವನಲ್ಲ. ಆದರೆ ತನಗೆ ಖರ್ಚಿಲ್ಲದ ಯಾವ ಪರೋಪಕಾರಕ್ಕೂ ಅವನು ಸಿದ್ಧ. ಅವನಿಗೆ ಈ ಕೋಳಿಯ ಅಂಕದ ಹುಚ್ಚು ಹೇಳತೀರದು. ಅವನಲ್ಲಿ ಮನೆಯ ಚಪ್ಪರದ ಕಂಬಗಳ ಕಾಲಿಗೆ ಒಂದೊಂದರಂತೆ ಒಂದೊಂದು ಕೋಳಿಯಿದೆ."

ನಡುವೆ ಶಂಕರಮ್ಮ ನಮ್ಮ ಮಾತಿನ ಸರಣಿಯನ್ನು ಇನ್ನೊಮ್ಮೆ ಅಡ್ಡ ತಿರುಗಿಸಿದರು. "ಇಗೊಳ್ಳಿ,ದೇರಣ್ಣ ಬೇಟೆಗೆ ಏನಾದರೂ ಏರ್ಪಾಡು ಮಾಡುವ ಎಂದಿದ್ದನಲ್ಲ; ಅದೇನಾಯಿತು? ಅದೊಂದು ಹುಲಿಯನ್ನು ಹುಡುಕಿ ಕೊಲ್ಲಿಸದೆ ಹೋದರೆ, ಹಟ್ಟಿಯೊಳಗಿನ ದನಗಳೊಂದೂ ಉಳಿಯುವ ಹಾಗಿಲ್ಲ. 'ಅದೇನು ದೊಡ್ಡ ಕೆಲಸ, ಹುಲಿಯನ್ನು ಒಂದೇ ಗುಂಡಿಗೆ ಹಾರಿಸಿಬಿಡುವ' ಎಂದನಪ್ಪ."

"ದೇರಣ್ಣನಿಗೆ ಹೇಳುವುದಕ್ಕೇನು ಕಷ್ಟ? ಅವನ ಬಾಯಿಯ ಗುಂಡಿನಿಂದಲೇ ಹುಲಿ ಸಾಯುವುದಾದರೆ, ಇಷ್ಟರಲ್ಲಿ ನೂರು ಹುಲಿಗಳನ್ನು ಅವನೊಬ್ಬನೇ ಹುಡಿ ಹಾರಿಸುತ್ತಿದ್ದ. ಹುಲಿಯ ಬೇಟೆ ಅಷ್ಟು ಸುಲಭವೇ, ಶಂಕರೀ?"

"ಪಂಜದಿಂದ ಅವನು ತನ್ನ ಭಾವನನ್ನು ಕರೆಯಿಸುತ್ತಾನಂತೆ. ಅವನು ವಾಸನೆ ಹಿಡಿದೇ ಶಿಕಾರಿ ಮಾಡುವವನಂತೆ. ಆ ಭಾವನೊಬ್ಬನೇ ಆರೋ, ಎಂಟೋ ಹುಲಿಗಳನ್ನು ಫೈಸಲು ಮಾಡಿದ್ದಾನಂತಲ್ಲ!"

"ಅಂತೆ: ಇದೆಲ್ಲವೂ ಅಂತೆ ಪುರಾಣ. ಈಗ ಯಾರೂ ತಮ್ಮ ಬೇಸಾಯದ ಕಸಬನ್ನು ಬಿಟ್ಟು, ಬೇಟೆ ಗೀಟೆಗೆ ಬರಲಾರರು. ಬೇಟೆಗೆ ಜನರಾದರೂ ಸ್ವಲ್ಪ ಬೇಕೇನು? ಜಾನುವಾರ ಸಂತೆ ಕಳೆದು, ಸುಬ್ರಹ್ಮಣ್ಯ ಷಷ್ಠಿ ಮುಗಿಯದೆ, ಯಾರೂ ಮನೆಯನ್ನು ಬಿಡಲಿಕ್ಕಿಲ್ಲ. ಮತ್ತೇನು, ಮಕರ ಸಂಕ್ರಾಂತಿಯೇ ಮುಗಿಯಬೇಕು– ಶಿಕಾರಿಗೆ ಗೌಡರೆಲ್ಲ ಸೇರಲಿಕ್ಕೆ."

"ಅಂದರೆ ಅಲ್ಲಿಯತನಕ ನಾವು ನಮ್ಮ ದನಕರುಗಳನ್ನು ಹಟ್ಟಿಯಿಂದ ಹೊರಗೆ ಬಿಡುವುದೇ ಬೇಡವಂತೇನು? ವರ್ಷಕ್ಕೆ ಎಷ್ಟು ಹಸುಗಳನ್ನು ಹುಲಿಗಳ ಬಾಯಿಗೆ ಬಲಿಕೊಡಬೇಕು, ಹೇಳಿ? ಹೋದ ವರ್ಷವೇ ಕುಕ್ಕುಂದದಿಂದ ತಂದಹೊಸ ಎತ್ತು ಹೋಯಿತು. ಈ ವರ್ಷ ಹೂಡಲಿಕ್ಕೆ ಬೇರೊಂದು ಎತ್ತನ್ನು ಕೊಂಡರಾಯಿತು."

ನಾನು ನಡುವೆ ಹೇಳಿದೆ: ಏನು, ನಿಮ್ಮಲ್ಲಿ ಅಷ್ಟು ಹುಲಿಗಳ ಉಪದ್ರವವಿದೆಯೋ? ದನ

ಮೇಯಿಸುವಾಗಲೂ?? ನಮ್ಮೂರಿನಂತೆ ಇಲ್ಲಿ ದನ ಮೇಯಿಸುವುದಕ್ಕೆ ಯಾರೂ ಇರುವುದಿಲ್ಲವೇನು?

"ನೀವೇನು ಹೇಳುತ್ತೀರಿ ಸ್ವಾಮಿ? ನಿಮ್ಮ ಹೆಸರನ್ನು ಕೇಳಲು ಮರೆತುಬಿಟ್ಟೆ. ಏನೆಂದು ಕರೆಯಲಿ?"

"ಶಿವರಾಮ."

"ನೋಡಿ ಶಿವರಾಮಯ್ಯ, ನಿನ್ನೆಯೇ; ಬಹಳ ಹಿಂದಲ್ಲ ಏನಲ್ಲ, ನಮ್ಮ ಮನೆ ದನವನ್ನು ಹಿಂಡಿಗೆ ಬಂದು, ನುಂಗಿ, ಮುರಿದುಕೊಂಡು ಹೋಯಿತು. ಈ ಒಂದು ತಿಂಗಳಲ್ಲಿ ನಮ್ಮ ಗ್ರಾಮದಲ್ಲಿ ಏನಾದರೂ ಹತ್ತು ನಡೆಗಳಿಗೆ ಕಡಿಮೆ ಇಲ್ಲದಷ್ಟು ಹುಲಿಯ ಬಾಯಿಗೆ ಬಲಿ ಬಿದ್ದದ್ದಾಯಿತು ಏನು ಮಾಡಬೇಕೆಂದೂ ತೋರುವುದಿಲ್ಲ."

"ಏನು? ಅಷ್ಟು ಹುಲಿಯ ಹೆದರಿಕೆ ಉಂಟಲ್ಲವೇ ನಿಮ್ಮ ಊರಲ್ಲಿ! ನಮ್ಮ ಊರಲ್ಲಿ ಅಂಥ ಹೆದರಿಕೆಯಿಲ್ಲವಪ್ಪ. ಏನೋ, ಸುತ್ತಲಿನ ಗುಡ್ಡಗಳಿಗೆ ಬೆಂಕಿ ಬೀಳುವ ಸಮಯದಲ್ಲಿ, ಎರಡು ಮೂರು ವರ್ಷಗಳಿಗೊಮ್ಮೆ, ಅದೂ, ನಾಯ ಹುಲಿಯೋ ಏನೋ ಬರುವುದುಂಟು. ಅದೆಲ್ಲಾದರೂ ಬಂದಿತೆಂದರೆ, ಬಂದದ್ದು ಊರುಬಿಟ್ಟು ಹೋಗುವ ತನಕ ಹೊಟ್ಟೆ ಪುಕುಪುಕು ಆಗುತ್ತದೆ. ನೀವು, ಒಟ್ಟಿಗೆ ಹುಲಿಯ ದವಡೆಯಲ್ಲೇ ಬಿಡಾರ ಮಾಡಿಬಿಟ್ಟಿದ್ದೀರಿ. ಅಂದರೆ, ನಿಮ್ಮ ಊರಲ್ಲಿ ಮನುಷ್ಯರಿಗೆ ಅದರಿಂದ ತೊಂದರೆಯಿಲ್ಲವಷ್ಟೆ."

"ಮನುಷ್ಯರಿಗೂ ಉಂಟು; ಆದರೆ ಜಾನುವಾರುಗಳಿಗಿರುವಷ್ಟಿಲ್ಲ. ಯಾಕೆ? ಕಳೆದ ತಿಂಗಳಲ್ಲಿ ಒಂದು 'ಅಡ್ಡ ಬಲಿಪ್ಪನೋ, (ಪಟ್ಟೆ ಹುಲಿ) ಬೇಂಗಪಲ್ಲಿಯೋ (ದೊಡ್ಡ ಜಾತಿಯ ಚಿರತೆ) ಒಬ್ಬ ಗೌಡನ ತೋಳನ್ನು ಕಚ್ಚಿ ಹರಿದುಬಿಟ್ಟಿತಲ್ಲ. ಅವನು ಬಚಾವಾದದ್ದು ದೊಡ್ಡದು. ಅಂದರೆ ನೋಡಿ, ಅದಕ್ಕೆ ಬೇಟೆಯಲ್ಲಿ ಒಂದೆರಡು ಗಾಯವಾಯಿತು ಎಂದರೆ, ಮುಂದೆ ಅದನ್ನು ಕೊಲ್ಲುವ ತನಕವೂ, ಊರವರು ಜೀವವನ್ನು ಮುಷ್ಟಿಯಲ್ಲಿ ಹಿಡಿದುಕೊಂಡೇ ತಿರುಗಾಡಬೇಕು."

"ಅಷ್ಟು ಹೆದರಿಕೆಯಲ್ಲವೆ ನಿಮ್ಮಲ್ಲಿ!"

"ಅದೊಂದರದ್ದೇ ಅಂದರೇನು? ಆನೆಗಳ ಲೂಟಿ ಕಡಿಮೆಯಿದೆಯೇ? ಆನೆಯು ಹಿಂಡು ಬಂದು ನುಗ್ಗಿದರೆ, ಅಡಿಕೆ ತೋಟ ಒಂದು ರಾತ್ರಿಯಲ್ಲಿಯೇ ನೆಲಸಮ."

"ಇತ್ತೀಚೆಗೆ ಕಾಟುಮೂಲೆಗೆ ಆನೆ ಬಂದಿತ್ತು ಎಂದೆನಲ್ಲ ದೇವರು ಮಾಡುವ ಅನ್ಯಾಯ ಎಂದರೆ ಇದು! ಅವಕ್ಕೆ ಕಾಡುಗುಡ್ಡೆಯಲ್ಲಿ ಸೊಪ್ಪಿಗೆ ಬರಗಾಲವೇ ಹುಲ್ಲು. ತಿಂಡಿ, ನೀರುಗಳಿಗೆ ಕೊರತೆಯೇ? ನಟ್ಟು ಬೆಳೆಯಿಸಿದ ತೋಟಕ್ಕೆ ನುಗ್ಗಿ, ಅದನ್ನು ಮುರಿಯಬೇಕೆಂದೇನು?"

"ಅಲ್ಲ, ನಿಮ್ಮ ಹಾಗೆ ಒಟ್ಟೊಟ್ಟಿಗೆ, ಒಂದೇ ಕಡೆ ಚೆನ್ನಾಗಿ ಕಂಗು, ಬಾಳೆಗಳನ್ನು ಬೆಳೆಯಿಸುತ್ತಾರೆಯೇ?" ಎಂದೆ ನಾನು.

"ನಿಜ, ಆ ಬಾಳೆಗಳ ಆಸೆಗೇನೆ ಈ ಆನೆಗಳ ಹಿಂಡು ಬರುವಂಥದು. ನಾವೇನು ಮಾಡಿಯೇವು-ಹಿಂಡಿಗೆ ಹಿಂಡೇ ಬಂದು ನುಗ್ಗಿಬಿಟ್ಟರೆ? ಒಂದೆರಡು ಗರ್ನಾಲು ಥಮ ಥಮ ಹಾರಿಸಬಹುದು. ಆ ಗದ್ದಲಕ್ಕೆ ಹೆದರಿಕೊಂಡು ಅವು ಓಡಿಹೋಗಬೇಕು. ಹಾಗೆಲ್ಲಾದರೂ ತಪ್ಪಿಗಿಪ್ಪಿ ಗುಂಡು ತಾಗಿತು, ಆ ಗುಂಡಿನ ಗಾಯದಿಂದ ಅದು ಕಾಲಿನ ಸಂದಿನಲ್ಲೆಲ್ಲಾದರೂ ಸೇರಿಕೊಂಡು ಸತ್ತರೆ, ನಾಳೆ ಜಂಗ್ಲಿ ಇಲಾಖೆಯವರ ಬಾಯಿಗೆ ನಾವು ಬಿದ್ದರಾಯಿತು.

"ಇಲ್ಲ ಇನ್ನೊಂದು ತಿಂಗಳು ಹೋಗಲಿ; ಆಗ ಘಟ್ಟದ ಕೆಳಗೆ ಕಡವೆಗಳು ಹಿಂಡುಹಿಂಡಾಗಿ ಇಳಿಯುತ್ತಲೇ ನೋಡಿ ನಮ್ಮ ಬಯಲಿನ ಅವಸ್ಥೆಯನ್ನು! ಅವುಗಳ ಹಿಂಡು ಬಂದು ನುಗ್ಗಿಬಿಟ್ಟರೆ, ಆ ಸುಬ್ರಹ್ಮಣ್ಯನಿಗೇ ಹೇಳಬೇಕು."

"ಅಷ್ಟೆಲ್ಲ ತೊಂದರೆಯಿರುವುದಾದರೆ, ನಿಮ್ಮಂಥವರು ಇಂಥ ಊರನ್ನು ಆರಿಸಿ, ತೋಟಗೀಟವೆಂದು ನಂಬಿ ಕುಳಿತಿದ್ದೀರಲ್ಲ. ನಿಮ್ಮ ಮೂಲದ ಊರು ಇದೇನು? ಇರಲಾರದು" ನನಗೆ ಅವರ ಮನೆಯ ವಿಚಾರವನ್ನು ಕೂಲಂಕಷವಾಗಿ ತಿಳಿಯುವ ಹಂಬಲವಾಗಿ, ತಿರುಗಿ ವಿಷಯವನ್ನು ಹೊರಟಲ್ಲಿಗೇನೆ ಮುಟ್ಟಿಸುವ ಯೋಚನೆ ಮಾಡಿದೆ.

"ಆ ಸಂಗತಿಯೋ? ಕೇಳಿ-ನೀವು ಇವತ್ತಿನ ದಿನ ಹಾದಿ ತಪ್ಪಿ ನಮ್ಮ ಕೆಳಬೈಲಿಗೆ ಬಂದಂತೆ, ನನ್ನ ಅಜ್ಜನೋ, ಪಿಜ್ಜನೋ ಹಾದಿ ತಪ್ಪಿಯೇ ಇತ್ತ ಬಂದಿರಬೇಕು. ನಮ್ಮ ಮನೆಯ ಅಡಿಕೆ ತೋಟಕ್ಕೆ ಏನಾದರೂ ಇನ್ನೂರು ವರ್ಷಗಳಾದರೂ ಆಗಿರಬೇಕು. ಅವರು ಬಂದುದು ಅದಕ್ಕೂ ಹಿಂದೆ— ಎಂದ ಹಾಗಾಯಿತು. ಅಜ್ಜ, ಪಿಜ್ಜ ಬಂದರು ಎನ್ನುವುದಕ್ಕಿಂತಲೂ, ಪಿಜ್ಜನ ಪಿಜ್ಜ ಬಂದರೂ ಸಮನೇ. ನಮ್ಮ ಮೂಲದ ಮನೆಯ ತಳ ಇಲ್ಲೇ ಹಿಂದಕ್ಕೆ ಇದೆ. ಅದರ ಅಡಿ ಕುರುಹು ಮಾತ್ರ ಈಗ ಉಳಿದಿದೆ. ಆಗ ಇಲ್ಲೊಂದು ಬ್ರಾಹ್ಮಣ ಕುಟುಂಬ ಇದ್ದಿತಂತೆ. ನಮ್ಮ ಹಿರಿಯರು ಇಲ್ಲಿಗೆ ಬಂದು, ಆ ಮನೆಯಲ್ಲಿ ದೇವರ ಪೂಜೆಗೆಂದು ಸೇರಿಕೊಂಡರಂತೆ. ಆ ಮನೆಯವರಿಗೆ ಸಂತಾನವಿಲ್ಲದೆ, ಬಂದ ನಮ್ಮ ಹಿರಿಯರನ್ನು ದತ್ತು ಮಾಡಿಕೊಂಡರಂತೆ; ನಮ್ಮ ಪಿಜ್ಜನ ಕಾಲದಿಂದಲೂ ಇಲ್ಲಿ ಬೆಳೆದು ಬಂದ ಕಥೆ ನನಗೆ ಚೆನ್ನಾಗಿ ಗೊತ್ತು. ಅಲ್ಲಿಂದ ಇಲ್ಲಿಯ ತನಕವೂ ಹೀಗೆಯೇ ನಡೆದಿದೆ. ನಮ್ಮ ಕುಲ ಮಾತ್ರ ಕವಲು ಒಡೆದಂತಿಲ್ಲ. ಈಗಿರುವ ಮನೆಯು ನಮ್ಮ ಅಜ್ಜನ ಕಾಲದ್ದು. ನಾವೂ ಅದರಲ್ಲಿಯೇ ಇದ್ದೇವಲ್ಲ.

"ನೀವು ಮನಸ್ಸು ಮಾಡಿದರೆ ಇದಕ್ಕೂ ಒಳ್ಳೆಯದಾದಂಥ ಭೂಮಿ, ಮನೆಗಳನ್ನು ಅರಸುವುದು ನಿಮಗೆ ಸಾಧ್ಯವಿರಲಿಲ್ಲವೇ? ನಿಮಗೇನು ಈ ಕೊಂಪೆಯಲ್ಲಿ ಖಾಯಿಸು? ನಾನಂತೂ ವರ್ಷಕ್ಕೆ ಸಾವಿರ ರೂಪಾಯಿ ವರಮಾನ ಬಂದರೂ ಇಲ್ಲಿ ನಿಲ್ಲಲಾರೆ."

ಆಗ ಗೋಪಾಲಯ್ಯ ನಗುತ್ತ ಹೇಳಿದರು. "ಹೌದು, ಶಿವರಾಮಯ್ಯ, ಈ ಜಾಗಕ್ಕೇನಾಗಿದೆ? ಇಂಥಾ ನೀರಿನ ಬಲವಿರುವ ತೋಟವು ಸಾಮಾನ್ಯ ಎಲ್ಲೂ ಸಿಗಲಾರದು. ಅದೂ, ನಿಮ್ಮ ಪುತ್ತೂರು, ವಿಟ್ಲದಂಥ ಸೀಮೆಗಳಲ್ಲಿ ಸಿಕ್ಕೀತೆಂದು ತಿಳಿಯಲೇ ಬೇಡಿ. ಇಲ್ಲಿ ಯಾವುದಕ್ಕೆ ಕೊರತೆಯಿದೆಯಂತೆ? ನೀರು, ಕಟ್ಟಿಗೆಯಾಯಿತಲ್ಲ— ಅವನ್ನು ನಾವು ನಿಮಗೆ ಕೊಟ್ಟಿರುಂಟು. ಜಾನುವಾರುಗಳಿಗಾದರೂ ಮೇವಿನ ತಗಾದೆಯುಂಟೇ? ವರ್ಷದ ಹನ್ನೆರಡೂ ತಿಂಗಳು ಹಸುರು ಹುಲ್ಲಿಗೆ ಬರಗಾಲವಿಲ್ಲ. ಹುಲಿಯ ಉಪದ್ರ, ಕಾಟಿಗಳ ಉಪದ್ರ ಇದೆ; ನಿಜ. ಆ ರೀತಿ ಎಣಿಕೆ ಹಾಕಿದ್ದಾದರೆ, ಒಂದೊಂದು ಊರಿಗೆ ಒಂದೊಂದು ಕೊರತೆಯಿದ್ದೇ ಇದೆ. ಇಲ್ಲಿನ ಒಂದು ಸಹಿಸಲಾರದ ಉಪದ್ರವೆಂದರೆ 'ಚಳಿಜ್ವರ' ಅದು ನಿಮ್ಮ ಪುತ್ತೂರನ್ನೂ ಬಿಟ್ಟಿಲ್ಲ. ಅಲ್ಲದೆ ಎಂಥಾ ಊರೇ ಆದಿರಲಿ! ಅಲ್ಲಲ್ಲಿ ಹುಟ್ಟಿದವರಿಗೆ ಅವರವರ ಊರೇ ಸ್ವರ್ಗ. ಆ ಅಭಿಮಾನ ತಪ್ಪುತ್ತದೆಯೇ?"

ಶಂಕರಮ್ಮ ಈ ದೀರ್ಘ ಪ್ರವಚನವನ್ನು ಕೇಳಿ, ಒಡಂಬಡದವಳಂತೆ "ಅಭಿಮಾನವೂ ಸಾಕು, ಮತ್ತೊಂದೂ ಸಾಕು. ಅದು ನನಗೆ, ನಿಮಗೆ ಇದ್ದರೆ ಸಾಕೇನು? ನಿಮ್ಮ ಮಾಣಿಗೂ ಇರಬೇಡವೇ? ಅವನನ್ನು ಹೆತ್ತು, ಬೆಳೆಯಿಸಿ, ಓದಿಸಿ ಆದದ್ದೇನು ಈಗ? ಅವನೆಲ್ಲಿದ್ದಾನೆ? ಈ ನೆಲಕ್ಕೆ ತಿರುಗಿ ಬಂದಾನೆ" ಅವನನ್ನು ಶಾಲೆಗೆ ಕಳುಹಿಸದೆಯೇ ಇರುತ್ತಿದ್ದರೆ, 'ಇದೇ ಸ್ವರ್ಗ' ಎಂದಿರುತ್ತಿದ್ದನೋ ಏನೋ. ಪೇಟೆಯ ಹವೆ ಒಂದು ಸಾರಿ ಹಿಡಿಯಿತೆಂದರೆ, ಈ ಕೊಂಪೆ ಜನಕ್ಕೆ ಬೇಡವಾಗುತ್ತದೆ" ಎಂದು ಗೋಪಾಲಯ್ಯನವರು ಕಟ್ಟಿದ ಅಭಿಮಾನದ ಮಂದಿರವನ್ನು ಅವಳು ಒಮ್ಮೆಗೇ ಮುರಿದುಬಿಟ್ಟಳು.

ಗೋಪಾಲಯ್ಯನವರು, ಮನೆಗೆ ಬಾರದ ತಮ್ಮ ಮಗನ ಪ್ರಸ್ತಾಪ ಬಂದೊಡನೆಯೇ —"ಶಂಕರೀ, ಯಾವುದೇ ಮಾತಾಡಿದರೂ ನೀನು ಮಗನದೇ ಸುದ್ದಿಗೆ ಬಂದು ಸೇರುತ್ತಿ! ಅವನ ಭ್ರಮೆ ನಿನಗೆ ಯಾಕೆ? ಅವನು ತಿರುಗಿ ಬರುವವನಲ್ಲ ಎನ್ನುವವಳೂ ನೀನೆ; ಅವನ ಹಂಬಲದಿಂದ ಕೊರಗುವವಳೂ ನೀನೇ. ಸಾಯುವ ಮೊದಲು ನಾರಾಯಣನ ಮಾಣಿಯನ್ನು ದತ್ತು ಮಾಡಿಕೊಂಡರೆ ಆಗುವುದಿಲ್ಲವೇ? ಬಾರದ ವಸ್ತುವಿಗಾಗಿ ಕೈ ನೀಡುವುದಕ್ಕಿಂತ, ಇದ್ದುದನ್ನು ಹದ್ದಿನಲ್ಲಿ ಇರಿಸಿಕೊಳ್ಳುವ."

ಶಂಕರಿಯು ದೀರ್ಘ ಉಸಿರುಬಿಟ್ಟಳು. ತಾನು ಯಾವುದೋ ಮರೀಚಿಕೆಗಾಗಿ ಹಂಬಲಿಸುತ್ತಿದ್ದೇನೆ ಎಂದು ಅವಳಿಗೂ ಅನಿಸುತ್ತಲಿತ್ತು.

"ಹೂಂ ದೇವರು ನಡೆಯಿಸಿದ ಹಾಗಾಗುತ್ತದೆ" ಎಂದಳು.

"ಹಾಗೆ ಹೇಳು; ಕಾಯುವವನೂ, ಬಿಡುವವನೂ ಆ ಸುಬ್ರಹ್ಮಣ್ಯ" ಎಂದರು.

ಎಂಥ ಭೀಕರವಾದ ಸ್ವಪ್ನ. ಆ ಎರಡು ಜೀವಿಗಳನ್ನು ನರಳಿಸುತ್ತಿತ್ತೋ ಯಾರು ಬಲ್ಲರು? ಆ ರಾತ್ರಿಯ ನಿದ್ರೆಯಲ್ಲಿ ಅದೇ ವಿಚಾರದ ಕನಸಿನಲ್ಲಿ ನಾನು ತೊಳಲಿದೆ.

ರಾತ್ರಿ ಮಲಗಿದವನೇ ತೀರ ಮೈಮರೆತೆ. ರಾತ್ರಿ ಎಂತು ಸರಿಯಿತೋ ನನಗೂ ತಿಳಿಯದು. ನನ್ನ ಪಾಲಿಗೆ ಎಚ್ಚರವಾಗುವಾಗ, ಸೂರ್ಯ ಗೋಪಾಲಯ್ಯನವರ ಅಡಿಕೆ ತೋಟದ ಎಡೆಯಿಂದ ನನ್ನ ಮುಖವನ್ನು ಮುದ್ದಿಸುತ್ತಿದ್ದ. ಹೊದೆದ ಕಂಬಳಿಯನ್ನು ಕಿತ್ತೊಗೆದು, ಆಕಳಿಕೆಯನ್ನು ಹೊರಡಿಸುತ್ತ, ಅಪೂರ್ಣವಾದ ನಿದ್ದೆಗೆ ಕೊನೆಯನ್ನು ತಂದು ಕುಳಿತುಕೊಂಡೆ. ರಾತ್ರಿ ಮಲಗುವ ವೇಳೆಗೆ, ಬೆಳಗಿನ ಜಾವಕ್ಕೇ ಎದ್ದು ಊರ ಹಾದಿಯನ್ನು ಹಿಡಿಯಬೇಕೆಂಬುದಾಗಿ ಯೋಚಿಸಿ ಮಲಗಿದ್ದೆ. ಅದು ಬರಿಯ ಯೋಚನೆ. ಬೆಳಗಿನ ಜಾವದಲ್ಲಿ ನನ್ನನ್ನೊಬ್ಬರು ಎಚ್ಚರಗೊಳಿಸಿ, ರಾಜಮಾರ್ಗಕ್ಕೆ ತಂದುಬಿಡುವಂಥವರು ಬೇಕಲ್ಲ. ಈಗ ತೀರ ಹೊತ್ತೇರಿದುದರಿಂದ ಅವಸರಗೊಂಡು ಅಂಗಳವನ್ನು ಸೇರಿದೆ. ಅಲ್ಲಿಯೇ ಯಜಮಾನರ ದರ್ಶನವಾಯಿತು: "ಏನು, ಮುಖವನ್ನು ತೊಳೆಯುತ್ತೀರಾ?" ಎಂದು ಉಪಚರಿಸಿ ನನ್ನನ್ನು ಬಯಲಿನ ಸೆರಗಿಗೆ ಕರೆದೊಯ್ದರು. ನನಗೆ ಎಲ್ಲವೂ ಅವಸರವೇ. ಹೊರಕ್ಕೆ ಹೋಗಿ, ಮನೆಗೆ ಮರಳಿ ಬರುವ ತನಕ ಯಾವುದನ್ನೂ ಕಣ್ಣೆತ್ತಿ ಕಾಣಲಿಲ್ಲ. ತೋಟದ ಕಾಲುವೆಯ ನೀರಲ್ಲಿ ಹಲ್ಲುಜ್ಜಿಕೊಂಡು, ಮುಖ ಒರಸುತ್ತ "ರಾಜಮಾರ್ಗ ತನಕ ದಾರಿ ತೋರಿಸಲು ಯಾರನ್ನಾದರೂ ಕಳುಹಿಸಿ ಕೊಡುತ್ತೀರಾ?" ಎಂದು ಕೇಳಿದೆ.

ಅವರು ನಕ್ಕರು: "ಯಾವುದಕ್ಕೂ ಕಾಫಿಯಾಗಲಿ" ಎಂದರು. ಮನೆಯೊಳಗೆ ಬಿದಿರಿನ ಅಂಡೆಯಲ್ಲಿ ಕಡೆಗೋಲು ಘರ್ಜಿಸುತ್ತಿತ್ತು. ಆದರೂ ಗೋಪಾಲಯ್ಯ "ಶಂಕರೀ, ನಾವು ಕಾಫಿಗೆ ಬರಲೇ" ಎಂಬುದಾಗಿ ಕೇಳಿದರು. 'ಕಾಫಿಗೆ' ಎಂಬ ಸದ್ದನ್ನು ಕೇಳಿದಂಥ ನನಗೆ, ಈ ಕೆಳ ಬಯಲಿನ ಕಗ್ಗಾಡ ರಾಜ್ಯಕ್ಕೂ ನಾಗರಿಕತೆ ಬಂದು ನಾಟಿತಲ್ಲಾ ಎನಿಸಿತು. ಸರಿಯೆ, ಗೋಪಾಲಯ್ಯನವರೊಡನೆ ನಾನು ಅಡುಗೆಮನೆಯನ್ನು ಸೇರಿದೆ. ನಿತ್ಯ ರೂಢಿಯಂತೆ ಸ್ನಾನ ಮಾಡಿಯೆ ಕಾಫಿ ಕುಡಿಯುವ ಅವರ ಜೊತೆಗೆ, ಹಿಂದಿನ ದಿನ ಸ್ನಾನ ಮಾಡದ ನಾನೂ ಸೇರಿಕೊಂಡೆ. ಎಲೆಗಳು ಬಂದುವು: ಮೇಲೆ ಬಟ್ಟಲು ಗಾತ್ರದ ದೋಸೆಗಳನ್ನು ಬಡಿಸಿದರು; ಜೇನು, ಹೆರೆ ತುಪ್ಪಗಳ ಸನ್ನಾಹವಾಯಿತು. ಬದಿಯಲ್ಲಿ ಚಿಕ್ಕ ಗುಡಾಣಗಳಂತಹ ಗಿಂಡಿಗಳಲ್ಲಿ ಕಾಫಿ ತಂದು ಇರಿಸಿದ್ದಾಯಿತು. ನನ್ನ ಮುಖವನ್ನು ಕಂಡು



ವಿಸ್ಮಯ

ಇದ್ದಾವೆ
ಈ ಜಗದಲ್ಲಿ
ಅದ್ಭುತ ವಸ್ತುಗಳು
ಎಷ್ಟೊಂದು ಬಗೆ
ಆದರೆ ಗೆಳೆಯಾ
ನೀನಿಲ್ಲದಾಗ
ಎಲ್ಲ ವಸ್ತುಗಳೂ
ನೀರಸವೆನಿಸುವುದು
ಅದು ಹೇಗೆ?

—ಭಾಗ್ಯಲಕ್ಷ್ಮಿ, ಬೆಂಡೆಹಕ್ಕಲು.

ಗೋಪಾಲಯ್ಯನವರು "ತೆಗೆದುಕೊಳ್ಳಿ" ಅಂದರು. ನಾನು ಇಷ್ಟನ್ನೆ!" ಎಂದು ಕೇಳಿದೆ. "ಎಲ್ಲಾ ಸರಿಯಾಗುತ್ತದೆ" ಎಂದರು ಅವರು. "ಸ್ನಾನಕ್ಕೋ ಇಷ್ಟು ಕಾಫಿ?" ಎಂದೆ ನಾನು ಗೋಪಾಲಯ್ಯ ಮಲ್ಲಿಗೆಯ ಮೀಸೆಯೊಳಗಿಂದ ಜಾಜಿ ಹೂವಿನ ನಗುವನ್ನು ಸೂಸಿ "ನಾವು ಹಳ್ಳಿಯವರು; ನಮಗೆ ಹೊಟ್ಟೆ ತುಂಬ ತಿಂದರೆ ಲೆಕ್ಕಾಚಾರ" ಎಂದರು. ಅಂಥಾ ಉಪಚಾರಕ್ಕೆ ಮರುಳಾಗಿ, ಉಪಾಹಾರವನ್ನು ತೊಡಗಿದ ನಾನು, ಮುಗಿಸುವಾಗ ಬರಿ ಎಲೆಯನ್ನು ನೋಡುತ್ತಲಿದ್ದೆ. ಸೋತ ವಿಷಯವೆಂದರೆ ಆ ಕಾಫಿಯೊಂದರಲ್ಲಿ. ಅದನ್ನು ಬರಿದು ಮಾಡದೆ– ತಿಂದು, ದಣಿದು, ತೇಗುತ್ತ ಎದ್ದರೆ, ಗೋಪಾಲಯ್ಯ "ಶಂಕರೀ, ಕದಳಿಹಣ್ಣು ಬಡಿಸಲೇ ಇಲ್ಲವಲ್ಲ" ಎಂದರು. "ಅಯ್ಯೋ, ನನ್ನ ಮರವೆಯೇ" ಎಂದು ಅವಳು ಹಣ್ಣು ತಂದು ಬಡಿಸಿದಳು. "ಶಾಸ್ತ್ರಕ್ಕಾದರೂ ತಿನ್ನಿ" ಎಂದು ನನ್ನನ್ನು ಬಲವಂತಪಡಿಸಿ, ನಾಲ್ಕು ಹಣ್ಣುಗಳ ಪಾಲಿಗೆ ನಾನು ಮೃತ್ಯುವಾಗುವಂತೆ ಮಾಡಿಸಿದರು. ತೀರ ಜಡಭರತನಂತಾದ ನಾನು, ಪಯಣ ಹೊರಡುವುದೆಂಬುದು ನನಗೆ ಅನ್ಯಾಯವಾಗಿ ಕಾಣಿಸಿದರೂ, ಕೇವಲ ಆತ್ಮಗೌರವವನ್ನು ಕಾಪಾಡಲು "ಇನ್ನು ಹೊರಡುತ್ತೇನೆ. ರಸ್ತೆಯ ತನಕ ಮುಟ್ಟಿಸಿಬಿಟ್ಟರೆ ಸಾಕು" ಎಂದು ನುಡಿದೆ. ಗೋಪಾಲಯ್ಯ ನಕ್ಕರು; ಹಾಗೆ ಬಂದೊಡನೆಯೆ ಹೊರಡುವುದಕ್ಕೆ ಇದು ರೈಲಾಫೀಸೆ? ನಿಮ್ಮಂಥವರು ನಮ್ಮಲ್ಲಿಗೆ ಬರುವುದೂ ಅಪೂರ್ವ; ಬಂದವರು ಬರಿಯ ಮುಖ ತೋರಿಸಿ ಮಾಯವಾಗಿಬಿಟ್ಟರೆ!" ಎಂದು ಕೇಳಿದರು.

ನನ್ನ ಹಠ, ಅವರ ಆಗ್ರಹ ಇವುಗಳ ಸ್ಪರ್ಧೆಯಲ್ಲಿ ಶಂಕರಮ್ಮ ಸೇರಬೇಕೆ? ಅವಳು ಬಂದವಳು "ನೀವು ಹಾಗೆಲ್ಲ ಮಾಡಿದರೆ ಆಗುವುದಿಲ್ಲ. ನಿಮಗೆ ಕಷ್ಟವಾದರೂ ಚಿಂತೆಯಿಲ್ಲ; ಎರಡು ದಿವಸ ಇದ್ದು ಹೋಗಬೇಕು" ಎಂದಳು. ಬಾಯಿಬಿಟ್ಟು "ಏನೋ ಮನೆಗೆ ನಾಲ್ಕು ಮಂದಿ ಬಂದು ಇದ್ದರೆ, ನಾವೀ ಕೊಂಪೆಯಲ್ಲಿ ಕೊಗಳು ಕಟ್ಟಿಕೊಂಡು ಕುಳಿತುದೊಂದು ಸಾರ್ಥಕ. ನಮ್ಮ ಹೆತ್ತ ಮಗುವೇ ಮನೆಗೆ ಬಾರದಿರುವಾಗ, ತಮ್ಮಂಥವರು ಯಾರಾದರೂ ಬಂದರೆ, ದೇವರು ಕಳುಹಿಸಿದ್ದು ಎಂದು ಅನಿಸುತ್ತದೆ" ಎಂದಳು; ಆಗ ನನಗೆ ಹಿಂದಣ ರಾತ್ರಿಯ ಮಾತುಕತೆಗಳೆಲ್ಲ ನೆನವರಿಕೆಗೆ ಬಂದುವು. ಮಗನಿಂದ ದೂರಳಾದ ಆ ತಾಯಿ, ಮಾನವ ಪ್ರೇಮಕ್ಕಾಗಿ ಎಷ್ಟು ಹಸಿದಿದ್ದಾಳೆಯೋ ಎನಿಸಿತು. ಅದರಿಂದಾಗಿ ನಾನು ತಿರುಗಿ ಚಕಾರವೆತ್ತಲಿಲ್ಲ. ನನಗಿನ್ನು ಮೂವತ್ತು ಮೈಲಿನ ಪಯಣ ಉಳಿದಿದೆಯಾದರೂ, ಉದ್ದೇಶಿಸಿ ಬಂದಂಥ ಕೆಲಸ ಹೇಗೂ ವ್ಯರ್ಥವಾಗಿ ಹೋಗಿತ್ತಾದುದರಿಂದ, ತೀವ್ರವೇ ಊರನ್ನು ಸೇರಬೇಕೆಂಬ ಆತುರಕ್ಕೆ ಎಡೆಯಿರಿಲಿಲ್ಲ.

ಈಗ ನನ್ನ ಪಯಣದ ಉದ್ದೇಶವನ್ನು ಕುರಿತು ಹೇಳಬಹುದಲ್ಲ. ಪುತ್ತೂರಿನಲ್ಲಿ ನಮ್ಮ ಮನೆಯಿದೆ: ನಮ್ಮ ಮನೆಯ ಹಸು ಒಂದು ದಿನ ಮೇವಿಗೆ ಹೋದುದು ಮರಳಿ ಬರಲಿಲ್ಲ. ಜಾನುವಾರು ಸಂತೆಯ ಸಮಯದ ಹಿಂದು ಮುಂದೆ, ಊರಲ್ಲಿ ದನಕರುಗಳು ಕಳವಾಗುತ್ತಿರುವುದು ರೂಢಿ: ಮೇಲೆ ಯಾವನೋ ಒಬ್ಬ "ಯಾರೋ ಒಬ್ಬ ಯಾವುದೋ ಒಂದು ಚಂದದ ದನವನ್ನು ಮೂಡಲಿಗೆ ಹೊಡೆದುಕೊಂಡು ಹೋಗುತ್ತಿದ್ದ" ಎಂಬ ಸೂಚನೆ ಕೊಟ್ಟ. ನಮ್ಮ ಮನೆಯ ಆಳು, ಮಂತ್ರವಾದಿಯನ್ನು ಕೇಳಿ ಬಂದು "ಅದು ಮೂಡಲಿಗೆ ಹೋದದ್ದೇ ನಿಜ. ಹಟ ಸಾಧಿಸಿದರೆ ಸಿಕ್ಕಿಯೇ ಸಿಗುತ್ತದೆ" ಎಂಬ ಭರವಸೆಯನ್ನೂ ತಂದ. ಕಣ್ಣಿನ ಸಾಕ್ಷಿ, ದೇವತೆಗಳು ನುಡಿದ ಭವಿಷ್ಯ— ಇವೆರಡನ್ನೂ ನಂಬಿ, ಪುತ್ತೂರಿನಿಂದ ಸುಬ್ರಹ್ಮಣ್ಯಕ್ಕೆ ಹೊರಟೆ. ಹೋಗುತ್ತ ಹಾದಿಯಲ್ಲಿ ಕಂಡ, ಕಾಣದ, ಯಾವತ್ತೂ ಹಸುಗಳು ನನ್ನವೇ ಎಂಬ ಭ್ರಮೆಯಿಂದ ಅಲೆದಾಡಿದೆ. ಕುಕ್ಕಂದದ ಸಂತೆ ಬಯಲಿಗೆ, ಬಿಸಿಲೆ ಘಟ್ಟವು ಅಡ್ಡವಾಗದಿರುತ್ತಿದ್ದರೆ, ದನವನ್ನು ಅರಸುತ್ತ ಹಾಸನ ಜಿಲ್ಲೆಗೆ ಹೋಗುತ್ತಿದ್ದೆನೋ ಏನೋ! ಅಂತೂ ಕಾಲಿನ ಹಿಮ್ಮಡಿಗಳನ್ನು ಸವೆಯಿಸಿಕೊಂಡುದೇ ಬಂತು.

ನಿರಾಶೆ, ಆಯಾಸಗಳ ದೆಸೆಯಿಂದ ಸೋತ ನನಗೆ, ನನ್ನ ಮರುಳುತನ ತೀರ ವ್ಯಕ್ತವಾಯಿತು. "ಈ ಗ್ರಾಮದವರು ವರ್ಷಕ್ಕೆ ಹತ್ತು ದನ, ನೂರು ಕರುಗಳನ್ನು ಏನೂ ವ್ಯಥೆಯಿಲ್ಲದೆ ಹುಲಿರಾಯನಿಗೆ ಕೊಡುತ್ತಿದ್ದಾರೆ. ಹಾಲಿಲ್ಲದೆ ನರಳುತ್ತಿದ್ದ ಒಂದು ಬಡ ನರಹುಲಿ ನನ್ನ ದನವನ್ನು ಕದ್ದುದಕ್ಕೆ ಏಕೆ ಅಳಬೇಕು?" ಎಂದು ನೆನೆದು ಹೂಂ" ಎಂದೆ. ಆ ವೃದ್ಧ ದಂಪತಿಗಳು ತಮ್ಮ ಕೇಳಿಕೆಗೆ ಅದು ನನ್ನ ಉತ್ತರವೆಂಬುದಾಗಿ ತಿಳಿದರು. ನನಗೆ ಅಲ್ಲಿರಲು ಆತಂಕವಿರಲಿಲ್ಲ. ಈ ಕಾಡಿನ ರಾಜ್ಯದಲ್ಲಿ ದಿನ ಕಳೆದು

ರಾತ್ರಿಯಾಗುವುದು, ಆ ರಾತ್ರಿ ಹೋಗಿ ತಿರುಗಿ ಹಗಲಾಗುವುದೂ ಶಕ್ಯವೇ? ಎನಿಸುತ್ತಿತ್ತು. ನನ್ನ ಸಮಸ್ಯೆಯನ್ನು ಇಂಗಿತದಿಂದಲೇ ತಿಳಿದುಕೊಂಡಂತೆ ಗೋಪಾಲಯ್ಯ— "ಮಧ್ಯಾಹ್ನ ನಮ್ಮ ಕಾಟುಮೂಲೆ ನಾರಾಯಣನ ಮನೆಗೆ ಹೋಗಿ ಬರುವ. ಅದು ಬಹಳ ಚಂದವಾದ ತಾವು. ನಿಮಗೂ ಅದನ್ನು ನೋಡಿದರೆ ಸಂತೋಷವಾದೀತು" ಎಂದರು. ನಾನು ಬೆಳಗಿನ ಸಮಸ್ಯೆಯನ್ನು ಯೋಚಿಸಿ "ನನ್ನಷ್ಟಕ್ಕೆ ಈಗೆಲ್ಲಾದರೂ ಸುತ್ತಾಡಿ ಬರುತ್ತೇನೆ" ಅಂದೆ. ಅವರು "ಬೆಳಿಗ್ಗೆ ನನಗೂ ಏನೂ ಮಹಾ ಜಂಬರವಿಲ್ಲ. ಮೊದಲು ನಮ್ಮ ಮನೆಯ ಹಿಂದಿನ ಗುಡ್ಡವನ್ನು ಹತ್ತಿ ಇಳಿಯುವ; ಆದರೆ ಮುಳ್ಳು ಚುಚ್ಚಿತು, ಕುತ್ತಿ ಕಂತಿತು– ಎಂದು ದೂರಬೇಡಿ" ಎಂದು ನುಡಿದರು.

ಅವರೊಡನೆ ಅಲೆದಾಟಕ್ಕೆ ಹೊರಡಲು ಅನುವಾದೆ; ಅವರು ಕೈಗತ್ತಿಯೊಂದನ್ನು ಹಿಡಿದುಕೊಂಡು ನನ್ನ ಮಾರ್ಗದರ್ಶಕರಾದರು. ಅಂಗಳದಿಂದ ತೋಟದೊಳಕ್ಕೆ ಕಾಲಿರಿಸಿ, ಅದರ ಉದ್ದಕ್ಕೂ ತಣಸಾದ ನೆಲವನ್ನು ತುಳಿದು ನಡೆದೆವು. ತೋಟದ ಕಾಲುವೆಯನ್ನು ನೀರಿಂದ ಉಕ್ಕಿಸುತ್ತಿದ್ದ ಬೆಟ್ಟದ ಅಬ್ಬಿಯೊಂದು ಇದಿರಾಯಿತು. ಕುಣಿಯುವ ಆ ಬೆಟ್ಟದ ಕನ್ನೆಯನ್ನು ಕಂಡು ಮರುಳಾದ ನಾನು "ಎಷ್ಟು ಚೆಲುವಿನ ತಾವನ್ನು ಹುಡುಕಿ ಮನೆ ಮಾಡಿಕೊಂಡಿದ್ದೀರಿ!" ಅಂದೆ. "ಅಯ್ಯೋ, ಇದರ ಅಪ್ಪನಂತಹ ಅಬ್ಬಿ ಈ ಗುಡ್ಡಗಳಲ್ಲಿ ಎಷ್ಟು ಬೇಕು ನಿಮಗೆ?" ಅಂದರು ಅವರು. ನಿಜ, ನಮ್ಮ ಹಾದಿಯುದ್ದಕ್ಕೂ ಅಬ್ಬಿಗಳ ಲಾಸ್ಯವೇ ಲಾಸ್ಯ. ಅವುಗಳನ್ನು ನೋಡುತ್ತ, ಬಂಡೆಗಳಿಂದ ಬಂಡೆಗಳಿಗೆ ಜಗಿಯುತ್ತ, ನಮ್ಮ ಹಾದಿಗೆ ಅಡ್ಡವಾಗುತ್ತಿದ್ದ ಓಟೆ, ಬಿದಿರುಗಳ ಕಾಂಡಗಳನ್ನು ಬದಿಗೆ ತಳ್ಳುತ್ತ, ಸಾಗುತ್ತಿದ್ದ ನನಗೆ, ಮೈಯೆಚ್ಚರವಿರಲಿಲ್ಲ. ಗೋಪಾಲಯ್ಯ "ನೋಡಿ, ಈ ಹಪ್ಪಳ ಕರಿದ ವಾಸನೆಯುಂಟಲ್ಲ; ಅದು ಕನ್ನಡಿ ಹಾವಿನದ್ದು" ಎಂದರು. ಆ ಮಾತಿನ ತಲೆ ಬುಡ ನನಗಾಗದೆ 'ಕನ್ನಡಿ?'ಯೆಂದು ಮಾರ್ನುಡಿದೆ ನಾನು. ಗೋಪಾಲಯ್ಯ, ನನ್ನ ಸೌಂದರ್ಯದ ಕನಸನ್ನು ಸಂಪೂರ್ಣವಾಗಿ ಹರಿದೊಗೆಯುವಂತೆ, ತಮ್ಮ ಸಹ ಗ್ರಾಮವಾಸಿಗಳಾದ ಅನೇಕ ಹಾವುಗಳನ್ನು ಕುರಿತು ಬಣ್ಣಿಸಿದರು. ಆ ಭೀಕರ ವರ್ಣನೆಗಳಿಂದ ಸೌಂದರ್ಯ ಮೋಹ ನಷ್ಟವಾದ ನಾನು "ಕಾಲು ನೋಡಿ ಹೆಜ್ಜೆ ಹಾಕಿ" ಎಂದ ಅವರ ಮಾತುಗಳನ್ನು ಕೇಳಿದ ಬಳಿಕಂತು, ಪ್ರತಿಯೊಂದು ಬಂಡೆಯ ಸಂದಿನಲ್ಲೂ ಒಂದೊಂದು ಹಾವನ್ನು ಕಾಣತೊಡಗಿದೆ.

ಗೋಪಾಲಯ್ಯ ಅಬ್ಬಿಗಳ ಹಾದಿಯನ್ನು ಬಿಟ್ಟು, ಗಿಡಗಳನ್ನು ಸವರುತ್ತ, ಹಳುವನ್ನು ಹೊಕ್ಕರು. ಅವರನ್ನು ಹಿಂಬಾಲಿಸಿದ ನನಗೆ ದಾರಿಗೆಟ್ಟಂತಾಯಿತು. ಕೆಲವು ಕ್ಷಣಗಳ ಕಾಲ, ನಾವು ಕಾಡಿನಲ್ಲಿ ಕುರುಡಾಗಿ ಅಲೆದು, ತಿರುಗಿ ಮತ್ತೊಂದು ಕಾಲುದಾರಿಯನ್ನು ಸೇರಿದೆವು. "ನೋಡಿ: ಇದು ನಮ್ಮ ದಾರಿಯಲ್ಲ. ಬದಲು ಕಾಟಿ, ಕಾಡಾನೆಗಳ ಸಂಚಾರದ ಮಾರ್ಗ, ಇದನ್ನೇ ಹಿಡಿದು ಆಚೆ ಸಂಪಾಜೆ ಈಚೆ ಸುಬ್ರಹ್ಮಣ್ಯ; ಶಿರಾಡಿಗಳನ್ನು ಸೇರಬಹುದು" ಎಂದರು. ನನಗೆ ಹಾವುಗಳ ವಿಷಯದ ಕನಸು ಮಾಯವಾಗಿ, ಕಾಟಿ, ಕಾಡಾನೆಗಳ ಬಿಂಬ ಕಾಣಿಸತೊಡಗಿತು. ನಡೆ ನಡೆದು ಕಾಡು ಕಳೆಯಿತು. ಆಳೆತ್ತರದ ಹುಲ್ಲು ತುಂಬಿದ ಒಂದು ಬಯಲು ಬಂದಿತು. ಅದರ ನಡುವಣಿಂದ ಹಾದು ಆ ಬೆಟ್ಟದ ಕುಡಿಯನ್ನೇರಿದೆವು.

ಸುದೈವದಿಂದ ಅಲ್ಲಿನ ಹುಲ್ಲು ಕತ್ತಿಗಿಂತಲೂ ಎತ್ತರವಾಗಿ ಬೆಳೆಯಲಿಲ್ಲವೆಂಬುದರಿಂದ, ನಮ್ಮ ರುಂಡಗಳು ಸ್ವತಂತ್ರವಾಗಿದ್ದುವು. ನನ್ನ ತಲೆಯು ಗೋಪಾಲಯ್ಯನವರ ತಲೆಯನ್ನು ಕಾಣುವುದಕ್ಕೂ, ಅವರ ಮುಖವು ನನ್ನ ಮುಖವನ್ನು ನೋಡುವುದಕ್ಕೂ ಸಾಧ್ಯವಾಗಿತ್ತು. ಗೋಪಾಲಯ್ಯನವರು ಪೂರ್ವಕ್ಕೆ ಮುಖ ಮಾಡಿ "ಇದು ಕುಮಾರ ಪರ್ವತ, ಇದು ನಮ್ಮ ಶೇಷ ಪರ್ವತ, ಇದು ಸಿದ್ಧ ಪರ್ವತ" ಎಂದು ತೋರಿಸಿದ್ದಲ್ಲದೆ, ಅಲ್ಲಿನ ದಂತ ಕಥೆಗಳನ್ನೂ ಹೇಳಿದರು. ಅಲ್ಲಿ ಇನ್ನೂ ತಪಸ್ಸು ಮಾಡುತ್ತಿರಬೇಕಾದ ಸಿದ್ಧ, ಸಾಧ್ಯರ ವಿಚಾರವನ್ನು ಕಂಡವರಿಗಿಂತಲೂ ಸೊಗಸಾಗಿ ಬಣ್ಣಿಸಿದರು. ಮೇಲೆ, ಮುದ್ರಿಕೆಯಾಗಿ "ಎಷ್ಟು ನಿಜವೋ? ಎಷ್ಟು ಸುಳ್ಳೋ, ಜನರು ಅನ್ನುತ್ತಾರೆ" ಎನ್ನುತ್ತಿದ್ದರು. ನನ್ನ ದೃಷ್ಟಿ ಎಲ್ಲವನ್ನು ಕುಕ್ಕುವ ಬಿಸಿಲ ಜಳದ ಕೆಳಗೆ ನಿಶ್ಚಲವಾಗಿ ನಿಂತ ನೀಲ ಪರ್ವತಶ್ರೇಣಿಯನ್ನೇರಿತು. ನಾವು ನಿಂತ ಬೆಟ್ಟದ ಇಳುಕಲೇ ಕಣಿವೆಯಾಗಿ ಪರಿಣಮಿಸಿ, ಅಲ್ಲಿಂದ ತಿರುಗಿ ಬೆಟ್ಟದ ಸಾಲಾಗಿ ಎದ್ದು, ಕುಮಾರ ಪರ್ವತದಲ್ಲಿ ಲೀನವಾಯಿತು. ಆ ನೋಟದ ಭವ್ಯತೆ ನನ್ನ

ಮನಸ್ಸನ್ನು ಬೆರಗುಗೊಳಿಸಿತು. ನಮ್ಮ ನಾಡಿಗೆ ಇದೊಂದು ಗೌರೀಶಂಕರವೆನಿಸಿತು. "ನಿಮ್ಮ ಊರು ಕೈಲಾಸವಯ್ಯ" ಎಂಬ ನನ್ನ ಹೊಗಳಿಕೆಯ ಮಾತನ್ನು ಕೇಳಿ ಗೋಪಾಲಯ್ಯ ನಕ್ಕರು. "ನೋಡಿ. ಈ ಕೈಲಾಸಕ್ಕೆ ನಾನೂ, ನಮ್ಮ ಊರಿನ ಇತರ ಗಣಗಳೂ, ಹುಲ್ಲಗೋ ಸೊಪ್ಪಿಗೋ ಆಗಾಗ ಬರುವುದುಂಟು. ನಿತ್ಯವೂ ಇವನ್ನೇ ನೋಡುತ್ತ, ಎಲ್ಲೋ ತಿರುಗಾಡುತ್ತಿರುವ ನಮಗೆ ಇದು ಬರಿಯ ಬೆಟ್ಟ. ಏನೋ, ಪೇಟೆಯಿಂದ ಬರುವ ನಿಮ್ಮಂಥವರು ಅದರ ಚಂದವನ್ನು ಬಣ್ಣಿಸಿದರೇನೇ ಅದು ಚಂದವೆಂದು ನಮಗೆ ತಿಳಿಯಬೇಕು. ಆ ಕಣ್ಣು ಪೇಟೆಯವರಿಗಿರದೆ, ನಮಗೆಲ್ಲಿದೆ?" ಎಂದರು.

"ಹಾಗೇನಿಲ್ಲ; ಪೇಟೆಯವರಿಗೂ ಇಂಥ ಬೆಟ್ಟದ ನೋಟಗಳು ಬೇಕಾಗಿಲ್ಲ. ಅವರಿಗೆ ರೂಪಾಯಿ ನೋಟುಗಳನ್ನು ಕಂಡರೆ ಕುಮಾರ ಪರ್ವತದಷ್ಟು ದೊಡ್ಡದಾಗಿ ಕಾಣುತ್ತವೆ."

ಅವರು ನಕ್ಕರು: "ನಿಜ. ಪೇಟೆಯಲ್ಲಿ ಕಾಸಿಲ್ಲದೆ ಯಾವುದೂ ಆಗುವುದಿಲ್ಲ; ಅಲ್ಲಿ ದುಡ್ಡೇನೆ ದೊಡ್ಡಪ್ಪ. ಆದರೆ ಹಳ್ಳಿಯವರಿಗೂ ಹಣ ಬೇಡವೆಂದಲ್ಲ; ರೂಪಾಯಿ ನೋಟು ಕಹಿಕುತ್ತದೆಂದಲ್ಲ. ಆದರೆ ಎಷ್ಟೋ ಸಂಗತಿಗಳಲ್ಲಿ ದುಡ್ಡಿಲ್ಲದೆಯೂ ಇಲ್ಲಿ ನಡೆಯುತ್ತದೆ. ಇಲ್ಲಿ ಬೇಕಾದದ್ದನ್ನೆಲ್ಲ ನಾವೇ ಬೆಳೆಯಿಸುತ್ತೇವೆ. ಊರಲ್ಲಿ ನಮಗೆ ಹಣದ ಅವಶ್ಯಕತೆಯಿರುವುದಿಲ್ಲ. ಪೇಟೆಯ ಹಂಗೂ ಕಡಿಮೆ."

"ಆದರೆ ಭಟ್ಟರೇ, ಇಂತಹ ಸ್ವರ್ಗ ಕಣ್ಣ ಮುಂದೆ ಇದ್ದರೂ, ನಿಮಗೆ ಮನುಷ್ಯರ ಒಡನಾಟ ಬೇಕೆನಿಸುವುದಿಲ್ಲವೇ? ಈ ಮೂಲೆಯಲ್ಲೇ ಇದ್ದು, ಬೇಸರ ಬರುವುದಿಲ್ಲವೇ?" ಎಂದು ಕೇಳಿದೆ.

ಗೋಪಾಲಯ್ಯ ನಗುತ್ತ "ಬೇಸರ ಬಾರದಿರುತ್ತದೆಯೆ? ಬೇಸರ ಎಲ್ಲಿದ್ದರೆ ಬರುವುದಿಲ್ಲ? ಇಲ್ಲಿದ್ದರೆ ನಿತ್ಯದ ಕೆಲಸದಲ್ಲಿ ಸಮಯ ಹೇಗೂ ಸಾಗುತ್ತಿದೆ. ಹಾಗೆ ತೀರ ಬೇಸರವಾದರೆ ಆಚೆ ನಮ್ಮ ದೇರಣ್ಣನ ಮನೆಗೋ, ಈಚೆ ನಮ್ಮ ನಾರಾಯಣನ ಮನೆಗೋ ಹೋಗಿಬರುತ್ತೇನೆ. ತಿಂಗಳಿಗೊಮ್ಮೆ ಸುಬ್ರಹ್ಮಣ್ಯದ ತನಕವೂ ಹೋಗಿರಬರಬಹುದು. ಬೆಳಿಗ್ಗೆ ಹೋಗಿ, ಸಂಜೆಗೆ ಬಂದರಾಯಿತಲ್ಲ. ಬೇಸರ ಹೋಗಲಿಕ್ಕೇನಾಗಬೇಕು?"

ನಾನು ನಿಂತಲ್ಲಿಯೇ ನಿಂತು, ನೋಡುವಷ್ಟನ್ನು ಮನದಣಿಯೆ ನೋಡಿಯಾಯಿತು. ಆ ಬಳಿಕ "ಇನ್ನು ಹೋಗುವ" ಎಂದೆ. ಅವರು ತಿರುಗಿ ಮಾರ್ಗದರ್ಶಕರಾಗಿ, ಹಾದಿಯ ಹುಲ್ಲನ್ನು ಆಚೀಚೆ ಬಗೆಯುತ್ತ, ಮುಂದುವರಿದರು. ತಿರುಗಿ ಕಾಡು ಬಂದಿತು. ಇಬ್ಬರೂ ಮುಂದಕ್ಕೆ ನಡೆದವು. ಅವರಲ್ಲಿ ತಿರುಗಿ ಮಾತಿನ ಉತ್ಸಾಹ ಕಾಣಿಸಲಿಲ್ಲ. ನಡೆದ ದಣಿವಿನಿಂದ, ನನ್ನಲ್ಲಿ, ಮಾತುಗಳಿಗೆ ಉಸಿರು ಸಾಕಾಗಲಿಲ್ಲ. ಹಾಗೆಯೇ ಮುಂದುವರಿಯುತ್ತಿದ್ದ ಗೋಪಾಲಯ್ಯನವರು ಒಮ್ಮೆಗೇ ನಿಂತರು. ಹಾದಿಯಲ್ಲಿ ಬಿದ್ದ ಆನೆಯ ಲದ್ದಿಗಳನ್ನು ನನಗೆ ತೋರಿಸಿ, "ನೋಡಿ, ಇನ್ನೂ ಇದರಿಂದ ಹಬೆ ಹೋಗುತ್ತಿದೆ. ರಾತ್ರಿ ಇಲ್ಲಿಗೆ ಆನೆಗಳು ಬಂದಿರಬೇಕು. ಇದೇ ದಾರಿ ನಮ್ಮ ಕಾಟು ಮೂಲೆಯ ತೋಟಕ್ಕೆ ಹೋಗುತ್ತದೆ. ಮಧ್ಯಾಹ್ನ ಹೋಗಿ, ನಾವು ವಿಚಾರಿಸಿ ಬರಬೇಕಾಯಿತು; ನಮ್ಮ ನಾರಾಯಣನ ಅವಸ್ಥೆ ಏನಾಗಿದೆಯೋ" ಎಂದರು.

"ಏನು? ಆನೆಗೀನೆಗಳು ನಿಮ್ಮ ತೋಟಕ್ಕೆ ನುಗ್ಗುವುದುಂಟೇ?" ಎಂದು ಕೇಳಿದೆ. ನುಗ್ಗುವುದೂ ಉಂಟು, ಹಾಗೆಯೇ ನುಗ್ಗಿ, ತೋಟವನ್ನೇ ನುಗ್ಗು ನುರಿ ಮಾಡುವುದೂ ಉಂಟು. ಆನೆಯ ಹಿಂಡನ್ನು ತಡೆಯುವಂಥ ಬೇಲಿಯನ್ನು ಮಾಡಲು ಬಂದೀತೇ; ಹೇಳಿ. ಏನಾದರೂ ಗುಂಡಿನ ಹೆದರಿಕೆಯನ್ನು ತೋರಿಸಿದರೆ, ಅವು ಹೊರಟು ಹೋಗಲೂಬಹುದು ಗುಂಡನ್ನು ಹಾರಿಸಬಹುದು. ಆದರೆ ಅವನ್ನು ಕೊಲ್ಲುವ ಹಾಗಿಲ್ಲವಲ್ಲ. ಅವನ್ನು ಕೊಲ್ಲುವ ಹಾಗಿಲ್ಲ ಎಂದು ಅವಕ್ಕೂ ಗೊತ್ತಾಗಿದೆ."

ಮುಂದೆ ಬಹಳ ಹೊತ್ತಿನ ತನಕ ಅವರು ಮಾತನಾಡಲಿಲ್ಲ; ನಾನೂ ಮಾತನಾಡಲಿಲ್ಲ. ಮೆಲು ಗಾಳಿಯೊಂದು ನಾವಿದ್ದೆಡೆಗೆ ಬೀಸಿತು. ಕೆಳಗಣ ಕಣಿವೆಯಲ್ಲಿ ಹರಿಯುತ್ತಿದ್ದ ಹಳ್ಳದ ನೀರಿನ ನಗುವು ನಮಗೆ ಕೇಳಿಸಿತು. ಅದರಿಂದ ನಾನು "ಹತ್ತಿರ ಎಲ್ಲೋ ಹೊಳೆ ಹರಿಯುವ ಹಾಗಿದೆಯಲ್ಲ!" ಎಂದೆನು. ಹೊಳೆ ಇಲ್ಲೇ ನೂರು ಗಜದ ಕೆಳಗೆ ಇದೆ. ಇಷ್ಟರ ತನಕ ಎದುರು ಗಾಳಿಯಿಂದಾಗಿ ಅದರ ಸದ್ದು ಕೇಳಿಸಲಿಲ್ಲ. ಈಗ ಗಾಳಿಯ ದಿಕ್ಕು ಬದಲಿಸಿತು. ನದಿಯ ಮೊರೆತ ಕೇಳಿಸುತ್ತದೆ ಅಲ್ಲವೆ?"

ಈ ಹೊಳೆಯು ಯಾವುದನ್ನು ಹೋಗಿ ಸೇರುತ್ತದೆ?" ಎಂದು ಕೇಳಿದೆ ನಾನು. ಇಲ್ಲಿನ ಎಲ್ಲ

ಹೊಳಗಳೂ, ಹಳ್ಳಗಳೂ ಸೇರುವುದು ಕುಮಾರ ಧಾರೆಯನ್ನು" ಎಂದರು ಅವರು. 'ಕಟ್ಟಕಡೆಗೆ ಸಮುದ್ರಕ್ಕೇನೆ ಅನ್ನಿ ಯಥಾಗಚ್ಛತಿ ಸಾಗರಂ' ಎನ್ನುವ ಹಾಗೆ. ಯಾಕೆ? ನದಿ ಸ್ನಾನವಾಗಬೇಕೆ? ನೀರು ಚೆನ್ನಾಗಿದೆ ತಂಡಿ ಮಾತ್ರ ಹೆಚ್ಚು. ಒಂದು ಮುಳುಗು ಹಾಕುವ ತನಕವೂ ಚಳಿ."

"ಮಿಂದರೂ ಮೀಯುವ, ಹೊಳೆಯ ನೀರಿನ ಋಣ ಹಾಳು ಪುತ್ತೂರಿಗೆ ಎಲ್ಲಿಂದ ಬರಬೇಕು?" ಎಂದೆ ನಾನು.

"ಮೀಯುವ ಪಂಚೆ ತಂದೇ ಆಗಬೇಕಲ್ಲವೇ? ಮನೆಗೆ ಹೋಗಿಬರುವುದಾದರೆ ಒಂದು ಮೈಲಿನ ಸುತ್ತು ಹೆಚ್ಚಾಗುತ್ತದೆ."

ಸುತ್ತಟವಾಗಬಹುದು; ಬಟ್ಟೆಯನ್ನು ತಂದರೆ ಒಗೆಯಬಹುದಲ್ಲ. ಅಲ್ಲಿ ಬಟ್ಟೆ ಒಗೆಯುವ ಕಲ್ಲುಗಳಿರಬಹುದಲ್ಲ."

ಕಲ್ಲುಗಳಿಗೆ ಈ ಊರಲ್ಲಿ ಬರಗಾಲವೇ?" ಎಂದರು ಗೋಪಾಲಯ್ಯ. ಅಲ್ಲಿಂದ ನಾವು ನೇರವಾಗಿ ಕೆಳಕ್ಕಿಳಿದೆವು. ಬಳಿಕ ಕಾಡನ್ನು ಕಳೆದು, ಚಿಕ್ಕದಾದ ತೋಡನ್ನು ದಾಟಿ, ಗದ್ದೆಗಳನ್ನು ತುಳಿದಾಯಿತು. ನಡೆದು ಮನೆಯ ತೋಟವನ್ನು ಸೇರಿ ಅಂಗಳಕ್ಕೆ ಬಂದೂ ಆಯಿತು. ನಡುವೆ ಹಾದಿಯುದ್ದಕ್ಕೂ ಗೋಪಾಲಯ್ಯ ಏನನ್ನೂ ಮಾತನಾಡಲಿಲ್ಲ: ಅವರ ಮನಸ್ಸು ಮಾತಿನ ಸರಣಿಯಲ್ಲಿ ಲೀನವಾಗಿರಲಿಲ್ಲ. ಬೆಟ್ಟದ ಕುಡಿಯಿಂದ ಇಳಿದ ಗಳಿಗೆಯಿಂದಲೂ ಅವರ ಕಣ್ಣುಗಳು ತುಂಬ ಅಸ್ಥಿರವಾಗಿರುವಂತೆ ನನಗೆ ಕಾಣಿಸಿದವು. ಮಾತುಗಾರಿಕೆಗೆ ಸರಣಿಯೂ ಇದ್ದಿರಲಿಲ್ಲ; ಮಾತಿನ ವಿಷಯದಲ್ಲಿ ಆಸಕ್ತಿಯೂ ತೋರಿಬರಲಿಲ್ಲ. ಅವರಾಡಿದಂಥ ಕೆಲವೇ ಮಾತುಗಳು, ನಡೆದ ಹಾದಿಯಷ್ಟೇ ಅಡ್ಡತಿಡ್ಡಾಗಿ, ಸೆರಗು ತಪ್ಪಿ, ಹಿಡಿದು, ಸಾಗಿದ್ದುವು.

ಗೋಪಾಲಯ್ಯನವರು ಮನೆಯೊಳಕ್ಕೆ ಹೋಗಿ, ಮರೆತುಹೋದ ನಸ್ಯದ ಬುಡ್ಡಿಯನ್ನು ತಂದು, ಒಂದು ಚಿಟಿಕೆ ನಸ್ಯವನ್ನು ಸೇವಿಸಿದರು. ಅದರಿಂದ ಎಚ್ಚರಗೊಂಡು ಮುಂದಿನ ಕೆಲಸ ನಿರ್ಧರಿಸುವಂತೆ, ನನಗೊಂದು ತುಂಡುಬಟ್ಟೆ ಒಗೆಯುವ ಸಾಬೂನನ್ನು ತಂದುಕೊಟ್ಟು "ಇನ್ನು ಹೋಗುವ" ಎಂದರು. ಮನೆಯ ಮೆಟ್ಟಿಲನ್ನು ಇಳಿಯುತ್ತ, ಕತ್ತನ್ನು ತಿರುಗಿಸಿ "ಶಂಕರೀ, ಇವರಿಗೆ ನದಿಯ ಸ್ನಾನವಾಗಬೇಕಂತೆ. ಸ್ನಾನ ಮಾಡಿಸಿಕೊಂಡು ಬರುತ್ತೇನೆ" ಎಂದರು. ಅದನ್ನು ಕೇಳಿ ಆಕೆ ಹೊರಕ್ಕೆ ಬಂದು "ಇಲ್ಲಿ ಬಿಸಿ ನೀರು ಇರುತ್ತ, ಚಳಿ ದಿವಸದಲ್ಲಿ ಅವರು ಹೊಳೆ ನೀರಿನ ಸ್ನಾನ ಮಾಡಬೇಕೆ?" ಎಂದು ಕೇಳಿದಳು.

"ನೀರು ಅಷ್ಟೊಂದು ತಂಡಿಯಾಗಿದ್ದರೆ ಮೀಯದೆ ಹಿಂದಕ್ಕೆ ಬರುತ್ತೇವೆ ನಿಮ್ಮೂರ ಹೊಳೆಯನ್ನು

ಸ್ವಾತಂತ್ರ-ಆಚರಣೆ



ದೇಶದಲ್ಲಿ
ಆಚರಿಸುತ್ತೇವ
ವರ್ಷದಲ್ಲಿ ಒಂದೇ
ಒಂದು ಬಾರಿ
ಸ್ವಾತಂತ್ರ ದಿನಾಚರಣೆ
ಆದರೆ
ಕೆಲ ಗಂಡಸರಿಗೆ
ಹೆಂಡತಿ ತವರಿಗೆ
ಹೋದ ದಿನಗಳಲ್ಲೆಲ್ಲಾ
ಸ್ವಾತಂತ್ರ-ಆಚರಣೆ

-ಜಿ ಟಿ ಜಡೆನೂರ

ನೋಡುವ ಎಂಬ ಆಸೆಯಾಗಿದೆ. ನೋಡಿ ಬರಬಹುದಲ್ಲ" ಎಂದೆ ನಾನು.

ಗೋಪಾಲಯ್ಯನೊಡನೆ ಹೊರಟೆ. ಹೊಳೆಯನ್ನು ಸೇರುವ ತನಕ ನಾನೇ ಮಾತುಗಾರನಾಗಿದ್ದೆ. ಅವರ ಪಾಲಿನ ಕೆಲಸ ಬರಿಯ 'ಹೂಂ' ಕಾರಗಳು ಮಾತ್ರ.

ಹೊಳೆ ಬಂದಿತು: "ಇನ್ನು ನೀವು ಸ್ನಾನಮಾಡಿ ನೋಡುವ" ಎಂದರು. ಅವರು ತಮ್ಮ ನಡುವಿಗೆ ಸ್ನಾನದ ಪಂಚೆಯೊಂದನ್ನು ಬಿಗಿದುಕೊಂಡು, ಮೂಗನ್ನು ಹಿಡಿದು 'ಓಂ ಶಂಕರ, ಶಂಕರ' ಎಂದು ನೀರಿನಲ್ಲಿ ಮೂರು ಬಾರಿ ಮುಳುಗಿ ಎದ್ದರು. ನಾನೋ! ಅರೆ ನೀರಿನಲ್ಲಿ ಕಾಲು ಚಾಚಿ, ಚಳಿಯಿಂದ ಮುಂದುವರಿಯಲು ಅಂಜಿ, ತಿಳಿನೀರ ತಳದಿಂದ ಮೂಡಿ ಕಾಣುವ ಬೆಣಚು ಕಲ್ಲುಗಳ ದುಂಡಾದ ಆಕಾರಗಳನ್ನು ಮೋಹಿಸುತ್ತ ನಿಂತೆ. ನೀರಿನ ಒಯ್ಲಿಗೆ ಇದಿರಾಗಿ, ತಮ್ಮ ನೆಲೆಯನ್ನು ನಿಲ್ಲಿಸಿಕೊಳ್ಳಲು ಯತ್ನಿಸುತ್ತಿದ್ದ ಕಿರಿ ಮೀನುಗಳು. ನನ್ನ ಕಾಲುಗಳನ್ನು ಮುತ್ತಿ, ಕಡಿಯತೊಡಗಿದವು, ನನಗೀಗ ತುಂಬ ವಿಚಾರ! ಪೂರ್ಣ ನೀರಲ್ಲಿ ಇಳಿಯಲೇ, ಅಲ್ಲಿಂದಲೇ ಮನೆಗೆ ಮರಳಿ, ಬಚ್ಚಲಿನಲ್ಲಿ ಸ್ನಾನಮಾಡಲೇ ಎಂಬ ತೊಡಕು. ಅವಸರವಾಗಿ ಓಡುತ್ತಿದ್ದ ಆ ನೀರ ಮೇಲೆ ಇನ್ನೂ ಹಬೆ ಹಾರುತ್ತಿತ್ತು! ಸೂರ್ಯನ ಕಾವು ಅಲ್ಲಿನ ಶಿಲೆಗಳಿಗೆ ತಗುಲಿದಂತಿಲ್ಲ. ಅಲ್ಲಿನ ನೀರು ಮಂಜುಗಡ್ಡೆಯದೇ ಅವತಾರ.

ಹಾಗೇ ನಿಂತು, ಹೊತ್ತು ಕಳೆಯಲಾರದೆ, ಮೈಗೆ ಕಾವನ್ನುಂಟು ಮಾಡಲು, ಬಟ್ಟೆಯನ್ನು ನೀರಿನಲ್ಲಿ ಅದ್ದಿ ಒಗೆಯತೊಡಗಿದೆ. ನನ್ನ ಒಗೆತ ಮುಗಿದರೂ ಗೋಪಾಲಯ್ಯನವರು ಅಲ್ಲಿಂದ ಕದಲಲಿಲ್ಲ. ಮುಣುಗಿದಲ್ಲೇ ನಿಂತು, ಶೀತದಿಂದ ಹಿಮಗಟ್ಟಿದ ಮೈಯುಳ್ಳವರಂತೆ ಅವರಿದ್ದರು. ಅವರ ಬಾಯಿ ಮಾತ್ರ ಮಂತ್ರಗಳನ್ನು ಮಣಗುಟ್ಟುತ್ತಿತ್ತು. ಕೈ ನೀರನ್ನು ಸಿಂಚಿಸುತ್ತಿತ್ತು. ನಾನು ಒಗೆದ ಅರಿವೆಗಳನ್ನು ಹಿಂಡಿ ಬಂಡೆಯ ಕಲ್ಲುಗಳ ಮೇಲೆ ಹರವಿದೆ. ಸಮಯ ಕಳೆಯಲು, ಹೊಳೆ ನೇರಳೆಗಿಡದ ಕಡ್ಡಿಯನ್ನು ಮುರಿದು, ಹಲ್ಲನ್ನು ಉಜ್ಜತೊಡಗಿದೆ. ಅವರ ತಪಸ್ಸು ಮುಗಿಯಲಿಲ್ಲ. ಕೊನೆಗೆ ನೀರಿಗಿಳಿದೆ. ಮೊದಲನೆಯ ಮುಳಗಿಗೇ ಅಂತರಂಗ ಬಹಿರಂಗವೆಲ್ಲ ಅದುರಿತು. ನಿರಿಂದೆದ್ದು ನನ್ನ ಮೈಯನ್ನು ಬಿರುಸಾಗಿ ತಿಕ್ಕಿಕೊಂಡೆ. ಶೀತವಾದ ಗಾಳಿ ನನ್ನನ್ನು ಕೊರೆಯತೊಡಗಿತು.ಇದು ನನ್ನ ಸ್ನಾನದ ಪೂರ್ವಾರ್ಧ: ಉತ್ತರಾರ್ಧವು ದಂಡೆಯ ಮೇಲೆಯೇ ಮುಗಿಯಿತು.

ಗೋಪಾಲಯ್ಯ ಜಪವನ್ನು ತೀರಿಸಿಕೊಂಡು ನೀರಲ್ಲಿ ಕಾಲು ಬಿಟ್ಟು ಬಳಿಯ ಬಂಡೆಯೊಂದರ ಮೇಲೆ ಕುಳಿತರು. ಅವರಿಗೆ ತುಸು ಸಮೀಪದಲ್ಲಿ ಬಿಸಿಲಿಗೆ ಕಾಲು ಚಾಚಿ ನಾನು ಕುಳಿತಿದ್ದೆ. "ಅಂದರೆ ಒಂದು ಸಂಗತಿ ನೋಡಿ" ಎಂದರು ಅವರು. ಕೆಂಡಕ್ಕಿಕ್ಕಿದ ಕಬ್ಬಿಣವನ್ನು ನೀರಿಗದ್ದಿದಷ್ಟು ವಿಪರೀತವಾಗಿ ಅವರು ಮೌನದಿಂದ ಮಾತಿಗೆ ಧುಮುಕಿದರು. "ಯಾವ ಮಾತಿಗೆ ಬಂದಿರಿ ನೀವು?" ಎಂದು ಕೇಳಿದರು. ನಡುವೆ ಏನೋ ಮಾತು ಸಾಗಿತ್ತೆಂದೂ, ನಾನೇ ಎಲ್ಲೋ ಕಿವಿಗೊಟ್ಟು ಉದಾಸೀನನಾಗಿದ್ದೇನೆಂದೂ ನನಗೆ ತೋಚಿತ್ತು. ಅವರೆಂದರು- "ಆಗ ಕೇಳಲಿಲ್ಲವೇ ನೀವು? ಈ ಪ್ರದೇಶದಲ್ಲಿ ವಾಸವಾಗಿರಲು ನಿಮಗೆ ಬೇಸರವಾಗುವುದಿಲ್ಲವೇ ಎಂದು; ಅದನ್ನೇ ನೆನೆದು ಸಂಗತಿ ಹೇಳುತ್ತಿದ್ದೇನೆ" ಎಂದರು. ಬೆಟ್ಟದ ಕುಡಿಯಿಂದ ನದಿಗೆ ಬರುವ ತನಕ, ನೆಲದ ಗರ್ಭದಲ್ಲಿಯೇ ಹುದುಗಿ ಹರಿಯುತ್ತಿದ್ದ ಅವರ ವಿಚಾರ ಸರಣಿ, ಈಗ ಮೇಲೆ ಬಂದುದು ನನಗೆ ಸ್ಪಷ್ಟವಾಯಿತು. ಆಗಿನ ನನ್ನ ಪ್ರಶ್ನೆಗೆ ಈಗ ಉತ್ತರ ಬರುತ್ತಿದೆ— ತಿಳಿಯಿತು.

"ಅಹುದು, ನನಗೇ ಅದನ್ನು ನೆನೆದುಕೊಂಡು ಆಶ್ಚರ್ಯವಾಗುತ್ತಿದೆ. ಮನುಷ್ಯನಿಗೆ ಮನುಷ್ಯನ ಸಹವಾಸ ಬೇಕೇಬೇಕು. ಆಗಾಗ ಬೇಕಾಗುತ್ತದೆ. ನೀವು ಗಂಡಹೆಂಡಿರಿಬ್ಬರು ಜನಸಂಚಾರವಿಲ್ಲದ ಇಂಥ ಕೊಂಪೆಯಲ್ಲಿ ವಾಸವಾಗಿದ್ದೀರಿ. ನಿಜ; ಕೆಲಸದಲ್ಲಿರುವ ಗಳಿಕೆಯಲ್ಲಿ ಜನ ಬೇಕೆನಿಸಲಾರದು. ಕೆಲವೊಮ್ಮೆ ಆಳುಗಳು ಬಂದು, ಮನೆಯ ಮುಂದೆ ಸುಳಿದರೂ ತೃಪ್ತಿಯಾಗುತ್ತದೆ. ಆದರೆ, ಕೆಲಸವಿಲ್ಲದೆ ಒಂಟಿಯಾಗಿದ್ದಾಗ, ಎಷ್ಟೋ ಬಾರಿ, ಈ ಅರಣ್ಯದಲ್ಲಿ ಯಾಕೆ ಬಂದು ಇದ್ದೇವೆ-ಎನಿಸುವುದಿಲ್ಲವೆ?"

"ಹಾಗೇನಿಲ್ಲ. ನಾನು ಇಲ್ಲಿಗೆ ಮದುವೆಯಾಗಿ ಬಂದಾಗ, ಬಂದಾಗಲಿಲ್ಲ. ಬರುವತನಕವೂ ಒಬ್ಬಂಟಿಗನಾಗಿಯೇ ಇದ್ದೆ. ನನ್ನ ಅಪ್ಪ, ಅಬ್ಬೆಯರು ಬೇಗನೆ ತೀರಿಕೊಂಡರು. ಆದರೆ ನಾನು ಆಗೇನೂ ಪುಟ್ಟ ಕೂಸಲ್ಲ. ನನ್ನ ಉಪನಯನವಾದ ವರ್ಷವೇ ತಂದೆ ಕಾಲವಾದರು; ಆರೆಂಟು ವರ್ಷಗಳ

ಬಳಿಕ ತಾಯಿ ತೀರಿಕೊಂಡಳು. ತಂದೆಯು ತೀರಿಕೊಂಡ ಬಳಿಕ, ಅಂದರೆ ನನ್ನ ಹತ್ತನೆಯ ವಯಸ್ಸಿನಿಂದ, ನಾವಿಬ್ಬರೂ ಈಗಿರುವ ಮನೆಯಲ್ಲಿ ಒಂಟಿ ಜೀವನ ಕಳೆದವು. ಬೇಸರವಾದಾಗ ನನ್ನನ್ನು ಅಬ್ಬೆ ಮಾತನಾಡಿಸಬೇಕು; ಅಬ್ಬೆಯನ್ನು ನಾನು ಮಾತನಾಡಿಸಬೇಕು. ದಿನದ ವೇಳೆ ದನ, ಕರು, ತೋಟ, ಗದ್ದೆ, ಆಳು, ಒಕ್ಕಲು ಎಂದು ವಿರಾಮವಿಲ್ಲದೆಯೆ ಸಾಗುತ್ತಿತ್ತು. ಅಲ್ಲಿಯ ತನಕ ನನಗೂ ಒಂಟಿತನ ಎಷ್ಟು ಕಠಿಣವೆಂಬುದು ತಿಳಿದಿರಲಿಲ್ಲ. ತಾಯಿ ತೀರಿಕೊಂಡ ಮೇಲೆಯೇ ಅದರ ತಿಳಿವಾದದ್ದು ನನಗೆ. ಆಕೆ ಕಣ್ಣು ಮುಚ್ಚಿದ ತಿಂಗಳ ಕಾಲ, ಮನೆಗೆ ಸೋದರ ಮಾವನ ಮನೆಯವರು ಬಂದಿದ್ದರು. ಅವರು ಹೊರಡುವ ವೇಳೆಯೂ ಬಂದಿತು. ಅವರಂದರು: 'ಮಗೂ, ಗೋಪಾಲ, ಇಲ್ಲಿ ನೀನೊಬ್ಬನೇ ಇದ್ದು ಏನು ತಪಸ್ಸು ಮಾಡುತ್ತೀಯ? ಬಾ, ನಮ್ಮ ಮನೆಯಲ್ಲಿರು. ಈ ಜ್ವರದ ಕೊಂಪೆಯಲ್ಲಿ ಒಬ್ಬನೇ ಇರುವುದರಲ್ಲಿ ಅರ್ಥವಿಲ್ಲ' ಎಂದರು. ನನಗೂ ಆ ಮಾತು ನಿಜವೆನಿಸಿತು ನಮ್ಮಮ್ಮನು ತೀರಿಕೊಂಡದ್ದು ಜ್ವರದ ಗಡ್ಡೆ ಬಲಿತುದರಿಂದಲೇ. ನಾನದರೂ ವಾರಕ್ಕೊಂದೆರಡು ದಿವಸ ಜ್ವರದಿಂದ ಹಾಸಿಗೆ ಹಿಡಿಯಬೇಕಾಗುತ್ತಿತ್ತು.

"ಹೀಗೆಂದು ನನ್ನ ಸೋದರ ಮಾವನ ಮನೆಗೆ ಹೋಗುವ ನಿರ್ಧಾರ ಮಾಡಿದೆ. ಬೆಳ್ಳಾರೆ ಅವರ ಊರು. ಇಲ್ಲಿಂದ ಆರು ಹರಿದಾರಿಯೂ ದೂರವಷ್ಟೆ. ನಮ್ಮೂರಿನಂಥ ನಿರ್ಜನ ಪ್ರದೇಶವೂ ಅದಲ್ಲ. ಆದರೆ ಅಲ್ಲಿ ನನಗೆ ಒಂದು ವರ್ಷ ಸಹ ಇರಲು ಸಾಕುಸಾಕಾಯಿತು ಸೋದರಮಾವ ನನ್ನವರಾದರೂ ಮಾವನ ಮಡದಿ ಬೇರೆಯೇ ಕುಲದವಳು. ಅವಳು ಕೊಟ್ಟ ಪೀಡೆಗಳನ್ನು ಒಳಗೊಳಗೇ ನುಂಗಿಕೊಂಡೆ. ಕೊನೆಗೊಂದು ದಿನ, ಸುದ್ದಿಯಿಲ್ಲದೆ ಊರನ್ನು ಬಿಟ್ಟೆ. ಇಲ್ಲಿನ ನಮ್ಮ ತೋಟ ದೇರಣ್ಣನ ತಂದೆಗೆ ಗೇಣಿಗೆ ಕೊಟ್ಟಿತ್ತು. ಹೀಗಾಗಿ ಊರಿಗೆ ಮರಳಲಿಲ್ಲ. ಒಬ್ಬನೇ ಇದ್ದು, ಹೊಲ, ಮನೆ ಮಾಡುವ ಸಾಹಸ ನನಗಿರಲಿಲ್ಲ. ಒಂಟಿಯಾಗಿ ತಿರುಗಿ ಮನೆಗೆ ಕಾಲಿರಿಸಲು ಇಷ್ಟವಾಗಲಿಲ್ಲ. ಪ್ರಾಯಕ್ಕೆ ಕಾಲಿರಿಸಿದ್ದೇನೆ ಎಂಬ ತಿಳಿವು ನನಗೆ: ಮಾವನಲ್ಲಿ ಇದ್ದಾಗಲೇ ಮದುವೆಯ ಹಂಬಲವೂ ಮನಸ್ಸಿನಲ್ಲಿ ಅಂಕುರಿಸಿತ್ತು. ಈಗ ಆ ಆಸೆ ಬಲವತ್ತರವಾಯಿತು. ಆದ್ದರಿಂದ ಕನ್ಯಾರ್ಥಿಯಾಗಿ ಪಡುವಣ ಸೀಮೆಯನ್ನೆಲ್ಲ ಅಲೆದಾಡಿದೆ. ಕುಂಬಳೆ ಸೀಮೆಯಿಂದ ಸುಳ್ಯ ಸೀಮೆಯ ತನಕ ನಾನು ಹೊಕ್ಕು ಹೊರಟ ಮನೆಗಳಿಗೆ ದಿಕ್ಕಿಲ್ಲ. ಮದುವೆಯಾಗಲು ಬಂದ ನನ್ನ ದಿಟ್ಟತನವನ್ನು ಕಂಡು ನಕ್ಕವರುಂಟು: ಹಾಸ್ಯ ಮಾಡಿದವರೂ ಉಂಟು. ಆದರೆ ಹೆಣ್ಣನ್ನು ಕೊಟ್ಟವರು ಯಾರೂ ಇಲ್ಲ.

"ಆದರೆ ಬ್ರಹ್ಮನ ಬರಹ ನೋಡಿ; ವಿಧಿಯೇ ವಿಟ್ಲ ಸೀಮೆಯ ಒಂದು ಮನೆಗೆ ನನ್ನನ್ನು ಒಯ್ದಿತೆಂದು ಕಾಣುತ್ತದೆ. ನೆಕ್ಕರೆಹಿತ್ತಲು ಪರಮೇಶ್ವರ ಭಟ್ಟರು ಎಂಬುವರ ಮನೆಗೆ ಹೋದೆ. ಭಟ್ಟರಿಗೊಬ್ಬಳು ಬೆಳೆದ ಮಗಳಿದ್ದಾಳೆ- ಎಂಬ ಸುದ್ದಿ ನನ್ನ ಕಿವಿಗೆ ಬಿದ್ದು ನಾನಲ್ಲಿಗೆ ಹೋಗಿದ್ದೆ. ಆ ಸುದ್ದಿ ಸುಳ್ಳಾಗಿರಲಿಲ್ಲ. ಅವರ ಸಂಸಾರ ದೊಡ್ಡದು: ಅವರಿಗೆ ಎಂಟು ಮಕ್ಕಳು. ಅರೆವಾಶಿ ಹೆಣ್ಣು; ಅರೆವಾಶಿ ಗಂಡು. ಮನೆಯಲ್ಲಿ ಹೆಣ್ಣೇ ಹಿರಿದಾಗಿತ್ತು. ಆದರೂ ಆಕೆಗೆ ಮದುವೆಯಾಗಿರಲಿಲ್ಲಿ. ನಮ್ಮವರಲ್ಲಿ ತೋಟವಿಲ್ಲದವರ ಕುಟುಂಬಗಳು ಕಡಿಮೆ; ಇವರು ಅಂಥವರು. ನಾಲ್ಕಾರು ಮುಡಿ ಗದ್ದೆ ಬೇಸಾಯ ಮಾತ್ರವಿತ್ತು. ಅಂಥದರಲ್ಲೂ ಅವರು ನನ್ನನ್ನು ತಮ್ಮ ಮನೆಗೆ ಕರೆದು ಊಟ ಹಾಕಿದರು. ತಮ್ಮ ಬಡತನದಲ್ಲಿ ಎಷ್ಟು ಸನ್ಮಾನ ಮಾಡಲು ಸಾಧ್ಯವೋ ಅಷ್ಟೆಲ್ಲವನ್ನೂ ಮಾಡಿದರು. ಆ ಮಧ್ಯಾಹ್ನ ನಾನಲ್ಲಿಯೇ ಇದ್ದೆ. ರಾತ್ರೆಯ ಊಟವೂ ನನಗಲ್ಲೇ ಪ್ರಾಪ್ತಿ. ಊಟ ಮುಗಿಸಿ, ಊರ ಮಾತುಗಳಿಂದ ಕಾಲಹರಣ ಮಾಡುತ್ತಿರುವಾಗ, ಭಟ್ಟರು ಸ್ವಾಭಾವಿಕವಾಗಿ ತಮ್ಮ ಸಂಸಾರದ ಸುಖ–ದುಃಖಗಳನ್ನು ಹೇಳತೊಡಗಿದರು. 'ಬಂದವರ ಮುಂದೆ ಹಾಳು ಹರಟೆ ತೋಡಿಕೊಳ್ಳುತ್ತಿದ್ದೇನೆಂದು ನಿಮಗೆ ಕರೆ ಕರೆ ಆಗುವುದಾದರೆ ಬೇಡ' ಎಂದರು. 'ಯಾಕಾಗಬಾರದು? ಪರರ ದುಃಖ ಪರಿಹರಿಸುವ ಶಕ್ತಿ ಒಬ್ಬನಿಗಿರಲಾರದು, ಕೇಳುವಷ್ಟಾದರೂ ಸಹನೆ ಇರಬೇಕಲ್ಲ' ಎಂದೆ ನಾನು. ಅದರಿಂದ ಧೈರ್ಯ ತಾಳಿ ಮಾತನ್ನು ಮುಂದುವರಿಸಿದರು– "ನೋಡಿ, ಬಡವರಿಗೆ ಯಾವಾಗಲೂ ಮಕ್ಕಳು ಹೆಚ್ಚಿಗೆ ಎಂದು ಕಾಣುತ್ತದೆ;; ಸಾಲದ್ದಕ್ಕೆ ನಾಲ್ಕು ಹೆಣ್ಣುಮಕ್ಕಳೇ. ಮಗಳೇ ಹಿರಿಯವಳು. ಇನ್ನೂ ಲಗ್ನವಾಗಿಲ್ಲ. ಬಡವರ ಮನೆಯ ಹುಡುಗಿಯನ್ನು ಯಾರು ಕಣ್ಣೆತ್ತಿ ನೋಡುತ್ತಾರೆ? ಅದರಲ್ಲೂ ತೋಟವಿಲ್ಲದ ಹವ್ಯಕರಿಗೆ ನಮ್ಮಲ್ಲಿ ಏನು ಮನ್ನಣೆಯಿದೆ? ಹಾಗೆ ಶಿರ್ಶಿ, ಸಿದ್ಧಾಪುರಗಳಿಂದ ನೆಂಟಸ್ತಿಕೆಯನ್ನು

ಅರಸಿಕೊಂಡು ಬಂದಿದ್ದರು. ಅಷ್ಟು ದೂರಕ್ಕೆ ಹುಡುಗಿಯನ್ನು ಕೊಟ್ಟರೆ ತಿರುಗಿ ಅವಳ ಮುಖವನ್ನು ನಾವು ನೋಡಲಿಕ್ಕೆ ಉಂಟೇ?''

''ಅವರ ಹೆಂಡತಿಯು ಬಂದು ಅಷ್ಟರಲ್ಲೇ ಮಾತಿನಲ್ಲಿ ಸೇರಿಕೊಂಡರು. ''ಇದೇ ಊರಾದರೆ ಯಾವ ಮೂಲೆಗೂ ನಮ್ಮ ಮಗುವನ್ನು ಕೊಡಬಹುದು. ಕಾಯಿಲೆಯಾದರೆ ಹೋಗಿ ನೋಡಬಹುದು. ಬದಲು ಶಿರ್ಶಿಯಂಥ ಊರಿಗೆ ಕೊಟ್ಟದ್ದಾದರೆ, ತಿರುಗಿ ಕಣ್ತೆರೆದು ಕಾಣುವುದಕ್ಕಿಲ್ಲ.''

''ಆ ರಾತ್ರೆಯನ್ನು ಅವರಲ್ಲೇ ಕಳೆದೆ. ನನ್ನ ಮನಸ್ಸು ಏನಾಗಿರಬಹುದೆಂದು ನೀವೇ ಯೋಚಿಸಿ. ರಾತ್ರಿ ನಾನು ಕಣ್ಣೆವೆಯನ್ನು ಬಾಡಿಸಲಿಲ್ಲ. ಅವರ ಮಗಳನ್ನು ನಾನು ನೋಡಿದ್ದೆ. ತುಂಬ ಗಟ್ಟಿಮುಟ್ಟಿನ ಹುಡುಗಿಯವಳು. ನನ್ನ ಮುಂದೆ ಅವಳ ತಾಯಿ 'ಊರಲ್ಲಿ ಯಾವ ಸಂದು ಮೂಲೆಗಾದರೂ ಕೊಡಬಹುದು' ಎಂದುದರಿಂದ, ನನ್ನ ಆಸೆ ತೆರೆಯಿತು. ನಮ್ಮ ಊರಲ್ಲಿ ಊಟಕ್ಕೆ ಬೇಕಷ್ಟು ಇದೆ; ಬಡತನದ ಹಂಗೂ ಇಲ್ಲ. ಹೀಗಿರಲು ನನ್ನಂಥವನಿಗೆ ಶಂಕರಿಯನ್ನು ಕೊಟ್ಟಾರು! ಶಿರ್ಶಿಗಿಂತ ನಮ್ಮೂರು ವಾಸಿಯಲ್ಲವೆ- ಎನಿಸಿತು. ಆದರೆ ನಾನಾಗಿಯೇ 'ನಿಮ್ಮ ಮಗಳನ್ನು ನನಗೆ ಕೊಡಿ' ಎಂದು ಕೇಳುವುದು ಹೇಗೆ? ಕೊನೆಗೆ ಏನೋ ನಿರ್ಧರಿಸಿ ಮಲಗಿಕೊಂಡೆ. ಮೊದಲು ಸೋದರಮಾವನಲ್ಲಿಗೆ ಹೋಗುತ್ತೇನೆ. ಅವರ ಮೂಲಕ ಈ ನೆಂಟಸ್ತಿಕೆಯನ್ನು ಸಾಧಿಸಿಕೊಳ್ಳುತ್ತೇನೆ ಅಂದುಕೊಂಡೆ. ಆದರೆ ನನ್ನ ಅತ್ತೆಯ ನೆನಪಾಯಿತು. ಹಿಂದೆ ಅವಳು ಕೊಟ್ಟ ಕಷ್ಟಗಳು ಮನಸ್ಸಿಗೆ ಬಂದು ಅವರಲ್ಲಿಗೆ ಹೋಗುವುದೇ ಇಲ್ಲ- ಎಂದೆನಿಸಿದೆ. ಮರು ದಿವಸ ಅವರ ಮನೆಯಿಂದೆದ್ದು ಹೊರಟೆ. ಹೊರಡುವ ವೇಳೆಗೆ ಭಟ್ಟರು 'ಹೊರಡುತ್ತೀರಾ?' ಎಂದು ಕೇಳಿದರು. ನಾನು 'ಇಲ್ಲೇ ಇರಲು ಬಂದೀತೆ? ನನಗೆ ಕುಂಬಳೆಯಲ್ಲಿ ಸ್ವಲ್ಪ ಕೆಲಸವಿದೆ' ಎಂದೆ. ಅವರು 'ಸರಿ, ನಿಮ್ಮ ಊರ ಮನೆಯ ಸುದ್ದಿ ಹೇಳಲೇ ಇಲ್ಲವಲ್ಲ' ಎಂದರು. ಅದಕ್ಕೆ ಉತ್ತರವಾಗಿ 'ಏನೋ! ನಾನೊಬ್ಬ ಹೀಗೆಯೇ ಮನೆಯನ್ನು ಬಿಟ್ಟು ಪ್ರಕೃತ ತಿರುಗಾಡುತ್ತಿದ್ದೇನೆ' ಎಂದು ಹೇಳಿ ಹೊರಟೆ.

''ಏಕೋ, ನನ್ನ ಕಾಲುಗಳು ಅಲ್ಲಿಂದ ಕೀಳದಾದುವು. ಅವರ ಮನೆಯ ಮುಂದಿನ ಗದ್ದೆಯನ್ನು ದಾಟುವುದರೊಳಗೇ ನಿಂತುಬಿಟ್ಟೆ. ತಿರುಗಿ ಮೆಲ್ಲಗೆ ಹೆಜ್ಜೆಯಿಡುತ್ತ ಹಿಂದಕ್ಕೆ ಮರಳಿದೆ. ಪರಮೇಶ್ವರ ಭಟ್ಟರು, ಹೊರಟ ನನ್ನನ್ನು ನೋಡುತ್ತ, ಇನ್ನೂ ಅಂಗಳದಲ್ಲೇ ನಿಂತಿದ್ದರು. ನಾನು ಮರಳಿ ಬಂದುದನ್ನು ಕಂಡು 'ಏನು ಮರೆತುಬಿಟ್ಟರಿ?' ಎಂದು ಕೇಳಿದರು. ನಾನು ಮರೆತದ್ದೇನಿಲ್ಲ' ಅಂದೆ. ನನ್ನ ಬಾಯಿಯು ಏಕೋ ಬಿಗಿದಿತ್ತು. ಅವರು ಪದೇ ಪದೇ, ಏನು ಹೇಳಿ?' ಎಂದ ಮೇಲೆ ಧೈರ್ಯಗೊಂಡು 'ನಿಮಗೆ ಮೂಡಿನ ಊರಿಗೆ ಮಗಳನ್ನು ಕೊಡುವ ಇಷ್ಟವಿದ್ದರೆ, ನಮ್ಮೂರಿನಲ್ಲಿ ಒಬ್ಬ ಹುಡುಗನಿದ್ದಾನೆ. ಅವನನ್ನು ನೀವು ನೋಡಿಕೊಂಡು ಬರಬಹುದು, ಅಷ್ಟು- ತಿಳಿಸುವ ಎಂದು ಬಂದೆ. ಅಲ್ಲಿ ಇಷ್ಟೇನೆ ಕೊರತೆ-ಊಟ ಉಡುಗೆಗಳಿಗೆ ಯಾವ ಕೊರತೆಯೂ ಇಲ್ಲ. ಆದರೂ ಊರು ಬಹಳ ದೂರ; ಕಾಡಿನ ಕೊಂಪೆ' ಎಂದೆ. ಅವರು ಅದಕ್ಕೆ ಈ ಮೂರು ತಾಲ್ಲೂಕುಗಳಲ್ಲಿ ಎಲ್ಲಾದರೂ ಸರಿಯೇ; ಸುಬ್ರಹ್ಮಣ್ಯದ ಬುಡವಾದರೂ ಸರಿಯೇ' ಎಂದರು.

''ಅಲ್ಲಿಯೇ, ಅದರ ಬುಡವೇ ಅವನ ಮನೆ. ನೀವು ಹುಡುಗನ ಮನೆ, ಮಠ ನೋಡಿ ಉಳಿದುದನ್ನು ನಿಶ್ಚಯ ಮಾಡಿ. ನನಗೂ ಉದ್ಯೋಗವೇನಿಲ್ಲ. ನಿಮ್ಮ ಜತೆಗೆ ಬೇಕಾದರೆ ನಾನೂ ಬರುತ್ತೇನೆ' ಎಂದೆ.

''ಅಂದು ಮಧ್ಯಾಹ್ನ ಊಟವಾದ ಅರೆಗಳಿಗೆಯೊಳಗೆ ನಾನೂ ಪರಮೇಶ್ವರಭಟ್ಟರೂ ನಮ್ಮೂರಿನ ಕಡೆಗೆ ಹೊರಟೆವು. ಎರಡು ದಿನಗಳ ಪಯಣದಿಂದ ನಾನು ಅವರನ್ನು ನಮ್ಮ ಕೆಳಬೈಲಿನ ಒಕ್ಕಲು ಮನೆಗೆ ಕರೆದು ತಂದೆ. ಆಗ ನನ್ನ ತೋಟವು ದೇರಣ್ಣನ ತಂದೆಯ ವಶದಲ್ಲಿತ್ತು. ನನ್ನನ್ನು ಕಂಡೊಡನೆಯೇ ಆತ ಅಯ್ಯಾ, ನೀವು ಊರಲ್ಲೇ ಇಲ್ಲವೆಂದು ನಿಮ್ಮ ಸೋದರಮಾವ ಬಂದು ನಿಮಗೆ ಸಲುವ ಗೇಣಿ, ಅಡಿಕೆಯನ್ನೆಲ್ಲಾ ಒಯ್ದಾಯಿತು' ಎಂದ. ಅವನ ಮುಂದಿನ ಮಾತನ್ನು ನಾನು ಕಣ್ಣು ಸನ್ನೆಯಿಂದ ನಿಲ್ಲಿಸಿದೆ. ನಮ್ಮ ಒಕ್ಕಲಿನಿಂದ ಅಕ್ಕಿ, ಮೆಣಸುಗಳನ್ನು ತರಿಸಿ, ಅಡುಗೆ ಮಾಡಿ, ಆ ರಾತ್ರಿ ಕಳೆದೆವು. ಮರುದಿವಸ ಹುಡುಗನನ್ನು ನೋಡಲು ಹೋಗುವ' ಎಂದಿದ್ದೆ. ಆ ಮರುದಿನ ಬರಲು, ಸ್ನಾನ ಮಾಡುವುದಕ್ಕೆ ನಾವು ಇಲ್ಲಿಗೇನೆ ಬಂದೆವು. ಆಗ ನೋಡಿ– ನಾನು ಇದೇ ಕಲ್ಲಿನ ಮೇಲೆ ಕುಳಿತಿದ್ದೆ. ಅದನ್ನೆಲ್ಲ ನೆನದರೆ ದೇವರು ಸಂಕಲ್ಪಿಸಿದ ಆಟವೆಂದೇ ತೋರುತ್ತದೆ.''

ಮುಂದೇನಾಯಿತು? ನೀವು ಅವರ ಮಗಳನ್ನು ಮದುವೆಯಾಗಿರಬೇಕಲ್ಲವೇ? ನಿಮ್ಮ ಮನೆಯವರ ಹೆಸರೂ ಶಂಕರಮ್ಮ ಎಂದಲ್ಲವೆ?'' ಎಂದೆ ನಾನು.

''ಅದೆಲ್ಲಾ ಸರಿಯೆ; ಆ ದಿನ ಬ್ರಾಹ್ಮಣನಿಗೆ ಮಾತ್ರ ನನ್ನ ಹೊಂಚು ತಿಳಿಯಲಿಲ್ಲ. ಇಲ್ಲಿಂದೆದ್ದು ನಮ್ಮ ತೋಟವನ್ನೆಲ್ಲ ತಿರುಗಾಡಿ, ನಮ್ಮ ಸ್ವಂತ ಮನೆಗೆ ಕರೆದು ತಂದು, ಜಗುಲಿಯ ಮೇಲೆ ಕುಳ್ಳಿರಿಸಿ, 'ಶೀಯಾಳ, ತರಿಸಿ ಕೊಡಲೇ' ಎಂದು ಕೇಳಿದೆ. ಅವರ ಮನಸ್ಸಾಗ- ಈ ಊರಿನ ಜಲಸಮೃದ್ಧಿ, ನೋಡಿ ಬಂದಂಥ ತೋಟ, ಇವುಗಳ ಸುಖಮಯ ಕನಸಿನಲ್ಲಿ ತೇಲಿತ್ತು. ಆದರೆ ನಾವು ಕುಳಿತ ಸ್ಥಳ ಒಕ್ಕಲಿಲ್ಲದ ಮನೆ. ಅಲ್ಲಿಯೇ ಮುಂದಿನ ಅಳಿಯನಿದ್ದಿರ ಬೇಕು- ಎಂದು ಅರಸಿ ಬಂದವರಿಗೆ ಬೀಗವೊತ್ತಿದ ನಮ್ಮ ಮನೆಯನ್ನು ಕಂಡು ಆಶ್ಚರ್ಯವಾಯಿತು. ನಾನು ತುಸು ಆಚೆಗೆ ಹೋಗಿ, ಆಳೊಬ್ಬನನ್ನು ಕೂಗಿದೆ. ನನ್ನ ಸಮವಯಸ್ಸಿನ ದೇರಣ್ಣನಾಗ ಓಡಿಬಂದ. ನನ್ನನ್ನು ಕಂಡು 'ಎಂದು ಬಂದಿರಿ, ಏನು ಬಂದಿರಿ?' ಎಂದು ಉಪಚಾರ ಮಾಡಿದ. ಪರಮೇಶ್ವರರ ಭಟ್ಟರಂತೂ ನನ್ನನ್ನೆ ದುರುದುರನೆ ನೋಡುತ್ತಿದ್ದರು. ಅವರಿಗೆ ಮುಂದಿನ ಅಳಿಯನ ಕನಸಿಗಿಂತ ಮಿಗಿಲಾಗಿ, ತಮ್ಮ ಮಗಳು ಇಂಥ ಸ್ವರ್ಗಕ್ಕೆ ಬಂದದ್ದಾದರೆ ಉಡ ಉಣಲು ಯಾವ ಕೊರತೆಯೂ ಇಲ್ಲವಾದೀತು: ಆಗಾಗ ಬಂದು ನೋಡಿಕೊಂಡು ಹೋಗಬಹುದಾದ ಸ್ಥಳ ಎಂದೆನಿಸಿತ್ತು. ಅವರು ನಿಸ್ಸಂಕೋಚವಾಗಿ ನಕ್ಕು ನುಡಿದರು— 'ಅಯ್ಯೋ ದೇವರೇ, ನೀವು ನನ್ನನ್ನು ಹೀಗೆ ಠಕಾಯಿಸಿ ನಿಮ್ಮ ಮನೆಗೆ ಕರೆತರಬೇಕೆ? ನಮ್ಮಲ್ಲಿ ಬಂದು ಸಪ್ಪೆ ಹುಳಿ ಸಾರುಗಳನ್ನು ಉಂಡು, ನಿಮ್ಮ ಸ್ಥಿತಿಯನ್ನು ಇಷ್ಟೆಲ್ಲ ಮರೆಯಿಸಬೇಕಿತ್ತೇ? ನನ್ನ ಯೋಗ್ಯತೆಗೆ— ಬರಿಯ ಖಂಡಿ—ಎರಡು ಖಂಡಿ ಅಡಿಕೆ ಇರುವವರಾದರೂ ಸಾಕಿತ್ತು.'

''ಇದು ಹೇಗೂ ಇರಲಿ. ನಿಮಗೆ ಈ ಅಳಿಯನಾಗಬಹುದೇ?'' ಎಂದು ಕೇಳಿದೆ ಹಾಸ್ಯದಿಂದ.

''ನನ್ನ ಯೋಗ್ಯತೆಗೆ ಮೀರಿದ ಸಂಬಂಧ. ನಮ್ಮ ಶಂಕರಿಯ ಭಾಗ್ಯ ಹೇಗಿದೆಯೋ: ಹಾಗಾಗಲಿ: ದೇವರ ಇಚ್ಛೆ. ಇಲ್ಲಿಗೆ ಕರೆದು ತಂದು ಲಗ್ನ ಮಾಡಿಸಬೇಕೆ? ಅಲ್ಲಿಗೆ ಬಂದು ನಮ್ಮ ಬಡತನದ ಮೆರವಣಿಗೆಯಾಗಬೇಕೆ?' ಎಂಬುದಾಗಿ ಕೇಳಿದರು. 'ಎಲ್ಲಾದರೂ ಸರಿಯೇ. ನಿಮಗೆ ಯಾವುದು ಅನುಕೂಲವೋ ಹಾಗೆ ಮಾಡಿ' ಎಂದೆ ನಾನು.

''ಸರಿ, ಮೊದಲು ಅಳಿಯನನ್ನು ಹುಡುಕಿ, ಅನಂತರ ಜಾತಕಗಳಿಂದ ಖಚಿತಪಡಿಸಿ, ಆ ತಿಂಗಳ ಕೊನೆಯೊಳಗಾಗಿಯೇ, ನನ್ನ ಶಂಕರಿಯ ಲಗ್ನವಾಯಿತು. ಹುಡುಗಿಯನ್ನು ನಮ್ಮ ಮನೆಗೆ ತಂದುಕೊಟ್ಟರು. ಮಗಳಿಂದ ಮನೆಯ ದೀಪವನ್ನು ಹೊತ್ತಿಸಿ, ನನ್ನನ್ನು ಹರಸಿ ಹೋದರು. ಮುಂದೆ ಅವರಿದ್ದಷ್ಟು ದಿನ ವರ್ಷಕ್ಕೊಂದೆರಡು ಬಾರಿ ಬಂದು ಹೋಗುತ್ತಿದ್ದರು. ಇದನ್ನೆಲ್ಲ ನೆನೆದರೆ ನನಗೆ ಇಂದಿಗೂ ಆಶ್ಚರ್ಯವಾಗುತ್ತದೆ.''

ಗೋಪಾಲಯ್ಯ ಇನ್ನೂ ನೀರಿನಲ್ಲಿ ಪಾದಗಳನ್ನು ಮುಳುಗಿಸಿ, ತಮ್ಮ ಹೆಬ್ಬೆರಳ ಕುಡಿಯನ್ನು ನೋಡುತ್ತಾ ಮಾತನಾಡುತ್ತಲೇ ಇದ್ದರು. ''ನನಗೀಗ ನನ್ನ ತಾಯಿ ತೀರಿಕೊಂಡ ದಿನದ ನೆನಪಾಗುತ್ತದೆ. ಆ ದಿನ ನಾನು ಒಮ್ಮೆಗೇ ತಬ್ಬಲಿಯಾಗಿ ಪ್ರಪಂಚದ ಪ್ರೀತಿಯನ್ನು ಕಳೆದುಕೊಂಡವನಲ್ಲವೆ. ಒಂದು ವರ್ಷಕಾಲ ಗೊತ್ತು ಗುರಿಯಿಲ್ಲದೆ, ಯಾವ ವಿಶ್ವಾಸವೂ ಇಲ್ಲದೆ ಅಲೆದೆ. ನನ್ನ ದುರ್ದೆಸೆ ತೊಲಗುತ್ತಲೇ, ಶಂಕರಿ ಈ ಮನೆಗೆ ಬಂದಳು. ಬಂದು ಮನೆಯನ್ನು ಬೆಳಗಿದಳು.''

''ತಮಗೆ ಮಕ್ಕಳು ಸಂತಾನ?'' ಎಂದು ಮುಂದಿನ ವಿಚಾರಗಳನ್ನು ನಾನು ಕೇಳಿ ತಿಳಿಯಲು ಹಂಬಲಿಸಿದೆ.

''ಮಕ್ಕಳೆ! ಮಗಳು ಒಬ್ಬಳು ಆಗಿ ಹೋದಳು. ಹುಟ್ಟಿದ ಹನ್ನೆರಡು ವರ್ಷಕ್ಕೆ ಬೆಳ್ಳಾರೆಯಲ್ಲಿ ಒಂದು ಒಳ್ಳೆಯ ಕುಟುಂಬಕ್ಕೆ ಅವಳನ್ನು ಕೊಟ್ಟು ಲಗ್ನ ಮಾಡಿದೆ. ಇನ್ನೊಂದು ಎರಡು ವರ್ಷಗಳಲ್ಲಿ ಕೊಟ್ಟವನೇ ಅವಳನ್ನು ಕರೆದುಕೊಂಡು ಹೋದ. ಅವಳ ಅನಂತರ ಹುಟ್ಟಿದ ಮಾಣಿಯೊಂದಿದೆ. ಅದು ಇದ್ದಂತೂ ಅಲ್ಲ; ಇಲ್ಲದಂತೂ ಅಲ್ಲ.''

''ಅಂದರೆ?''

(ಸಶೇಷ)

ಶ್ರೀಮತಿಯ ಸಂಪಾದನೆ



'ಹೆಂಡತಿಯ ನಿರ್ಧಾರಗಳನ್ನು ಗಂಭೀರವಾಗಿ ಪರಿಗಣಿಸುವುದು ಸರಿ' ಎಂಬ ತಪ್ಪು ತೀರ್ಮಾನ ತೆಗೆದುಕೊಳ್ಳುವವರಲ್ಲಿ ನಾನೂ ಒಬ್ಬ. ಎಂದು ಹೇಳಿಕೊಳ್ಳುವುದರಲ್ಲಿ ನನಗೆ ಸಂಕೋಚವೇನಿಲ್ಲ.

ಒಂದು ಸುಂದರ ಮುಂಜಾನೆ ತರಕಾರಿಯ (ಖಾಲಿ) ಚೀಲವನ್ನು ನನ್ನೆದುರಲ್ಲಿ ಕುಕ್ಕಿದ ನನ್ನ ಶ್ರೀಮತಿ "ಇನ್ನು ನನ್ನಿಂದ ಖಂಡಿತಕ್ಕೂ ಸಾಧ್ಯವಿಲ್ಲ..." ಎಂದು ಘೋಷಿಸಿದಳು.

ನನ್ನ ಕೈಯಲ್ಲಿದ್ದ ಪೆನ್ನು ಕಸಕ್ಕನೆ ಸರಿಯಿತು. ಇನ್ನು ಒಂದೇ ಒಂದು ಶಬ್ದ ಹೊಂದಿಕೊಂಡಿದ್ದರೆ ನಾನು ಬಿಡಿಸುತ್ತಿದ್ದ ಕ್ರಾಸ್‌ವರ್ಡ್ ಪೂರ್ಣಗೊಂಡುಬಿಡುತ್ತಿತ್ತು. ಆದರೆ ಇತ್ತಣ ಪರಿಸ್ಥಿತಿ ನಾಜೂಕಾಗಿತ್ತು.

"ಯಾವುದು ಸಾಧ್ಯವಿಲ್ಲ?" ಎಂದೆ 'ಅನ್ನ ತಿನ್ನಬೇಡಿ, ತುಪ್ಪ ಬಿಟ್ಬಿಡಿ, ಪೂರಿ ಮುಟ್ಟಬೇಡಿ... ಆ ತರಕಾರಿಯ ಸಾಲಾಡು ತಿನ್ನಿ ಈ ತರಕಾರಿ ಬೇಯಿಸಿ ತಿನ್ನಿ, ಮತ್ತೊಂದನ್ನ ಹಾಗೆ ತಿನ್ನಿ... ಅಂದರೆ ನಿಮ್ಮ ತೂಕ ಇಳಿದೀತು ಅಂತಾರೆ ಡಾಕ್ಟರು' ಶ್ರೀಮತಿ ಸ್ವಗತದೋಪಾದಿಯಲ್ಲಿ ಹೇಳಿಕೊಂಡಳು. ನಮ್ಮ ಡಾಕ್ಟರು ಅವಳಿರುವ ಎಪ್ಪತ್ತೆಂಟು ಕೆಜಿಯಿಂದ ಕನಿಷ್ಠ ಅರವತ್ತೆಂಟಕ್ಕಾದರೂ ಅವಳನ್ನು

• ಜಯಶ್ರೀ ದೇಶಪಾಂಡೆ

ಶ್ರೀಮತಿಯ ಸಂಪಾದನೆಯ
ಹಾದಿಯೆಲ್ಲಾ ಮೊದಲು
ಸುಲಲಿತ. ನಂತರ...



ಏನಕೇನ ಪ್ರಕಾರೇಣ ಇಳಿಸುವ ಹೊಣೆ ಹೊತ್ತಿದ್ದರು. ಹಾಗಾಗಿ ಈ ಸಲಹೆ ಕೊಟ್ಟಿದ್ದರು.

'ನನ್ನ ತೂಕ ಇಳಿಯುವುದು ಸರಕಾರಕ್ಕೆಲ್ಲಿ ಬೇಕಿದೆ? ತರಕಾರಿ ಬೆಲೆಗಳನ್ನು ರಾಕೆಟ್‌ಗೆ ಕಟ್ಟಿ ಉಡಾಯಿಸಿದಂತೆ ಏರಿಸ್ತಾ ಹೊರಟಿದೆ. ಇನ್ನು ನೀವು ಕೊಡೋ ದುಡ್ಡು ಒಂದು ವಾರದ ತರಕಾರಿಗೆ ಧಾರಾಳವಾಗಿ ಸಾಲುತ್ತೆ ಇನ್ನುಳಿದ ಇಪ್ಪತ್ತನಾಲ್ಕು ದಿನ ತರಕಾರಿ ಫೋಟೋ ಎದುರಿಗಿಟ್ಕೊಂಡು ಅನ್ನ ಸಾರು ತಿನ್ನಬೇಕಾ?'' ಎಂದು ಮುಗಿಸಿದಳು.

''ಅದೇ ಸರಿ. ಇನ್ನೇನು ಮಾಡೋಕಾಗುತ್ತೆ?'' ಎಂದೆ. ಕೊನೆಯ ಶಬ್ದ ಬಂದಿದ್ದರೆ ಕ್ರಾಸ್‌ವರ್ಡ್ ಪೂರ್ತಿಯಾಗಿಬಿಡ್ತಿತ್ತು!!

''ನನಗೊತ್ತುರೀ... ನೀವು ಹೀಗೇ ಒಂದು ಮುತ್ತಿಂಥಾ ಮಾತು ಉದುರಿಸಿ ಪೇಪರ್ ಮುಸುಕು ಮುಖಕ್ಕೆ ಹೊದ್ಕೊಂಡು ಕೂರ್ತೀರಿ ಅಂತ. ನೀವು ಹೇಗಾದ್ರೂ ಕೂತುಕೊಳ್ಳಿ ನನ್ನ ನಿರ್ಧಾರ ನಾನು ಹೇಳಿಬಿಡ್ತೀನಿ. ನಾನೀಗ ಕೆಲಸಕ್ಕೆ ಸೇರಿಕೋಬೇಕು ಅಂದುಕೊಂಡಿದ್ದೀನಿ... ಅಂದುಕೊಳ್ಳೋದೇನು ಬಂತು? ನಿರ್ಧಾರವೇ.

ನಮ್ಮಿಬ್ಬರ ಸಂಪಾದನೆಯೂ ಒಟ್ಟಿಗೆ ಸೇರಿದರೆ ದಿನಾಲೂ ಸುಖವಾಗಿ ಒಂದು ಬಗೆ ಪಲ್ಯ, ಒಂದು ತಟ್ಟೆ ಎಲ್ಲಾ ತರಕಾರಿ ಸೇರಿಸಿದ ಹಸಿ ಸಾಲಾಡು, ಒಂದು ಸೇಬು, ಒಂದು ಬಾಳೆಹಣ್ಣು ತಿನ್ನಲು ಸಾಕಾಗಬಹುದು'' ಎಂದಳು.

ಕ್ರಾಸ್‌ವರ್ಡ್‌ನಲ್ಲಿ ಕೊನೆಯ ಶಬ್ದ ಬಂತು... 'ಫಜೀತಿ!' ನೀರು ಪಕ್ಕದಲ್ಲೇ ಇತ್ತು, ಎತ್ತಿ ಕುಡಿದೆ ನೆತ್ತಿ ಹತ್ತಿಕೊಂಡು ಕೆಮ್ಮಿದೆ. ಕಣ್ಣಲ್ಲಿ ಮೂಗಲ್ಲಿ ನೀರು ಬಂದದ್ದು ಕೆಮ್ಮಿಗೇ ಇರಬೇಕು...

ಅವಳ ಮಾತಿನಲ್ಲಿ ತಥ್ಯಾಂಶವೇ ಇಲ್ಲ ಎನ್ನಲಾರೆ ತಾನೆ? ತೆಪ್ಪಗಿರೋದಕ್ಕಿಂತ ಒಳ್ಳೆಯದು ಇನ್ನೇನಿದೆ? ಆದರೂ ಸ್ವಯಂ- ಧನ- ಸಂಪಾದನೆಯ ಅವಳ ಈ ಸಾಹಸದ್ದು ಇದು ಮೂರನೆಯದೋ ನಾಲ್ಕನೆಯದೋ ಇನ್ನಿಂಗ್ಸ್ ಇದ್ದೀತು ಎಂದು ನೆನಪಾಯಿತು.

ಒಂದು, ಒಂದೂವರೆ ವರ್ಷದ ಹಿಂದಿರಬೇಕು- ಯಾವ ತಿಂಗಳೋ ನೆನಪಿಲ್ಲ. ಹೀಗೆಯೇ ಒಂದು ಸುಂದರ ಮುಂಜಾನೆ 'ನಿಮ್ಮೊಬ್ಬರ ಸಂಪಾದನೆ ಯಾವ ಮೂಲೆಗಾದೀತ್ರೀ... ನಾನೂ ದುಡ್ಡು ಕಮಾಯಿಸ್ತೀನಿ ನೋಡ್ತಾ ಇರಿ'' ಎಂದು- ನಾನು ಏನೂ ಕೇಳದೇನೇ ಸವಾಲೆಸೆದು, ಸಂಪಾದನೆಯ ಶಪಥ ತೊಟ್ಟು ಪೂರ್ವಸಿದ್ಧತೆಯಾಗಿ ಮೊದಲ ತನ್ನ ಟೈಲರಿಂಗ್ ಕೌಶಲ್ಯದ ಬಗ್ಗೆ ಅರ್ಧಗಂಟೆ ನನ್ನೆದುರಲ್ಲಿ ಸ್ವಯಂ ಪ್ರಶಂಸಿಸಿಕೊಂಡು- ನನ್ನನ್ನು ಅಟ್ಟಕ್ಕೇರಿಸಿದಳು! ಇನ್ನು ಯಾವುದಕ್ಕೂ ಅಲ್ಲ. ಅಲ್ಲಿದ್ದ ಹಳೆಯ ಕಾರ್ಡ್‌ಬೋರ್ಡು ಕೆಳಗಿಳಿಸಬೇಕಿತ್ತು...

''ಪರಫೆಕ್ಟ್ ಲೇಡೀಸ್ ಟೈಲರ್'' ಎಂದು ಅದರ ಮೇಲೆ ಬರೀರಿ ಎಂದು ಪೀಡಿಸಿ ನನ್ನಿಂದಲೇ ಪೈಂಟಿನಿಂದ ಬರೆಸಿ ನಾನೇ ಏಣಿಯ ಮೇಲೆ ನಿಂತು ಸರ್ಕಸ್ ಮಾಡಿ ಬೋರ್ಡನ್ನು ಮನೆ ಮೇಲ್ಭಾಗಕ್ಕೆ ತಗುಲಿಹಾಕಿದ ಅನಂತರವೇ ನನಗೆ ಊಟ ಹಾಕಿದಳು!

ಅವಳ ಸಾಹಸಕ್ಕೆ ಪ್ರತಿಕ್ರಿಯೆ ಚೆನ್ನಾಗಿ ಬರಲು ಅಕ್ಕಪಕ್ಕದಲ್ಲಿರೋ ಎಲ್ಲಾ ದರ್ಜಿಗಳಿಗಿಂತಲೂ ಕಮ್ಮಿ ದರವನ್ನು ಇಟ್ಟದ್ದೇ ಕಾರಣ ಎಂಬ ನನ್ನ ಅನಿಸಿಕೆಯನ್ನು ನಾನವಳಿಗೆ ಹೇಳಲಿಲ್ಲ. ನಮ್ಮ ಬೀದಿಯವರೇ ಎಂಟತ್ತು ಹೆಣ್ಮಕ್ಕಳು ಹತ್ತೆಂಟು ಬಟ್ಟೆಗಳನ್ನು ತಂದು 'ಹೊಲಿದುಕೊಡಿ' ಅಂತ ರಾಶಿ ಹಾಕಿದರು.

ಹೊಸಾ ಅಗಸ ಮತ್ತೆ ಗೋಣಿ . ಮೂರೇ ದಿನಗಳಲ್ಲಿ ಚಕಚಕನೆ ಕತ್ತರಿಸಿ, ಸರ್ರನೆ ಹೊಲಿದು, ಪಟಪಟನೆ ಹುಕ್ಸ್ ಬಟನ್ನು ಹಾಕಿ ಗ್ರಾಹಕರಿಗೆ ಹೇಳಿದ ಸಮಯಕ್ಕೆ ಬಟ್ಟೆಗಳನ್ನು ತಯಾರು ಮಾಡಿಕೊಟ್ಟು ಅವರು ಕೊಟ್ಟ ಗರಿಗರಿ ನೋಟುಗಳನ್ನು ನನ್ನ ಕಣ್ಣೆದುರು ಹಾಗೆ- ಹೀಗೆ ಆಡಿಸಿ ''ನೋಡಿದಿರಾ ನಾನು ಅಂದರೆ ಏನು ಅಂತ ಅರ್ಥವಾಯಿತೆ? ನಾನು ಮನಸ್ಸು ಮಾಡಿದಲ್ಲಿ ಏನು ಬೇಕಾದರೂ ಸಾಧಿಸ್ತೀನಿ' ಎಂದು ಈಗಲಾದರೂ ಒಪ್ಪಿಕೊಳ್ಳಿ'' ಎಂದು ಹೆಮ್ಮೆಯಲ್ಲಿ ನಕ್ಕಳು. ಅವಳು ನಗುತ್ತಿರುವಾಗ ನಾನು ನಗದೆ ಇರಲು ಸಾದ್ಯವೆ? ನಕ್ಕೆ, ಮುಂದೆ ಕಾದಿದ್ದ ವಿಪತ್ತಿನ ಅರಿವಿಲ್ಲದೆ...

ಮರುದಿವಸ- ಅದೂ ಸುಂದರ ಮುಂಜಾವೇ- ಇವಳ ಗ್ರಾಹಕರೆಲ್ಲ ಬಂದರು. ಅವರ ಕೈಗಳಲ್ಲಿದ್ದದ್ದು ಮಂಗಳಾರತಿ ತಟ್ಟೆಯೋ? ಎಂದು ಅನುಮಾನಿಸಿದೆ. ಅಲ್ಲ ಅವೆಲ್ಲ ಇವಳೇ ಹೊಲಿದುಕೊಟ್ಟಿದ್ದ ಬಟ್ಟೆಗಳು! ತಟ್ಟೆ-ಗಿಟ್ಟೆ

ಇಲ್ಲದೆಯೇ ಇವಳಿಗೆ ಮಂಗಳಾರತಿ ಎತ್ತಿದ್ದರು... ಪಾಪ, ಇವಳು ನಲವತ್ತರ ಸೈಜಿನ ಅಳತೆಯ ಬ್ಲೌಸನ್ನು ಮೂವತ್ತೆರಡಕ್ಕೂ, ಮೂರು ವರ್ಷದ ಪಿಂಕಿ ಫ್ರಾಕನ್ನು ಎಂಟನೇ ವಯಸ್ಸಿಗೆ ಹಾಕ್ಕೋಳ್ಳೋ ಸೈಜಿಗೂ, ದುಂಡು ಕೊರಳಿನ ಆರ್ಡರಿಗೆ ವಿ ಆಕಾಗ, ಮತ್ತೆ ಚೌಕು ಕೊರಳಿಗೆ ಅಷ್ಟಾವಕ್ರ ವಿನ್ಯಾಸಗಳನ್ನೂ ಇಟ್ಟು ಹೊಲಿದು ಕೊಟ್ಟಿದ್ದಳು! 'ನೀವು ತಿಂದಿರೋ ನಮ್ಮ ಬಟ್ಟೆ ಇತ್ತ ಬಿಸಾಕಿ' ಎಂದು ಅವರೆಲ್ಲ ಪ್ರತ್ಯಕ್ಷ ವಾಗಿ ಹೇಳದೇ ಹೋದರೂ ಅದರಪ್ಪನ ಅರ್ಥದ ಮಾತುಗಳನ್ನಾಡಿ ಕೈ ಚಾಚಿ ನಿಂತರು!

ಮೂರನೆಯ ದಿನ ಶ್ರೀಮತಿಯವರ ಹೊಲಿಗೆ ಯಂತ್ರ ಅಟ್ಟ ಸೇರಿತು!

"ಥೂ ಈ ಜನಗಳೇ ಹೀಗೆ. ಎಷ್ಟು ಸುಂದರವಾಗಿ ಬಟ್ಟೆ ಹೊಲಿದುಕೊಟ್ಟರೂ ತೃಪ್ತಿ ಇಲ್ಲದ ಪಾಪಿಗಳು" ಎಂದು ವಟಗುಟ್ಟಿ ಆ ಬೇಜಾರು ಕಳೆಯಲು ಎರಡು ಸಿನಿಮಾ ನೋಡಿಬಂದಳು.

ಇವಳ ಸಂಪಾದನೆಯ ಎರಡನೆಯ ಅಧ್ಯಾಯ ಮುಂದೆ ಆರೆಂಟು ತಿಂಗಳಲ್ಲಿ ಮುಹೂರ್ತ ಇಟ್ಟುಕೊಂಡಿತು. "ರೀ... ರೀ... ಬಿಸಿನೆಸ್ ಮಾಡೋಣ ರೀ... ಮುಂಬೈಗೋ ಸೂರತ್ತಿಗೋ ಹೋಗಿ ಬಟ್ಟೆಗಳನ್ನ, ಸೀರೆಗಳನ್ನ ತಂದು ಇಲ್ಲಿ ದುಪ್ಪಟ್ಟು ಬೆಲೆಗೆ ಮಾರಬಹುದಂತೆ ರೀ... ಪಿನಾಕಿನಿ ಅದೇ ಮಾಡ್ತಾ ಇದ್ದಾಳೆ... ಅವಳೇ ನನಗೆ ಈ ಗುಟ್ಟು ಹೇಳಿಕೊಟ್ಟದ್ದು. ಎಂಥಾ ಲಾಭ... ಏನು ಕಥೆ... ಅವಳೀಗ ಸ್ವಂತ ಲೂನಾ ಇಟ್ಕೊಮಡಿದ್ದಾಳೆ ರೀ... ತನ್ನದೇ ದುಡ್ಡಿನಲ್ಲಿ..." ಲೂನಾ ಅಂದರೆ ರೋಲ್ಸ್ ರಾಯ್ಸ್ ಕಾರೇನೋ ಎಂಬಷ್ಟು ಕಣ್ಣುಗಳನ್ನು ಮಿಂಚಿಸಿದಳು.

'ಲೇ ಪಿನಾಕಿನಿ ಎಂಬ ಹೆಸರಿನ ಪಿಶಾಚಿಯೇ ಯಾಕೆ ನನ್ನ ಹೆಂಡತಿಯ (ಖಾಲಿ) ತಲೆಗೆ ಗೊಬ್ಬರ ತುಂಬೋ ಕೆಲಸ ಮಾಡ್ತಿಯೆ ಹಾಳಾದವಳೆ...' ಎಂದು ಮನಸ್ಸಿನಲ್ಲೇ ಬೈದುಕೊಂಡು "ವ್ಯಾಪಾರ ಗೀಪಾರ ಎಲ್ಲ ನಮ್ಮಂಥವರಿಗೆ ಹೇಳಿಸಿದ್ದಲ್ಲ ಕಣೆ, ಅದಕ್ಕಾಗಿ ಹುಟ್ಟೋ ಜನವೇ ಬೇರೆ. ಬೇಡ ಸುಮ್ನಿರು" ಎಂದೆ. ಅಲ್ಲ ಬಡ್ಕೊಂಡೆ.

ಇದಕ್ಕೆ-ಅದಕ್ಕೆಲ್ಲ ಸೊಪ್ಪು ಹಾಕುವವಳು ಹೆಂಡತಿಯೇ ಅಲ್ಲ ಎಂಬುದನ್ನು ಸಿದ್ಧಗೊಳಿಸುವ ಜಾತಿಯವಳಿವಳು... ಯಾರೆಂದುಕೊಂಡ್ರಿ ಅವಳನ್ನು... ನನ್ನ ಶ್ರೀಮತಿ!

"ಅಲ್ಲ ನಮಗೋಸ್ಕರ... ಮನೆಗೋಸ್ಕರ, ನಮಗೇ ಲಾಭ ತಂದ್ಕಾಕೋಕ್ಕೋಸ್ಕರ ಒಂದೊಳ್ಳೆ ಕೆಲಸ ಮಾಡ್ತೀನಿ, ದುಡ್ಡು ಸಂಪಾದಿಸ್ತೀನಿ ಅಂದರೆ ಕಾಲು ಎಳಿಯೋಕೆ ನೋಡ್ತೀರಿ ಈ ಜಗತ್ತೇ ಹೀಗೆ... ಒಂದು ಉತ್ತೇಜನದ ಮಾತೂ ನನ್ನ ಪಾಲಿಗಿಲ್ಲ" ಎನ್ನುತ್ತ ದೇವದಾಸ್ ಪೋಸು ಕೊಟ್ಟಳು. ನಾನು ಕಿಟಕಿಯಿಂದ ಹೊರಗೆ ನೋಡುತ್ತ ಈಗ ಯಾವ ದಿಕ್ಕಿಗೆ ಕಂಬಿ ಕಿತ್ತಿದರೆ ಸರಿಯಾದೀತು ಎಂದು ಯೋಚಿಸುತ್ತಾ ಇರುವಾಗ ಅವಳು... ತನ್ನ ಸೊಂಟಕ್ಕೆ ಸಿಕ್ಕಿಸಿದ (ನನ್ನ) ಕರವಸ್ತ್ರವನ್ನು ಹೊರತೆಗೆದಳು ಮತ್ತೆ ಕಣ್ಣೊರೆಸಿಕೊಳ್ಳುವುದರಲ್ಲಿ...

ಅದು ಒದ್ದೆಯಾಗೋ ಮೊದಲೇ ನನ್ನಿಂದ ಅವಳ ಯೋಜನೆಗೆ ಅಂಗೀಕಾರದ ಮುದ್ರೆ ಬಿತ್ತು ಎಂದು ನೀವು ಊಹಿಸಿದಲ್ಲಿ ಅದು ಶೇಕಡಾ-ನೂರುಪ್ರತಿಶತ ಸತ್ಯ! ಮುಂಬಯಿಗೆ ಹೋದೆವು-ಪಿನಾಕಿನಿ ಹೇಳಿದಲ್ಲಿಗೇ ಹೋದೆವು. ಒಂದು ಮಾತು ನಿಜ ಆಗಿತ್ತು. ಅಲ್ಲಿ ಬಟ್ಟೆಗಳೂ, ಸೀರೆಗಳೂ ಸಾಕಷ್ಟು ಅಗ್ಗದ ದರದಲ್ಲೇ ದೊರೆತುವು. "ನೋಡ್ತಾ ಇರಿ ಈ ಬಟ್ಟೆ ವ್ಯಾಪಾರದಲ್ಲಿ ಎಷ್ಟು ಬೇಗ ಬ್ಯಾಂಕಿಗೆ ನಲವತ್ತೈವತ್ತು ಸಾವಿರ ತುಂಬಿಸಿಬಿಡ್ತೀನಿ" ಎಂದು ರಂಗುರಂಗಿನ ಕನಸುಗಳ ತನ್ನ ಸುಖವನ್ನು ನನಗೂ ಹಂಚಿದಳು.

ವ್ಯಾಪಾರ ಅಂದಮೇಲೆ ಪ್ರಚಾರ ಬೇಕು. ರೈಲಿಗೆ ಎಂಜಿನ್ ಬೇಕಿರುವ ಹಾಗೆ. ನನ್ನಾಕೆ ಚತುರೆ. ಹೂ-ವೀಳ್ಯ ಎನ್ನುವ ಸೋಷಿಯಲ್ ಕಂ ಧಾರ್ಮಿಕ ಕಾರ್ಯಕ್ರಮವನ್ನು ಎಷ್ಟು ಸಮರ್ಥವಾಗಿ ಬಳಸಿಕೊಂಡಳೆಂದರೆ ಇವಳು ಕೊಟ್ಟ ಎರಡು ಎಲೆ-ಅಡಿಕೆ, ಒಂದು ಬಾಳೆಹಣ್ಣು, ಒಂದು ಸೇವಂತಿಗೆ ಹೂವುಗಳು. ಇವಳ ಮನೆ-ಸೀರೆಯಂಗಡಿಗೆ ಭರ್ಜರಿ ವ್ಯಾಪಾರ ಗಿಟ್ಟಿಸಿಕೊಟ್ಟವು! ಬಣ್ಣ ಬಣ್ಣವಾಗಿ ಬಣ್ಣಿಸಿ, ಮಾರ್ಕೆಟ್ಟಿಗಿಂತ ತಾನು ಎಷ್ಟು ಕಡಿಮೆ ಬೆಲೆಯಲ್ಲಿ ಬಟ್ಟೆ ಒದಗಿಸ್ತೀನಿ ಎಂಬ ಆಕರ್ಷಣೆಯ ಬಲೆ ಬೀಸಿ ಬೀದಿಯವರನ್ನೆಲ್ಲ ಮರಳು ಮಾಡಿದ್ದಳು. (ಅಥವಾ ಹಾಗೆಂದುಕೊಂಡಳು!)

ನಂಬ್ತೀರೋ ಬಿಡ್ತೀರೋ ಹದಿನೈದು ಅಂದರೆ ಹದಿನೈದೇ ದಿನಗಳಲ್ಲಿ ನಮ್ಮ ಹೊಸಬಟ್ಟೆಯ ಬೀರು ಖಾಲಿಯಾಗಿಬಿಟ್ಟಿತು!

"ಮೊದಲ ಸಲ ತಾನೆ? ಈಗ ಲಾಭದ ಮೂತಿ ನೋಡಬಾರದು. ಮುಂದಿನ ಬಾರಿ ಇಮ್ಮಡಿ ಬೆಲೆ ಚೀಟಿ ಅಂಟಿಸೋಣ. ಗ್ರಾಹಕರ ವಿಶ್ವಾಸ ಗೆದ್ದುಕೊಳ್ಳುವುದೇ ಮುಖ್ಯ" ಎಂದು ನನ್ನನ್ನು ಹುರಿದುಂಬಿಸಿ ಸಾಲಕ್ಕಾಗಿ ಬ್ಯಾಂಕಿಗೆ ಅಟ್ಟಿದಳು! ತದನಂತರ ಒಂದು ತಿಂಗಳಲ್ಲಿ ನಾವು ಮಾರಿದ್ದ ಬಟ್ಟೆಗಳಲ್ಲಿ ತೊಂಬತ್ತು ಭಾಗ ನಮ್ಮ ಬೀರುವಿಗೇ ಮರಳಿದವು... ಕೆಲವು ಒಂದೇಟಿಗೇ ಹರಿದು, ಕೆಲವು ಬಣ್ಣ ಕಳಚಿಕೊಂಡು ಬಿಳುಚಿ, ಕೆಲವು ಐವತ್ತೆರಡಿಂಚಿನಿಂದ ಮೂವತ್ತೆರಡಕ್ಕೆ ಕುಗ್ಗಿ, ಕೆಲವು ಸೊಳ್ಳೆ ಪರದೆಯಂತೆ ಜಾಳು ಜಾಳಾಗಿ ತಮ್ಮ ನಿಜರೂಪವನ್ನು ಪ್ರಕಟಗೊಳಿಸಿದ್ದಕ್ಕೆ ಗ್ರಾಹಕರು ಅವನ್ನೆಲ್ಲ ಉಂಡೆಕಟ್ಟಿ ನಮ್ಮ (ಮೂತಿ)ಗೆಸೆದು "ನಮ್ಮ ದುಡ್ಡು ಬಿಸಾಕಿ!" ಎಂದಬ್ಬರಿಸಿದರು.

ಯಾವ ಬ್ಯಾಂಕಿನಲ್ಲಿ ನನ್ನವಳು ನಲವತ್ತೈವತ್ತು ಸಾವಿರ ಲಾಭ ತುಂಬುವ ಕನಸು ತೋರಿಸಿದ್ದಳೋ ಅದೇ ಬ್ಯಾಂಕಿನಲ್ಲಿ ನಾನು ಸುಳ್ಳು ಕಾರಣ ಕೊಟ್ಟು ಮತ್ತಷ್ಟು ಸಾಲ ಮಂಜೂರು ಮಾಡಿಸಿಕೊಂಡು ಕಣ್ಣು ಕೆಕ್ಕರಿಸಿ ನಿಂತ ಗ್ರಾಹಕರ ಕೈಗಿಟ್ಟು ನನ್ನ ಜೋಡಿಸಿದೆ!

"ಯಾವ ಲೋಕಕ್ಕೆ ಹೊರಟು ಹೋದ್ರಿ?" ಶ್ರೀಮತಿಯ ಸ್ವರ ನನ್ನನ್ನು ಎಲ್ಲಿಂದಲೋ ಇಲ್ಲಿಗೇ ಎಳೆತಂದಿತು "ನನ್ನ ಮಾತು ಕಿವಿಗೆ ಬಿತ್ತೆ?" ನನ್ನ ಭುಜ ಹಿಡಿದು ಕುಲುಕಿದಳು.

"ಇಲ್ಲ ಅನ್ನುತ್ತ" ನಾನು ಗೊಣಗಿದ್ದಂತೂ ಅವಳ ಕಿವಿಗೆ ಬಿದ್ದಿತ್ತು.

"ಅದ್ಯಾಕೆ ಬಿದ್ದೀತು? ನಾನು ಏನಾದರೂ ಒಂಚೂರು ಮಾಡ್ತೀನಿ ಅಂದರೆ ನಿಮಗೇನೋ ಐಸ್‌ನೀರು ಎರಚಿದೋರ ಥರ ಆಡ್ತೀರಿ. ಇದೆಲ್ಲ ಕಣ್ಣಾಮುಚ್ಚಾಲೆ ಆಟ ಬಿಟ್ಬಿಡಿ. ನಾನು ಜಾಬ್ ಮಾಡೇ ಮಾಡ್ತೀನಿ" ಮತ್ತೆ ಶ್ರೀಮತಿ ತನ್ನ ಸೊಂಟದಲ್ಲಿದ್ದ (ನನ್ನ) ಕರವಸ್ತ್ರವನ್ನು ತೆಗೆದಳು ಮತ್ತು ಕಣ್ಣೊಗೊಯ್ದಳು.

ನನ್ನನ್ನು ಹಗುರವಾಗಿ ಎಣಿಸಬೇಡಿ. ಈ ಬಾರಿ ನಾನೂ ಪಟ್ಟು ಹಿಡಿದೆ. ಎಷ್ಟು ಬಲವಾಗಿ ಅಂದರೆ ಆ (ನನ್ನ) ಕರವಸ್ತ್ರ ಸಂಪೂರ್ಣ ಒದ್ದೆಯಾದ ಅನಂತರವೇ ಅವಳ ಡಿಮ್ಯಾಂಡಿಗೆ 'ಅಸ್ತು' ಅಂದೆ! ಅಲ್ಲ ಸ್ವಾಮಿ ಎಂಥೆಂಥಾ ಋಷಿ ಮುನಿಗಳು ಹೆಣ್ಣಿನ (ಕಣ್ಣೀರಿನ) ಸೌಂದರ್ಯಕ್ಕೆ ಶರಣಾದಾಗ ನಂದೇನು ಬಿಡಿ! ಇದರಲ್ಲಿ ಸಂಕೋಚಪಟ್ಟುಕೊಳ್ಳುವಂಥಾದ್ದು ನನಗಂತೂ ಕಂಡುಬರ್‍ತಾ ಇಲ್ಲ.

ಇಷ್ಟಾದರೂ, 'ಒಂದೆರಡು ಪ್ರಶ್ನೆ ಗಳನ್ನಾದರೂ ಹಾಕದೆ ಒಪ್ಪಿಬಿಡ್ತೀಯಾ?' ಎಂದು ನನ್ನಲ್ಲಿ 'ಪತಿ' ಕೆಣಕಿದ.

"ಅಲ್ಲ ಆರಾರು, ಏಳೇಳು ಡಿಗ್ರಿಗಳ ಸರ ಹಾಕ್ಕೊಂಡವರೂ ಕೆಲಸ ಸಿಗದೆ ಬಾಯಿಗೆ ಅಕ್ಕಿಕಾಳೋ ಗೋಧಿಕಾಳೋ ಹಾಕೊಂಡು ಕೂತಿರೋವಾಗ ಜುಜುಬಿ ಬಿ ಯೆ ಓದಿರೋ ನಿನ್ನನ್ನು ಯಾವ ಕೆಲಸ ಬಾ ಅಂತ ಮಣೆ ಹಾಕಿದೆ ಅದನ್ನಾದರೂ ಹೇಳು" ಎಂದೆ. ನಿರುದ್ಯೋಗದ ತೀವ್ರತೆ ಇವಳಿಗಿನ್ನೂ ತಿಳಿದೇ ಇಲ್ಲ... ಈಗಲಾದರೂ ತಿಳಿಯಲಿ.

ಶ್ರೀಮತಿಯ ನಗೆ 'ಗೆದ್ದೆ' ಎಂಬರ್ಥದಲ್ಲಿತ್ತು. "ಪರಂಧಾಮಯ್ಯ ಸಿಕ್ಕಿದ್ರು ಮೊನ್ನೆ..." ನಾನೆಂದರೆ ಅಷ್ಟು ಸುಲಭ ತಿಳೀಬೇಡಿ ಎಂದು ಸವಾಲು ಹಾಕುವ ಧಾಟಿಯಲ್ಲಿ ಮುಂದುವರೆದಳು. "ಅವರ ಹಿರಿಯ ಷಡ್ಡಕನ, ಚಿಕ್ಕಪ್ಪನ ಮಗನ ಚಡ್ಡೀ ದೋಸ್ತು ಫೈನಾನ್ಸ್ ಕಂಪೆನಿ ಇಟ್ಕೊಂಡಿದ್ದಾರಂತೆ. ಅಲ್ಲಿ ನನ್ನನ್ನು ಸೂಪರ್‌ವೈಸರ್ ಆಗಿ ಬನ್ನಿ ಅಂತ ಕರೆದಿದ್ದಾರೆ ಗೊತ್ತ?" ಮತ್ತೆ ನಸುನಗೆ ಚೆಲ್ಲಿದಳು.

"ಸಂಬಳ ಎಷ್ಟಂತೆ?" ನನ್ನ ಚಿಂತ ನನಗೆ.

ಈಗ ಕೊಂಚ ಅನುಮಾನಿಸಿದಳು. "ಅದು... ಅದಿನ್ನೂ ಹೊಸ ಕಂಪೆನಿಯಂತೆ. ಸದ್ಯಕ್ಕೆ ಒಂಬೈನೂರು ಕೊಡ್ತಾರಂತೆ. ಮುಂದಿನ ವರ್ಷ ಹದಿನೈದು ನೂರು- ಮತ್ತೆ ಎರಡು ಸಾವಿರ ಹೀಗೆ ಏರಿಸ್ತಾರಂತೆ". ನನ್ನ ಮುಖ ನೋಡಿದಳು.

"ಅಲ್ಲ ಕಣೆ ಆಫೀಸು ಗುಡಿಸೋ ಆಯಾಗಳಿಗೂ ಎಂಟ್ನೂರು-ಒಂಬೈನೂರು ಕೊಡ್ತಾರೆ ಈಗೀಗ..." ಎನ್ನಬೇಕು ಅಂದುಕೊಂಡವನು ನಾಲಿಗೆಗೆ ಬ್ರೇಕ್ ಹಾಕಿದೆ. ಇನ್ನೊಂದು ಪಾಣಿಪತ್ ಅಥವ ರಕ್ಕಸತಂಗಡಿ ಕಾಳಗವನ್ನು ತಪ್ಪಿಸಿ ಜಾಣನಾದೆ.

ಶ್ರೀಮತಿ ಉದ್ಯೋಗಸ್ಥೆ ಎಂಬ ಬಿರುದನ್ನು

ಧರಿಸಿದಳು. ಈಗ ನಾವಿರೋ ಊರು ಅತ್ತ ಪಟ್ಟಣವೂ ಅಲ್ಲ, ಇತ್ತ ಗ್ರಾಮವೂ ಅಲ್ಲ. ಇವಳ ಆಫೀಸು ನಮ್ಮನೆಯಿಂದ ಏಳು ಮೈಲಿ ದೂರ. ಅಲ್ಲಿಗೆ ಬಸ್ ಅನುಕೂಲವಿಲ್ಲವಾದರೂ ಇವಳು ಒಂಬತ್ತೂವರೆಗೆ ಅಲ್ಲಿ ಹಾಜರಿರಬೇಕು. ಸಂಜೆ ಮರಳಿ ಬರಲು ಏಳು ಗಂಟೆ ಆಗುತ್ತಿತ್ತಷ್ಟೆ! ಒಂದು ತಿಂಗಳಲ್ಲಿ 'ತುಂಬಾ ಕಷ್ಟದ ಓಡಾಟ' ಎನ್ನುತ್ತ ಆಫೀಸಿಗೆ ಹೋಗಿ ಬರಲು ಆಟೋರಿಕ್ಷಾ ಏರ್ಪಡಿಸಿಕೊಂಡಳು ಮುನ್ನೂರೈವತ್ತು ಅಷ್ಟೆ!

ಪಾಪ, ದುಡಿದು (ತರುವ!) ಹೆಂಗುಸು. ನಾನು ಸಹಾಯ ಮಾಡದಿದ್ದರೆ ಹೇಗೆ? ನಮಗೊಂದು ಪಾಪು ಹುಟ್ಟಿ ಮೂರು ವರ್ಷವಾಗಿತ್ತು. ಅದರ ಬೇಬಿ ಸಿಟ್ಟಿಂಗು ಈಗ ನನ್ನ ಪಾಲಿಗೆ ಬಂತು. ಇನ್ನು ಬೆಳಗ್ಗೆ ಒಂದಿಷ್ಟು ಪಾತ್ರೆ-ಗೀತ್ರೆ ತೊಳೆದು, ಕಾಫಿ ಬೆರಸಿ, ಬಟ್ಟೆ ಮಡಿಸಿ... ಇದೆಲ್ಲ ನನ್ನ (ನಮ್ಮ) ಮನೆ ಕೆಲಸವೇ ಅಲ್ಲವೆ... ಮಾಡಿದೆ. ಅದಕ್ಕೇನು ಸಂಕೋಚ? ಸಂಜೆ ಸುಸ್ತಾಗಿ, ಬಾಡಿದ ಹೂವಾಗಿ! ಬರುತ್ತಿದ್ದವಳಿಗೆ ಒಂದಿಷ್ಟು ಅಮೃತಾಂಜನ ಹಣೆಗೆ ಬಳಿದು ಕಾಫಿ ಕೊಡ್ತಿದ್ದೆ ಅಷ್ಟೆ. ಒಮ್ಮೊಮ್ಮೆ ಕೆಲಸ ಬೇಜಾರು ತರಿಸಿ ಕತ್ತೆ ಎದುರು ಮೂಲಂಗಿ ಕಟ್ಟಿದಂತೆ "ರೀ ಒಂದೇ ಒಂದ್ವರ್ಷ ತಡೀರಿ... ಮೇಲೆ ಸಾವಿರದ್ನೈನೂರು... ಆಮೇಲೆ ಎರಡು ಸಾವಿರ... ಆಮೇಲೆ..." ಎಂದು ಮುಗುಳ್ನಗೆಯ ಅಸ್ತ್ರ ಎಸೆದು ಪೂಸಿ ಮಾಡ್ತಿದ್ದಳು. ನಾನು ಆಗ ಏನು ಮಾಡ್ತಿದ್ದೆ... ಊಹಿಸಿಬಿಡಿ!

ಎರಡು-ಮೂರು ತಿಂಗಳು ಕಳೆಯುವಷ್ಟರಲ್ಲಿ ಶ್ರೀಮತಿ 'ಕಾಯಿಲೆ' ಎಂದು ಮಲಗಿದಳು. ಕಾರಣ ಆಯಾಸ. ನರ್ಸಿಂಗ್ ಹೋಮಿಗೆ ಕಾಲಿಟ್ಟಾಗ ಬಿಳಿಬಿಳಿಯ ಹಲ್ಲುಗಳು ಮಿಂಚಿಸಿ ಸ್ವಾಗತಕಾರಿಣಿ 'ಬನ್ನಿ' ಎಂದು ತಲೆದೂಗಿ ಕರೆದಳು. ವೈದ್ಯರೂ ನಗುನಗುತ್ತಲೇ ಮಾತನಾಡಿದರು. 'ಇದೆಲ್ಲ ಒಂಚೂರು ಟೆಸ್ಟ್ ಮಾಡಿಸಿ ತಂದುಬಿಡಿ' ಎಂದು ಓರೆಕೋರೆ ಅಕ್ಷರಗಳಲ್ಲಿ ಹಾಳೆ ತುಂಬಿಸಿ ನನ್ನ ಕೈಗೆ ತುರುಕಿದರು. ಕೇವಲ ಅಡಿಯಿಂದ ಮುಡಿಯವರೆಗಿನ ಪರೀಕ್ಷೆಗಳನ್ನಷ್ಟೇ ಅವರು ಹೇಳಿದ್ದರು!

ಒಂದೊಂದು ರಿಪೋರ್ಟು ಬರುತ್ತಿದ್ದ ಹಾಗೆ ನನ್ನ ಜೇಬು ಕರಗುತ್ತ ಬಂದು ಕೊನೆಗೊಮ್ಮೆ ನಾನು ಹಕ್ಕಿಯಂತೆ ಹಗುರವಾದೆ! ಡಾಕ್ಟರಿಗೆ ಎರಡು ಸಾವಿರ ಲಾಭ ಆಯಿತು.

ಏನಾಶ್ಚರ್ಯ? ಒಂದು ವರ್ಷ ಕಳೆದೇ ಬಿಟ್ಟಿತು. ನಾನು ಸಿಹಿಕೊಂಡು ತರುವುದು ಯಾವಾಗ ಎಂದು ಲೆಕ್ಕ ಹಾಕುತ್ತಿದ್ದೆ. ಯಾಕೆಂದರೆ ಇವಳ ಸಂಬಳ ಹೆಚ್ಚಾಗಲಿತ್ತು. ಅದನ್ನು ಸೆಲೆಬ್ರೇಟ್ ಮಾಡಬೇಡವೆ? ಅದೂ ದಿನ ಬಂದೇಬಿಟ್ಟಿತು... ಸಂಜೆ ನಾನು ಆಫೀಸಿನಿಂದ ಬರುವ ಮೊದಲೇ ಇವಳು ಬಂದುಬಿಟ್ಟಿದ್ದಳು. ಅಷ್ಟೇ ಅಲ್ಲ ರೂಮಿನಲ್ಲಿ, ಮಂಚದ ಮೇಲೆ ಮಲಗಿದ್ದಳು... ಹತ್ತಿರ ಹೋದೆ. ಅರೆ, ಬಿಕ್ಕುತ್ತಿದ್ದಾಳಲ್ಲ...

"ಅಲ್ಲವೆ ಸಂಬಳ ಹೆಚ್ಚಾದರೆ ಯಾರಾದರೂ ಅಳುತ್ತಾರಯೆ?" ಎಂದೆ.

"ಇಲ್ಲಾರಿ... ಅದೆಲ್ಲ..." ಬಿಕ್ಕು... ಬಿಕ್ಕು... ಊಂ... ಊಂ...

"ಏನಾಯ್ತು?" ಅವಳ ಪಕ್ಕದಲ್ಲಿ ಕುಳಿತು ಕೇಳಿದೆ. "ಸಂಬಳ ಜಾಸ್ತಿ ಮಾಡಿರಲಿಕ್ಕಿಲ್ಲ" ಅನಿಸಿತ್ತು

"ಅದು... ಅದು... ನಮ್ಮ ಫೈನಾನ್ಸ್ ಕಂಪೆನಿ ಪಾಪರ್ ಆಗಿ ಬೀಗ ಬಡ್ಕೊಂಡು ಹೋಯ್ತು" ಊಂ... ಊಂ...

"ಹೌದೆ?" ನಾನು ಸಂತೋಷದಿಂದ ನಕ್ಕೆ. ಅಂತೂ ದೇವರಿಗೆ ನನ್ನ ಮೇಲೆ ದಯೆ ಅನ್ನುವುದು ಬಂತು! "ಆಯ್ತಲ್ಲ ಇನ್ನು... ನಿನ್ನ ಸ್ವಯಂ ಸಂಪಾದನೆಯ ಎಪಿಸೋಡಿಗೆ ಮಂಗಳ ಹಾಡು... ನೀನು ಗಳಿಸಿದ್ದು ಸಾಕು" ಎಂದೆ.

ಫಕ್ಕನೆ ಅಳು ನಿಂತಿತು. "ಇಲ್ಲರಿ... ನಾನು ತೆಳ್ಳಗಾಗಬೇಕು ಅಂತ ಇಷ್ಟೆಲ್ಲ ಶ್ರಮಪಟ್ಕೊಂಡ್ಡದ್ದು. ಅದಂತೂ ಆಗಿಲಲ್ಲ... ರೀ ನಾನು ಹೀಗೆ ಗುಂಡಗುಂಡಗೇ ಇದ್ರೆ ನಿಮಗೆ ಬೇಜಾರಿಲ್ಲ ತಾನೆ?" ಎಂದು ಮುದ್ದುಗರೆದಳು.

"ನಾನದನ್ನು ನಿನಗೆ ಯಾವತ್ತೋ ಹೇಳಿದ್ದೆ. ನಿನ್ನ ಟ್ಯೂಬ್‌ಲೈಟ್ ಈಗ ಹೊತ್ತಿಕೊಂಡ್ರಷ್ಟೆ" ಎಂದೆ.

ನಾವು ನಕ್ಕದಕ್ಕೆ ಕಾರಣ ಪಾಪೂಗೆ ತಿಳೀತೋ ಇಲ್ಲವ್ತೋ ಗೊತ್ತಿಲ್ಲ. ಆದರೆ ಜೋರಾಗಿ ಚಪ್ಪಾಳೆ ಮಾತ್ರ ತಟ್ಟಿತು!!

ಮಯೂರ ನೋಟ



ಜುಲೈ 1998




ಮೇಲುಕೋಟೆಯ ರಾಯಗೋಪುರದ ಒಂದು ಸ್ತಂಭ ಶಿಲ್ಪ

ಚಿತ್ರ: ಎಂ. [illegible]

ಭಾ		5	12	19	26
ಸೋ		6	13	20	27
ಮಂ		7	14	21	28
ಬು	1	8	15	22	29
ಗು	2	9	16	23	30
ಶು	3	10	17	24	31
ಶ	4	11	18	25	

	ರಾಹುಕಾಲ	ಗುಳಿಕಕಾಲ	ಯಮಗಂಡಕಾಲ
ಭಾನು	4.30-6.00	3.00-4.30	12.00-1.30
ಸೋಮ	7.30-9.00	1.30-3.00	10.30-12.00
ಮಂಗಳ	3.00-4.30	12.00-1.30	9.00-10.30
ಬುಧ	12.00-1.30	10.30-12.00	7.30-9.00
ಗುರು	1.30-3.00	9.00-10.30	6.00-7.30
ಶುಕ್ರ	10.30-12.00	7.30-9.00	3.00-4.30
ಶನಿ	9.00-10-30	6.00-7.30	1.30-3.00





ಎಲ್. ಪ್ರವೀಣ್ ಕುಮಾರ್

ಹೂವಿನ ಅಂದ ಮಕರಂದದಿಂದ

ಬಹಳ ಸಮಯದ ಹಿಂದಿನ ಮಾತು. ಇಸ್ರೇಲ್ ದೇಶವನ್ನು ಸೊಲೋಮನ್‌ನೆಂಬ ರಾಜನಾಳುತ್ತಿದ್ದನು. ಅವನು ಬಹಳ ಬುದ್ಧಿವಂತ, ಚತುರ ರಾಜನೆಂದು ವಿಶ್ವವಿಖ್ಯಾತನಾಗಿದ್ದ.

ಅವನ ಬುದ್ಧಿವಂತಿಕೆಯನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ ಶೀಬಾ ದೇಶದ ರಾಜಕುಮಾರಿ (ಈಗಿರುವ ಯೆಮನ್ ದೇಶ) ತನ್ನ ಸೇವಕರೊಡನೆ ರಾಜನ ಆಸ್ಥಾನಕ್ಕೆ ಬಂದಳು. ಭವ್ಯವಾದ ಅರಮನೆಯೊಳಗಡೆ ಬಂದು ಫಳ ಫಳ ಹೊಳೆಯುವ ನೆಲ ಮತ್ತು ಗೋಡೆಗಳು, ಉತ್ತಮವಾದ ಕೆತ್ತನೆಯನ್ನು ಒಳಗೊಂಡ ವಿವಿಧ ಆಕೃತಿಯ ಮರದ ಆಸನಗಳು. ದೇಶ ವಿದೇಶಗಳಿಂದ ಸಂಗ್ರಹಿಸಿ ತಂದ ವಿಚಿತ್ರ ವಸ್ತುಗಳನ್ನು ನೋಡಿ ತಾನೇನಾದರೂ ಮಾಯಾ ಲೋಕವೊಂದನ್ನು ಪ್ರವೇಶಿಸಿದೆನೆ ಎಂಬ ಭಾವನೆ ಅವಳಿಗುಂಟಾಯಿತು.

ಅಲಂಕೃತವಾದ ಆಸನವೊಂದರಲ್ಲಿ ಕುಳಿತಿದ್ದ ರಾಜ ಸೊಲೋಮನ್ನನನ್ನು ನೋಡಿ

"ಮಹಾರಾಜ, ಜನರೆಲ್ಲ ನೀವು ಬಹಳ ಜ್ಞಾನಿ, ಬುದ್ಧಿವಂತ ಮತ್ತು ಚತುರನೆಂದು ಹೇಳುತ್ತಾರೆ. ಆದರೆ ನಾನು ಯಾವುದನ್ನೂ ಪರೀಕ್ಷಿಸದೆ ಸರಿಯೆಂದು ಒಪ್ಪುವವಳಲ್ಲ. ಆದುದ್ದರಿಂದ ನಿಮಗೊಂದು ಸಣ್ಣ ಪರೀಕ್ಷೆಯನ್ನಿಟ್ಟಿದ್ದೇನೆ. ಆ ಪರೀಕ್ಷೆಯಲ್ಲಿ ನೀವು ಗೆದ್ದರೆ ಜನರು ಹೇಳುವಂತೆ ನೀವು ಜ್ಞಾನಿಯೆಂದು ಒಪ್ಪಿಕೊಳ್ಳುತ್ತೇನೆ. ಇಲ್ಲವಾದಲ್ಲಿ ನಿಮ್ಮ ರಾಜ್ಯ ಬರೇ ಹೊಗಳುಭಟ್ಟರಿಂದ ತುಂಬಿದೆ ಎಂದು ಭಾವಿಸುತ್ತೇನೆ" ಎಂದಳು.

ರಾಜನು ತನ್ನ ಆಸನದಿಂದೆದ್ದು ಶೀಬಾ ದೇಶದ ರಾಣಿಗೆ ತನ್ನ ರಾಜ್ಯಕ್ಕೆ ಸ್ವಾಗತವನ್ನು ಕೋರಿ "ರಾಣಿಯೆ, ನಿನ್ನ ಪರೀಕ್ಷೆ ಏನಿದ್ದರೂ ನಾನು ಎದುರಿಸಲು ಸಿದ್ಧನಾಗಿದ್ದೇನೆ. ನಾನೊಬ್ಬ ದೈವ ಭಕ್ತ, ದೇವರ ಇಚ್ಛೆಯಂತೆ ನಡೆಯುವವ. ಅವನಿಚ್ಛೆಯಿದ್ದರೆ, ನೀನು ಕೊಡುವ ಪರೀಕ್ಷೆಯಲ್ಲಿ ಗೆಲ್ಲುತ್ತೇನೆ, ಇಲ್ಲವಾದಲ್ಲಿ ಭಗವಂತನ ಪ್ರಸಾದ ಎಂದು ಸೋಲನ್ನು ಸ್ವೀಕರಿಸುತ್ತೇನೆ" ಎಂದನು.

ರಾಣಿಯು ತನ್ನ ಸೇವಕಿಯನ್ನು ಕರೆದು ಅವರ ಕಿವಿಯಲ್ಲಿ ಏನೋ ಹೇಳಿದಳು. ಸೇವಕಿಯರಿಬ್ಬರೂ ಹೊರಗೆ ಹೋಗಿ ಎರಡು ಬಣ್ಣದ ಹೂವಿನ ಗುಚ್ಛವನ್ನು ತಂದು ರಾನಿಗೆ ಕೊಟ್ಟರು.

ರಾಣಿ ಏನು ಪ್ರಶ್ನೆಯನ್ನು ಕೇಳುತ್ತಾಳೋ ಎಂದು ಸಭಿಕರೆಲ್ಲ ಕುತೂಹಲಭರಿತರಾಗಿ ರಾಣಿಯ ಮುಖವನ್ನೆ ನೋಡತೊಡಗಿದರು. "ರಾಜನೆ, ಈ ಎರಡು ಹೂವಿನ ಗುಚ್ಛಗಳಲ್ಲಿ ಒಂದು ಕೃತಕವಾದದ್ದು, ಒಂದು ನಿಜವಾದದ್ದು. ಇವುಗಳನ್ನು ನೀವು ದೂರದಿಂದಲೇ ನೋಡಿ ಇದರಲ್ಲಿ ಯಾವುದು ನಿಜವಾದದ್ದು, ಯಾವುದು ಕೃತಕವಾದದ್ದು ಎಂದು ಹೇಳಿ" ಎಂದು ಸವಾಲು ಹಾಕಿದಳು ರಾಣಿ.

ಎರಡು ಹೂಗುಚ್ಛಗಳು ನೋಡಲು ಒಂದೇ ತರಹವಾಗಿದ್ದವು. ಬಣ್ಣಗಳಲ್ಲಿಯೂ ವ್ಯತ್ಯಾಸ ಏನೂ ಕಂಡುಬರುತ್ತಿರಲಿಲ್ಲ. ಎರಡೂ ಸಹ ನಿಜವಾದ ಪುಷ್ಪಗಳಂತೆಯೇ ಕಾಣುತ್ತಿದ್ದವು. ತಮ್ಮ ರಾಜ ಬುದ್ಧಿವಂತನಾದರೂ ಈ ಪರೀಕ್ಷೆಯಲ್ಲಿ ಗೆಲ್ಲುವುದು ಬಹಳ ಕಷ್ಟವೆಂದು ಸಭಿಕರು ತಮ್ಮಲ್ಲೆ ಮಾತನಾಡತೊಡಗಿದರು.

ರಾಜ ಸ್ವಲ್ಪ ಸಮಯ ಮೌನವಾಗಿದ್ದು ನಂತರ ತನ್ನ ಸೇವಕನೊಬ್ಬನನ್ನು ಕರೆದು ಕೋಣೆಯ ಎಲ್ಲಾ ಕಿಟಕಿಗಳನ್ನು ತೆರೆಯಲು ಹೇಳಿದನು. ಸ್ವಲ್ಪ ಸಮಯದ ನಂತರ ಅರಮನೆಯ ಸುತ್ತಲಿದ್ದ ಹೂತೋಟದಲ್ಲಿ ಮಕರಂದವ ಅರಸುತ್ತಿದ್ದ ದುಂಬಿಯೊಂದು ಕೋಣೆ ಒಳಗಡೆ ಬಂದು ಒಂದು ಹೂಗುಚ್ಛದ ಮೇಲೆ ಕುಳಿತು ಅದರ ಮಕರಂದವನ್ನು ಹೀರತೊಡಗಿತು. ಇದನ್ನು ಬೇರೆ ಯಾರು ಗಮನಿಸಲಿಲ್ಲ. ರಾಜ ಆ ಪುಷ್ಪಗುಚ್ಛದೆಡೆಗೆ ಕೈತೋರಿಸಿ ಅದು ನಿಜವಾದ ಪುಷ್ಪ ಮತ್ತು ಇನ್ನೊಂದು ಕೃತಕವಾದದ್ದು ಎಂದು ಸರಿಯಾಗಿ ಹೇಳಿದಾಗ, ರಾಣಿ ಅವನ ಉತ್ತರ ಕೇಳಿ ಬೆರಗಾಗಿ ರಾಜನು ಅಷ್ಟು ಬೇಗನೆ ಸರಿಯಾದ ಉತ್ತರವನ್ನು ಹೇಗೆ ಕಂಡುಕೊಂಡನೆಂದು ಕುತೂಹಲಭರಿತಳಾಗಿ ಕೇಳಲು "ರಾಣಿ, ನೋಡಲು ಹೂವುಗಳು ಒಂದೇ ಆಗಿದ್ದರೂ ನೈಜ ಹೂವು ಮಾತ್ರ ಮಕರಂದ ಕೊಡಬಲ್ಲುದು. ನಾನು ಈ ಕೋಣೆಯ ಕಿಟಕಿಗಳನ್ನು ತೆರೆಸಿದಾಗ ದುಂಬಿಯೊಂದು ಬಂದು ನೈಜ ಹೂವಿನ ಮೇಲೆ ಕುಳಿತುಕೊಂಡಿತು. ಆ ಗುಚ್ಛದಲ್ಲಿದ್ದ ಪುಷ್ಪಗಳೆಲ್ಲದರ ಮಕರಂದವ ಹೀರಿದ ಮೇಲೆ, ಇನ್ನೊಂದು ಗುಚ್ಛ ಪಕ್ಕದಲ್ಲಿಯೆ ಇದ್ದರೂ ಅದರೆಡೆಗೆ ಹೋಗದೆ ಅದು ಹಾರಿ ಹೋಯಿತು. ಆ ದುಂಬಿಯ ಸಹಾಯದಿಂದ ನಾನು ನಿಜವಾದ ಪುಷ್ಪಗುಚ್ಛವನ್ನು ಕಂಡು ಹಿಡಿದೆ" ಎಂದು ಹೇಳಿದ ರಾಜ

ರಾಜನ ಚತುರತೆಯನ್ನು ಸ್ವಯಂ ಕಂಡು ಸಂತುಷ್ಟಳಾದ ಶೀಬಾದ ರಾಣಿ ಅವನಿಗೆ ಬಹಳಷ್ಟು ಬಂಗಾರ, ವಜ್ರವೈಡೂರ್ಯಗಳನ್ನು ಕಾಣಿಕೆಯಾಗಿ ಕೊಟ್ಟು ರಾಜನ ಗುಣಗಾನ ಮಾಡುತ್ತ ಶೀಬಾ ದೇಶಕ್ಕೆ ತೆರಳಿದಳು.

ಅವನ ಖ್ಯಾತಿ ಎಷ್ಟಿದೆಯೆಂದರೆ ಸಹಸ್ರಾರು ವರ್ಷಗಳು ಕಳೆದುಹೋದರೂ ಆಂಗ್ಲ ಭಾಷೆಯಲ್ಲಿ ! !Wise as Solomon'' ಎಂದು ಬಳಸುವ ಪರಿಪಾಠ ಇಂದಿಗೂ ವಾಡಿಕೆಯಲ್ಲಿದೆ.

(ಬೈಬಲ್ಲಿನ ಕತೆ ಆಧಾರಿತ)

ನಿಜವಾದ ಸಂಗೀತಗಾರ

ಗೇಯ ಸುಧಾ ಎಂಬ ಸಂಗೀತ ಪಾಠಶಾಲೆಯೊಂದರಲ್ಲಿ ಸುವಿಶಾರದ ಎಂಬ ಗುರುಗಳು ಪಾಠ ಕಲಿಸುತ್ತಿದ್ದರು. ಒಮ್ಮೆ ಅವರ ಬಳಿ ಸಂಗೀತ ಕಲಿಯಲೋಸುಗ ಕೀರ್ತಿಪ್ರಿಯ, ಧನಶೇಖರ, ಸಂಕೀರ್ತನ ಎಂಬ ಮೂವರು ಬಾಲಕರು ಬಂದರು. ಸುವಿಶಾರದ ಗುರುಗಳು ಇತರ ಶಿಷ್ಯಂದಿರ ಹಾಗೆಯೇ ಈ ಮೂವರು ಬಾಲಕರಿಗೂ ಸಂಗೀತ ಪಾಠವನ್ನು ಮೂಲದಿಂದಲೇ ಆರಂಭಿಸಿದರು. ಆ ಬಾಲಕರು ಗುರುಗಳು ಹೇಳಿಕೊಟ್ಟ ಪಾಠವನ್ನು ಚೆನ್ನಾಗಿಯೇ ಅಭ್ಯಾಸ ಮಾಡಿದರು. ಕೇವಲ ಎರಡೇ ವರ್ಷಗಳಲ್ಲಿ ಕಿರಿಯ ಹಂತದ ಅಭ್ಯಾಸವನ್ನು ಅವರು ಮುಗಿಸಿದರು.

ಸುವಿಶಾರದ ಗುರುಗಳು ಹಿರಿಯ ಹಂತದ ಪಾಠವನ್ನು ಎಲ್ಲರಿಗೂ ಹೇಳಿಕೊಡುತ್ತಿರಲಿಲ್ಲ. ಅರ್ಹರಾದ ಕೆಲವೇ ಮಂದಿಗೆ ಆ ಅವಕಾಶ ದೊರೆಯುವುದಿತ್ತು. ಈ ಮೂವರು ಶಿಷ್ಯಂದಿರು ಹಿರಿಯ ಹಂತದ ಅಭ್ಯಾಸಕ್ಕೆ ಅರ್ಹರೇ ಅಲ್ಲವೇ ಎಂದು ತಿಳಿಯುವುದಕ್ಕಾಗಿ ಸುವಿಶಾರದರು ಒಂದು ಪರೀಕ್ಷೆಯನ್ನು ಮುಂದಿಟ್ಟರು. ಅವರು ಮೂವರನ್ನು ಪ್ರತ್ಯೇಕವಾಗಿ ಕರೆಸಿ ಪ್ರಶ್ನೆಯೊಂದನ್ನು ಕೇಳಿದರು. "ನೀನೇಕೆ ಮುಂದಿನ ಹಂತದ ಅಭ್ಯಾಸವನ್ನು ಮಾಡಲು ಬಯಸುತ್ತಿ?"

ಆ ಪ್ರಶ್ನೆಗೆ ಧನಶೇಖರ ಉತ್ತರಿಸಿದ "ಗುರುಗಳೇ, ಸಂಗೀತವನ್ನು ಆಳವಾಗಿ ಅಭ್ಯಸಿಸಿ ನಾನು ಒಬ್ಬ ಉತ್ತಮ ಹಾಡುಗಾರನಾಗಿ ಅನೇಕ ರಂಜನೀಯ ಕಾರ್ಯಕ್ರಮಗಳನ್ನು ನೀಡಿ ಹೇರಳವಾಗಿ ಹಣ ಸಂಪಾದಿಸಲು ಬಯಸಿದ್ದೇನೆ. ಆದ್ದರಿಂದ ನಾನು ಮುಂದಿನ ಹಂತವನ್ನು ಅಭ್ಯಾಸ ಮಾಡಲಿಚ್ಛಿಸಿದ್ದೇನೆ."

ಕೀರ್ತಿಪ್ರಿಯ ಗುರುಗಳ ಬಳಿ ಹೇಳಿದ "ಗುರುಗಳೇ, ಸಂಗೀತವನ್ನು ಚೆನ್ನಾಗಿ ಅಭ್ಯಾಸ ಮಾಡಿ ನಾನು ಒಳ್ಳೆಯ ಸಂಗೀತಗಾರನೆಂಬ ಹೆಸರನ್ನು ಪಡೆಯಬಹುದು. ಉತ್ತಮ ಹಾಡುಗಾರನೆಂಬ ಕೀರ್ತಿಗೆ ಪಾತ್ರನಾಗುವುದಕ್ಕೋಸ್ಕರ ನಾನು ಇನ್ನು ಕಲಿಯಲು ಇಚ್ಛಿಸಿದ್ದೇನೆ."

ಸಂಕೀರ್ತನನು ವಿನಯದಿಂದ ಉತ್ತರವನ್ನು ನೀಡಿದ "ಗುರುಗಳೇ, ಸಂಗೀತದ ಅಭ್ಯಾಸವನ್ನು ಬಿಡುವುದನ್ನು ನನ್ನಿಂದ ಎಣಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ. ನಾನು ಎಷ್ಟು ಕಲಿತರೂ ಸಂಗೀತ ಸಾಗರದ ಆಳವನ್ನು ಕಾಣುವುದು ಸುಲಭವೆಂದು ನನಗೆ ಅನ್ನಿಸುವುದಿಲ್ಲ. ಆದರೆ ನಾನು ಹಾಡುವುದನ್ನು ತೊರೆದು ಬದುಕಲಾರೆ. ಸಂಗೀತವೇ ನನ್ನ ಉಸಿರು. ಅದೇ ನನ್ನ ಜೀವನ. ಆದ್ದರಿಂದ ನಾನು ಸಂಗೀತ ಕ್ಷೇತ್ರದಲ್ಲಿ ಇನ್ನು ಬಹಳಷ್ಟು ಕಲಿಯಲು ಬಯಸಿದ್ದೇನೆ. ಮಾತ್ರವಲ್ಲ ಕಲಿತ ಪಾಠವನ್ನು ಪ್ರಯೋಗ ಮಾಡುತ್ತಲೇ ಇರಬೇಕು ಎಂಬುದು ನನ್ನ ಆಸೆ. ನನ್ನ ಆಯುಷ್ಯಪೂರ್ತಿ ಸಂಗೀತಕ್ಕಾಗಿ ಮೀಸಲಿರಿಸಬಯಸಿದ್ದೇನೆ ದಯವಿಟ್ಟು ನನಗೆ ಮುಂದಿನ ಹಂತದ ಅಭ್ಯಾಸಕ್ಕೆ ಅವಕಾಶ ನೀಡಿ."

ಆ ಬಾಲಕರ ಉತ್ತರಗಳನ್ನು ತುಲನೆ ಮಾಡಿದರು ಸುವಿಶಾರದ ಗುರುಗಳು. ಒಬ್ಬನು ಕೀರ್ತಿಗಾಗಿ, ಇನ್ನೊಬ್ಬ ಹಣಕ್ಕಾಗಿ ಸಂಗೀತ ಕಲಿಯಬಯಸಿದರೆ ಮೂರನೆಯ ವಿದ್ಯಾರ್ಥಿ ತನ್ನ ಜೀವನವನ್ನೇ ಸಂಗೀತಕ್ಕಾಗಿ ಮುಡಿಪಾಗಿಡಲು ನಿರ್ಧರಿಸಿದ್ದಾನೆ. ಈ ವ್ಯಕ್ತಿಯು ಸಂಗೀತದಲ್ಲಿ ಒಳ್ಳೆಯ ಸಾಧನೆಯನ್ನು ಮಾಡಬಲ್ಲ ಎಂದರಿತು ಸುವಿಶಾರದ ಗುರುಗಳು ಸಂಕೀರ್ತನನಿಗೆ ಹೇಳಿದರು- "ಮಗುವೇ, ನೀನೇ ನಿಜವಾದ ಸಂಗೀತಗಾರನಾಗಬಲ್ಲೆ. ನೀನು ಮುಂದಿನ ಪಾಠಕ್ಕೆ ಅರ್ಹನಾದ ಶಿಷ್ಯ" ಎಂದು ಬೆನ್ನು ತಟ್ಟಿದರು.

ಮಕ್ಕಳೇ ಕೀರ್ತಿಪ್ರಿಯ ಮತ್ತು ಧನಶೇಖರರು ಮುಂದಿನ ಅಭ್ಯಾಸಕ್ಕೆ ಅವಕಾಶ ಗಳಿಸಲಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲವಲ್ಲ.

–ಗೋಪಾಲಕೃಷ್ಣ ಭಟ್ ಜಿ ಎಂ

1. ವಿಶ್ವದ ಅತಿ ದೊಡ್ಡ ವಿಶ್ವವಿದ್ಯಾಲಯ ಯಾವ ದೇಶವಲ್ಲಿ ಇದೆ?

(ಅ) ಅಮೆರಿಕಾ (ಆ) ರಶಿಯಾ (ಇ) ಜಪಾನ್ (ಈ) ಭಾರತ.

2. ಈಗಿನ ಲೋಕಸಭೆಯಲ್ಲಿ ಒಟ್ಟು ಎಷ್ಟು ರಾಜಕೀಯ ಪಕ್ಷಗಳಿವೆ ಬಲ್ಲಿರಾ?

(ಅ) 54 (ಆ) 31 (ಇ) 38 (ಈ) 42.

3. ಏಶಿಯಾದ ಅತ್ಯಂತ ದೀರ್ಘ (760 ಕಿ.ಮೀ.) ರೈಲು ಮಾರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ರೈಲು ಮಾರ್ಗದ ಹೆಸರೇನು? ಯಾವ ಊರಿನಿಂದ ಯಾವ ಊರಿಗೆ ಇದರ ಪಯಣ?

4. ಅತ್ಯಂತ ಹೆಚ್ಚು ಮರು-ಮುದ್ರಣ ಕಂಡ, ಕನ್ನಡದ ಏಕೈಕ ಕಾದಂಬರಿಗಾರ್ತಿ ಯಾರು?

(ಅ) ಅನುಪಮಾ ನಿರಂಜನ (ಆ) ಉಷಾ ನವರತ್ನರಾಂ (ಇ) ತ್ರಿವೇಣಿ (ಈ) ಈಚನೂರು ಶಾಂತಾ.

5. ಮೆಣಸು ಉತ್ಪಾದನೆಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ? ಅತಿ ಹೆಚ್ಚು ಮೆಣಸು ಬೆಳೆಯುವ ಭಾರತದ ರಾಜ್ಯ ಯಾವುದು?

6. ಮೋಂಬತ್ತಿ (ಕ್ಯಾಂಡಲ್) ಬೆಳಕಲ್ಲೇ ಚಿತ್ರೀಕರಿಸಲಾದ ಮೊದಲ ಚಲನ ಚಿತ್ರ ಯಾವುದು?

7. ರಂಗ-ಸೇವೆಗಾಗಿ 1998ರ 'ಕಾಳಿದಾಸ ಸಮ್ಮಾನ್' ಪ್ರಶಸ್ತಿ ಪಡೆದಿರುವ ರಂಗ ಕರ್ಮಿ ಯಾರು?

8. 1996 ರ ಬಿರ್ಲಾ ಪ್ರತಿಷ್ಠಾನ ಪ್ರಶಸ್ತಿಗಳನ್ನು ಪಡೆದಿರುವ ಕ್ರೀಡಾಪಟುಗಳು ಯಾರು ಬಲ್ಲಿರಾ?

9. ಇದುವರೆಗೂ ಕರ್ನಾಟಕ ಎಷ್ಟು ಬಾರಿ ರಣಜಿ ಫೈನಲ್ಲನ್ನು ಪ್ರವೇಶಿಸಿದೆ? ಎಷ್ಟು ಬಾರಿ ಗೆದ್ದಿದೆ?



10. ಯಾವುದೀ ಕ್ರೀಡೆ?

11. ಭಾರತೀಯ ಹಾಕಿ ಫೆಡರೇಶನ್‌ನ ಈಗಿನ ಅಧ್ಯಕ್ಷ ಯಾರು?

ಆಟ ಪಾಠ



12. ಇದು ಯಾವ ಸಾಂಸ್ಕೃತಿಕ ಸಂಸ್ಥೆಯ ಲಾಂಛನ?



13. ಈ ಕಲಾವಿದರನ್ನು ಹೆಸರಿಸಿ?



14. ಚಿತ್ರದಲ್ಲಿರುವ ನೃತ್ಯ ದಂಪತ್ರಿಗಳನ್ನು ಹೆಸರಿಸಿ?

—ನಾರಾಯಣ ರಾಯಚೂರ್

(ಉತ್ತರ 93ನೇ ಪುಟದಲ್ಲಿ)


ಪಿಂಕಿ
• ಪ್ರಾಣ್
ಓ, ಆಫೀಸಿನಿಂದ ಬಂದ್ರಾ ಡ್ಯಾಡಿ?
ಒಂದು ಲೋಟ ಬಿಸಿ ಟೀ ಕೊಡ್ತೀಯಾ?
ಡ್ಯಾಡಿ, ನಿನಗೆ ನಾನೇ ಟೀ ಮಾಡಿಕೊಡ್ತೀನಿ
ನೀನು ಇಂಥ ಟೀ ಯಾವತ್ತೂ ಕುಡಿದಿರೋಲ್ಲ...
ಏನಾಯ್ತು? ಸಕ್ಕರೆ ಹಾಕಿಲ್ವ?
ವ್ಯಾ...
ಅಲ್ಲ!


ಸಕ್ಕರೆ ಹೆಚ್ಚಾಯ್ತೆ?
ಇಲ್ಲ!
ನಿಜವಾಗಿ ಇಂಥ ಟೀ ಮುಂಚೆ ಕುಡಿದಿರಲಿಲ್ಲ
ಪ್ರಿಟ್ಟೀ, ಸಕ್ಕರೆ ಯಾವ ಡಬ್ಬದಲ್ಲಿತ್ತು?
ಬಾ ತೋರಿಸ್ತೀನಿ
ಈ ಡಬ್ಬದಿಂದ
ಅಯ್ಯೋ, ಇದು ಉಪ್ಪು!
© FRAN'S FEATURES
47



ಆನೆಯ ಅಳಲು

ದೊಡ್ಡದೊಂದು ಕಾಡಿನಲ್ಲಿ
ದೊಡ್ಡ ಆನೆ ಹಿಂಡಿನಲ್ಲಿ
ಕಾಡ ತುಂಬ ಆಡಿಕೊಂಡು
ಉಂಡು ತಿಂದು ಇದ್ದೆನು

ಹೊಟ್ಟೆತುಂಬ ಸೊಪ್ಪು ಸೆದೆ
ನೀರಾಟಕೆ ನದಿಯು ಎದೆ
ಎಂಥ ಸುಖ ಏನು ಕತೆ
ಜೊತೆಗಾರರು ಹುಲಿಚಿರತೆ

ಖೆಡ್ಡದೊಳಗೆ ಕೆಡವಿ ನನ್ನ
ತಂದರಿಲ್ಲಿ ಮೂರ್ಖರು
ಹೊಟ್ಟೆಗಿಲ್ಲಿ ಇಲ್ಲ ಕೂಳು
ಕೆಟ್ಟ ಕೊಳಕು ನೀರು

ಅಂಕುಶವೇ ಇವರ ಆಸೆ
ಅಂಕುಶವೇ ಇವರ ಭಾಷೆ
ನೆರಳು ಇಲ್ಲ ಕರುಣೆ ಇಲ್ಲ
ಅಂಕುಶವೇ ಇವರಿಗೆಲ್ಲ

ಇವರು ನನ್ನ
ಕಟ್ಟಿ ಕೆಡವಿ
ನಾನು ಮರೆತೆ
ನನ್ನ ಅಡವಿ

ನನ್ನ ದೇಹ ನಾಡಿನಲ್ಲಿ
ನನ್ನ ಮನಸು ಕಾಡಿನಲ್ಲಿ
ಹೇಳಿ ಮುದ್ದು ಮಕ್ಕಳೇ
ನಾನು ಏನು ಮಾಡಲಿ

-ಕೃಷ್ಣಮೂರ್ತಿ ಬಿಳಿಗೆರೆ

ಕಿರಿಯರ ಕಣ

ಗಿಳಿಮರಿಯ ಸತ್ಯಾಗ್ರಹ

ಗಿಳಿಮರಿಯೊಂದು
ಚೂಚೂ ಎಂದು
ಹಾಡಿರೆ ಹಿಡಿಸಿತು ನನಗೆ:
ಅಪ್ಪನ ಬೇಡಿ
ಅವನನು ಕಾಡಿ
ತಂದೆನು ಅದ ನಾ ಮನೆಗೆ

ಪಂಜರದಲ್ಲಿ
ಕಾಳನು ಚೆಲ್ಲಿ
ಬಿಟ್ಟೆನು ಅದರಾ ಒಳಗೆ;
ಕಾಳನು ತಿಂದು
ಸುಖದಿರಲೆಂದು
ಬಯಸಿದೆನು ಆ ಗಳಿಗೆ

ಆದರೆ ಗೆಳೆಯ
ಇದ ನೀ ತಿಳಿಯ
ಗಿಳಿಮರಿ ಸಂತಸ ಪಡದೆ:
ಕಾಳನು ತಿನದೆ
ಹೊಟ್ಟೆಯು ಹಸಿದೆ
ಇತ್ತೆಲೊ ಹಗಲಿರುಳೆನದೆ!

ಸ್ವತಂತ್ರದಿಂದ
ಬಾಳುವ ಅಂದ
ಪಂಜರದೊಳಗಿದೆ ಎಲ್ಲಿ?
ಎನ್ನುತ ತಾನು
ಉಪವಾಸವನು
ಗೈದಿತು ಕಾಳನೆ ಚೆಲ್ಲಿ!

ಹಕ್ಕಿಯ ಭಾವ
ಅದಕಿಹ ನೋವ
ಅರಿಯುತೆ ನಾನು ಅಂದು:
ಸುಖದಿರು ಕಂದಾ
ಎನ್ನುತ, ಬಂಧಾ
ಬಿಡಿಸಿದೆ ನಾ ಮನನೊಂದು

-ಗುರುರಾಜ ಬೆನಕಲ್

ಆಟ – ಪಾಠ ಉತ್ತರಗಳು

1. (ಆ) ರಶಿಯಾ (ಮಾಸ್ಕೋದ ಎಂ ವಿ ಎಲ್ ಸ್ಟೇಟ್ ಯುನಿವರ್ಸಿಟಿ).
2. (ಈ) 42.
3. ಕೊಂಕಣ ರೈಲು ಮಾರ್ಗ: ಮಂಗಳೂರಿನಿಂದ ಮುಂಬೈ.
4. (ಇ) ತ್ರಿವೇಣಿ.
5. ಮೂರನೆ ಸ್ಥಾನ (ಇಂಡೋನೇಷಿಯಾ, ಬ್ರೆಝಿಲ್, ಅನುಕ್ರಮ ಮೊದಲೆರಡು ಸ್ಥಾನ); ಕೇರಳ.
6. (ಅ) ಕ್ಲಾರ್ಕ್ ವರ್ಕ್ ಆರೆಂಜ್ (ಸ್ಟ್ಯಾನ್ಲಿ ಕ್ಯುಬ್ರಿಕ್– ಚಿತ್ರ).
7. ತಪಸ್‌ಸೇನ್ (ಬೆಳಕು ತಜ್ಞ).
8. ಪಿ . ಗೋಪಿಚಂದ್, ಕುಂಜರಾಣಿ; ಸಂತೋಷ್ ಯಾದವ್.
9. ಹತ್ತು ಬಾರಿ ಫೈನಲ್ ಪ್ರವೇಶ; ಐದು ಬಾರಿ ವಿಜಯ.
10. ಗಾಲ್ಫ್
11. ಕೆ.ಪಿ.ಎಸ್. ಗಿಲ್
12. ಕರ್ನಾಟಕ ಚಿತ್ರಕಲಾ ಪರಿಷತ್.
13. ಪಂಡಿತ್ ಶೇಷಾದ್ರಿ ಗವಾಯಿ.
14. ಅನುರಾಧಾ ಹಾಗೂ ಶ್ರೀಧರ್.



"**ಶಾ**ಲೂ ತಿಂಡಿ ತೊಗೋ ಬಾ..." ನಳಿನಿ ಬಿಸಿ ದೋಸೆ ತಟ್ಟೆಗೆ ಹಾಕಿ ಕೂಗಿದಳು ನಳಿನಿ.

ರೂಮ್‌ನಲ್ಲಿದ್ದ ಶಾಲಿನಿ ಎದ್ದು ಬಂದವಳೇ ದೋಸೆ ನೋಡಿ ಮುಖ ಸೊಟ್ಟಮಾಡಿ "ನಂಗೆ ಬೇಡ ಮಮ್ಮಿ. ನನಗೆ ಈ ತಿಂಡಿಯೆಲ್ಲಾ ಬೇಜಾರು ನಾನು ಡಬ್ಬೀನೂ ತೊಗೊಂಡು ಹೋಗಲ್ಲ..."

"ಯಾಕೆ?"


"ನನ್ನ ಫ್ರೆಂಡ್ಸ್ ಯಾರೂ ಡಬ್ಬಿತರಲ್ಲ. ನಂಗೆ ದುಡ್ಡು ಕೊಡು..."

"ನೀನು ಕೇಳಿದಾಗಲೆಲ್ಲಾ ದುಡ್ಡು ಕೊಡಕ್ಕೆ ನಾನು ದುಡ್ಡಿನ ಗಿಡ ಹಾಕಿಲ್ಲ ಮನೇಲಿ ಮಾಡುವ ತಿಂಡಿ ತಿನ್ನುವುದಾದರೆ ತಿನ್ನು ಇಲ್ಲದಿದ್ರೆ ಉಪವಾಸ ಇರು..." ನಳಿನಿ ತ ಕಳೆದುಕೊಂಡು ಹೇಳಿದಳು.

"ಉಪವಾಸ ಯಾಕಿರ್ತಾಳೆ? ಆ ಫ್ರ ಮನೆಗೆ ಹೋಗಿ ತಿಂದು ಬರ್ತಾಳೆ..." ದ ತಿನ್ನುತ್ತಿದ್ದ ಚೇತನ್ ಹೇಳಿದ."

ನಳಿನಿ ಮಾತಾಡಲಿಲ್ಲ. ಮಗಳು ದಿನ ದೊಡ್ಡ ತಲೆನೋವಾಗುತ್ತಿರುವಂತೆ ಅ ಭಾಸವಾಯ್ತು. ಶಾಲಿನಿಗೆ ತೃಪ್ತಿ ಎನ್ನು ಇರಲಿಲ್ಲ. ಹೊರಗಡೆ ಸ್ನೇಹಿತರ ಜ ನಗುನಗುತ್ತಾ ಇರುತ್ತಿದ್ದವಳು ವ ಬಂದೊಡನೆ ಒಂದಲ್ಲಾ ಒಂದು ಕಾರಣ ತೆ ಮುಖ ಊದಿಸಿಕೊಳ್ಳುತ್ತಿದ್ದಳು.

ನಳಿನಿ ಖಾಸಗಿ ಕಾಲೇಜೊಂದರಲ್ಲಿ ಹದಿ



ಪುಣ್ಯನ ಮನೆ ಸ್ವರ್ಗವೆನ್ನುತ್ತಿದ್ದ ಶಾಲಿನಿಗೆ ಸತ್ಯದರಿವಾದಾಗ....

ಸಿ ಎನ್ ಮುಕ್ತಾ

ವರ್ಷಗಳಿಂದ ಕೆಲಸ ಮಾಡುತ್ತಿದ್ದಳು. ಆ ಕಾಲೇಜಿನವರು ಪೂರ್ತಿ ಸಂಬಳ ಕೊಡುತ್ತಿರಲಿಲ್ಲ. ಈಗ 5000 ರೂ. ಕೊಡುತ್ತಿದ್ದರು. ನಳಿನಿಯ ಗಂಡ ಭಾಸ್ಕರ ಸರ್ಕಾರಿ ಪ್ರೌಢಶಾಲೆಯೊಂದರಲ್ಲಿ ಶಿಕ್ಷಕ. ಹತ್ತುಸಾವಿರದವರೆಗೂ ಸಂಬಳ ಬರುತ್ತಿತ್ತು. ಜೊತೆಗೆ ಮನೆಪಾಠ ಹೇಳಿ ಸಂಪಾದಿಸುತ್ತಿದ್ದ. ಇಬ್ಬರೇ ಮಕ್ಕಳು ಶಾಲಿನಿ, ಚೇತನ್. ಶಾಲಿನಿ 2ನೇ ಪಿ.ಯು. ಓದುತ್ತಿದ್ದಳು. ಚೇತನ್ ಎಂಟನೇ ತರಗತಿಯಲ್ಲಿದ್ದ. ಇರುವ ಇಬ್ಬರು ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಅವರನ್ನು ಯಾವ ಕೊರತೆಯೂ ಕಾಡದಂತೆ ನೋಡಿಕೊಳ್ಳಬೇಕು ಎಂದು ದಂಪತಿಗಳು ಬಯಸುತ್ತಿದ್ದರು.

ಮೊದಲನೇ ವರ್ಷ ಪಿ.ಯು.ಸಿ. ಮುಗಿಯುತ್ತಿದ್ದಂತೆ ಶಾಲಿನಿ ಮನೆಪಾಠಗಳಿಗೆ ಹೋಗಲು ಸ್ಕೂಟರ್ ಬೇಕೆಂದು ಹಠ ಹಿಡಿದಿದ್ದಳು. ಭಾಸ್ಕರ ಲೂನಾ ತೆಗೆದುಕೊಟ್ಟಿದ್ದ. ಪ್ರತಿಹಬ್ಬಕ್ಕೂ ಬಟ್ಟೆಬರೆ ತೆಗೆಯಲಾಗುತ್ತಿತ್ತು. ಪೆಟ್ರೋಲ್ ಖರ್ಚಲ್ಲದೆ ತಿಂಗಳಿಗೆ ನೂರೈವತ್ತು ರೂಪಾಯಿ ಪಾಕೆಟ್‌ಮನಿ ಕೊಡುತ್ತಿದ್ದರು. ತಿಂಗಳಿಗೊಮ್ಮೆ ಮಕ್ಕಳನ್ನು ಹೊರಗೆ ಕರೆದೊಯ್ದು ನಾರ್ತ್ ಇಂಡಿಯನ್ ಊಟ ಕೊಡಿಸುತ್ತಿದ್ದರು. ಇಷ್ಟಾದರೂ ಶಾಲಿನಿಯಲ್ಲಿ ಒಂದು ತರಹ ಅತೃಪ್ತಿ ಮನೆಮಾಡಿತ್ತು.

ತಾಯಿ ತಿಂಡಿ ತಿನ್ನಲು ಒತ್ತಾಯಿಸದಿದ್ದಾಗ ಶಾಲಿನಿಗೆ ಅಳು ಉಕ್ಕಿಬಂತು. ಅವಳು ಬಟ್ಟೆ ಬದಲಾಯಿಸುತ್ತಿದ್ದಾಗ ನಳಿನಿ ಹೇಳಿದಳು. "ನೋಡು ನಿನ್ನ ಫ್ರೆಂಡ್ಸ್ ಶ್ರೀಮಂತರು ಅವರ ತರಹ ನೀನು ಕುಣಿಯುವುದಕ್ಕೆ ಆಗಲ್ಲ. ಮುಂದಿನ ವರ್ಷ ನೀನು ಬಿ.ಇ.ಗೋ, ಎಂ.ಬಿ. ಗೋ ಸೇರಿದರೆ ಎಷ್ಟು ಖರ್ಚಾಗತ್ತೇಂತ ಯೋಚಿಸಿದ್ದೀಯಾ? ನೀನೇನು ಎಳೆಯ ಮಗುವಲ್ಲ. ನಮ್ಮ ಕಷ್ಟಸುಖ ಅರ್ಥಮಾಡ್ಕೋ."

ಶಾಲಿನಿ ಮುಖ ಊದಿಸಿಕೊಂಡೇ ತಿಂಡಿ ತಿಂದು ಕನ್ನಡಿಯ ಮುಂದೆ ನಿಂತಾಗ ಪುಣ್ಯ ನೆನಪಾದಳು. ನೋಡಲು ಸುಮಾರಾಗಿದ್ದ ಪುಣ್ಯ ಬಾಯಲ್ಲಿ ಚಿನ್ನದ ಚಮಚ ಇಟ್ಟುಕೊಂಡೇ ಹುಟ್ಟಿದ್ದಳು ತಂದೆ ಕಂಟ್ರಾಕ್ಟರ್. ತಾಯಿ ಬ್ಯಾಂಕ್ ಆಫೀಸರ್. ಇವಳೊಬ್ಬಳೇ ಮಗಳು. ಅರಮನೆಯಂತಹ ಮನೆ, ಕೆಲಸಕ್ಕೆ, ಅಡುಗೆಗೆ ಆಳುಕಾಳುಗಳು. ತಿರುಗಾಡಲು ಎರಡು ಕಾರು. ಪುಣ್ಯ ನೀರಿನಂತೆ ಹಣ ಖರ್ಚು ಮಾಡುತ್ತಿದ್ದಳು. ಅವಳ ಸುತ್ತಲೂ ಹುಡುಗಿಯರ ಹಿಂಡೇ ಇರುತ್ತಿತ್ತು. ಶಾಲಿನಿ ಅವಳಿಂದ ದೂರವೇ ಇದ್ದಳು. ಆದರೆ ಪುಣ್ಯ ತಾನಾಗಿ ಅವಳ ಸ್ನೇಹ ಬಯಸಿದ್ದಳು. ಅವಳಿಗೆ ಸಿನಿಮಾಗೆ ಹೋಗಲು, ಬಟ್ಟೆ-ಬರೆ ಆರಿಸಲು, ಅವಳ ನೋಟ್ಸ್

ಮಾಡಿಕೊಡಲು ಅವಳಿಗೆ ಅರ್ಥವಾಗದ್ದನ್ನು ಹೇಳಿಕೊಡಲು ಶಾಲಿನಿ ಬೇಕಿತ್ತು. ಒಟ್ಟಿನಲ್ಲಿ ಶಾಲಿನಿಯಿಲ್ಲದೆ ಪುಣ್ಯಳಿಗೆ ಬೆಳಗಾಗುತ್ತಿರಲಿಲ್ಲ.

ಮನೆಯಲ್ಲಿ ಏನೇ ಅಡಿಗೆ-ತಿಂಡಿ ಮಾಡಿದರೂ ಶಾಲಿನಿ ಗೊಣಗಿ ಕೊಂಡೇ ತಿನ್ನುತ್ತಿದ್ದಳು. 'ಥೂ ಇದೂ ಒಂದು ತಿಂಡೀನಾ?' ಎಂದು ಮೂಗೆಳೆಯುತ್ತಿದ್ದಳು. "ಯಾಕೆ ಮಮ್ಮಿ ಕಷ್ಟಪಟ್ಟು ದೋಸೆ ಮಾಡ್ತೀಯ? ದುಡ್ಡು ಬಿಸಾಕಿದರೆ ಸಿಗಲ್ವಾ?" ಎನ್ನುತ್ತಿದ್ದಳು.

ನಳಿನಿ ಆಗಾಗ್ಗೆ ಗಂಡನ ಬಳಿ ತನ್ನ ಅಳಲು ಹಂಚಿಕೊಳ್ಳುತ್ತಿದ್ದಳು. "ರೀ ಯಾಕೋ ನನಗೆ ಶಾಲಿನೀನ್ನ ನೋಡ್ತಿದ್ರೆ ಭಯವಾಗತ್ತೆ. ಒಂದು ಮಾತು ಆಡಿದರೂ ಪಟಾಕಿತರಹ ಸಿಡಿಯುತ್ತಾಳೆ. ತಂದೆ-ತಾಯಿ ಬಗ್ಗೆ ಗೌರವವಿಲ್ಲ. ಮನೆ ಬಗ್ಗೆ ಪ್ರೀತೀನೇ ಇಲ್ಲ."

"ಚಿಕ್ಕವಳು ನಿಧಾನವಾಗಿ ಅರ್ಥ ಮಾಡಿಕೊಳ್ಳುತ್ತಾಳೆ" ಎನ್ನುತ್ತಿದ್ದ ಭಾಸ್ಕರ.

"ಚಿಕ್ಕವಳೇನ್ಬಂತು? ನಾನಿವಳ ವಯಸ್ಸಿನಲ್ಲಿ ಎಷ್ಟು ಮನೆಕೆಲಸ ಮಾಡ್ತಿದ್ದೆ ಗೊತ್ತಾ? ನಾನು ಇವಳ ತರಹ ಮನೆಪಾಠಗಳಿಗೆ ಹೋಗ್ತಿದ್ನಾ? ನಾನೇ ಓದಿಕೊಂಡು ಪಿ.ಯು.ಸಿ.ಯಲ್ಲಿ ಎಂಟನೇ ರ್‍ಯಾಂಕ್ ಬಂದಿರಲಿಲ್ವಾ? ಈ ಹುಡುಗಿ ಈ ಕಡೆ ಕಡ್ಡಿ ತೆಗೆದು ಆಕಡೆಗಿಡಲ್ಲ."

"ಕಾಲ ಬದಲಾಗಿದೆ ನಳಿನಿ. ನಾವಿದ್ದ ಹಾಗೆ ನಮ್ಮ ಮಕ್ಕಳೂ ಇರಬೇಕೂಂದ್ರೆ ಹೇಗೆ? ನಾವೇ ಮೊದಲು ಸೋತು ಆ ಮೇಲೆ ನಿಧಾನವಾಗಿ ಅವರನ್ನು ಗೆಲ್ಲಬೇಕು" ಎನ್ನುತ್ತಿದ್ದ ಭಾಸ್ಕರ.

ನಳಿನಿ ಮಾತಾಡುತ್ತಿರಲಿಲ್ಲ. ಮನಸ್ಸು ಮಾತ್ರ ಚಿಂತೆಯ ಕಡಲಾಗುತ್ತಿತ್ತು "ಎಂತಹ ಜೀವನ ನನ್ನದು? ನಾನೇ ಯಾವಾಗಲೂ ಯಾಕೆ ಹೊಂದಿಕೊಳ್ಳಬೇಕು? ಅತ್ತೆಗೆ-ಗಂಡನಿಗೆ ತಗ್ಗಿ ಬಗ್ಗಿ ನಡೆದಿದ್ದಾಯ್ತು ಈಗ ಮಗಳಿಗೆ ತಗ್ಗಬೇಕೆ?" ಎನ್ನಿಸುತ್ತಿತ್ತು. ಚೇತನ್ ಬಗ್ಗೆಯೂ ಭಯವಾಗುತ್ತಿತ್ತು. ಊಟ-ತಿಂಡಿಯ ವಿಚಾರಕ್ಕೆ ಟೀಕೆ ಮಾಡದಿದ್ದರೂ ಅಕ್ಕನಂತೆ ತಾಯಿಗೆ ದಬಾಯಿಸುವುದನ್ನು ಕಲಿತಿದ್ದ. "ಈಗಲೇ ಹೀಗೆ. ಇನ್ನು ಕಾಲೇಜಿಗೆ ಸೇರಿದ ಮೇಲೆ ಹೇಗಾಗುತ್ತಾನೋ?" ಎಂದು ಯೋಚಿಸಿ ತಲೆಕೆಡಿಸಿಕೊಳ್ಳುತ್ತಿದ್ದಳು.

ಅಂದು ಸಾಯಂಕಾಲ ನಳಿನಿಗೆ ಕಾಲೇಜು ಬಿಟ್ಟಾಗಲೇ ತಲೆನೋವು ಮೈ-ಕೈ ನೋವು ಶುರುವಾಗಿತ್ತು. ಅವಳು ಮನೆಗೆ ಬರುವ ವೇಳೆಗೆ ಶಾಲಿನಿ ಒಂದು ಪುಟ್ಟ ಸೂಟ್‌ಕೇಸ್‌ಗೆ ಬಟ್ಟೆ ಹಾಕುತ್ತಿದ್ದಳು.

"ಇದೇನೇ ಎಲ್ಲಿಗೆ ಹೊರಟಿದ್ದೀಯ?"

"ಪುಣ್ಯಂಗೆ ಜ್ವರ. ಅವಳ ಮಮ್ಮಿ-ಡ್ಯಾಡಿ ಬಾಂಬೆಗೆ ಮದುವೆಗೆ ಹೊರಟಿದ್ದಾರೆ ಪುಣ್ಯ ಒಬ್ಬಳೇ ಇರ್‍ತಾಳೆ ಅವಳನ್ನು ನೋಡ್ಕೋ' ಅಂತ ಅವರಮ್ಮ ಹೇಳಿದ್ರು. ನಾನು ಒಂದುವಾರ ಅಲ್ಲೇ ಇರ್‍ತೀನಿ."

"ಯಾಕೆ ಅವರಿಗೆ ಈ ಊರಿನಲ್ಲಿ ಇನ್ಯಾವ ನೆಂಟರೂ ಇಲ್ವಾ? ಮಗಳಿಗೆ ಹುಷಾರಿಲ್ಲದೆ ಇರುವಾಗ ಪುಣ್ಯಳ ತಾಯಿ ಊರಿಗೆ ಯಾಕೆ ಹೋಗಬೇಕು? ನೀನು ಹೋಗುವ ಅವಶ್ಯಕತೆಯಿಲ್ಲ. ನೀನು ಹೋಗಿ ಬೇರೆಯವರ ಮನೆಯಲ್ಲಿ ಇರೋದು ನಂಗಿಷ್ಟವಾಗಲ್ಲ..."

"ಹಾಗಲ್ಲ ಮಮ್ಮಿ..."

"ನನಗೂ ಹುಷಾರಿಲ್ಲ. ಜ್ವರ ಬಂದಿದೆ ನಾನು ಮಲಗಿದ್ರೆ ಮನೆ ಯಾರು ನೋಡ್ಕೋತಾರೆ? ನೀನು ಹೋಗಬೇಡ..."

"ಸಾರಿ ಮಮ್ಮಿ ನೀನು ಬೇರೆ ವ್ಯವಸ್ಥೆ ಮಾಡ್ಕೋ ನಾನು ಪುಣ್ಯನ ತಾಯಿಗೆ ಮಾತು ಕೊಟ್ಟಿದ್ದೇನೆ. ಪಪ್ಪ ಒಪ್ಪಿದ್ದಾರೆ."

"ಇರಬಹುದು. ನನಗೆ ಅವೆಲ್ಲಾ ಇಷ್ಟವಾಗಲ್ಲ ಬೇಕಾದ್ರೆ ಪುಣ್ಯನ್ನ ಇಲ್ಲಿಗೇ ಕರ್‍ಕೊಂಡು ಬಾ..."

"ಇಲ್ಲಿಗಾ? ಥೂ... ಈ ಮನೆಗೆ ಯಾರು ಬರ್‍ತಾರೆ?"

"ಯಾಕೆ ಹಾಗಂತೀಯ? ಇದೇನು ಮನೆಯಲ್ವಾ?"

"ನೀನು ಅವರ್‍ಮನೆ ನೋಡು ಹೇಗಿದೇಂತ. ಅವಳ ರೂಮ್ ನಮ್ಮ ಮನೆಯಷ್ಟಿದೆ. ಪ್ರತಿರೂಂಗೂ ಒಂದು ಫೋನ್ ಇದೆ. ಇಲ್ಲೇನಿದೆ ಮಣ್ಣು? ಹುಟ್ಟಿದರೆ ಅಂತಹವರ ಮನೆಯಲ್ಲಿ ಹುಟ್ಟಬೇಕು. ಅದಕ್ಕೂ ಅದೃಷ್ಟ ಬೇಕಲ್ಲಾ?"

ನಳಿನಿಗೆ ಮಗಳ ಮಾತು ಕೇಳಿ ದುಃಖ ಉಕ್ಕಿಬಂತು ಮತ್ತೆ ಅವಳು ಮಾತಾಡಲಿಲ್ಲ.

ಶಾಲೆಯಿಂದ ಬಂದ ಭಾಸ್ಕರ ಅಳುತ್ತಾ ಕುಳಿತಿದ್ದ ಹೆಂಡತಿಯನ್ನು ಕಂಡು ಗಾಬರಿಯಿಂದ ಕೇಳಿದ. "ಏನಾಯ್ತು ನಳಿನಿ

ಯಾಕಳ್ತಿದ್ದೀಯ?"

"ಅಳದೆ ಇನ್ನೇನು ಮಾಡಲಿ? ಶಾಲಿನಿಗೆ ನನ್ನ ಬಗ್ಗೆ ಪ್ರೀತೀನೇ ಇಲ್ಲ. ನಂಗೆ ಜ್ವರ ಬಂದಿದೆ. ನೀನು ಹೋಗಬೇಡಾಂತ ಬೇಡಿಕೊಂಡರೂ ಕೇಳದೆ ಹೊರಟುಹೋದಳು. ನೀವ್ಯಾಕೆ ಅವಳಿಗೆ ಪುಣ್ಯನ ಮನೆಗೆ ಹೋಗಕ್ಕೆ ಪರ್ಮಿಷನ್ ಕೊಟ್ರಿ?"

"ನಾನೇನು ಮಾಡಲಿ ನಳಿನಿ. ಆ ಹುಡುಗೀನ್ನ ಕರ್ಕೊಂಡು ಶಾಲಿನಿ ಶಾಲೆಗೇ ಬಂದಿದ್ಳು. ಆ ಹುಡುಗೀನೇ 'ಅಂಕಲ್ ಕಳಿಸಿಕೊಡೀಂತ' ಕೇಳಿದಳು. ಹುಡುಗಿಗೆ ಹುಷಾರಿರಲಿಲ್ಲ..."

"ಹೀಗೆ ಆದ್ರೆ ಅವಳು ನಮ್ಮ ಕೈಗೇ ಸಿಗಲ್ಲ. ಪಿ.ಯು.ಸಿ.ಯಲ್ಲಿ ಪಾಸಾದ್ರೆ ನಮ್ಮ ಪುಣ್ಯ ಅಂದುಕೊಳ್ಳಬೇಕು ಮನೆಯಲ್ಲಂತೂ ಒಂದಕ್ಷರ ಓದಲ್ಲ..."

ಭಾಸ್ಕರ ಮಾತಾಡಲಿಲ್ಲ. ಅವನು ಯಾವ ವಿಚಾರಕ್ಕೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಕಾಲಕಳೆದಂತೆ ಎಲ್ಲಾ ಸರಿಹೋಗುತ್ತದೆ ಎಂದು ನಂಬಿದ್ದ. ಆದರೆ ನಳಿನಿಗೆ ಯಾವಾಗಲೂ ಮಗಳ ಬಗ್ಗೆಯೇ ಚಿಂತೆ ಮಗಳ ಯಾವ ಗುಣವೂ ಅವಳಿಗೆ ಹಿಡಿಸುತ್ತಿರಲಿಲ್ಲ. ಆದ್ದರಿಂದ ಅವಳು ಆಗಾಗ್ಗೆ ಮಗಳಿಗೆ ಬುದ್ಧಿ ಹೇಳುತ್ತಿದ್ದುದುಂಟು ಶಾಲಿನಿಗೆ ಎಲ್ಲಾ ವಿಚಾರಕ್ಕೂ ಟೀಕಿಸುವ ಮಮ್ಮಿಗಿಂತ, ಯಾವುದಕ್ಕೂ ತಲೆ ಹಾಕದ ಪಪ್ಪ ಪ್ರಿಯವಾಗಿದ್ದರು.

ಪುಣ್ಯಳಿಗೆ ಜ್ವರ ಬಿಟ್ಟಿತು. ಶಾಲಿನಿ ನಾಲ್ಕುದಿನಗಳಿಂದ ಅವಳನ್ನ ತುಂಬಾ ಚೆನ್ನಾಗಿ ನೋಡಿಕೊಂಡಿದ್ದಳು. ಶಾಲಿನಿಗೆ ಅವರ ಮನೆ ತುಂಬಾ ಹಿಡಿಸಿತ್ತು. ಅಡಿಗೆಯವರು ಅವಳನ್ನೇ ಕೇಳಿ ಅಡಿಗೆ-ತಿಂಡಿ ಮಾಡುತ್ತಿದ್ದರು. ಕಾರ್‌ನಲ್ಲೇ ಡಾಕ್ಟರ್ ಶಾಪ್‌ಗೆ ಓಡಾಟ. ಶಾಲಿನಿಗೆ ತುಂಬಾ ಖುಷಿಯಾಗಿತ್ತು "ಪುಣ್ಯ ಅದೆಷ್ಟು ಪುಣ್ಯವಂತೆ" ಎಂದುಕೊಳ್ಳುತ್ತಿದ್ದಳು.

ಪುಣ್ಯಳ ತಾಯಿ-ತಂದೆ ಊರಿಗೆ ಬಂದರು. ಪುಣ್ಯ ಅವರೆದುರು ಶಾಲಿನಿಯನ್ನು ತುಂಬಾ ಹೊಗಳಿದಾಗ, ಶಾಲಿನಿ ನಾಚಿಕೆಯಿಂದ ಹಿಡಿಯಾದಳು. ಅಂದು ರಾತ್ರಿ ಮಲಗುವಾಗ ಶಾಲಿನಿಗೆ ಮೈಕೈಯೆಲ್ಲಾ ನೋವು ಏನೋ ಇರಸು-ಮುರಿಸು ಬೆಳಗಾಗುವ ವೇಳೆಗೆ ಮೈಸುಡುತ್ತಿತ್ತು.

"ಶಾಲಿನಿ ನಿಂಗೆ ಜ್ವರ ಬಂದಿದೆ. ಬಾ ಡಾಕ್ಟರ ಹತ್ತಿರ ಹೋಗೋಣ."

"ಬೇಡ ಕಣೆ. ನಾನು ಮನೆಗೆ ಹೋಗ್ತೀನಿ."

"ಇದೂ ಮನೇನೆ ಯಾಕೆ ಸಂಕೋಚ ಪಡ್ತೀಯ? ಇರು ನಾನೇ ನಮ್ಮ ಫ್ಯಾಮಿಲಿ ಡಾಕ್ಟರಿಗೆ ಫೋನ್ ಮಾಡ್ತೀನಿ."

ಡಾ. ಶಮಂತಕ ಬಂದು ನೋಡಿ ಒಂದು ಇಂಜೆಕ್ಷನ್ ಕೊಟ್ಟು, ಔಷಧಿ ಬರೆದುಕೊಟ್ಟರು. ಪುಣ್ಯ ಎಳನೀರು ತರಿಸಿದಳು. ಅವಳೆಷ್ಟೇ ಚೆನ್ನಾಗಿ ನೋಡಿಕೊಂಡರೂ ಶಾಲಿನಿಯನ್ನು ಅಮ್ಮನ ನೆನಪು ಕಾಡಿತು. ಅವಳಿಗೆ ತಕ್ಷಣ ತನ್ನಮನೆಗೆ ಹೋಗಬೇಕೆನ್ನಿಸಿತು. ಅವಳು ಪುಣ್ಯಳಿಗಾಗಿ ಕಣ್ಣಾಡಿಸಿದಳು. ಪುಣ್ಯ ಅಲ್ಲಿರಲಿಲ್ಲ. ಶಾಲಿನಿ ಅವಳನ್ನು ಹುಡುಕಿಕೊಂಡು ಹೊರಗೆ ಬಂದಾಗ ಹಾಲ್‌ನಲ್ಲಿ ತಾಯಿ-ಮಗಳು ಮಾತಾಡುತ್ತಿದ್ದುದು ಕಿವಿಗೆ ಬಿತ್ತು.

"ಆ ಶನಿ ಇನ್ನೂ ಎಷ್ಟುದಿನ ಇಲ್ಲಿರತ್ತೆ? ಅವಳನ್ನು ಮನೆಗೆ ಕಳಿಸಬಾರದಾ?" ವಸುಂಧರಾ ಕೇಳುತ್ತಿದ್ದರು.

"ಜ್ವರ ಇರುವಾಗ ಹೇಗೆ ಕಳುಹಿಸಲಿ ಮಮ್ಮಿ? ಅದೂ ಅಲ್ಲದೆ ನನಗೆ ಹುಷಾರಿಲ್ಲದೆ ಇರುವಾಗ ಅವಳು ನೋಡಿಕೊಳ್ಳಲಿಲ್ವಾ? ಇರಲಿಬಿಡು. ಅವಳಷ್ಟು ಮಾಡಿರುವಾಗ..."

"ಅವಳೇನು ಬಿಟ್ಟಿ ಮಾಡಿದ್ಳಾ? ವಾರದಲ್ಲಿ ನಾಲ್ಕು ದಿನ ಬಂದು ಇಲ್ಲಿ ಊಟ-ತಿಂಡಿ ಮಾಡಲ್ವಾ? ನೀನವಳಿಗೆ ಬುಕ್ಸ್ ಕೊಟ್ಟು ಸಹಾಯ ಮಾಡಿಲ್ವಾ? ನೀನು ಇನ್ಮೇಲೆ ಇವಳನ್ನು ಹತ್ತಿರ ಸೇರಿಸಬೇಡ. ಪಿ.ಯು.ಸಿ. ಆಗುತ್ತಲೂ ಅವಳನ್ನು ದೂರಾನೇ ಇಡು. ಇವರೆಲ್ಲ ಲಾಭವಿಲ್ಲದೆ ಕೆಲಸ ಮಾಡಲ್ಲ."

ಶಾಲಿನಿಗೆ ದುಃಖ ಉಕ್ಕಿಬಂತು. ತಾಯಿಯ ಮಾತುಗಳು ನೆನಪಾಗಿ ಹೃದಯ 'ಮಮ್ಮಿ' ಎಂದು ಚೀರಿತು. ಎದೆಯಲ್ಲಿ ಏನೋ ತಳಮಳ ತಕ್ಷಣ ಅಮ್ಮಾಬೇಕು ಎನ್ನಿಸಿದಾಗ ಅವಳು ಸೂಟ್‌ಕೇಸ್‌ಗೆ ಬಟ್ಟೆ ತುಂಬಿದಳು.

ಕಾಲಿಂಗ್‌ಬೆಲ್ ಸದ್ದಾದಾಗ ಎದ್ದು ಬಾಗಿಲು ತೆರೆದ ನಳಿನಿ 'ಅಮ್ಮಾ' ಎಂದು ಅಳುತ್ತಾ ತನಗೆ ಜೋತುಬಿದ್ದ ಮಗಳನ್ನು ನೋಡಿ ಬೆರಗಾಗಿ ನಿಂತಳು. ✤



'ಎನಿ ಇಂಪ್ರೂವ್‌ಮೆಂಟ್ಸ್...?'

ಆಪರೇಶನ್ ರೂಂನಿಂದ ಹೊರ ಬರುತ್ತಿದ್ದ ಡಾ. ಬಿಟ್ಸರನ್ನು ತಕ್ಷಣ ಪ್ರಶ್ನಿಸಿದೆ. ನನ್ನನ್ನೇ ದೀರ್ಘವಾಗಿ ದಿಟ್ಟಿಸಿ ಕೈ ಒರೆಸಿಕೊಳ್ಳುತ್ತಾ ನುಡಿದರವರು.

'ಇನ್ನೂ ಮೂವತ್ತಾರು ಗಂಟೆಗಳವರೆಗೆ ಏನೂ ಹೇಳಲಾಗುವುದಿಲ್ಲ...'

'ಅಂದರೆ...?'

'...ರಾಶಿಯ ದೇಹ ನಮ್ಮ ಮೆಡಿಕಲ್ ಅರಿವಿನ ವ್ಯಾಪ್ತಿಯ ಹೊರಗಿರುವಂತೆ ಕಾಣಿಸುತ್ತಿದೆ. ಇಲ್ಲಿವರೆಗೂ ನಡೆಸಿದ ಟ್ರೀಟ್‌ಮೆಂಟ್‌ಗೆ ಆಕೆಯ ದೇಹದಿಂದ ಒಂಚೂರೂ ರೆಸ್ಪಾನ್ಸ್ ಬರ್‍ತಾ ಇಲ್ಲ.'

'ವ್ಹಾಟ್...?' ಹೆಚ್ಚು ಕಡಿಮೆ ನಾನು ಕಿರುಚಿದ್ದೆ.

'ಹೌದು, ಆಕೆಯ ಹೃದಯ ಮತ್ತು ಮಿದುಳು ನಮ್ಮ ಟ್ರೀಟ್‌ಮೆಂಟಿಗೆ ರೆಸ್ಪಾನ್ಸ್ ತೋರಿಸುವ ಲಕ್ಷಣಗಳೇ ಇಲ್ಲ... ಅಲ್ಲದೇ ಆಕೆಯ ದೇಹದಲ್ಲಿನ ರಕ್ತದ ಪ್ರಮಾಣ ಕೂಡಾ ಗಣನೀಯವಾಗಿ ಕಡಿಮೆ ಆಗತೊಡಗಿದೆ. ಆಕೆ ಕೋಮಾ ಅವಸ್ಥೆಯಿಂದ ತಕ್ಷಣ ಹೊರಬಂದರೂ ಪುನಃ ಮೊದಲಿನಂತೆ ಆಕ್ರಮಣಕಾರಿ ಪ್ರವೃತ್ತಿ ತೋರಬಹುದೇನೋ ಎಂದೆನ್ನಿಸುತ್ತದೆ.'



ಸಂತೋಷಕುಮಾರ ಮೆಹೆಂದಳೆ

ಮ್ಯಾಕರ್ಥಿ ಮಾಡಿದ್ದು ಕಾನೂನಿನ ದೃಷ್ಟಿಯಲ್ಲಿ ತಪ್ಪು ನಿಜ. ಆದರೆ...

'ನನಗೆ ಗೊತ್ತಿದ್ದಂತೆ ರಾಶಿ ಬಹುಶಃ ಒಂದಿನ ಕೂಡಾ ಕೋಪಗೊಂಡ ಉದಾಹರಣೆಗಳಿಲ್ಲ. ಅಲ್ಲದೇ ಉಳಿದೆಲ್ಲರಿಗಿಂತಲೂ ನನಗೆ ಆಕೆಯ ಸ್ವಭಾವ ಚೆನ್ನಾಗಿ ಗೊತ್ತು. ನಮ್ಮ ಸ್ಟಾಫ್‌ನಲ್ಲೆಲ್ಲಾ ಆಕೆ ಸಹನೆಗೆ ಇನ್ನೊಂದು ಹೆಸರು. ಹೀಗಿದ್ದಾಗ್ಯೂ ಈ ರೀತಿಯ ಆಕಸ್ಮಿಕ ಆಕ್ರಮಣಕಾರಿಯಂತ ಪ್ರವೃತ್ತಿಯನ್ನು ಆಕೆ ತೋರಬೇಕೆಂದರೆ...'

'ಇನ್ನೊಂದು ವಿಷಯವೆಂದರೆ ಕೆಲವೊಮ್ಮೆ ಕೋಶಗಳ ವೈಪರೀತ್ಯದಿಂದಲೂ ಮೆದುಳಿನಲ್ಲಿ ನಡೆದ ತೀವ್ರ ಮಾನಸಿಕ ಸಂಘರ್ಷಣೆಯಿಂದಲೂ ಈ ರೀತಿಯ ಬದಲಾವಣೆ ಕಾಣಿಸಿಕೊಳ್ಳುವುದಿದೆ ಆದ್ರೂ... ಕೆಲವೊಮ್ಮೆ ಹೆರಿಡಿಟಿಯಿಂದಲೂ ಇಂತಹ ನಡವಳಿಕೆ ಬರುವುದುಂಟು...'

'ಅಂದರೆ... ಇದನ್ನು ಸರಿಮಾಡಲು ಸಾಧ್ಯವಿಲ್ಲ ಎನ್ನುತ್ತೀರಾ...?'

'ಏಕಿಲ್ಲ ಖಂಡಿತಾ ಸಾಧ್ಯವಿದೆ... ಆದರೆ ಯಾವುದಕ್ಕೂ ರಾಶಿ ನಮ್ಮ ಚಿಕಿತ್ಸೆಗೆ ಸ್ಪಂದಿಸಿದರೆ ಮಾತ್ರವೇ. ಆದರೂ ನನಗೆ ಇನ್ನೊಂದು ಸಂಶಯವೂ ಬರುತ್ತಿದೆ ರಾಶಿಯ ಈ ಪ್ರವೃತ್ತಿಗೆ ಉಳಿದೆಲ್ಲಾ ಕಾರಣಗಳಿಗಿಂತಲೂ, ಆಕೆಯ ಮಾನಸಿಕ ಸುಷುಪ್ತತೆಗೆ ಆಘಾತ ತಟ್ಟಿರಬೇಕು ಎನ್ನಿಸುತ್ತದೆ. ಯಾವುದಕ್ಕೂ ತಜ್ಞರ ರಿಪೋರ್ಟ್‌ಗಳು ಬರಲಿ.'

'ಓ ಕೆ ಡಾಕ್ಟರ್... ಎಲ್ಲಾ ನಿಮಗೆ ಸೇರಿದ್ದು...' ಎಂದು ಎದ್ದು ನಿಂತೆ.

'ಡೋಂಟ್ ವರಿ... ಮಿ. ಬಿರ್... ಖಂಡಿತಾ ಸರಿಹೋಗ್ತಾಳೆ ಅಂತನ್ನಿಸುತ್ತೆ ನನಗೆ ಹೋಗಿ ಬನ್ನಿ' ಎಂದು ಕೈ ಕುಲುಕಿ ಬೀಳ್ಕೊಟ್ಟರು. ನೇರವಾಗಿ ಕಾರನ್ನು ರೂಂನತ್ತ ತಿರುಗಿಸಿದೆ. ಅದೇಕೋ ಊಟವೂ ರುಚಿಸಲಿಲ್ಲ...

* * *

ಮೂರು ವರ್ಷಗಳ ಹಿಂದೆ 'ಸ್ಪೇಸ್ ಸೈನ್ಸ್'ಗೆ ಸಂಬಂಧಿಸಿದಂತೆ ಉತ್ತಮ ಕಾರ್ಯ ನಿರ್ವಹಣೆಗಾಗಿ ಕೊಡಮಾಡುವ ಜರ್ಮನ್ ಸರಕಾರದ ಪ್ರಶಸ್ತಿ ನನ್ನನ್ನು ಅರಸಿಕೊಂಡು ಬಂದಾಗ, ಒಂದೆಯೇ ಶ್ರೀಪುರದ ಅಂತರಿಕ್ಷ ಕೇಂದ್ರದ ಮುಖ್ಯಸ್ಥ ಪದವಿಯೂ ನನ್ನದಾಗಿತ್ತು.

ಶ್ರೀಪುರದ ಸಂಶೋಧನಾ ಕೇಂದ್ರವೊಂದು ಅಂತರಿಕ್ಷ ವಿಜ್ಞಾನದಲ್ಲೇ ಮೈಲಿಗಲ್ಲು. ಕಾರಣ ಅತಿಕಡಿಮೆ ಅವಧಿಯಲ್ಲಿ ಹೆಚ್ಚು ಹೊಸ ಆಕಾಶ ಕಾಯಗಳನ್ನು ಗುರುತಿಸಿದ ಖ್ಯಾತಿ ಅದರದು. ಜೊತೆಗೆ ಬೇರೆ ಗ್ರಹಗಳೊಂದಿಗೆ ಸಂಪರ್ಕ ಪಡೆಯಲೆತ್ನಿಸುವುದೂ ಸಾಧ್ಯವಾದರೇ ಅದರ ಗುಣಲಕ್ಷಣಗಳನ್ನು ಅಭ್ಯಸಿಸುವುದೂ ಅದರ ಮುಖ್ಯ ಉದ್ದೇಶವಾಗಿತ್ತು.

ಇದಕ್ಕಾಗಿ ಅಂದಾಜಿಸಿದ ದಿಕ್ಕಿನಲ್ಲಿ ನಿರ್ದಿಷ್ಟ ವೇಗಗಳಿಂದ ಕೂಡಿದ 'ಸೂಪರ್ ಸಾನಿಕ್' ವ್ಯವಸ್ಥೆ ಧ್ವನಿ ತರಂಗಗಳನ್ನು ಬಿಡಲಾಗುತ್ತಿತ್ತು. ಜೊತೆಗೆ ಒಂದೊಂದು 'ವೇವ್‌ಲೆಂಗ್ತ್'ಗಳನ್ನು ಎಚ್ಚರಿಕೆಯಿಂದ ಗಮನಿಸಲಾಗುತ್ತಿತ್ತು. ಕಾರಣ ಕೆಲವೊಮ್ಮೆ ಒಂದೇ ದಿಕ್ಕಿನಲ್ಲಿ, ಒಂದೇ ವೇಗದಲ್ಲಿ ಆದರೆ ಬೇರೆ ಬೇರೆ ಗಮ್ಯಗಳಿಗಾಗಿ ಚಲಿಸುವ ತರಂಗಗಳು ಫ್ರಿಕ್ವೆನ್ಸಿಯಾಧಾರಿತವಾಗಿದ್ದರೂ ಕಲೆಸಿ ಹೋಗುವ ಸಂದರ್ಭಗಳೂ ಇಲ್ಲದಿರಲಿಲ್ಲ. ಬರೀ ಇಷ್ಟೇ ಆದರೆ ತೊಂದರೆ ಏನಿಲ್ಲ. ಆದರೆ ಹಾಗೆ ಒಂದರಲ್ಲೊಂದು ಬೆರೆತುಹೋಗುವ ಆ ತರಂಗಗಳು ತಕ್ಷಣ ಅದರ ದುಪ್ಪಟ್ಟು ವೇಗದಲ್ಲಿ ಬಿಡುಗಡೆಗೊಳಿಸಿದ ಕೇಂದ್ರದೆಡೆಗೆ ತೂರಿ ಬರುತ್ತಿದ್ದವು. ನಿಜವಾದ ಅಪಾಯ ಇದ್ದುದು ಅಲ್ಲಿಯೇ. ಹಿಂದಿರುಗುವಾಗ ಅವು ಅಪಾಯಕಾರಿಯಾದ 'ಲೇಸರ್ ಬೀಂ' ಕಿರಣಗಳಾಗಿ ಬರುತ್ತಿದ್ದವು. ಆ ಕಿರಣಗಳಿಗೆ ಸಿಕ್ಕ ಯಾವೊಂದು ವಸ್ತುವೂ ಉಳಿಯುವುದು ಅಸಾಧ್ಯವಾದ್ದರಿಂದ, ನಿರ್ವಹಣಾ ಕಾರ್ಯಗಳ ಜೊತೆಗೆ ಅದೇ ವೇಗದಲ್ಲಿ ಅವುಗಳ ಉಪಶಮನ ಕೂಡಾ ಅನಿವಾರ್ಯವಾಗುತ್ತಿತ್ತು.

ಅಲ್ಲದೇ ಎಷ್ಟೋ ಬಾರಿ ಕೇಂದ್ರದಿಂದ ಚಲಿಸಿಹೋದ 'ಪವರ್‌ವೇವ್ಸ್'ಗಳು ಎಷ್ಟೋ ದಿನಗಳ ಕಾಲ ಚಲಿಸಿ, ಕೊನೆಗೊಮ್ಮೆ ಅಲ್ಲೆಲ್ಲೋ ಅಂತರಿಕ್ಷದಲ್ಲಿ ತಮ್ಮಷ್ಟಕ್ಕೆ ಸುತ್ತುತ್ತಿದ್ದ ಆಕಾಶ ಕಾಯಗಳಿಗೆ ಬಡಿದು, ಹಿಂದಿರುಗಿ ಕೇಂದ್ರದತ್ತ ಧಾವಿಸಿ ಬರುತ್ತಿದ್ದವು. ಆಗೆಲ್ಲಾ ವಿಚಿತ್ರ ರೀತಿಯಲ್ಲಿ ಕಕ್ಷೆಯತ್ತ ಬರುತ್ತಾ ಗಲಿಬಿಲಿಗೊಳಿಸುವುದೂ ಇತ್ತು. ಆದರೆ ಕಾಲಾನಂತರದಲ್ಲಿ ಇನ್ನಷ್ಟು ಸುಧಾರಣೆಗೊಂಡ ಕೇಂದ್ರದ ತಂತ್ರಜ್ಞಾನ ಎಷ್ಟೆಷ್ಟೋ ಜ್ಯೋತಿರ್ವರ್ಗದಲ್ಲಿ ಇರುವುದನ್ನು ಇಲ್ಲಿಂದಲೇ ದರ್ಶಿಸಲು ಸುಲಭ

ಸಾಧ್ಯವಾಗತೊಡಗಿತು. ಆಗಲೇ ನನ್ನೊಂದಿಗೆ, ನನ್ನ ಮಾರ್ಗದರ್ಶನದಲ್ಲಿ ಕೆಲಸ ಮಾಡಲು ಬಂದು ಜೊತೆಯಾದವರು ರೂಬಿಯಾದ, ಆದರೆ ಭಾರತೀಯ ಮೂಲದ ರಾಶಿ, ಸಿಕ್ಕಿಂನ ಬಿಂಬ. ಅಪ್ರತಿಮ ಬುದ್ಧಿಶಾಲಿಯಾಗಿದ್ದ ರಾಶಿ. ಆಕಾಶ ಕಾಯಗಳು, ಅಂತರಿಕ್ಷ ಎಂದರೆ ವಿಪರೀತ ಆಸ್ಥೆ ತೋರಿಸುತ್ತಿದ್ದ, ಭಾರಿ ಧೈರ್ಯಶಾಲಿ ಆಗಿದ್ದ ಬಿಂಬ ಇವರಿಂದ ನನಗೆ ಸಹಾಯವಾಗಿತ್ತು.

ಅಂತೆಯೇ ಅವರಿಬ್ಬರನ್ನೂ ಸೇರಿಸಿಕೊಂಡು ಎರಡು ಬಾರಿ ಅಂತರಿಕ್ಷಯಾನ ಮಾಡಿ ಬಿಂಬ ನನಗೆ ಅನಿವಾರ್ಯ ಆಗಿಬಿಟ್ಟ. ರಾಶಿಯೂ ಅಷ್ಟೇ ಆತ್ಮೀಯಳಾದಳು.

ಒಂದಿನ ಬೆಳಿಗ್ಗೆ ನಾನು ಬರುವುದನ್ನೇ ಕಾಯುತ್ತ ಇಬ್ಬರೂ ನನ್ನ ರೂಂನಲ್ಲಿ ಕುಳಿತುಕೊಂಡಿದ್ದರು. ನಾನು ಒಳಗೆ ಪ್ರವೇಶಿಸುತ್ತಿದ್ದಂತೆ '...ಸರ್... ಒಂದು ಗುಡ್ ನ್ಯೂಸ್...' ಎಂದ ಬಿಂಬ.

ಪ್ರಶ್ನಾರ್ಥಕವಾಗಿ ಇಬ್ಬರೆಡೆಗೂ ಹುಬ್ಬೇರಿಸಿದೆ.

ಸರ್... ಆ ದಿನ ನಾವು ರೀಲಿಸ್ ಮಾಡಿದ್ವಲ್ಲ, ಸೌತ್‌ನತ್ತ, ಆ ರೇಸ್‌ಗಳಿಗೆ ರೆಸ್ಪಾನ್ಸ್ ಬಂದಿದೆ.

'ರಿಯಲೀ...!' ನಾನು ಆಶ್ಚರ್ಯಪಡುತ್ತಾ, ರಾಶಿಯ ಕೈಲಿದ್ದ ಅಡ್ಡಾದಿಡ್ಡಿಯಾಗಿ ಪ್ರಿಂಟ್ ಆಗಿದ್ದ ರೇಖೆಗಳನ್ನೇ ದಿಟ್ಟಿಸುತ್ತಾ ನುಡಿದೆ.

'ಇಲ್ಲಿ... ನೀವೊಬ್ಬರೇ ತಾನೇ ಅದರ ಪರ್ಫೆಕ್ಟ್ ಟೆಕ್ನಾಲಜಿ ಗೊತ್ತಿರೋರು. ಟ್ರೈಮಾಡಿದ್ವಿ ಆದ್ರೆ ಡಿಕೋಡ್‌ಆಗ್ತಾ ಇಲ್ಲ...ಈಗ್ಲೆ ನೋಡಿ ಬಿಡೋಣ್ವಾ ಸರ್...' .

ಬಿಂಬನನ್ನು ಲೇಸರ್ ರೇಸ್ ರಿಲೇ ಕಂಟ್ರೋಲ್‌ನತ್ತ ಕುಳ್ಳಿರಿಸಿ, ಎಷ್ಟು ಬರುತ್ತೋ ಅಷ್ಟೆಲ್ಲಾ ಫ್ರೀಕ್ವೆನ್ಸಿನಲ್ಲೂ ಪ್ರಿಂಟ್ ತೆಗೆದುಕ್ಕೊವಂತೆ ಸೂಚಿಸಿದೆ. ರಾಶಿಯನ್ನು ನಾನು ಡಿಕೋಡ್ ಮಾಡುತ್ತಿದ್ದಂತೆ ಅಗತ್ಯದ ಮಾಹಿತಿಗಳನ್ನೂ ಸಂಬಂಧಪಟ್ಟ ವಿವರಗಳನ್ನು ನನ್ನ ಕಂಪ್ಯೂಟರ್‌ಗೆ ಕಳಿಸಲು ಅನುಕೂಲ ಆಗುವಂತೆ ಮೇನ್ ಕೀಬೋರ್ಡ್‌ನ ಸಿಸ್ಟಂ ಎದುರಿಗೆ ಕುಳ್ಳಿರಿಸಿದೆ. ಅದಾವ ಲಿಪಿಯೋ ಅದಾವ ಭಾಷೆಯೋ...? ಕಂಪ್ಯೂಟರ್‌ನ ವಶಕ್ಕೂ ಸಿಗದಂತೆ ಗಲಿಬಿಲಿಗೊಳಿಸುತ್ತಿದ್ದ ಆ ಸಂಖ್ಯೆಗಳು. ಸೂಚ್ಯಗಳೂ ವಿಪರೀತ ತಲೆ ತಿಂದು ಮೂರು ತಾಸುಗಳ ಪ್ರಯತ್ನದಿಂದ ಮೆಸೇಜು ರಿಲೀಸ್ ಆಯಿತು. ಅದರಲ್ಲಿದ್ದುದು ಇಷ್ಟೇ-

'... ತಮ್ಮ ಸಂದೇಶ ತಲುಪಿದೆ... ತಮ್ಮ ಬರುವನ್ನು ನಿರೀಕ್ಷಿಸುತ್ತೇವೆ...' ಜೊತೆಗೆ ಬರಲು ಬಳಸಬೇಕಾದ ಅಂತರಿಕ್ಷ ಮಾರ್ಗ, ವೇಗ, ಮಧ್ಯ ದಲ್ಲಿ ಎದುರಾಗಬಹುದಾದ ಅನಿರೀಕ್ಷಿತಗಳು ಎಲ್ಲವನ್ನೂ ವಿವರಿಸಲಾಗಿತ್ತು. ಯಾರೂ ಸಾಧಿಸಿರದ ವಿಜಯ... ಉದ್ವೇಗದಿಂದ ಹೃದಯ ಹೊಡೆದುಕೊಳ್ಳುತ್ತಿತ್ತು. ತಡೆಯಲಾರದೇ ಒಂದೆಡೆಯಿಂದ ಬಿಂಬನ್ನನ್ನು ಇನ್ನೊಂದು ಕೈಯಿಂದ ರಾಶಿಯನ್ನೂ ಎಳೆದು ತಬ್ಬಿಕೊಂಡು ಆವೇಗದಲ್ಲಿ ಸಂತೋಷದಲ್ಲಿ ಕೆಂಪಾಗಿದ್ದ ರಾಶಿಯ ಕಪೋಲದ ಮೇಲೆ ಮುತ್ತೊಂದ ಒತ್ತಿಬಿಟ್ಟೆ.

ಭೂಮಿಯ ಪ್ರತಿನಿಧಿಗಳಾಗಿ ಆ ಸಂದೇಶದ ಬೆನ್ನಟ್ಟುವದೆಂದು ನಿರ್ಧರಿಸಲಾಯಿತು. ಈ ನಮ್ಮ ತಂಡದಲ್ಲಿ ನಮ್ಮೊಂದಿಗೆ ಹೊಸದಾಗಿ ಇನ್ನೊಬ್ಬನನ್ನೂ ಸೇರಿಸಿಕೊಳ್ಳಲು ಯೋಚಿಸಿದೆ. ಆತನೊಬ್ಬ ಖಗೋಲ ತಜ್ಞ. ಅಪ್ರತಿಮ ಪ್ರತಿಭಾವಂತ 'ಕೆಮಲ್' ಎಂದು. ಉಳಿದಂತೆ ನನ್ನ ನೇತೃತ್ವದಲ್ಲಿ ರಾಶಿ ಮತ್ತು ಬಿಂಬ.

ಆಗಲೇ ಎಷ್ಟೋ ಬಾರಿ ಗಗನ ಯಾತ್ರೆಗಳು ನಡೆದಿದ್ದರೂ, ಇದು ಅಭೂತಪೂರ್ವ ಪ್ರಯೋಗ ಆಗಲಿತ್ತು. ಕಾರಣ ಇದು ಮೊದಲಿನ ಯಾತ್ರೆಗಳಂತೆ ಸಂಶೋಧನೆಗಾಗಿ ಅಲ್ಲ... ಅನ್ಯ ಗ್ರಹವಾಸಿಗಳ ಭೇಟಿಗಾಗಿ... ಎರಡು ಗೆಲಾಕ್ಷಿಗಳ ಮಧ್ಯೆ ಸೌಹಾರ್ದ ಬೆಳೆಸಲು.

ಅಂತೇಯೇ ಒಂದು ಶುಭ ಮುಂಜಾನೆ ನಮ್ಮನ್ನು ಹೊತ್ತ ಗಗನ ನೌಕೆ ಮೇಲಕ್ಕೆ ಹಾರಿತು. ತನ್ನ ಅವಶ್ಯ ತಿರುವನ್ನು ತೆಗೆದುಕೊಳ್ಳುತ್ತಿದ್ದಂತೇ ಅದನ್ನು ಆಟೋ ಪೈಲಟ್‌ಗೆ ಒಪ್ಪಿಸಿದೆ. ಉಳಿದಂತೆ ನೌಕೆಯು ಹೊರಗಡೆ ಹಾದು ಹೋಗುತ್ತಿದ್ದ ನಕ್ಷತ್ರ ಪುಂಜಗಳನ್ನು... ಕ್ಷುದ್ರಗ್ರಹಗಳ ಗುಂಪನ್ನೂ 'ಮಾಸ್ಟರ್‌ಸ್ಕೋಪ್' ಚಿತ್ರಿಸಿ ಸ್ಕ್ರೀನೊಂದರ ಮೇಲೆ ಮೂಡಿಸುತ್ತಿತ್ತು... ತಾಸುಗಳು ಉರುಳುತ್ತಿದ್ದವು...

"ಎಲ್ಲವನ್ನೂ ಸರಿಯಾಗಿ 'ಆಟೋ ಕಂಟ್ರೋಲ್ ಪೈಲಟ್' ನೋಡಿಕೊಳ್ಳುತ್ತಿತ್ತು... ಆಗ ಕೇಳಿಸಿತಾ ಶಬ್ದ... ಮೊದಲು ಮೆಲ್ಲಗೆ...

ಬೆಚ್ಚಿಬಿದ್ದು 'ಪ್ಯಾನಲ್ ಬೋರ್ಡ್'ನತ್ತ ಒಂದೆ. ನೌಕೆಯಲ್ಲಿ ದೋಷ ಕಾಣಿಸಿಕೊಂಡಿತ್ತು... ಅದೇನಾಯಿತೋ... ನೌಕೆಗೆ ಅವಶ್ಯವಿದ್ದ 'ದೂಡುಬಲ'ವನ್ನು ನೀಡುವ 'ಪೆಸ್ಟನ್ ರಾಡ್'ಗಳಿದ್ದ ಭಾಗದಲ್ಲಿ, ಕೆಳಗಿನ ಭಾಗದ ಪಿಸ್ಟನ್ ಬಂದು ಬಡಿಯುತ್ತಿದ್ದ ಭಾಗ ಕ್ರಮೇಣ ಲೂಸಾಗಲಾರಂಭಿಸಿತ್ತು.

'...ಮೈಗಾಡ್... ತಕ್ಷಣ ಅದನ್ನು ಹೊರಗಡೆಯಿಂದ ರಿಪೇರಿ ಮಾಡಬೇಕು. ಇಲ್ಲವೇ ಆ ಪ್ಲೇಟ್ ಬಿದ್ದುಹೋದರೆ ಆ ಪಿಸ್ಟನ್ ಹೊರಬಂದು ನೌಕೆ ತನ್ನ ನಿಯಂತ್ರಣ ಕಳೆದುಕೊಂಡು, ಯಾವುದಾದರೊಂದಕ್ಕೆ ಶಾಶ್ವತ ಉಪಗ್ರಹವಾಗಿ ಸುತ್ತು ಹೊಡೆಯಲು ಆರಂಭಿಸುತ್ತದೆ.

ಬಿಂಬ, ಕೆಳಗಡೆ ಅಲ್ಲಲ್ಲಿ ಜೋಡಿಸಲಾಗಿದ್ದ ಟೆಲಿಲೆನ್ಸ್ ಮುಖಾಂತರ ಆ ಭಾಗವನ್ನು ಪರೀಕ್ಷಿಸಲಾರಂಭಿಸಿದ್ದ. ನಾನು ಆಟೋ ಪೈಲಟ್‌ನ ಕೈಯಿಂದ ನೌಕೆಯನ್ನು ತಪ್ಪಿಸಿ ನನ್ನ ನಿಯಂತ್ರಣಕ್ಕೆ ತೆಗೆದುಕೊಂಡು ವೇಗ ಕಡಿಮೆ ಮಾಡತೊಡಗಿದೆ, ರಾಶಿ ನೌಕೆಯ ದಿಕ್ಕು ಬದಲಾಗದಂತೆ ನೋಡಿಕೊಳ್ಳುತ್ತಿದ್ದಳು, ಕೆಮಲ್ ಆಗಲೇ ಲೂಸಾಗಿದ್ದ ಪ್ಲೇಟನ್ನು ಅಲ್ಲಿಂದಲೇ ರಿಪೇರಿಗೆ ಪ್ರಯತ್ನಿಸುತ್ತಿದ್ದ, ನಂತರ ಮತ್ತೆ ಎದ್ದು ಬಂದವನೇ ನನ್ನ ಹತ್ತಿರ ನುಡಿದ.

'ಸರ್. ಯಾರಾದರೂ ಹೊರಗಡೆ ಇಳಿದು, ಅದನ್ನು ರಿಪೇರಿ ಮಾಡಬೇಕು...!' ನಾನು ಬಿಂಬ ಮುಖ ಮುಖ ನೋಡಿಕೊಂಡೆವು. ಒಂದರೆಕ್ಷಣದಲ್ಲಿ ಬಿಂಬನೇ

'...ಓ...ಕೆ ನಾನು ಗೆಲಾಕ್ಷಿಯಲ್ಲಿ ಇಳಿಯುತ್ತೇನೆ, ಸರ್ ನೀವು ಸರಿಯಾಗಿ ಆ ಭಾಗ ನನ್ನ ಬಳಿಗೆ ಬರುವಂತೆ ಬ್ಯಾಲನ್ಸ್ ಮಾಡಿ, ಕೆಮಲ್, ನೀವು ಸರಿಯಾಗಿ ಸ್ಥಳವನ್ನು ನಿರ್ಧರಿಸಿ, ಸರಿಯಾದ ಜಾಗ, ಯಾವುದೇ ಕ್ಷುದ್ರಗ್ರಹಗಳಿಂದ ಅಪಾಯವಿಲ್ಲದ ಪ್ರದೇಶ ಬಂದೊಡನೇ, ನಾನು ಶೂನ್ಯದೊಳಕ್ಕೆ ಕಾಲನ್ನಿಡುತ್ತೇನೆ...'

ಅದೂ, ಕೆಲಸ ಹದನೈದು ಇಪ್ಪತ್ತು ನಿಮಿಷಗಳೊಳಗಾಗಿ ಮುಗಿದು ಬಿಡಬೇಕು. ಅದಕ್ಕಾಗಿ ಕೆಮಲ್ ಚಕಚಕನೇ ಸ್ಥಳ ಗುರುತಿಸಿ ನಿರ್ದೇಶಿಸಿದ. ನಾನು ನೌಕೆಯನ್ನು ಹಗುರವಾಗಿ ನಡೆಸಿ ವೇಗವನ್ನು ಇಳಿಸಿದೆ. ಅಷ್ಟರಲ್ಲಿ ಬೆಲ್ಟನ್ನು ಹಿಡಿದು ಬಿಂಬ ಸಿದ್ಧನಾದ.

ವೇಗವನ್ನೂ, ನಿಯಂತ್ರಿಸುತ್ತಾ, ಕೆಮಲ್‌ನ ಸಂಜ್ಞೆಗಾಗಿ ಕಾಯತೊಡಗಿದೆ. ಒಂದೈದು ನಿಮಿಷದಲ್ಲಿ ಕೆಮಲ್ ಹಸಿರು ನಿಶಾನೆ ತೋರುವವದರೊಂದಿಗೆ, ನಾನು ನೌಕೆಯನ್ನು ನಿರ್ದಿಷ್ಟ ವ್ಯಾಸದಲ್ಲಿ ಸುತ್ತುವಂತೆ ನಿರ್ದೇಶಿಸಿ ಪುನಃ ಆಟೋ ಪೈಲಟ್‌ಗೊಪ್ಪಿಸಿದೆ.

ಸರಿಯಾಗಿ ಅದೇ ಹೊತ್ತಿಗೆ ಬಾಗಿಲು ತೆರೆದ ಬಿಂಬ, ಮತ್ತೊಮ್ಮೆ ಬೆಲ್ಟನ್ನು ಸರಿಯಾಗಿ ಸಿಕ್ಕಿಸಿಕೊಂಡು 'ಶೂನ್ಯದಲ್ಲಿ ಹೆಜ್ಜೆ' ಇಟ್ಟ.

ಒಹ್...! ನಿಧಾನವಾಗಿ ಆತ ತೇಲತೊಡಗಿದ. ನೌಕೆ ಮುಂದೆ ಸರಿದು, ಪುನಃ ಒಂದು ಸುತ್ತು ಬರುವ ಹೊತ್ತಿಗೆ, ಸಿದ್ಧವಾಗಿರಿಸಿಕೊಂಡಿದ್ದ 'ಮೆಗ್ನೇಟಿಕ್ ಪವರ್' ಬೆಲ್ಟನ್ನು ತಗಲಿಸಿದ, ಅದರ ಇನ್ನೊಂದು ತುದಿ ಸೊಂಟಕ್ಕೆ ತಗುಲಿಸಿಕೊಂಡಿದ್ದರಿಂದ, ನೌಕೆಯೊಂದಿಗೆ ಬಿಂಬ ಕೂಡಾ ಸುತ್ತತೊಡಗಿದ.

ಒಳಗಿದ್ದ ಕೆಮಲ್ ಸ್ಕ್ರೀನಿನಲ್ಲಿ ನೋಡುತ್ತಾ ರಿಮೋಟ್‌ನ ಸಹಾಯದಿಂದ, ಅವಶ್ಯವಿದ್ದ ಭಾಗದತ್ತ ಸರಿಯುವಂತೆ, ನೌಕೆಯ ಹೊರಮೈಗೆ ತಗುಲಿದ್ದ 'ಪವರ್ ಮೀಟರ್'ಗೆ ನಿರ್ದೇಶಿಸ ತೊಡಗಿದ. ಅದರರೊಂದಿಗೆ ಬಿಂಬನೂ ತೂಗಾಡುತ್ತಲೇ ಇನ್ನೊಂದು ತುದಿಗೆ ತಲುಪಿ ರಿಪೇರಿ ಆರಂಭಿಸಿದ. ಅವನ ಎರಡೂ ಕೈಗಳು ಸ್ವತಂತ್ರವಿದ್ದರೂ, ಕೆಲಸ ಸುಲಭಸಾಧ್ಯವಿರಲಿಲ್ಲ, ಆಗಾಗ ತಪ್ಪುತ್ತಿರುವ ಬ್ಯಾಲನ್ಸ್ ಬೇರೆ,

ಶೂನ್ಯದಲ್ಲೆಂದೂ ಶಬ್ದ ಪ್ರಸರಣ ಸಾಧ್ಯವಿಲ್ಲ, ಆದ್ದರಿಂದ ನಾವು ವಿಶೇಷವಾಗಿ ಅಳವಡಿಸಿ ಕೊಂಡಿದ್ದ ಸ್ಪೀಕರುಗಳಿಂದಲೇ ಆಲಿಸುತ್ತಿದ್ದೆವು. ರಾಶಿ ಬಿಂಬನ ಮೇಲೊಂದು ಕಣ್ಣಿರಿಸಿ ಅವನ ಅಗತ್ಯಕ್ಕೆ ಪ್ಯಾನಲ್ ಬೋರ್ಡನ ಸಂಜ್ಞೆಗಳ ಮುಖಾಂತರ ಸಂಪರ್ಕಿಸುತ್ತಲಿದ್ದಳು...

ಹತ್ತು ನಿಮಿಷಗಳು ಕಳೆದಿದ್ದವು...

ಒಳಗಿದ್ದ ಮೂವರೂ ಉಸಿರು ಬಿಗಿ ಹಿಡಿದು ಸ್ಕ್ರೀನ್‌ನಲ್ಲಿ ಅವನನ್ನೇ ದಿಟ್ಟಿಸಿ ನೋಡುತ್ತಿದ್ದೆವು... ಬೆಲ್ಟನ ಆಧಾರದಿಂದ ತನ್ನ ಕೆಲಸದಲ್ಲಿ ನಿರತನಾಗಿದ್ದ ಬಿಂಬ ಆಚೆಗೂ ಈಚೆಗೂ ರಭಸದಿಂದ ತೂಗುತ್ತಲಿದ್ದ. ಹೆಚ್ಚು ಕಡಿಮೆ ಪೂರ್ತಿ...

ಕೇವಲ ಎರಡು ನಿಮಿಷವಿತ್ತು. ಫೈನಲ್

ಚೆಕಿಂಗ್... ಆಗ ಒಂದೇ ಬಾರಿಗೆ ಮೂವರೂ ಆಲಿಸಿದ್ದರು. ಬಿಂಬ ಕಿಟಾರನೇ ಕಿರುಕೊಂಡು ಒದ್ದಾಡುತ್ತಿದ್ದ. ನೌಕೆ ಚಲಿಸುತ್ತಲೇ ಇತ್ತು.

ದಿಗ್ಭ್ರಮೆಯಿಂದ ದಿಟ್ಟಿಸಿದೆವು. ನೌಕೆ ಮುಂದೆ ಚಲಿಸುತ್ತಿದ್ದರೂ ಬಿಂಬನ ಕಾಲು ಯಾವುದಕ್ಕೊ ಸಿಕ್ಕಿಕೊಂಡು ಎಳೆಯಲ್ಪಡುತ್ತಿತ್ತು. ಅದೊಂದು ದೊಡ್ಡದಾದ ಅರ್ಧ ವೃತ್ತಾಕಾರದ ಬೆಳ್ಳಿ ಬಣ್ಣ ರೇಖೆ... ಅದರ ಮಧ್ಯೆ ಬಿಂಬನ ಕಾಲಿನ ತುದಿ ತಾಗಿದೆ. ಒಂದೆಡೆ ನೌಕೆ ಬಿಂಬನನ್ನು ಎಳೆಯುತ್ತಾ ಇದ್ದರೆ... ಕೆಳಗೆ ಆ ಬೆಳ್ಳಿ ರೇಖೆ... ತನ್ನೊಳಕ್ಕೆ ಎಳೆಯುತ್ತಿದೆ. ಅದರದ್ದೂ ಕೂಡಾ ಭೀಮಬಲ.

ನೌಕೆ ಒಂದು ಸುತ್ತು ಪೂರ್ತಿ ಮಾಡಿ ಬಂದರೂ... ಬಿಂಬ ಅದರೊಂದಿಗೆನೇ ಸುತ್ತು ಹೊಡೆದು ಬಂದಿದ್ದರೂ ಕಾಲಿನ ತುದಿ ಮಾತ್ರ ಅಲ್ಲಿಯೇ ಇತ್ತು. ಮೂರು ಮೀಗಿಂತಲೂ ಜಾಸ್ತಿ ಎಡಕ್ಕೆ ಎಳೆಯಲ್ಪಟ್ಟಿತ್ತು. ಸೆಣಬಿನ ನಾರಿನಂತೆ ಬಿಂಬನ ಕಾಲು, ಮೊದಲು ಶೂಸು, ಹಿಂದೆಯೇ ಕಾಲು, ಮೊಳಕಾಲವರೆಗಿನ ಕಾಲು ರಕ್ತ, ಮಾಂಸ, ನರಗಳು... ಒಂದೇ ಎಳೆಯಾಗಿ ಸಣ್ಣಗೆ ಆ ರೇಖೆಯೊಳಕ್ಕೆ ಎಳೆದೆಳೆದು ಹೋಗುತ್ತಿತ್ತು. ಕೆಮಲ್ ಉದ್ಗರಿಸಿದ.

'ಬ್ಲಾಕ್ ಹೋಲ್...!'

'ವಾಟ್?'

'ಏನು ಅದು ಬ್ಲಾಕ್ ಹೋಲ್... ಬಿಂಬನನ್ನು ಇನ್ನು ಉಳಿಸುವದು ಸಾಧ್ಯವೇ ಇಲ್ಲ. ಆದರೆ ಹಾಗೆ ಬಿಟ್ಟರೇ!' ಅವನ ಸಂಶಯ ಆತಂಕ ನನಗರ್ಥವಾಯಿತು. ಮೊದಲು ಬಿಂಬ, ಅವನೊಂದಿಗೆ ಬೆಲ್ಟು, ಬೆಲ್ಟಿನೊಂದಿಗೆ ನೌಕೆ, ಹಿಂದೆ ನಾವು...! ಒಮ್ಮೆ ಮೈ ನಡುಗಿತು. ಕಾರಣ ಅತ್ಯಂತ ಪ್ರಬಲ ಶಕ್ತಿಕಾರಕವಾದ ಬ್ಲಾಕ್ ಹೋಲ್‌ಗೆ ಎದುರಿಲ್ಲವೇ ಇಲ್ಲ... ಮತ್ತೆ ಅತ್ತ ನೋಡಿದೆ. ಬಿಂಬನ ತೊಡೆ ಭಾಗವೂ ಭಾಗಶಃ ಖಾಲಿ ಆಗಿತ್ತು, ನಾರಿನ ಹಗ್ಗದಂತಾಗಿ, ಎಲಬು ನರಗಳೂ ಸೇರಿಕೊಂಡು ಮೆಲ್ಲಗೆ ಒಳಕ್ಕೆ ಎಳೆಯುತಿತ್ತು. ಬಿಂಬನ ಹತ್ತಿರ ಕಿರುಚಿ ಕೊಳ್ಳಲೂ ಕೂಡಾ ತ್ರಾಣವಿರಲಿಲ್ಲ. ತೊಡೆ ಭಾಗವೂ ಮುಗಿದು ಸೊಂಟವೂ ಹೋಗ ತೊಡಗಿತ್ತು. ನಿಜಕ್ಕೂ ಅಷ್ಟೊಂದು ಹೊತ್ತು ಬೇಕಾಗೇ ಇರಲಿಲ್ಲ. ನಮ್ಮ ಕಡೆಯಿಂದಲೂ ಪ್ರಬಲ ಎಳೆತ ಇದ್ದುದರಿಂದಲೇ ಇನ್ನೂ ಪೂರ್ತಿ ಸೆಳೆಯಲ್ಪಟ್ಟಿರಲಿಲ್ಲ. ಬಿಂಬ ಇನ್ನು ಪೂರ್ತಿ ಕೈಬಿಟ್ಟಂತೇ... ತಕ್ಷಣ ಆಲೋಚನೆಯೊಂದು ಬಂತು. ಕೂಡಲೇ ಆಟೋ ಪೈಲಟನಿಂದ ನನ್ನ ನಿಯಂತ್ರಣಕ್ಕೆ ನೌಕೆಯನ್ನು ತೆಗದುಕೊಂಡು, ಬ್ಲಾಕ್‌ಹೋಲಿನ ಮೇಲಿಂದ ನೌಕೆ ಹೋಗುತ್ತಿದ್ದಂತೆ ಒಮ್ಮೆಲೇ ವೇಗವನ್ನು ಹೆಚ್ಚಿಸಿಬಿಟ್ಟೆ.

ಈ ಅನಿರೀಕ್ಷಿತ ಬೆಳವಣಿಗೆಯಿಂದ, ನೌಕೆ ಒಮ್ಮೆ ಅತ್ತಿತ್ತ ಕದಲಿದರೂ ಅಷ್ಟೇ ವೇಗದಿಂದ ಮುನ್ನುಗ್ಗಿತು. ತಕ್ಷಣ ಬಿಂಬನ ಬೆಲ್ಟ ನೌಕೆಯಿಂದ ಬೇರ್ಪಟ್ಟು ನೌಕೆ ಸ್ವತಂತ್ರಗೊಂಡಿತೇನೋ ನಿಜ... ಆದರೆ ಬಿಂಬ ಕ್ಷಣಾರ್ಧದೊಳಗೆ ಕಪ್ಪುರಂಧ್ರದಲ್ಲಿ ಮರೆಯಾದ.

ವಿರುದ್ಧ ದಿಕ್ಕಿನತ್ತ ನೌಕೆ ಮುನ್ನುಗ್ಗಿ ಹೆಚ್ಚಿನ ವೇಗದಿಂದ ಚಲಿಸತೊಡಗಿತ್ತು. ಬಿಂಬ ದೋಷ ಸರಿಪಡಿಸಿದ್ದರೂ ಪೂರ್ತಿ ಅದು ರಿಪೇರಿ ಆಗಿರಲಿಲ್ಲ. ಆದರೂ ನಮ್ಮ ಗಮ್ಯದವರೆಗೂ ತಲಪಲು ಅದರಿಂದ ತೊಂದರೆ ಇರಲಿಲ್ಲ. ನೌಕೆಯ ದಿಕ್ಕನ್ನು ಬದಲಿಸಬೇಕಿತ್ತು. ರಾಶಿಯನ್ನು ಕೂಗಿದೆ. ಊಹೂಂ ಆಕೆ ದೃಷ್ಟಿ ಎದುರುಗಿದ್ದ ಕಂಪ್ಯೂಟರಿನ ಮೇಲಿತ್ತು. ಆದರೂ ಆಕೆಗೆ ಲಕ್ಷ್ಯವಿರಲಿಲ್ಲ. ಪುನಃ ಕರೆದೆ. ಏನು ಮಾಡುತ್ತಿದ್ದಾಳೋ ಗೊತ್ತಾಗದೇ ನಾನೇ ಏಳುವದೆಂದುಕೊಂಡು ರಾಕೇಟ್‌ನ ಕಂಟ್ರೋಲನ್ನು ಆಟೋ ಪೈಲಟ್‌ಗೆ ನೀಡಿ, ಅದಕ್ಕೆ ಮುಂದಿನ ಸೂಚನೆಗಳನ್ನು ಕಮ್ಯಾಂಡ್ ಮಾಡತೊಡಗಿದೆ. ಅಷ್ಟೇ ನೌಕೆ ಸಿಡಿದು ಹೋಗುವಂತೆ ಕೆಮಲ್ ಕಿರುಚಿಕೊಂಡದ್ದು ಕೇಳಿಬಂತು. ಕ್ಯಾಬಿನ್ನಿನಿಂದಲೇ ದೃಷ್ಟಿಸಿದೆ...

ಒಂದು ಕ್ಷಣ ಸ್ತಂಬಿಸಿ ನಿಂತುಬಿಟ್ಟೆ.

ಕೆಮಲ್‌ನನ್ನು ಓಗ್ಗಾಮುಗ್ಗಾ ಚಚ್ಚುತ್ತಿದ್ದಾಳೆ ರಾಶಿ... ಸ್ಪ್ರಿಂಗ್ ಚೇರ್‌ನಲ್ಲಿ ಕುಳಿತಿದ್ದ ಕೆಮಲ್‌ನಿಗೆ ಏನಾಗುತ್ತಿದೆ ಎಂದರಿವಾಗುವ ಹೊತ್ತಿಗೆ ಅವನ ತಲೆ ಒಡೆದು ಒಂದೆಡೆಯಿಂದ ರಕ್ತ ಸುರಿಯು ತೊಡಗಿತ್ತು. ಅವನಿಗೆ ಚೇರ್‌ನಿಂದ ಏಳುವ ಅವಕಾಶವೇ ಇರಲಿಲ್ಲ ಅಲ್ಲಿ. ಧಾವಿಸಿ ಬಂದವನೇ ರಾಶಿಯನ್ನು ಹಿಡಿದುಕೊಂಡೆ. ಆದರೆ ಆಕೆ ಇಲ್ಲಿ ಇದ್ದಂತೆ ಇರಲಿಲ್ಲ. ದಾಳಿ ನನ್ನ ಮೇಲೆ ತಿರುಗಿತು. ಸಾವರಿಸಿಕೊಂಡವ ಅವಳ ಕೆನ್ನೆಗೆ ಬಿಗಿದೆ. ಊಹೂಂ. ಹಿಂದಿನಿಂದ ಇನ್ನೊಂದು

ಬಾರಿಸಿದೆ... ರಪ್ಪನೆ ಬಿದ್ದಳು. ಕಂಟ್ರೋಲ್ ಬೋರ್ಡ್‌ನ ಅಂಚೊಂದು ತಲೆಗೆ ತಾಗುತ್ತಿದ್ದಂತೆ ಆಕೆಯ ಪ್ರಜ್ಞೆ ಹೊರಟು ಹೋಯಿತು... ಕೆಮಲ್‌ನತ್ತ ನೋಡಿದೆ... ಕುಳಿತಲ್ಲೇ ಹಿಂದಕ್ಕೊರಗಿದ್ದ... ಈ ಪರಿಸ್ಥಿತಿಯಲ್ಲಿ ಯಾನ ಮುಂದುವರೆಸುವದು ಅಸಾಧ್ಯ ಎನ್ನಿಸುತ್ತಿದ್ದಂತೆ, ಪುನಃ ಹಿಂದಿರುಗಿ ಭೂಮಿಯತ್ತ ಹೊರಟೆ.

ಆದಷ್ಟು ಬೇಗ ಭೂಕಕ್ಷೆಯನ್ನು ತಲುಪಲೇ ಬೇಕಿತ್ತು. ಇಲ್ಲದಿದ್ದರೇ ಬಿಂಬನನ್ನು ಬಲಿ ಕೊಟ್ಟಂತೆ ಅತಿರಕ್ತ ಸ್ರಾವದಿಂದ ಇವರನ್ನು ಮರೆಯಬೇಕಾಗುತ್ತಿತ್ತೇನೋ...? ಭೂಕಕ್ಷೆ ಸಮೀಪಿಸಿ ಕಂಟ್ರೋಲ್‌ರೂಂನ ಸಂಪರ್ಕ ಸಿಗುತ್ತಿದ್ದಂತೆ, ಸೂಕ್ಷ್ಮವಾಗಿ ವಿಷಯ ತಿಳಿಸಿ ಅಂಬ್ಯುಲನ್ಸ್ ಹಾಗೂ ಇತರ ವ್ಯವಸ್ಥೆಗಳನ್ನು ಸಿದ್ಧಪಡಿಸಲು ತಿಳಿಸಿದೆ. ಜೊತೆಗೆ ಫೈರ್ ಎಂಜಿನ್‌ಗೂ ತಿಳಿಸಿದೆ. ಕಾರಣ ನೌಕೆ ಲ್ಯಾಂಡ್ ಆಗುವಾಗ ಏನಾದರೂ ಹೆಚ್ಚು ಕಡಿಮೆ ಆದಿತೆನ್ನುವ ಸಂಶಯವೂ ಇಲ್ಲದಿರಲಿಲ್ಲ.

ಆದರೆ... ನಾನು ಊಹಿಸಿದಂತೆ ಅಂತಹದೇನೂ ಆಗಲಿಲ್ಲ. ಸುಲಭವಾಗಿ ಕೆಳಗಿಳಿದು ನಿಂತಿತು. ತಕ್ಷಣ ಮೊದಲ ಕೆಲಸವಾಗಿ ಕೆಮಲ್ ಮತ್ತು ರಾಶಿಯನ್ನು ಹಾಸ್ಪಿಟಲಿನತ್ತ ಸಾಗಿಸಲಾಯಿತು. ಎಲ್ಲಾ ತರಹದ ಚಿಕಿತ್ಸೆಗಳೂ ಆರಂಭವಾದವು. ಕೆಮಲ್‌ನ ತಲೆಗೆ ಚೆನ್ನಾಗಿ ಏಟಾಗಿತ್ತು. ರಾಶಿಗೆ ಮೂರು ದಿನಗಳ ಸತತ ಪ್ರಯತ್ನ ಮಾಡಿದರೂ ಎಚ್ಚರವಾಗಲಿಲ್ಲ. ಆ ಮೂರು ದಿನಗಳ ಅವಧಿಯಲ್ಲಿ ಆಕೆಯ ದೇಹಸ್ಥಿತಿ ತುಂಬ ಬದಲಾಯಿಸಿತ್ತು.

* * *

...ನೆನಪುಗಳ ದಾಳಿಯಲ್ಲಿ ನಿದ್ರೆ ಯಾವಾಗ ಹತ್ತಿತ್ತು... ಬೆಳಿಗ್ಗೆ ಎಚ್ಚರವಾದಾಗ ಗಂಟೆ ಎಂಟಾಗಿ ಹೋಗಿತ್ತು. ಜೋನ್ಸ್‌ಸಿಗೆ ಫೋನ್ ಮಾಡಿ ಮತ್ತೊಂದರ್ಧಗಂಟೆಯಲ್ಲಿ ಹಾಸ್ಪಿಟಲ್‌ಗೆ ಬರುವಂತೆ ತಿಳಿಸಿದೆ.

ನಾನು ಹಾಸ್ಪಿಟಲ್‌ನ್ನು ತಲುಪುವ ವೇಳೆಗಾಗಲೇ, ಜೋನ್ಸ್ ಬಂದು ನನಗಾಗಿ ಕಾಯುತ್ತಿದ್ದ. ಜೋನ್ಸ್ ನನ್ನದೇ ಗ್ರೂಪಿನ ಒಬ್ಬ ಎಲೆಕ್ಟ್ರಾನಿಕ್ ಇಂಜಿನಿಯರು. ನಾನು ಡಾ. ಬಿಟ್ಸರ ಅನುಮತಿ ಪಡೆದುಕೊಂಡು ರಾಶಿಯಿದ್ದ ವಾರ್ಡಿನತ್ತ ನಡೆದೆ ಜೋನ್ಸ್‌ನೊಂದಿಗೆ.

ಗಾಢ ನಿದ್ರೆಯಲ್ಲಿದ್ದ ರಾಶಿ ಯಾವುದೋ ಲೋಕದಲ್ಲಿದ್ದಂತೆ ಮಲಗಿದ್ದಳು. ಒಂದೆರಡು ಬಾರಿ ಅಲುಗಿಸಿದೆ ಊಹೂಂ.... ನಿರ್ಜೀವ ಶವದಂತೆ ಮಲಗಿದ್ದಳು. ನಿಧಾನಕ್ಕೆ ತಲೆ ಎತ್ತಿ ಕಿವಿಗಳ ಪಕ್ಕದಲ್ಲಿ ಜೋಡಿಸಿದ್ದ ಸಾಕೇಟ್ ವೈರುಗಳನ್ನು ಬಿಡಿಸಿಕೊಂಡೆ. ಅಲ್ಲಿಂದ ಕುತ್ತಿಗೆ ಕೆಳಕ್ಕೆ ಕೈಹಾಕಿ, ಮುಖ್ಯ ನರಮಂಡಲದ ಭಾಗದಲ್ಲಿ ಇರಿಸಿದ್ದ ಕಪ್ಪು ಬಿಲ್ಲೆಯಂತಹ ವಸ್ತುವನ್ನು ತೆಗೆದು ಜೇಬಿಗಿಳಿಸಿದೆ. ಸ್ಥನಗಳ ಮಧ್ಯೆ ಇರಿಸಿದ್ದುದನ್ನು ಎತ್ತಿ ನೋಡಿದ್ದೆ. ಅದರ ಗಾಜಿನ ಮಧ್ಯದಲ್ಲಿ ಕಾಣಿಸುತ್ತಿದ್ದ ಪಾದರಸದ ಮಟ್ಟ ಅರ್ಧಕ್ಕಿಂತಲೂ ಮೇಲೇರಿತ್ತು. ಅದನ್ನು ಡೈರಿಯಲ್ಲಿ ಗುರುತಿಸಿಕೊಂಡು, ಜೋನ್ಸ್ ನೊಂದಿಗೆ ಲ್ಯಾಬಿನತ್ತ ಕಾರನ್ನು ತಿರುಗಿಸಿದೆ.

ಅಂದು ಉಳಿದೆಲ್ಲಾ ಕೆಲಸವನ್ನು ಬದಿಗಿರಿಸಿ, ಮೊದಲು ಕಪ್ಪು ಬಿಲ್ಲೆಯಂತಹ ರೆಕಾರ್ಡರನ್ನು ಬಿಡಿಸಿ, ಅದರೊಳಗಿದ್ದ ಡಿಸ್ಕನ್ನು ಕಂಪ್ಯೂಟರ್‌ಗೆ ಅಳಪಡಿಸಿ ಬಂದಂತ ವಿವರಗಳನ್ನೆಲ್ಲಾ ಡಿಕೋಡ್ ಮಾಡತೊಡಗಿದೆ. ಜೋನ್ಸ್ ವಿವರಗಳನ್ನು ಇನ್ನೊಂದೆಡೆಗೆ ಸೇರಿಸಿಕೊಳ್ಳುತ್ತಿದ್ದ.

ಮುಖ್ಯವಾಗಿ ಮಾನಸಿಕ ಸ್ಥಿತಿಯನ್ನು ಬಿಂಬಿಸಿದ ಅದರ ವಿವರಗಳನ್ನು, ಆ ಹೊತ್ತಿಗೆ ರಾಶಿಯ ಹೃದಯ ಬಡಿತದಲ್ಲಾದ ಬದಲಾವಣೆ ಗಳನ್ನು ಗಮನಿಸಿದೆ. ರಾಶಿಯ ಪ್ರಜ್ಞೆ ತನ್ನ ಸಮತೋಲನ ಕಳೆದುಕೊಂಡು ಮತ್ತು ನಂತರದ ಸಮಯಗಳಲ್ಲಾದ ಬದಲಾವಣೆಗಳಿಗೂ, ಆಗೆಲ್ಲಾ ಬದಲಾದ ಹೃದಯದ ಪ್ರತಿಕ್ರಿಯೆಗೂ ಬಹಳ ಸಾಮ್ಯವಿದ್ದುದು ಕಂಡುಬಂತು... ನನಗೆ ಬೇಕಾದದ್ದು ಅದೇ ಆಗಿತ್ತು. ಜೋನ್ಸ್‌ನತ್ತ ತಿರುಗಿ ಹೆಬ್ಬೆರಳನ್ನೆತ್ತಿ ಗೆಲುವಿನ ಸೂಚನೆ ಆಗಿ ತೋರಿದೆ... ಫೋನು ಹೊಡೆದುಕೊಂಡಿತು. ಡಾ. ಬಿಟ್ಸ್ ಮಾತನಾಡುತ್ತಿದ್ದರು,

'ಮಿ. ಬಿಟ್... ರಾಶಿಗೆ ಪ್ರಜ್ಞೆ ಮರಳಿದೆ, ಮೊದಲಿನಂತೆ ಆಕೆ ಶಾಂತಳಾಗಿ ಈಗ ವರ್ತಿಸುತ್ತಿದ್ದಾಳೆ, ಆದರೆ...'

'ಆದರೆ...?'

'ಆದರೆ ಕೆಮಲ್‌ನ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ, ನೀವೊಮ್ಮೆ ಈಕಡೆ ಬಂದರೆ ಕೆಲ

ವಿಷಯಗಳನ್ನು ನಾವು ಚರ್ಚಿಸಬಹುದು ಎನ್ನಿಸುತ್ತೆ.'

'ಇಸ್ ಇಟ್... ಓ. ಕೆ. ಡಾಕ್ಟರ್ ನಾನೀಗಲೇ ಅಲ್ಲಿಗೆ ಬರ್‍ತಿದ್ದೇನೆ' ಎಂದು ಫೋನಿರಿಸಿ ಜೋನ್ಸ್‌ನನ್ನೆಳೆದುಕೊಂಡು ಕಾರನ್ನೇರಿ ಹಾಸ್ಪಿಟಲ್‌ನತ್ತ ದೌಡಾಯಿಸಿದೆ.

ಡಾ. ಬಿಟ್ಸ್ ವಿಷಯವನ್ನು ವಿವರಿಸುತ್ತಿದ್ದಂತೆ, ಉದ್ವೇಗದಿಂದಲೇ ಪ್ರಶ್ನಿಸಿದೆ. 'ಡಾಕ್ಟರ್, ನಾನು ರಾಶಿಯನ್ನು ಭೇಟಿ ಆಗಲೇ...?'

'ಈಗಲೇ ಬೇಡ ಎನ್ನಿಸುತ್ತಿದೆ. ಕಾರಣ, ಆಕೆ ನಿಮ್ಮೊಂದಿಗಿದ್ದಾಗಲೇ ಆಕೆಯ ಪ್ರಜ್ಞೆ ಸುಷುಪ್ತತೆಗೆ ಹೋಗಿದ್ದು ತಾನೇ? ಮತ್ತೆ ಏನಾದರೂ ಪರಿಣಾಮ ಬೀರಿದರೇ...? ಅಲ್ಲದೇ ತಜ್ಞರ ರಿಪೋರ್ಟುಗಳಿಂದ ಕೆಲವು ವಿಶೇಷ ವಿಷಯಗಳು ಹೊರಬಂದಿವೆ.'

'......'

'ಹೌದು! ಆಕೆಯ ದೇಹದ ಕೆಲವು ಅಂಗಗಳು ಸಾಮಾನ್ಯ ರೀತಿಯದ್ದಾಗಿಲ್ಲ. ಅಲ್ಲದೇ ಆಕೆಯ ಹೃದಯ ತೋರ್ಪಡಿಸಿದ ಅತಿ ಹೆಚ್ಚು ಮತ್ತು ಅತಿ ಕಡಿಮೆ ಹೃದಯ ಬಡಿತವೂ ಆಕೆಗೆ ಏನೊಂದು ಪರಿಣಾಮ ಬೀರಿಲ್ಲ, ಅಲ್ಲದೇ...'

'ಅಲ್ಲದೇ...?'

''ಆಕೆಯ ಹೃದಯ ಹಾಗೂ ಗರ್ಭ ಕೋಶಗಳು ಸಾಮಾನ್ಯ ಹೆಣ್ಣಗಿರುವಂತೆ ಇರದೆ, ಭಿನ್ನವಾಗಿವೆ, ಭಾಗಶಃ ಸ್ಥಾನ ಪಲ್ಲಟಗೊಂಡಿವೆ. ಜೊತೆಗೆ ನಾರ್ಮಲ್ ಫರ್ಟಿಲಿಟಿಗೆ ಅರ್ಹವಾದ ಗರ್ಭಕೋಶಗಳು ಹೊಂದಿರುವಂತಹ ಗುಣಲಕ್ಷಣಗಳು ಅದಕ್ಕಿಲ್ಲ, ಮಿಗಿಲಾಗಿ ಆಕೆ ಬಾಹ್ಯವಾಗಿ ಮಾನವರಂತೆ ಇದ್ದರೂ, ಆಂತರಿಕವಾಗಿ ಬಹಳಷ್ಟು ಅಂಗಗಳು ವಿಚಿತ್ರ ಸ್ಥಿತಿಯಲ್ಲಿ ಇವೆ...'

ನಾನು, ಜೋನ್ಸ್ ಏನೂ ಹೇಳಲಾಗದೇ ತೆಪ್ಪಗೆ ಕುಳಿತಿದ್ದೆವು.

'...ಇದಕ್ಕೂ ಮಿಗಿಲಾಗಿ, ಅಷ್ಟೊಂದು ಹಠಾತ್ತಾಗಿ ಆಕೆಯ ಮನಸ್ಥಿತಿ ಬದಲಾವಣೆ ಆಗಲು ಕಾರಣ, ಆಕೆಯ ಸುಪ್ತವಾದ ಅಂತರ ಪ್ರಜ್ಞೆಗೆ ಪ್ರಚೋದನೆ ಬಲವಾಗಿಯೇ...' ಅವರ ಮಾತಿನ್ನೂ ಮುಗಿದಿರಲಿಲ್ಲ, ಮಧ್ಯದಲ್ಲೆ ನುಡಿದೆ,

'ಡಾಕ್ಟರೇ, ನಾನು ಕೈಗೊಂಡ ವಿದ್ಯುನ್ಮಾನ ಪ್ರಯೋಗಾಧಾರಿತವಾಗಿ ಹೇಳಬೇಕಂದ್ರೆ, ರಾಶಿ ಹಾಗೆ ಆಕಸ್ಮಿಕವಾಗಿ ಪ್ರಜ್ಞೆ ತಪ್ಪಿಹೋಗಲು ಮತ್ತು ಅಷ್ಟೊಂದು ಹಠಾತ್ತಾಗಿ ಆಕ್ರಮಣವನ್ನು ಕೈಗೊಳ್ಳಬೇಕಾದರೆ, ಆಕೆಯ ಸುಷುಪ್ತತೆಯಲ್ಲಿದ್ದ, ವಿಶೇಷ ನೆನಪುಗಳನ್ನು ಜಾಗೃತಗೊಳಿಸಿದ್ದಾರೆ ಅನ್ನಿಸುತ್ತೆ...'

'ಹಾಗಿದ್ದರೆ, ಈ ಮೊದಲೆರಡು ಬಾರಿ ನೌಕಾಯಾನ ಮಾಡಿದಾಗಲೂ, ರಾಶಿ ಇದ್ದರಲ್ಲ ಆಗೆಲ್ಲಾ ಈ ರೀತಿ ಏಕೆ ಆಗಲಿಲ್ಲ?' ಜೋನ್ಸ್ ಉದ್ಗರಿಸಿದ.

'ಕರೆಕ್ಟ್... ಆಗಬಹುದಿತ್ತು, ಆದರೆ ಆಗ ಅಂತಹ ಪ್ರಬಲ ಪ್ರಚೋದನಾಕಾರಿ ವಿಷಯ ಸಿಕ್ಕಿರಲಿಲ್ಲವೆನ್ನಿಸುತ್ತದೆ. ಜೊತೆಗೆ ಬಿಂಬ... ಬ್ಲಾಕ್‌ಹೋಲ್‌ಗೆ ಸಿಕ್ಕಿ ಒದ್ದಾಡುತ್ತಿದ್ದಾಗ್ಯೂ, ಸಹಾಯಕ್ಕೆ ಧಾವಿಸಲೆತ್ನಿಸಿದ್ದ ನಮ್ಮ ರೋಬೋಟನ್ನು ತಡೆದಿದ್ದು ಕಂಪ್ಯೂಟರೊಂದು ದಾಖಲಿಸಿದೆ. ಜೊತೆಗೆ ನಾನು ಕಂಟ್ರೋಲ್ ಮಾಡಲೆತ್ನಿಸಿದಾಗಲೂ, ನನ್ನ ಕಮ್ಯಾಂಡನ್ನೂ ಅಲಕ್ಷಿಸಿದ್ದಾಳಾಕೆ... ಅಲ್ಲದೇ ಹಿಂದಿನೆರಡು ಬಾರಿ...'

'ಆದರೆ ಮಿ. ಬಿಟ್, ಮೆಡಿಕಲ್ ಎಥಿಕ್ಸ್‌ಗಳ ಪ್ರಕಾರ... ಮಾನವನ ಇಂತಹ ಆಕಸ್ಮಿಕ ನಡವಳಿಕೆಗಳನ್ನು ತೋರಬೇಕೆಂದರೆ, ಆಕಸ್ಮಿಕ ಆಘಾತಗಳಿಂದಲೋ, ಹೆರಿಡಿಟಿಯಿಂದಲೋ ಮಾತ್ರವೇ ಸಾಧ್ಯ. ಅದೂ ಅಲ್ಲದೇ ಅಪರೂಪಕ್ಕೊಮ್ಮೆ, ಸುಪ್ತಪ್ರಜ್ಞೆಯಲ್ಲಿದ್ದ ನೆನಪುಗಳಿಗೆ, ಭಾವನೆಗಳಿಗೆ ಧಕ್ಕೆ ತಟ್ಟಿದಾಗಲೂ ಅವು ತೆರಳುವ, ವಾಸ್ತವಕ್ಕೆ ಬರುವ ಸಂದರ್ಭಗಳು ಇಲ್ಲದಿಲ್ಲ. ಆ ರೀತಿ ಎಚ್ಚೆತ್ತು ಕೊಳ್ಳುವ ಭಾವಗಳು, ಅದಕ್ಕೆ ಸಂಬಂಧಪಟ್ಟ ಭಾವನೆಗಳನ್ನೇ ತೋರ್ಪಡಿಸುತ್ತವೆ. ಇದನ್ನು ನಾವು ಗಮನಿಸಿದರೇ, ಆಕೆ ತೀವ್ರವಾದ ಆಕ್ರಮಣಕಾರಿ ಪ್ರವೃತ್ತಿಯನ್ನು ತೋರಿರ ಬೇಕಾದರೆ ಅವಳಲ್ಲಿನ ಯಾವುದೋ 'ಸೇಡಿನ ಭಾವ'ವೊಂದು ಎಚ್ಚೆತ್ತುಕೊಂಡಿದೆ ಅಂತ ಅನ್ನಿಸೊಲ್ವೆ?' ಡಾ. ಬಿಟ್ಸ್ ನುಡಿಯುತ್ತಿದ್ದಂತೇ, ಹಿಂದೆಯೇ ನಾನು ಹೇಳಿದೆ.

'ಎಸ್! ಡಾಕ್ಟರ್. ಜೊತೆಗೆ ನಾನು ಗಮನಿಸಿರುವ ಪ್ರಕಾರ, ರಾಶಿ ಪ್ರಜ್ಞೆ ಕಳೆದುಕೊಂಡಾಗ ಅಷ್ಟು ಅವಧಿಯಲ್ಲಿ ಆಕೆ

ಮಾನಸಿಕವಾಗಿ ಸುಮಾರು 16 ಜ್ಯೋತಿರ್ವರ್ಷಗಳಷ್ಟು ದೂರದ ಪರಿಸರ ದೊಡನೇ ಸಂಪರ್ಕ ಪಡೆದಿದ್ದಳೆನಿಸುತ್ತದೆ. ಕಳೆದ ನಾಲ್ಕು ದಿನಗಳ ಅವಧಿಯಲ್ಲಿ ಅದರ ಅಂತರ ಒಂದಿಷ್ಟು ಹೆಚ್ಚು ಕಡಿಮೆ ಆಗಿದ್ದರೂ, ಅದೇ ನಿರ್ದಿಷ್ಟ ದೂರದ ಪರಿಧಿಯಲ್ಲಿ ಆಕೆಯ ಸುಪ್ತ ಪ್ರಜ್ಞೆ ಸಂಪರ್ಕ ಪಡೆದಿತ್ತೆನ್ನುವುದರಲ್ಲಿ ಸಂಶಯವಿಲ್ಲ.'

'ಆದರೆ... 16 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ, ಮನುಷ್ಯನ ಪ್ರಜ್ಞೆಯೊಂದಿಗೆ ಸಂಪರ್ಕ ಸಾಧಿಬಲ್ಲಂತಹ, 100 ಗಂಟೆಗಳಷ್ಟು ಕಾಲಕ್ಕಿಂತಲೂ ಮಿಗಿಲಾಗಿ ತನ್ನಲ್ಲೇ ಮನುಷ್ಯನನ್ನು ಮಾನಸಿಕವಾಗಿ ಹಿಡಿದು ಕೊಳ್ಳುವಂತಹಶಕ್ತಿ ಅಥವಾ ಇನ್ನೇನಾದರೂ ಅಲ್ಲಿ ಇದೇ.. ಎಂದೇ...?' ಪ್ರಶ್ನಿಸಿದ.

'ಖಂಡಿತವಾಗ್ಲೂ... ನಿನಗೂ ಗೊತ್ತಿರಬಹುದು, ರಾಶಿಗೆ ಮೊದಲಿನಿಂದಲೂ ಗ್ರಹ, ತಾರೆಗಳ ಸಂದರ್ಶನದಲ್ಲಿ ಆಸಕ್ತಿ ಜಾಸ್ತಿ. ಅಲ್ಲದೇ ಆಕೆ ಊಹಿಸಿ ಕೆಲವೊಮ್ಮೆ ನೀಡಿದ ವಿವರಗಳು, ನಂತರ ಸಂದೇಶವಾಹಕ ತರಂಗಗಳ ಮೂಲಕ ಪಡೆಯುತ್ತಿದ್ದ ವಿವರಗಳಿಗೂ ಇರುತ್ತಿದ್ದ ಅತೀವ ಸಾಮ್ಯ, ಈಗಿನ ಆಕೆಯ ಮನಸ್ಥಿತಿ ಗಮನಿಸಿದರೇ ಸಂಶಯ ಕೆದಕೋಲ್ವೆ? ಜೊತೆಗೆ ಹಿಂದಿನೆರಡು ಗಗನಯಾನದಲ್ಲಿ ಏನೊಂದೂ ಆಗದೇ, ಇದೇ ಸಲವೇ ಈ ರೀತಿ ವರ್ತಿಸಿದ್ದು ಪ್ರಶ್ನೆಯಾಗೋಲ್ಲವೇ?'

'ಅಷ್ಟೇ ಅಲ್ಲ ಸಾರ್. ನೀವು ಹೇಳಿದಂತೆ 'ಬ್ಲಾಕ್‌ಹೋಲ್'ನಲ್ಲಿ ಬಿಂಬ ಸಿಕ್ಕು ಒದ್ದಾಡುತ್ತಿರುವಾಗ, ಎಳೆಯಾಗಿ ಒಳಕ್ಕೆ ಎಳೆಯಲ್ಪಡುತ್ತಿದ್ದಾಗ, ನೀವು ಉಳಿದವರನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬಿಂಬನನ್ನು ಬಲಿಕೊಡಲು ನಿರ್ಧರಿಸಿದ್ದು ಏನಾದರೂ ಮಾನಸಿಕ ಆಘಾತಕ್ಕೆ ಕಾರಣವಾಗಿರಬಹುದೇ? ಮಿಗಿಲಾಗಿ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ನಿಮ್ಮಮೇಲೂ ಆಕ್ರಮಣ ಮಾಡಬೇಕಾದರೆ, ಆಕೆ ಸಂಪೂರ್ಣವಾಗಿ ಮಾನಸಿಕ ಸಮತೋಲವನ್ನು ಕಳೆದುಕೊಂಡಿದ್ದು ಸ್ಪಷ್ಟ. ಆದ್ದರಿಂದ ನೀವು ಅಂತರಿಕ್ಷದಲ್ಲಿದ್ದಾಗಲೇ ಆಕೆ ಸುಪ್ತಾವಸ್ಥೆಯನ್ನು ಕೆದುಕುವಂತಹ ಘಟನೆ ನಡೆದಿರಬೇಕು ಎನ್ನಿಸುತ್ತದೆ.'

'ಕರೆಕ್ಟ್... ಆದರೆ ಅದರೊಂದಿಗೇನೆ ಇನ್ನೊಂದೆರಡು ಸಂಶಯಗಳೂ ಇಲ್ಲಿ ಕೆದುರುತ್ವೆ? 'ಏನೂಂತೀಯಾ...! ಈ ರೀತಿ ಆಕೆಗೆ ನೌಕೆಯಲ್ಲಿದ್ದಾಗಲೇ ನಡೆದಿರಬೇಕಾದರೇ, ಈ ಯಾನದಲ್ಲೇನೋ ವಿಶೇಷ ಇದೆ ಎನ್ನಿಸುತ್ತೆ ಆದರೂ, ಕೊನೆಯ ಕ್ಷಣದವರೆಗೂ ತನ್ನ ಕರ್ತವ್ಯವನ್ನು ಸರಿಯಾಗೇ ನಿರ್ವಹಿಸಿದ ರಾಶಿ, ಸಡನ್ ಆಗಿ ಆ ರೀತಿ ಬದಲಾದದ್ದು ನಾವು ಬ್ಲಾಕ್ ಹೋಲ್‌ನ ಪರಿಧಿಯಲ್ಲಿದ್ದಾಗಲೇ...!'

'ಅಂದ್ರೆ... 'ಬ್ಲಾಕ್‌ಹೋಲ್'ನಲ್ಲಿ ಬಿಂಬ ಸಿಕ್ಕಿಹಾಕಿಕೊಂಡ ಘಟನೆಗೂ, ಇದಕ್ಕೂ ಏನಾದರೂ ಸಂಬಂಧ ಇರಬಹುದುಂತೀರಾ.?'

'ಹಾಗಂತ ಸ್ಪಷ್ಟವಾಗಿ ಹೇಳಲಾಗದಿದ್ರೂ ಇಲ್ಲವೆನ್ನಲಾಗುವುದಿಲ್ಲ ಅಲ್ವಾ? ಕಾರಣ ನಾನು ರಾಶಿಯ ಮಾನಸಿಕ ಪರಿಸ್ಥಿತಿಯ ಅವಲೋಕನಕ್ಕೆ ಎಂದು ಅಳವಡಿಸಿದ್ದ ರೆಕಾರ್ಡರ್‌ನಲ್ಲಿ ದಾಖಲು ಆಗಿರೋ ಪ್ರಕಾರ, ರಾಶಿಗೆ ಈ ರೀತಿ ಆಗುತ್ತಿರುವುದು ಮೂರನೇ ಬಾರಿ ಎಂದು ತಿಳಿಸುತ್ತದೆ, ಇತ್ತೀಚಿನ ನಾಲ್ಕು ವರ್ಷಗಳಲ್ಲಿ ಅಂದ್ರೆ ಆಕೆ ಈ ಸ್ಪೇಸ್ ಸೆಂಟರ್‌ನ್ನು ಸೇರಿದಂದಿನಿಂದ್ಲೂ ಇಲ್ಲಿವರೆಗೆ, ಆಕೆಗೂ ಅರಿವಿಲ್ಲದಂತೆ, ಮೊದಲೆರಡು ಬಾರಿ ಮಾನಸಿಕ ವಾಗಿ ಅಲ್ಲಿಗೆ ಸಂಪರ್ಕ ಸಾಧಿಸಿದ್ದು ಸ್ಪಷ್ಟವಾಗುತ್ತದೆ.'

'ವ್ಹಾಟ್...?' ಜೋನ್ಸ್ ಆಶ್ಚರ್ಯದಿಂದ ಉದ್ಗರಿಸಿದ್ದ.

'ಹೌದು! ಆಕೆಯ ಪ್ರಜ್ಞೆ ಚಲಿಸಿದ ದೂರ, ಹಾಗೂ ದಿಕ್ಕು ಕೂಡಾ ದಾಖಲಾಗಿದೆ.'

'ಅಂದ್ರೆ ಯಾವ ಕಡೆ ಬರುತ್ತೆ ಅದು...?'

'ಬಿಂಬ ಸಿಕ್ಕಿಕೊಂಡು ಸೆಳೆದೊಯ್ದ ಬ್ಲಾಕ್ ಹೋಲ್‌ನ ಸುತ್ತಮುತ್ತ...! ಇದರಲ್ಲಿ ದಾಖಲಾಗಿರುವ ಪ್ರಕಾರ ಹಿಂದಿನೆರಡು ಘಟನೆ ನಡೆದ ಸಮಯ ಹಾಗೂ ಈಗಿನ ಘಟನೆ ನಡೆದ ಕಾಲಾವಧಿ ಹೆಚ್ಚು ಕಡಿಮೆ ಒಂದೇ ಆಗಿದೆ. ಕೆಲವೇ ನಿಮಿಷಗಳ ವ್ಯತ್ಯಾಸ, ಜೊತೆಗೆ ಬಿಂಬ ಸೆಳೆಯಲ್ಪಟ್ಟಾಗಲೂ ಸಮಯ ಮಧ್ಯರಾತ್ರಿಯೇ...'

'ಅಂದರೆ ರಾಶಿಯ ಸುಪ್ತಪ್ರಜ್ಞೆಯನ್ನು ಬೇರಾವುದೋ ಶಕ್ತಿ ಅಥವಾ ಇನ್ನೇನೋ ಸಂಪರ್ಕಕ್ಕೆಳೆಯಲು ಯತ್ನಿಸುತ್ತಿದೆ

ಮಯೂರ

ಎನ್ನುತ್ತೀರಾ...?' ಅಲ್ಲಿವರೆಗೂ ಸುಮ್ಮನೆ ನಮ್ಮ ಮಾತುಗಳನ್ನು ಆಲಿಸುತ್ತಿದ್ದ ಡಾ. ಬಿಟ್ಸ್ ಪ್ರಶ್ನಿಸಿದರು. ಅದಕ್ಕೆ ನಾನು-

'ಹೌದು! ಇಲ್ಲಿವರೆಗಿನ...' ಎಂದು ಹೇಳುವಷ್ಟರಲ್ಲಿ, ನರ್ಸ್ ಒಬ್ಬಳು ಧಾವಿಸಿ ಬಂದು ಕೆಮಲ್ ಎಚ್ಚರಗೊಂಡಿರುವುದಾಗಿ ತಿಳಿಸಿದಳು. ತಕ್ಷಣ ಮೂವರು ಕೆಮಲ್‌ನನ್ನು ಇರಿಸಿದ್ದ ವಾರ್ಡ್‌ನತ್ತ ಧಾವಿಸಿದೆವು.

ಆದರೆ, ಕೆಮಲ್ ಎಚ್ಚರಗೊಂಡಿದ್ದರೂ, ಕಣ್ಣು ತೆರೆಯುವ ಶಕ್ತಿ ಕೂಡಾ ಅವನಲ್ಲಿ ಇರಲಿಲ್ಲ. ಜೋನ್ಸ್‌ನೊಂದಿಗೆ ಅಷ್ಟೇ ವೇಗದಿಂದ ಹಿಂದಿರುಗಿದೆ.

* * *

ಮರುದಿನ ಆಸ್ಪತ್ರೆಗೆ ಹೋದಾಗ ಡಾಕ್ಟರರು ತಮ್ಮ ಛೇಂಬರಿನಲ್ಲಿ ಇರದಿದ್ದ ಕಾರಣ ರಾಶಿಯಿದ್ದ ವಾರ್ಡ್‌ನತ್ತ ಹೆಜ್ಜೆ ಹಾಕಿದೆ, ಏನೋ ಟ್ರೀಟ್‌ಮೆಂಟ್ ನಡೆದಿತ್ತು. ತುಂಬಾ ಬಿಳುಚಿಕೊಂಡಿದ್ದಳು. ನನ್ನ ಕಾಲು ಸಪ್ಪಳಕ್ಕೆ ನನ್ನತ್ತ ತಿರುಗಿದಳು... ಒಂದು ಕ್ಷಣ... ಮುಗುಳ್ನಗೆಯೊಂದು ಆಕೆ ಮುಖದಲ್ಲಿ ಮಿಂಚಿಸಿದಳು ನನ್ನ ಕಣ್ಣುಗಳನ್ನೇ ದಿಟ್ಟಿಸುತ್ತಾ.

'ಹೇಗಿದ್ದೀಯಾ...?' ಎಂದು ಪ್ರಶ್ನಿಸಬೇಕೆಂದು ಕೊಂಡವನನ್ನು ಡಾ. ಬಿಟ್ಸ್ ಕಣ್ಣಲ್ಲೆ ತಡೆದು, ತಮ್ಮನ್ನು ಹಿಂಬಾಲಿಸುವಂತೆ ಸೂಚಿಸಿದರು.

ತಮ್ಮ ಛೇಂಬರನ್ನು ಪ್ರವೇಶಿಸುತ್ತಿದ್ದಂತೆ, 'ಮಿ. ಬೀರ್, ರಾಶಿ ಇದ್ದಕ್ಕಿದ್ದಂತೆ ಎಚ್ಚೆತ್ತು ಕೊಂಡಿರುವುದು ಒಳ್ಳೆಯ ಬೆಳವಣಿಗೆ ಆದರೂ ಸ್ಪೆಶಲಿಸ್ಟ್‌ಗಳು ನೀಡಿರುವ ರಿಪೋರ್ಟ್‌ಗಳನ್ನು ಗಮನಿಸಿದರೆ, ಕೆಲವು ವಿಸ್ಮಯಕಾರಕ ಸಂಗತಿಗಳಿವೆ'

ಪ್ರಶ್ನಾರ್ಥಕವಾಗಿ ನೋಡಿದೆ.

'ಹೌದು, ನಿಮಗೂ ಗೊತ್ತಿರುವಂತೆ ಆಕೆಯ ದೇಹದ ಮೇಲೆ ಯಾವುದೇ ಔಷಧಗಳೂ ನಿರೀಕ್ಷಿಸಿದಷ್ಟು ಪರಿಣಾಮ ಬೀರಲಿಲ್ಲ. ಕಾರಣ ಮೊದಲೇ ಹೇಳಿದಂತೆ ಭಾಗಶಃ ಭಿನ್ನವಾಗಿರುವ ಆಕೆಯ ಅಂತರಂಗಿಕ ರಚನೆ ಮೂಲ ಮಾನವ ಜೀವಿಯದಲ್ಲ...'

'...'

'ಮೆದುಳಿನ ಬೆಳವಣಿಗೆ ಆಗದೇ. ಸಾಮಾನ್ಯವಾಗಿ ಇರಬೇಕಾದಂತೆಯೂ ಇರದೆ ವಿಚಿತ್ರವಾಗಿ ಲೋಳೆಯಂತ ಎಳೆಗಳಾದ ಮುಷ್ಠಿಗಾತ್ರದಲ್ಲಿ ಹೆಣೆದುಕೊಂಡಿದೆ. ಆದರೆ ಮುಂದಿನ ಜೋಡಣೆಗಳು ಮಾತ್ರ ಮಾಮೂಲಿನಂತೇ ಹೋಗಿದ್ದು, ಇನ್ನೂ ಆಸಕ್ತಿಕರವಾದುವೆಂದರೇ, ಆಕೆಗೆ ನೆನಪಿನ ಶಕ್ತಿಯನ್ನು ಹೆಚ್ಚು ಮಾಡುವ ಮತ್ತು ಗತಕಾಲವನ್ನು ಜ್ಞಾಪಿಸಿಕೊಳ್ಳುವಂತ ವಿಶೇಷ ಜೀವಕೋಶಗಳು ನರಮಂಡಲದಲ್ಲಿವೇ...'

'...'

'...ಅಷ್ಟೇ ಅಲ್ಲದೇ ರಿಗ್ರೇಶನ್ (ಹಿಪ್ನಾಟಿಸಂ ಮುಖಾಂತರ ಮನುಷ್ಯನನ್ನು ಮಾನಸಿಕವಾಗಿ ಗತಕಾಲಕ್ಕೆ ಕೊಂಡೊಯ್ಯುವದು) ಮುಖಾಂತರ ವಿಶ್ಲೇಶಿಸಲಾಗಿದೆ. ಅಂತಹ ವಿಶೇಷಗಳೇನೂ ಆಕೆ ತೋರ್ಪಡಿಸಿಲ್ಲವಾದರೂ,ಆಕೆ ಪ್ರಜ್ಞೆ ಕಳೆದುಕೊಂಡ ಅವಧಿಯಲ್ಲಿನ ವಿಷಯುಗಳನ್ನು ಹೊರಗೆಡವಲು ನಿರಾಕರಿಸಿದೆ, ನಾಲ್ಕು ವರ್ಷಗಳಿಂದೀಚೆಗೆ ಆಕೆಗೆ ಇದು ಮೂರನೇ ಬಾರಿ ಈ ರೀತಿ ಆಗುತ್ತಿರುವುದೆನ್ನಿಸುತ್ತೆ. ನೀವು ಮೊದಲೇ ಹೇಳಿದಂತೆ ಮೊದಲೆರಡು ಬಾರಿ ಆಕೆ ಬಹುಶಃ ನಿದ್ದೆಯಲ್ಲಿದ್ದಾಗ ಆಗಿದ್ದರಿಂದಲೇ ಏನೋ ನಮ್ಮ ಅರಿವಿಗೆ ಬಾರದೆ ಹೋಗಿದೆ.

'ಅಂದರೆ, ರಾಶಿಯನ್ನು ಬಿಟ್ಟ ಆಕೆಯ ಅಂತರ ಪ್ರಜ್ಞೆ ಎಲ್ಲಿಯೋ ಒಂದೆಡೆ ತಲುಪಿದೆ ಅಥವಾ ಯಾರದೋ ಕಂಟ್ರೋಲಿಗೆ ಸಿಕ್ಕಿತೆನ್ನುವದೋ ಒಂದು ನಿಜ... ಆದರೆ...' ಅಷ್ಟುಹೊತ್ತು ಆಕೆ ಮಾನಸಿಕವಾಗಿ ನಡೆಸಿದ ಸಂಘರ್ಷಣೆಯೇನು?'

'...ಅಷ್ಟಲ್ಲದೇ, ಮಿ. ಬೀರ್ ಇನ್ನೊಂದ್ವಿಷ್ಯ' ಡಾ ಬಿಟ್ಸ್ ನಿಲ್ಲಿಸಿದರು.

'ಏನು...?'

'ರಾಶಿ...ಅಫೋಸಿಯಾದಿಂದ ಬಳಲುತ್ತಿದ್ದಾಳೆ!'

'ಅಫೋಸಿಯಾನೇ? ಅಂದರೆ...?'

'...ಅಂದರೆ ತಲೆಗೆ ಅಥವಾ ಮೆದುಳಿನ ಕೆಲವೊಂದು ಭಾಗಗಳಿಗೆ ಏಟಾಗಿ ಅದು ಭಾಗಶಃ ನಿಷ್ಕ್ರಿಯಗೊಂಡಾಗ, ಮಾತನಾಡುವ ಶಕ್ತಿಯನ್ನು ವ್ಯಕ್ತಿ ಕಳೆದುಕೊಂಡರೇ ಅದು ಅಫೋಸಿಯಾ ಎನ್ನಿಸಿಕೊಳ್ಳುತ್ತದ...!'

'ಅಂದರೆ... ರಾಶಿ ಇನ್ನೆಂದೂ ಮಾತೇ

'ಅಂದರೆ... ರಾಶಿ ಇನ್ನೆಂದೂ ಮಾತೇ ಆಡಲಾರಳೇ..?'

'ಹಾಗೇನಿಲ್ಲ... ಆದರೆ ಕಾಲಾನಂತರದಲ್ಲಿ ಸರಿಯಾದೀತು! ಅದಕ್ಕೆ ತಾಳ್ಮೆ ಬೇಕಾಗುತ್ತೆ! ಜೊತೆಗೆ' ಅರ್ಧಕ್ಕೆ ನಿಲ್ಲಿಸಿದರು. ನಾನು ಪ್ರಶ್ನಾರ್ಥಕವಾಗಿ ತಲೆ ಎತ್ತಿದೆ.

'ಇವನ್ನೆಲ್ಲಾ ಗಮನಿಸಿದರೆ, ಇವುಗಳಲ್ಲೆಲ್ಲಾ ಎಲ್ಲೋ ಒಂದೆಳೆಯಾದರೂ ಹೇರಿಡಿಟಿಗೆ ಸಂಬಂಧಪಟ್ಟಿದ್ದಿರಬೇಕು. ಅದಕ್ಕಾಗಿ ರಾಶಿಯ ಫ್ಯಾಮಿಲಿ ಬ್ಯಾಕ್‌ಗ್ರೌಂಡನ್ನು ಜಾಲಾಡಿದರೆ...'

'...ಶ್ಯೂರ್ ಡಾಕ್ಟರ್... ಬಹುಶಃ ಆ ಒಂದು ಪಾಯಿಂಟ್ ನಮಗೆ ಉತ್ತರವಾಗಬಹುದೇನೋ, ಖಂಡಿತ ಪ್ರಯತ್ನಿಸುತ್ತೇನೆ' ಅವರ ಮಾತಿನ ಮಧ್ಯೆ ನುಡಿದು ಎದ್ದುನಿಂತೆ 'ಆಲ್ ದಿ ಬೆಸ್ಟ್' ಕೈಕುಲುಕಿದರು ಡಾ. ಬಿಟ್ಸ್.

* * *

ಆ ದಿನ ಸಂಜೆಯೇ, ರಾಶಿ ಇದ್ದ ಅಪಾರ್ಟ್‌ಮೆಂಟ್ ಪ್ರವೇಶಿಸಿದೆ. ಆಕೆಯೇ ಹೇಳಿದಂತೆ ಅವಳ ತಂದೆ-ತಾಯಿಯರನ್ನು ಆಕೆಯೇ ಸರಿಯಾಗಿ ನೋಡಿರಲಿಲ್ಲ. ಇನ್ನು ನಾನೆಲ್ಲಿ ಪತ್ತೆ ಮಾಡುವುದು. ಫೈಲುಗಳು... ಕಾಗದ ಪತ್ರಗಳು... ಏನೆಲ್ಲಾ ಹುಡುಕಾಡಿದರೂ ಒಂದು ಸುಳಿವು ಕಾಣಲಿಲ್ಲ. ಒಹ್... ಡೈರಿಗಳು... ಅಲ್ಲಲ್ಲಿ ತಿರುಗಿಸಿ ಹಾಕಿದೆ. ಅದರಲ್ಲಿ ಅಲ್ಲಲ್ಲಿ ನುಸುಳಿದ್ದ 'ಅಂಕಲ್‌ಸ್ಯಾಮ್' ಯಾರೋ ಮಾತ್ರ ಗೊತ್ತಾಗಲಿಲ್ಲ. ಒಟ್ಟಾರೇ ಆಕೆಗೆ ಅವರಲ್ಲದೆ ಬೇರೆ ಯಾರೂ ಇದ್ದಂತೆ ಕಾಣಲಿಲ್ಲ...'

'...ಯಾರೀ ಅಂಕಲ್ ಸ್ಯಾಮ್...' ಮತ್ತೈದು ನಿಮಿಷಗಳನಂತರ ಒಂದು ಡೆಲ್ಲಿ ಅಡ್ರೆಸ್ ದೊರಕಿತು. ಈ ಅಂಕಲ್ ಸ್ಯಾಮ್ ಏನಾದರೂ ತಿಳಿಸಿಯಾನೇ...?

ನಾನು ಡೆಲ್ಲಿ ತಲುಪಿ ಒಂದು ಸಾಯಂಕಾಲ ಅಂಕಲ್ ಸ್ಯಾಮ್‌ನನ್ನು ಭೇಟಿಮಾಡಿದೆ. ಅವನೊಬ್ಬ ಎಂಬತ್ತು ವರ್ಷಕ್ಕೂ ಮೇಲ್ಪಟ್ಟ ವೃದ್ಧ ಡಾಕ್ಟರ್. ರಾಶಿಯ ಈಗಿನ ಪರಿಸ್ಥಿತಿಯನ್ನು ನನ್ನ ಅವಳ ಪರಿಚಯವನ್ನು, ನೌಕೆಯಲ್ಲಾದ ಆಕಸ್ಮಿಕಗಳನ್ನು ಸ್ಪಷ್ಟವಾಗಿ ವಿವರಿಸಿದ ಮೇಲೆ, ಮತ್ತಿಷ್ಟು ಪ್ರಶ್ನೆಗಳನ್ನು ತೂರಿ, ಅನುಮಾನಿಸುತ್ತಲೇ ವಿವರಗಳನ್ನು ನೀಡಿದ, ಜೊತೆಗೆ ಅವಳ ತಂದೆಯ ಫೈಲುಗಳು ನನ್ನ ಕೈ ಸೇರಿದವು.

ಒಂದೊಂದಾಗಿ ತಿರುವಿಹಾಕಿದೆ. ಎಲ್ಲವೂ ಸಂಶೋಧನಾ ಕಾರ್ಯಗಳಿಗೆ ಸಂಬಂಧಪಟ್ಟಂತಹ, ವಿಶೇಷವಾಗಿ ಕಂಪ್ಯೂಟರನ ಟೆಕ್ನಾಲಜಿಗೆ ಸಂಬಂಧಿಸಿದ್ದು, ಕೊನೆಯಲ್ಲಿ ಹೆಸರು ಬರೆದು ಸಹಿ ಮಾಡಿದ್ದಾರೆ... 'ಸರ್ ಮಿಲ್ಟನ್ ಮ್ಯಾಕರ್ಥಿ...' ವಿಶ್ವ ವಿಖ್ಯಾತ ಕಂಪ್ಯೂಟರ್ ತಜ್ಞ... ರಾಶಿಯ ತಂದೆ... ನಂಬಲಸಾಧ್ಯವಾದ ಸಂಬಂಧ...

ಇಪ್ಪತ್ತೈದು ವರ್ಷಗಳ ಹಿಂದೆ ಅನ್ಯಗ್ರಹ ವಾಸಿಗಳನ್ನು ಭೂಮಿಯನ್ನು ಸಂದರ್ಶಿಸಲು ಆಹ್ವಾನಿಸಿ, ಅದಕ್ಕಾಗಿ ಅಗತ್ಯದ ಶ್ರಮವನ್ನು ತೋರಿ, ವಿಶ್ವದಾಖಲೆ ನಿರ್ಮಿಸಿದವ.

...ಪುಟಗಳು ಸರಿಯತೊಡಗಿದವು...

ವಿಶ್ವದ ಅತ್ಯದ್ಭುತ ಸಂಗತಿಯೊಂದು, ಇಲ್ಲಿವರೆಗೂ ರಹಸ್ಯವಾಗೇ ಉಳಿದುಬಿಟ್ಟಿದ್ದ ಅಪರೂಪದ ಸಂಗತಿಯೊಂದು ನನ್ನೆದುರಿಗೆ ನಿಚ್ಚಳವಾಗಿ ಬಿದ್ದಿತ್ತು...

ಅಂಕಲ್ ಸ್ಯಾಮ್ ಮೆಲ್ಲಗೆ ನುಡಿದರು.

'ನೋಡಿದಿಯಾಪ್ಪ, ಎಂಥಾ ವಿಷಯ. ಇದೊಂದು ಅಪರೂಪದ್ದು ಹೌದಾದರೂ, ಮ್ಯಾಕರ್ಥಿ ಇದರಿಂದ ಅಂತರಾಷ್ಟ್ರೀಯ ಅಪರಾಧಿ ಆಗ್ತಾನೆ ಅಷ್ಟೇ ಅಲ್ಲ ಗೆಲಾಕ್ಷಿಯಲ್ಲೇ ಅವನ ಬೆಂಬಲಕ್ಕೆ ಅವನ ವಾದಕ್ಕೆ ಬೆಲೆ ಉಳಿಯುತ್ತಿದ್ದಿಲ್ಲ, ಅದಕ್ಕಾಗಿ ವಿಷಯ ನಮ್ಮಲ್ಲೇ ಉಳಿದುಬಿಟ್ಟಿತು...'

'ಅಂಕಲ್, ಖಂಡಿತಾ ವಿಷಯವನ್ನು ರಹಸ್ಯವಾಗೇ ಇರಿಸುತ್ತೇನೆ, ಆದರೆ ಇನ್ನೊಂದು ದಾರಿಯಿಂದ ಅದನ್ನು ಬಳಸಿ ಮ್ಯಾಕರ್ಥಿಯವರ ಕೆಲಸ ನಾನು ಮುಂದುವರೆಸಲು ಯತ್ನಿಸ್ತೇನೆ, ಥ್ಯಾಂಕ್ಯೂ ವೆರಿ ಮಚ್ ಅಂಕಲ್' ನಮಸ್ಕರಿಸಿ ಎದ್ದು ನಿಂತೆ. ಹರಸಿ ಬೀಳ್ಕೊಟ್ಟರು.

* * *

ನಾನು ಹೇಳಿ ಹೋದ ಅವಧಿಗಿಂತಲೂ ಮೊದಲೇ, ಡಾ. ಬಿಟ್ಸರನ್ನು ಭೇಟಿ ಆಗುತ್ತಿದ್ದಂತೆ, ಆಶ್ಚರ್ಯದಿಂದ ಅವರ ಕಣ್ಣುಗಳು ಅಗಲವಾದವು, ಪ್ರಶ್ನಾರ್ಥಕ ಭಾವವೂ ಅವರಲ್ಲಿ ಮೂಡಿತ್ತು.

'ಡಾಕ್ಟರೇ, ನನಗೆ ದೊರೆತಿರುವ ವಿವರಗಳ ಪ್ರಕಾರ ವಿಶ್ವ ವಿಖ್ಯಾತ ಕಂಪ್ಯೂಟರ್ ತಜ್ಞ ಸರ್ ಮಿಲ್ಟನ್ ಮ್ಯಾಕರ್ಥಿ, ರಾಶಿಯ ತಂದೆ...'

'...ವ್ವಾಟ್?'

'ಎಸ್ ಡಾಕ್ಟರ್, ಮ್ಯಾಕರ್ಥಿಗೆ ವಾರಸುದಾರರು ಇಲ್ಲವೆಂಬ ವಿಷಯ ಜಗಜ್ಜಾಹೀರಾದದ್ದು ಹೌದಾದರೂ, ರಾಶಿ ಮ್ಯಾಕರ್ಥಿಯ ಸಂತತಿ ಎನ್ನುವದು ಅಷ್ಟೆ ಸತ್ಯ. ಅದಕ್ಕೂ ಮಿಗಿಲಾಗಿ...

"...ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ, ಜಗತ್ತಿನ ಖಗೋಲ ವಿಜ್ಞಾನದಲ್ಲೇ ಮೈಲಿಗಲ್ಲಾಗುವಂತಹ ಘಟನೆಗೆ ನಾಂದಿ ಹಾಡಿದವ, ಖಗೋಳ ವಿಜ್ಞಾನ ಪಂಡಿತ ಡಾ! ಅಲಿಸನ್. 'ಲೇಹ್' ನಗರದ ಕೇಂದ್ರದಿಂದ ಅಂತರಿಕ್ಷ ಯಾನ ಮತ್ತು ಸಂಶೋಧನೆ ನಡೆಸುತ್ತಿದ್ದ ಈ ಅಪರೂಪದ ಯುವ ವಿಜ್ಞಾನಿಗೆ ತಕ್ಕ ಜವಾಬ್ದಾರಿಯುತ ಹೆಗಲು ನೀಡಿದವ ಆಗಲೂ, ಈಗಲೂ ಕಂಪ್ಯೂಟರ್‌ಗಳ ಪಂಡಿತನೆನಿಸಿಕೊಂಡಿರುವ ಮ್ಯಾಕರ್ಥಿ, ಅಲ್ಲಿವರೆಗೂ ಕೇವಲ ಪರಗ್ರಹ ನಕ್ಷತ್ರಗಳ ಭೇಟಿ, ಯಾನ ಮಾಡುತ್ತಿದ್ದ ಇವರಿಗೆ ಬೇರೆ ಗ್ರಹವಾಸಿಗಳನ್ನೇಕೆ ಒಮ್ಮೆ ಭೂಮಿಗೆ ಇಳಿಸಬಾರದು ಎನ್ನುವ ಆಲೋಚನೆ ಬರುತ್ತಿದ್ದಂತೆ, ಆ ದಿಶೆಯಲ್ಲಿ ಕೆಲಸ ಸಾಗಿತು.

ಅವರ ಪ್ರಯತ್ನಕ್ಕೆ ಅನ್ಯಗ್ರಹವಾಸಿಗಳಿಂದ ಸಂದೇಶವೊಂದು ದೊರಕುವದರೊಂದಿಗೆ, ಭೂಮಿಯನ್ನು ಸಂದರ್ಶಿಸಲು ಐದು ಅನ್ಯಗ್ರಹವಾಸಿಗಳ ತಂಡವೊಂದು ಬರಲಿದೆ ಎನ್ನುವ ವಿಷಯ ವಿಶ್ವಮಾನ್ಯತೆ ಪಡೆಯಿತು.

ಅದರಂತೆ, ಡಾ. ಅಲಿಸನ್ ನಿರ್ದೇಶನದಂತೆ ಕಾರ್ಯಪ್ರವೃತ್ತನಾದ ಮ್ಯಾಕರ್ಥಿ ಕಂಪ್ಯೂಟರ್‌ಗಳಲ್ಲಿನ ತನ್ನ ಪರಿಣಿತಿಯಿಂದ, ಅನ್ಯಗ್ರಹವಾಸಿಗಳು ಭೂ ಕಕ್ಷೆಯನ್ನು ಪ್ರವೇಶಿಸುತ್ತಿದ್ದಂತೆ, ಕೇವಲ 'ವೇವ್ಸ'ಗಳ ಸಹಾಯದಿಂದಲೇ ಅವರನ್ನು ಸುರಕ್ಷಿತವಾಗಿ ಲೇಹ್ ನಗರದಲ್ಲಿ ವಿಶೇಷವಾಗಿ ಏರ್ಪಡಿಸಿದ್ದ ಸ್ಥಳದಲ್ಲಿ ಲ್ಯಾಂಡ್ ಆಗುವಂತೆ ಮಾಡುವಲ್ಲಿ ಯಶಸ್ವಿ ಆದ. ಹಾಗೆ ಬಂದ ತಂಡದಲ್ಲಿದ್ದವರು ಎರಡು ಹೆಣ್ಣು ಮತ್ತು ಮೂವರು ಗಂಡಸರಾಗಿದ್ದರು, ರಾತ್ರೋರಾತ್ರಿ ಅಲಿಸನ್ ಮತ್ತು ಮ್ಯಾಕರ್ಥಿ ಜಗತ್ಪ್ರಸಿದ್ಧಿ ಆದರು. ಇಪ್ಪತ್ತೊಂದು ದಿನಗಳ ಕಾಲ, ಭೂ ಸಂದರ್ಶನ ನಡೆಸುವ 'ಶೆಡ್ಯೂಲ್'ನಂತೆ ಬಂದಿದ್ದ ಅನ್ಯಗ್ರಹ ನಿವಾಸಿಗಳು ಇನ್ನೆರಡು ದಿನದಲ್ಲಿ ಹೊರಡಲಿದ್ದಾರೆ ಎನ್ನುವಾಗ, ಅದರಲ್ಲೊಬ್ಬಾಕೆ ಕಾಣೆಯಾದಳು. ಆಕೆಗಾಗಿ ಜಗತ್ತೇ ರಂಗಕ್ಕಿಳಿಯಿತು. ಆದರೂ ಆಕೆ ದೊರಕದೇ ಇದ್ದಾಗ ಉಳಿದ ನಾಲ್ವರು ಕಳವಳಗೊಂಡದ್ದಷ್ಟೇ ಅಲ್ಲ, ಭಯವೂ ಕೂಡಾ ಅವರನ್ನು ಆವರಿಸಿತು. ಅಂತೆಯೇ ಇಪ್ಪತ್ತೊಂದನೇ ದಿನ ಹೊರಡಬೇಕಿದ್ದ ಅವರು ಹಿಂದಿನ ದಿನ ರಾತ್ರಿಯೇ, ಹೇಳದೇ ಕೇಳದೇ ತಮ್ಮ ಗಗನ ನೌಕೆಯನ್ನೇರಿ ತಮ್ಮ ಲೋಕದತ್ತ ಪ್ರಯಾಣ ಬೆಳೆಸಿದರು. ಆದರೆ, ಅದೇ ಅವರು ಮಾಡಿದ ಮುಖ್ಯ ತಪ್ಪಾಯಿತು. ಕಾರಣ ಮ್ಯಾಕರ್ಥಿಯ ಬೆಂಬಲ, ಮಾರ್ಗದರ್ಶನ ಇಲ್ಲದೇ. ಭೂಕಕ್ಷೆಯನ್ನು ಅವರು ದಾಟುವುದು ಕಷ್ಟಸಾಧ್ಯವಾಗಿತ್ತು. ಆದರೂ ಅವರು ಅದರಲ್ಲಿ ಪಾರಾಗಿ ಹೋಗಿದ್ದರು..."

ಹಾಗೆ ಆಕೆ, ಅಂದರೆ ಪರಗ್ರಹದ ಹೆಣ್ಣೊಬ್ಬಳು ನಾಪತ್ತೆ ಆಗಲು ಕಾರಣ ಈ ವಿಶೇಷ ಯಾನದ ಪ್ರಮುಖ ಕರ್ತೃ ಮ್ಯಾಕರ್ಥಿ. ಇಲ್ಲಿಗೆ ಬಂದ ಅವರು ಎಲ್ಲರಿಗಿಂತಲೂ ಹೆಚ್ಚಾಗಿ ಇದ್ದದು ಅಲಿಸನ್ ಮತ್ತು ಮ್ಯಾಕರ್ಥಿಯೊಂದಿಗೆ. ಇದರಿಂದಾಗಿ ಸಹಜವಾಗಿಯೇ ಅವರಲ್ಲೊಬ್ಬಾಕೆ ಮ್ಯಾಕರ್ಥಿಯೊಂದಿಗೆ ಹೆಚ್ಚಿನ ಆತ್ಮೀಯತೆ ಬೆಳೆಸಿದ್ದಾಳೆ. ಅದು ಕೆಲವೇ ದಿನಗಳಲ್ಲಿ ಪ್ರೀತಿಯಾಗಿ ಬದಲಾಗಿರಬೇಕು. ಅದು ಅರಿವಿಗೆ ಬಂದಿದ್ದು ಹೊರಡಲು ಇನ್ನೇನು ಮೂರೇ ದಿನಗಳಿಗೇ ಎನ್ನುವಾಗ. ಶಾಶ್ವತವಾಗಿ ದೂರಾಗಬೇಕು ಎನ್ನುವ ಭಯಂಕರ ನಗ್ನ ಸತ್ಯ ಎದುರಿಗೆ ಇರುತ್ತಿದ್ದಂತೆ, ಬೇರ್ಪಡುವ ಮನಸ್ಸಿಲ್ಲದ ಇಬ್ಬರಿಗೂ ಹೊಳೆದ ಒಂದೇ ಆಲೋಚನೆ ಎಂದರೆ, ಆಕೆ ಇಲ್ಲೇ ಉಳಿದು ಬಿಡುವುದು. 'ಹಾಗಂತ ಪಬ್ಲಿಕ್ ಆಗಿ ಹೇಳಿಕೆ ಕೊಟ್ಟರೇ, ಹಾಸ್ಯಾಸ್ಪದವಲ್ಲದೇ ಜಾಗತಿಕ ಮಟ್ಟದಲ್ಲಿ ತಾನು ವಿರೋಧ, ಬೆಂಬಲ ಎರಡನ್ನೂ ಎದುರಿಸಬೇಕಲ್ಲವೇ. ಮ್ಯಾಕರ್ಥಿ ಆಕೆಯನ್ನು ತನ್ನ ಹತ್ತಿರವ ಉಳಿಸಿಕೊಳ್ಳಲು ಪ್ಲಾನೊಂದನ್ನು ರೂಪಿಸಿದ.

ಅವಳನ್ನು ಮ್ಯಾಕರ್ಥಿ, ಅಂಕಲ್

ಸ್ಯಾಮ್‌ನ ಮನೆಯಲ್ಲಿ ಬಚ್ಚಿಟ್ಟಿದ್ದ. ಅದಕ್ಕೆ ಕೊನೇ ಕ್ಷಣದವರೆಗೂ ಸಮರ್ಥ ಬೆಂಬಲ ನೀಡಿದ ಅಂಕಲ್‌ಸ್ಯಾಮ್ ಒಬ್ಬ ಸಮರ್ಥ ವೈದ್ಯನೂ ಆಗಿದ್ದರಿಂದ, ಮ್ಯಾಕರ್ಥಿಯ ಮತ್ತು ಆಕೆಯ ಸಂಬಂಧದಿಂದ ಹುಟ್ಟಿದ ರಾಶಿಯನ್ನೂ ತನ್ನ ವಿಶೇಷ ಚಿಕಿತ್ಸಾ ಕ್ರಮದಿಂದ ಬೆಳೆಸಿದ್ದಾನೆ.'

'ಅಂದರೆ ಆಕೆ ಈಗಲೂ ಇದ್ದಾಳಾ...?'

'...ಹಾಂ! ಇಲ್ಲಿ ಅಂಕಲ್ ಸ್ಯಾಮ್ ಮಹತ್ವಪೂರ್ಣ ಕಾರ್ಯನಿರ್ವಹಿಸಿದ. ಕಾರಣ 'ಆಕೆ' ಇದ್ದು ಬೆಳೆದ ಪರಿಸರವೇ ಬೇರೆ. ಪ್ರಭೇದ, ವರ್ಗ ಪ್ರತಿಯೊಂದೂ ಬೇರೆ ಆಗಿದ್ದರಿಂದ, ಇಲ್ಲಿನ ಪ್ರಕೃತಿ ವೈಪರೀತ್ಯ ಆಕೆಯನ್ನು ಭಾದಿಸ ತೊಡಗಿದಂತೆ, ಆಕೆಯ ದೇಹಸ್ಥಿತಿ ಇಲ್ಲಿನ ವಾತಾವರಣಕ್ಕೆ, ವ್ಯತಿರಿಕ್ತವಾಗಿ ಸ್ಪಂದಿಸುತ್ತಿದ್ದಂತೆ, ತನ್ನ ವಿಶೇಷ ಚಿಕಿತ್ಸಾ ಕ್ರಮಗಳಿಂದಲೂ, ಆಪರೇಶನ್‌ಗಳಿಂದಲೂ ಆಕೆಯನ್ನು ಜೀವಿಸಲು ಸಜ್ಜುಗೊಳಿಸಿದ. ಮ್ಯಾಕರ್ಥಿ ರಹಸ್ಯವಾಗಿ ಆಕೆಯೊಂದಿಗೆ ಉಳಿಯತೊಡಗಿದ. ಜೊತೆಗೆ ಮಾನಸಿಕವಾಗಿ ಅವಳನ್ನು ಇಲ್ಲಿಯ ಪರಿಸರಕ್ಕೆ ತಕ್ಕಂತೆ ರೂಪಿಸಲೆತ್ನಿಸತೊಡಗಿದ. ಕಾರಣ ಮ್ಯಾಕರ್ಥಿ ಬರೆದಿರುವುದರಿಂದ ತಿಳಿದು ಬರುವುದೇನೆಂದರೆ, ಇಲ್ಲಿಂದ ಹಾರಿಹೋದ ಪರಗ್ರಹ ನಿವಾಸಿಗಳು, ಆತುರದ ನಿರ್ಧಾರ ಕೈಗೊಂಡ ಪರಿಣಾಮ ದಿಕ್ಕು ತಪ್ಪಿ ಅಂತರಿಕ್ಷದಲ್ಲಿ ದಕ್ಷಿಣದತ್ತ ಪ್ರಯಾಣಿಸಿದ್ದನ್ನು ಮ್ಯಾಕರ್ಥಿ ತಿಳಿದುಕೊಂಡು ಪುನಃ ಸಂಪರ್ಕಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹಾಗೇ ಹೋದ ಅವರು 'ಬ್ಲಾಕ್‌ಹೋಲಿ'ಗೆ ಸಿಕ್ಕಿಕೊಂಡಿದ್ದಾರೆ.

'ಬ್ಲಾಕ್ ಹೋಲ್...? ಅಂದ್ರೆ...!'

''...ಬ್ಲಾಕ್‌ಹೋಲ್... ಅಂದರೆ ರಸ್ವರಂಧ್ರ ಅಥ್ವಾ ಕಪ್ಪುಗುಳಿ ಎನ್ನುತ್ತಾರೆ. ಸೂರ್ಯನಲ್ಲಿ ಇರುವ ಹೀಲಿಯಂ ಮತ್ತು ಹೈಡ್ರೋಜನ್‌ನ ಕಣಗಳು, ಸೂರ್ಯನ ಕೇಂದ್ರದ ಗರಿಷ್ಟ ಉಷ್ಣಶಕ್ತಿಯಾದ 1400 ಡಿಗ್ರಿ ಸೆಂಟಿಗ್ರೇಡ್ ಶಾಖದ ಪರಿಧಿಯಲ್ಲಿ ಸಂಯೋಜನೆ ಗೊಂಡು. ಬೆಳಕು ಮತ್ತು ಶಾಖವನ್ನು ಬಿಡುಗಡೆ ಮಾಡುತ್ತದೆ. ಇದು ನಿರಂತರವಾಗಿ ನಡೆದು ಈ ಕ್ರಿಯೆ ಪೂರ್ಣಗೊಳ್ಳಲು ಕನಿಷ್ಟ 500 ಬಿಲಿಯನ್ ವರ್ಷಗಳೇ ಬೇಕು. ಆಗ ಸೂರ್ಯ ಬಾಯ್ತೆರೆದು ಸ್ಫೋಟಿಸುತ್ತಾನೆ. ಅದುವೇ ಸೂಪರ್ ನೋವಾ' ಎಂದೆನಿಸಿಕೊಳ್ಳುತ್ತದೆ. ಈ ರೀತಿ ಸ್ಫೋಟಗೊಂಡು ಅಗಲಗೊಳ್ಳುತ್ತಾ ಹೋಗುವ ಸೂರ್ಯನಲ್ಲಿ ಆಗ ಬೆಳಕು ಶಾಖ ಎರಡೂ ಇರುವುದಿಲ್ಲ. ಅಲ್ಲದೇ ಅಗಲವಾಗುತ್ತಾ ತನ್ನ ಸಾಮರ್ಥ್ಯದಷ್ಟು ವಿಸ್ತರಿಸಿ, ಪುನಃ ಅದೇ ವೇಗದಲ್ಲಿ ಸಂಕ್ಷೇಪಗೊಳ್ಳುತ್ತಾ ಸಾಗಿ, ಕೊನೆಗೊಮ್ಮೆ ಎಲ್ಲೋ ಒಂದೆಡೆ ನಿಂತು ಬಿಡುವ 'ಗತಿಸಿದ ಸೂರ್ಯ'ನಿಗೆ ಅಸ್ತಿತ್ವವೆನ್ನುವದು ಇರುವದಿಲ್ಲ. ಶೂನ್ಯದಲ್ಲಿ ಕಾಣಿಸದೇ, ಆದರೆ ಎಲ್ಲೋ ಒಂದೆಡೆ ಇರುವ ಇದುವೇ, ವಾಸ್ತವದಲ್ಲಿ ಕಪ್ಪಾಗಿರದಿದ್ದರೂ ಕಪ್ಪುರಂಧ್ರ ಎಂದೇ ಕರೆಸಿಕೊಳ್ಳುತ್ತೇ. ಆದರೆ ಅದು ತೋರಿಸುವ ಒಂದೇ ಒಂದು ಗುಣ ಎಂದರೆ ಅಗಾಧವಾದ ಆಕರ್ಷಣಾ ಶಕ್ತಿ. ತನ್ನ ವೃತ್ತಾಕಾರದ ಕಕ್ಷೆಯಲ್ಲಿ ಬರುವ ಏನೇ ಆಗಲಿ ಕಬಳಿಸಿಬಿಡುತ್ತದೆ. ಅದರ ಸಾಮರ್ಥ್ಯಕ್ಕೆ ಎದುರಿಲ್ಲವೇ ಇಲ್ಲ. ಆದರೂ ಕಪ್ಪುರಂಧ್ರ ತನ್ನ ಅಸ್ತಿತ್ವವನ್ನು ಕೆಲವೊಮ್ಮೆ 'ಬೆಳ್ಳಿ ರೇಖೆಗಳ' ಮುಖಾಂತರ...'

'ಬೆಳ್ಳಿ ರೇಖೆ...!'

ಹೌದು, ಗೆಲಾಕ್ಸಿಯಲ್ಲಿ ಎಷ್ಟೋ ಜ್ಯೋತಿರ್ವರ್ಷಗಳ ದೂರದಿಂದಲೂ ಹರಿದು ಬರುವ ಬೆಳಕಿನ ಕಿರಣಗಳು 'ಬ್ಲಾಕ್ ಹೋಲ್'ಗೆ ತಗುಲಿದಾಗ. ಅದು ಪ್ರತಿಕ್ರಿಯಿಸುತ್ತದೆ. ವಾಸ್ತವದಲ್ಲಿ ಗೋಚರಿಸುವಂತಹ ಅಸ್ತಿತ್ವವೇ ಇಲ್ಲದ 'ಬ್ಲಾಕ್‌ಹೋಲ್', ಅಸ್ತಿತ್ವ ಇದ್ದವುಗಳನ್ನೇ ಆಕರ್ಷಿಸುವ ಅದು, ಬೆಳಕಿನ ಕಿರಣಗಳಿಗೆ ವಿರುದ್ಧವಾಗಿ ವರ್ತಿಸುತ್ತದೆ. ಆಗ ಅದರ ಹೊರ ಮೈಯಲ್ಲಿ ಬೆಳಕಿನ ಕಿರಣಗಳು ಶೂನ್ಯದಲ್ಲಿ ಬೆಳ್ಳಿ ಬಣ್ಣದಲ್ಲಿ ಹೊಳೆಯುತ್ತದೆ. ಕೆಲವೊಮ್ಮೆ ಬೆಳಕು ಇಲ್ಲದಿದ್ದಲ್ಲಿ ಅದೂ. ಇರುವುದಿಲ್ಲ. ಬೇರೆ ಬೇರೆ ನಕ್ಷತ್ರಗಳ ಶಕ್ತಿಗೆ ಅನುಗುಣವಾಗಿ ಬ್ಲಾಕ್‌ಹೋಲ್‌ನ ಸಾಮರ್ಥ್ಯದ ವಿಸ್ತೀರ್ಣ ನಿಗದಿಯಾಗುತ್ತದೆ. ಇದರ ಅರಿವಿಲ್ಲದೇ, ಅನ್ಯಗ್ರಹವಾಸಿಗಳು ಚಲಿಸಿದ ನೌಕೆ 'ಬ್ಲಾಕ್‌ಹೋಲ್'ಗೆ ಸಿಕ್ಕಿಕೊಂಡು ಬಿಟ್ಟಿದೆ. ಬ್ಲಾಕ್‌ಹೋಲ್‌ನ ಶಕ್ತಿಗೆ ಎದುರಿಲ್ಲದ್ದು ಮ್ಯಾಕರ್ಥಿಗೆ ಚೆನ್ನಾಗಿ ಗೊತ್ತು. ಅವಳಿಗೂ ಏನೊಂದು ವಿಷಯ ತಿಳಿಸದೇ, ಅವರು ಕ್ಷೇಮವಾಗಿ ತಲುಪಿದರೆಂದು ತಿಳಿಸಿದ. ಆಗಲೇ ಆಕೆ

ರಾಶಿಗೆ ಜನ್ಮ ಕೊಡಲಿದ್ದಳು.

ಆದರೆ ಅದ್ಹೇಗೋ ತಿಳಿದುಕೊಂಡ ಆಕೆ. ಕಂಗಾಲಾಗಿಬಿಟ್ಟಳಲ್ಲದೇ, ತಾನು ತಪ್ಪು ಮಾಡಿದೆ ಎಂದೆನ್ನತೊಡಗಿದಳಂತೆ. ದಿನಗಳೆದಂತೆ ಆಕೆಯಲ್ಲಿ ಭಯ ಜಾಸ್ತಿ ಆಗತೊಡಗಿತು. ಜೊತೆಗೆ ತುಂಬು ಗರ್ಭಿಣಿ ಇದ್ದಾಗಿನ ಆಕೆಯ ಅಯೋಮಯವಾದ ಮಾನಸಿಕ ಸ್ಥಿತಿಯಿಂದ ಭೂಮಿಯ ಮಾನವ ಜೀವಿಗಳನ್ನು ವಿಪರೀತ ಸಂದೇಹ ಹಾಗೂ ಜುಗುಪ್ಸೆಯಿಂದ ಕಾಣಲಾರಂಭಿಸಿದ್ದಾಳೆ. ಅದು ಸಹಜವೇ ಆಗಿತ್ತು ಕೂಡಾ. ಕಾರಣ ಬ್ಲಾಕ್‌ಹೋಲಿನ ಅರಿವಿಲ್ಲದ ಆಕೆ, ನಾವೇ ಬೇಕೆಂದೇ ಅವರ ನೌಕೆಯನ್ನೇನೋ ಮಾಡಿದೆವೆಂದು ಭಾವಿಸಿದ್ದಾಳೆ. ಈ ರೀತಿಯ ಆಕೆಯ ಮನಸ್ಥಿತಿ, ರಾಶಿ ಗರ್ಭದಲ್ಲಿದ್ದಾಗಲೇ ಗಾಢ ಪರಿಣಾಮ ಬೀರಿದ್ದುಸ್ಪಷ್ಟ. ಹಾಗಾಗಿ ಆಕೆ ಭೂಮಿ ಮೇಲೆ ಇಲ್ಲಿನ ಪರಿಸರದಂತೆ ಬಾಳಿದರೂ ಸುಪ್ತ ಮನದಲ್ಲಿ ಯಾವುದೋ ಭಯಾನಕ ಸ್ವಪ್ನದಂತೆ, ಜುಗುಪ್ಸೆಯಂತೆ ಕ್ಲಿಷ್ಟಭಾವನೆಗಳು ಬೇರೂರಿದವು. ಬಹುಶಃ..."

'ಆದರೆ ಇಷ್ಟು ದಿನಗಳವರಗೇಕೆ ಆಕೆಗೆ ಹಾಗಾಗಲಿಲ್ಲ? ಜೊತೆಗೆ ಬ್ಲಾಕ್‌ಹೋಲಿನ ಘಟನೆಗೂ ಈಗ ರಾಶಿಯ ಸುಪ್ತ ಪ್ರಜ್ಞೆ ಎಚ್ಚೆತ್ತುಕೊಂಡಿದ್ದಕ್ಕೂ ಸಂಬಂಧ ಇದೇ ಅಂತೀರಾ...? '...'ಖಂಡಿತಾ! ರಾಶಿಯ ಸುಪ್ತ ಪ್ರಜ್ಞೆಯಲ್ಲಿ ಭೂವಾಸಿಗಳ ಬಗ್ಗೆ ಇದ್ದ ಭಾವನೆ ಜಾಗೃತಗೊಳ್ಳಲು, ಅದಕ್ಕೆ ಅಗತ್ಯ ಇದ್ದಷ್ಟು ಪ್ರಮಾಣದಲ್ಲಿ ಪ್ರಚೋದನೆ ಲಭಿಸಿಲ್ಲ ಎನ್ನಿಸುತ್ತದೆ. ನಾವು ಯಾನದಲ್ಲಿ ಚಲಿಸುತ್ತಾ, ಅವಳಿಗೆ ಮಾನಸಿಕವಾಗಿ ಸಂಪರ್ಕಿಸಲು ಸಾಧ್ಯವಾಗುಷ್ಟರಮಟ್ಟಿನ ಪ್ರಭಾವಿ ವಲಯದಲ್ಲಿ ಪ್ರವೇಶಿಸುತ್ತಿದ್ದಂತೆ, ಆಕೆ ಜಾಗೃತಳಾಗಿದ್ದಾಳೆ. ಅದಕ್ಕೆ ಕೇವಲ ಒಂದು ಸಣ್ಣ ಪ್ರಚೋದನೆ ಸಾಕಿತ್ತು ನಾವು ಬ್ಲಾಕ್‌ಹೋಲ್‌ನ ಹತ್ತಿರ ಹೋದಾಗ ಅದು ಪರಗ್ರಹವಾಸಿಗಳ ವಲಯ. ಅಂತೆಯೇ ಬಿಂಬನ ಸಹಾಯಕ್ಕೆ ಧಾವಿಸುತ್ತಿದ್ದ ರೋಬೋಟನ್ನು ತಡೆದಿದ್ದಾಳೆ.

ಜೊತೆಗೆ ಅವರಲ್ಲಿನ ಪ್ರಜ್ಞೆ ಸಂಪೂರ್ಣವಾಗಿ ಎಚ್ಚೆತ್ತುಕೊಳ್ಳುತ್ತಲೇ, ಆಕೆಯ ಮೇಲೆ ಪರಿಣಾಮ ಬೀರಿದ್ದ ಹತಾಶ ಭಾವನೆಗಳು ರೋಷವಾಗಿ ಬದಲಾಗಿವೆ. ಅದು ಸಹಜ ಕೂಡಾ. ಆಕೆಯಲ್ಲಿ ಹೆಪ್ಪುಗಟ್ಟಿದ ಭಾವನೆಗಳನ್ನು 16 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದ್ದೇ ಆ ನಿವಾಸಿಗಳು. ತಪ್ಪು ಗ್ರಹಿಕೆಯಿಂದ, ತಮ್ಮೊಂದಿಗೆ ಆಕೆ ಸಂಪರ್ಕಕ್ಕೊಳಪಡುತ್ತಲೇ ಆಕ್ರಮಣಕಾರಿ ಪ್ರವೃತ್ತಿ ಕೈಗೊಳ್ಳಲು ಪ್ರಚೋದಿಸಿರಬೇಕು. ಹಾಗಾಗಿ ನಮ್ಮೊಂದಿಗೆ ಆಕೆ ಹಾಗೆ ವರ್ತಿಸಿದ್ದು"

"ಕರೆಕ್ಟ್. ಅದಕ್ಕೆ ರಾಶಿ ಆಂತರಿಕವಾಗಿ ಆ ರೀತಿ ಭಿನ್ನವಾಗಿದ್ದು. ಬಹುಶಃ ನೀವು ಹೇಳಿದಂತೆ ವಿಭಿನ್ನ ಪ್ರಭೇದಗಳಿಂದಾಗಿ, ಆ ರೀತಿಯ ವಿಚಿತ್ರ ದೇಹಸ್ಥಿತಿಯನ್ನು ಪಡೆದಿದ್ದಾಳೆ. ನಂತರ 'ಆಕೆ' ಏನಾದಳೋ...?'

'ರಾಶಿಯ ಜನನ ಕಾಲಕ್ಕೆ ಆಕೆ ಮರಣ ಹೊಂದಿದಳಂತೆ. ಮ್ಯಾಕರ್ಥಿ ಪ್ಲೇನ್ ಆಕ್ಸಿಡೆಂಟಿನಲ್ಲಿ ತೀರಿಹೋದ ವಿಷಯವಂತೂ ಗೊತ್ತೇ ಇದೆ. ಸ್ಯಾಮ್ ಅಂಕಲ್, ಮ್ಯಾಕರ್ಥಿಗಾಗಿ ಈ ಚಿದಂಬರ ರಹಸ್ಯವನ್ನು ಹಾಗೇ ಇರಿಸಿಕೊಂಡುಬಿಟ್ಟ.'

'ಅಂದರೇ... ಈಗಲೂ ಆಗ್ರಹ... ಅದರ ನಿವಾಸಿಗಳೂ ಇದ್ದಾರೆ ಅಂತೀರಾ...?'

"ಇರ್ಲೇಬೇಕು. ಕಾರಣ ಮ್ಯಾಕರ್ಥಿ ನಮೂದಿಸಿರುವ ದಿಕ್ಕೂ ಮತ್ತು ದೂರಗಳು, ರಾಶಿಯ ಸಂಪರ್ಕದ ವಿವರಗಳನ್ನು ಪರಿಶೀಲಿಸಿದಾಗ ಸಿಗುವ ಪುರಾವೆ ಇದಕ್ಕೆ ಸಾಕಲ್ಲ. ಇದೇ ಆಧಾರದ ಮೇಲೆ ಪುನಃ ಸಂದೇಶಗಳ ಮೂಲಕ, ಅವರಲ್ಲಿ ಉಳಿದಿರಬಹುದಾದ ಭಾವನೆಗಳನ್ನು ಬದಲಿಸಲೆತ್ನಿಸಬೇಕು. ಹೊಸ ಬಾಂಧವ್ಯಕ್ಕೆ ಪ್ರಯತ್ನಿಸಬೇಕಷ್ಟೆ.'

'ಆದರೂ ಮ್ಯಾಕರ್ಥಿ ಮಾಡಿದ್ದು ಸರಿ ಅಂತೀರಾ...?'

'ಕಾನೂನುಬದ್ಧವಾಗಿ ತಪ್ಪೆನ್ನಿಸುತ್ತೆ ಆದರೂ, ನೈತಿಕವಾಗಿ ಸಮರ್ಥಿಸಿಕೊಳ್ಳಬಹುದಾದರೂ ಪ್ರೀತಿ, ಪ್ರೇಮದಂತಹ ವಿಷಯದಲ್ಲಿ ಅವರವರ ಮನಸ್ಸೇ ತೀರ್ಪು ಕೊಡಬೇಕಷ್ಟೆ. ಅದ್ಯಾರೋ ಹೇಳಿದಂತೆ 'everything is fair in love and war..." ಅಲ್ಲವೇ!' ಮಾತು ಮುಗಿವ ಹೊತ್ತಿಗೆ ರಾಶಿಯ ವಾರ್ಡಿನ ಎದುರು ಬಂದಾಗ ಒಳಗೆ ದೃಷ್ಟಿ ಹರಿಸಿದೆ. ನನ್ನ ಮಾತು ಕೇಳಿರಬೇಕು. ಆಕೆಯ ಕದಪುಗಳು ರಂಗೇರಿದ್ದು ಸ್ಪಷ್ಟವಾಗಿ ಗೋಚರಿಸಿತು. ✤

ಉತ್ತರನ ಪ್ರತಿಜ್ಞೆ

ತಮ್ಮ ಕೈಲಾಗದಿದ್ದರೂ ಕೆಲವರು ಜಂಭ ಕೊಚ್ಚಿಕೊಳ್ಳುವುದರಲ್ಲಿ ನಿಸ್ಸೀಮರಾಗಿರುತ್ತಾರೆ. ಮಾತಿನಲ್ಲಿ ಅರಮನೆ ಕಟ್ಟುವವರೂ, ಅದು ಮಾಡಬಲ್ಲೆ, ಇದು ಮಾಡಬಲ್ಲೆ ಎಂದು ಡೌಲು ಬಡಿಯುವರು ನಿಜಕ್ಕೂ ಕಾರ್ಯಪ್ರವೃತ್ತರಾದಾಗ ಕುಸಿದು ಬೀಳುತ್ತರೆ. ಅಷ್ಟೇ ಅಲ್ಲ, ನಗೆಪಾಟಲಿಗೆ ಕಾರಣರಾಗುತ್ತಾರೆ. ಅಂಥವರನ್ನು 'ಉತ್ತರ ಭೂಪ' ಎಂದು ಗೇಲಿ ಮಾಡುವುದೂ ಉಂಟಲ್ಲವೇ?

ಪೂರ್ವದಲ್ಲಿ ಉತ್ತರಕುಮಾರನೆಂಬುವನು ಜಂಭ ಹೊಡೆದು ನಗೆಪಾಟಲಿಗೀಡಾಗಿದ್ದರಿಂದ ಈ ನಾಣ್ಣುಡಿ ಹುಟ್ಟಿಕೊಂಡಿತು.


ಪಾಂಡವರು ಹನ್ನೆರಡು ವರುಷ ಅರಣ್ಯವಾಸ ಮಾಡಿದನಂತರ ಒಂದು ವರುಷ ಅಜ್ಞಾತ ವಾಸ ಮಾಡಲು ಮಾರುವೇಷದಿಂದ ವಿರಾಟ ರಾಜನ ಆಶ್ರಯದಲ್ಲಿ ನಿಂತರು. ಇದನ್ನು ಹೇಗೋ ಕೌರವರು ಪತ್ತೆ ಹಚ್ಚಿ ಪಾಂಡವರ ಗುಟ್ಟನ್ನು ಬಯಲಿಗೆಳೆಯಲು ನಿರ್ಧರಿಸಿದರು.

ಪ್ರಗರ್ತ ದೇಶದ ದೊರೆಯಾದ ಸುಶರ್ಮನನ್ನು ಸೈನ್ಯದೊಂದಿಗೆ ವಿರಾಟರಾಜನ ಮೇಲೆ ದಾಳಿ ಮಾಡಲು ಕಳುಹಿಸಿದರು. ಸುಶರ್ಮನು ಮೊದಲಿಗೆ ವಿರಾಟ ರಾಜನ ಗೋವುಗಳನ್ನು ವಶಮಾಡಿಕೊಂಡನು. ಆಗ ವಿರಾಟನು ಸಕಲ ಸೈನ್ಯದೊಂದಿಗೆ ಸುಶರ್ಮನನ್ನು ಎದುರಿಸಲು ಹೋದಾಗ. ಪಾಂಡವರನ್ನುಳಿದು ಉಳಿದ ವೀರರೆಲ್ಲರೂ ವಿರಾಟನಿಗೆ ಸಹಾಯಕ್ಕಾಗಿ ಹೋದರು.

ಅದೇ ಸಮಯದಲ್ಲಿ ಕೌರವರು ಭೀಷ್ಮ ದ್ರೋಣಾಧಿ ಮಹಾರಥಿ ಅತಿರಥಿಗಳೊಂದಿಗೆ ದೊಡ್ಡ ಸೈನ್ಯದೊಂದಿಗೆ ಇನ್ನೊಂದು ದಿಕ್ಕಿನಲ್ಲಿದ್ದ ವಿರಾಟನ ಗೋವುಗಳನ್ನು ಹಿಡಿದರು.

ಆಗ ನರಗರದಲ್ಲಿ ಹೇಳಿಕೊಳ್ಳುವಂಥ ವೀರರ್ಯಾರೂ ಇರಲಿಲ್ಲ. ವಿರಾಟನ ಪುತ್ರ ಉತ್ತರಕುಮಾರ ಮಾತ್ರ ಇದ್ದ. ಅವನು ಕೌರವರು ಗೋಗ್ರಹಣ ಮಾಡಿದ ವಿಷಯ ಕೇಳಿ ಅರಮನೆಯ ಹೆಂಗಳೆಯರೆದುರಿಗೆ ಜಂಭ ಕೊಚ್ಚತೊಡಗಿದ. "ನನಗೊಬ್ಬ ಸಾರಥಿ ಇದ್ದಿದ್ದರೇ ಈಗಲೇ ಹೋಗಿ ಆ ಕೌರವರನ್ನೆಲ್ಲ ಸದೆ ಬಡಿದು ಒಂದೇ ಕ್ಷಣದಲ್ಲಿ ನಮ್ಮ ಗೋವುಗಳನ್ನೆಲ್ಲ ಹೊಡಕೊಂಡು ಬರುತ್ತಿದ್ದೆ. ನನ್ನ ಮುಂದೆ ಯುದ್ಧಕ್ಕೆ ನಿಲ್ಲುವ ವೀರನ್ಯಾವನಿದ್ದಾನೆ?" ಎಂದೆಲ್ಲ ಬಡಿವಾರ ಕೊಚ್ಚಿಕೊಂಡನು.

"ಆಗ ಸೈರಂಧ್ರಿಯ ವೇಷದಲ್ಲಿದ್ದ ದ್ರೌಪದಿ ವಿರಾಟ ರಾಜಕುಮಾರಿಗೆ ನೃತ್ಯ ಕಲಿಸುತ್ತಿದ್ದ ಬೃಹನ್ನಳೆ (ಅರ್ಜುನ) ರಥವನ್ನು ನಡೆಸಬಲ್ಲನೆಂದೂ ಅವನನ್ನು ಸಾರಥಿಯನ್ನಾಗಿ ಮಾಡಿಕೊಂಡು ಕೌರವ ಸೇನೆಯೊಂದಿಗೆ ಯುದ್ಧ ಮಾಡಲು ಹೊರಡು" ಎಂದಳು. ಬೃಹನ್ನಳೆ ರಥ ಸಾರಥ್ಯವನ್ನು ವಹಿಸಿಕೊಳ್ಳಲು ಉತ್ತರ ಕುಮಾರ ಜಂಭದಿಂಧ ಬೀ[illegible] ರಥವೇರಿ




ಯುದ್ಧಭೂಮಿಯತ್ತ ಹೊರಡುತ್ತಾನೆ. ಸಮುದ್ರದ ಅಲೆಗಳಂತೆ ತೆರೆತೆರೆಯಾಗಿ ಬರುತ್ತಿದ್ದ ಕೌರವ ಸೈನ್ಯ ಸಮೂಹ ದೂರದಿಂದಲೇ ನೋಡಿ ಉತ್ತರ ಕುಮಾರನಿಗೆ ಮೈ ನಡುಕ ಹುಟ್ಟಿತು. ತಾನು ಯುದ್ಧ ಮಾಡಲಾರೆನೆಂದೂ

ಬದುಕುಳಿದರೇ ಸಾಕೆಂದು ಬೃಹನ್ನಳೆಗೆ ರಥವನ್ನು ಹಿಂತಿರುಗಿಸು ಎಂದು ಬಗೆಬಗೆಯಾಗಿ ಬೇಡಿಕೊಳ್ಳುವನು. ಆದರೆ ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನ ರಥ ತಿರುಗಿಸಲಿಲ್ಲ. ತಾನೇ ಅರ್ಜುನನೆಂದು ಹೇಳಿ ತಾನು ಕೌರವರೊಂದಿಗೆ ಯುದ್ಧ ಮಾಡುವುದಾಗಿ ಧೈರ್ಯ ಹೇಳುತ್ತಾನೆ. ಉತ್ತರನನ್ನು ರಥ ನಡೆಸಲು ಹೇಳಿ ಅರ್ಜುನ ಗಾಂಢೀವಧರಿಸಿ ಶತ್ರುಗಳನ್ನು ಸೋಲಿಸಿ ಗೋವುಗಳನ್ನು ಹಿಂದಕ್ಕೆ ತಂದನು.

ಉತ್ತರಕುಮಾರನ ಪ್ರತಿಜ್ಞೆ ಹುಸಿಯಾಗಿ ಒಂದು ನಾಣ್ಣುಡಿಯಾಗಿ ಮಾತ್ರ ಉಳಿದಿದೆ.

'ಸ್ವಾತಿ'





ವೈಭವೀ ಭೂತ!

ಮೂಲ: **ಆಸ್ಕರ್ ವೈಲ್ಡ್**

ಕನ್ನಡಕ್ಕೆ: **ನುಗ್ಗೇಹಳ್ಳಿ ಪಂಕಜ**

ಎಲ್ಲರ ಎಚ್ಚರಿಕೆ ನಿರ್ಲಕ್ಷಿಸಿ ಮಹದೇವನ್ ಆ ಭೂತ ಬಂಗಲೆ ಕೊಂಡರು. ಮನೆಯವರೆಲ್ಲಾ ಅವರಂತೆ ಧೈರ್ಯವಂತರೆ. ಆದರೆ ಇದ್ದಕ್ಕಿದ್ದಂತೆ ಮಗಳು ಮಾಯವಾದದ್ದು, ನಂತರದ ಘಟನೆಗಳು— ಎಲ್ಲರಿಗೂ ತೀರಾ ಅನಿರೀಕ್ಷಿತ.

"ನೀವು ಬಹಳ ದೊಡ್ಡ ತಪ್ಪನ್ನ ಮಾಡ್ತಿದೀರಿ ಸಾರ್! ಈಗಲೂ ಕಾಲ ಮಿಂಚಿಲ್ಲ ಡೀಲ್‌ನ ಕ್ಯಾನ್ಸಲ್ ಮಾಡ್ಬಿಡಿ"– ಪಟ್ಟಣದ ಮಹದೇವನ್ ಆ ಬಂಗಲೆಯನ್ನು ಕೊಂಡಾಗ ಜನರೆಲ್ಲ ಆತನಿಗೆ ಬುದ್ಧಿವಾದ ಹೇಳತೊಡಗಿದ್ದರು. –"ನಮ್ಮ ಮಾತನ್ನು ಸ್ವಲ್ಪ ಕೇಳಿ ಮತ್ತೆ... ಸುಮ್ಮನೆ ಆ ಬಂಗಲೆಯ ಚಂದಾನ ನೋಡಿ ಮೋಸ ಹೋಗ್ಬೇಡಿ– ಅಷ್ಟು ಹಣಾನೂ ಚರಂಡಿಯಲ್ಲಿ ಸುರಿದಂತಾಗತ್ತೆ. ನೋಡ್ಕೊಂಡಿರಿ..."

"ಊ ಸಾರ್. ಆತ ಹೇಳೋದು ನಿಜ! ಆ ಬಂಗಲೆಯಲ್ಲಿ ಒಂದು ಭೂತ ಇದೆ! ಅದೂ ಏನು, ಸಾಮಾನ್ಯವಾದ ಭೂವಲ್ಲ– ಬಹಳವೇ ಕೆಟ್ಟ ಭೂತ! ಸುಮಾರು ಮುನ್ನೂರು ನಾನ್ನೂರು ವರ್ಷಗಳಿಂದಲೂ ಇದೆಯಂತೆ— ಅಜ್ಜಿ ತಾತನ ಕಾಲದಿಂದಲೂ ಅದರ ಬಗ್ಗೆ ಕಥೆ ಕಥೆಯಾಗಿ ಕೇಳಿದ್ದೇವೆ! ಆ ತನ್ನ ಬಂಗಲೆಯಲ್ಲಿ ಯಾರೊಬ್ಬರೂ ವಾಸಿಸೋದು ಅದಕ್ಕೆ ಇಷ್ಟ ಇರ್ಲ್ವೇನೋ. ಏನಾದ್ರೂ ಮಾಡಿ ಎರಡೇ ದಿನಗಳಲ್ಲಿ ಹೊಡೆದೋಡಿಸಿಬಿಡತ್ತೆ, ಬಂದವರನ್ನ! ಅಂಥಾದ್ರಲ್ಲಿ, ನೀವು ವಿಷಯಾನ ತಿಳಿದೂ ತಿಳಿದೂ ಆ ಭೂತಬಂಗಲೇಲಿ ಇರ್ತೀನಿ– ಕುಟುಂಬ ಸಮೇತ ಅಂದ್ರೆ... ಆ ದೇವರೇ ನಿಮ್ಮನ್ನ ಕಾಪಾಡಬೇಕು!"



[illegible] ಮಹದೇವನ್ [illegible]... ಬದಲೀಯಲಿಲ್ಲ.

ಇದರಿಂದಾಗಿ ಸೋಜಿಗಗೊಂಡ ಇಷ್ಟಷ್ಟು ಊರಜನ ಮುಂದೆ ಬಂದರು– ತಮ್ಮ ತಮ್ಮ ಅಭಿಪ್ರಾಯಗಳನ್ನು ಅನುಭವಗಳನ್ನು ಅವರ ಮುಂದಿಡಲು...

"ಈವತ್ತಿಗೆ ನಾಲ್ಕೇ ದಿನಗಳಲ್ಲಿ ನಿಮ್ಮ ಹೆಂಗಸರು ಆ ಜಾಗಾನ ಖಾಲಿ ಮಾಡದಿದ್ರೆ ಕೇಳಿ! ಭಯದಿಂದ ಹುಚ್ಚು ಹಿಡಿದರೂ ಆಶ್ಚರ್ಯವಿಲ್ಲ... ಆಮೇಲೆ ನಾವು ಏನೂ ಹೇಳಲಿಲ್ಲ ಅಂತ ಮಾತು ಬರಬಾರ್ದು ನೋಡಿ..."

"ಸತ್ತರೂ ಭೂತ ದೆವ್ವಗಳ ಕೈಲಿ ಮಾತ್ರ ಸಾಯಬಾರ್ದು ಸ್ವಾಮೀ! ನಮಗೂ ಅದೇ ಗತಿ ಆಗ ಬರತ್ತಂತೆ! ಅಲ್ಲಾ, ಮಕ್ಕಳು ಮಲಗಿದ್ದಾಗ ಕತ್ತು ಗಿತ್ತು ಕಿವುಚಿದರೆ?"

ಹೀಗೆ ತಲೆಗೊಂದು ಮಾತನಾಡಿದರೂ, ಹೆಂಡತಿ ಮಕ್ಕಳ ಹೆಸರು ತೆಗೆದುಕೊಂಡು ಹೆದರಿಸಿದರೂ, ಮಹದೇವನ್ ಬೆದರಲಿಲ್ಲ.

ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಇಡಲಿಲ್ಲ.

ನಿಜ ಹೇಳಬೇಕಾದರೆ, ವಿಷಯವನ್ನ ಸಂಪೂರ್ಣವಾಗಿ ಅರಿತೇ ಮಹದೇವನ್ ಈ ಸಾಹಸಕ್ಕೆ ಕೈ ಹಾಕಿದ್ದರು.

ಭೂತದ ಕಥೆಯನ್ನು ಚೂರೂ ಮರೆಮಾಚದೆ ಅವರ ಕಿವಿಗೆ ಹಾಕಿಬಿಟ್ಟಿದ್ದನು– ಮನೆಯ ಮಾಲೀಕ.

"ನಾವೂ ಎಷ್ಟೋ ಸವರಿಸಿಕೊಂಡಿದ್ದೆವು, ಆ ಭೂತದ ಕೂಡ ಬಾಳೋದಿಕ್ಕೆ. ಎಷ್ಟಾದರೂ ಹಿರಿಯರು ಕಟ್ಟಿದ ಮನೆ, ಕೇವಲ ಒಂದು ಭೂತಕ್ಕಾಗಿ ಯಾಕೆ ತ್ಯಜಿಸಬೇಕು, ಎಂಬ ಭಾವನೆ... ಆದ್ರೆ, ಎಲ್ಲದಕ್ಕೂ ಒಂದು ಮಿತಿ ಇದೆಯಲ್ಲಾ? ನಮ್ತಾಯಿ ಇದ್ದಾಗ ಉಗ್ಗಡಿಸಿದ್ದೂ ಉಗ್ಗಡಿಸಿದ್ದೇ– "ದಿನಾ ವಿಷ್ಣು ಸಹಸ್ರನಾಮಾನ ಹೇಳ್ತೀದೀನಿ ಅದಕ್ಕೆ ಭೂತ ನನ್ನ ಹತ್ರಾನೇ ಬರೋಲ್ಲ" ಅಂತ... ಆದರೇನಾಯ್ತು? ಒಂದು ರಾತ್ರಿ ಮಲಗಿದ್ದಾಗ, ಅವರ ಕುತ್ತಿಗೆಗೇ ಕೈ ಹಾಕಿಬಿಡೋದೇ ಭೂತರಾಕ್ಷಸ? ಸ್ವಲ್ಪದರಲ್ಲಿ ಪ್ರಾಣ ತೆಗೆದುಬಿಡ್ತಿತ್ತು! ಆವತ್ತಿನಿಂದ ಆಳುಕಾಳು ಡ್ರೈವರ್ ದೋಭಿ ಕುಕ್ಕ, ಸಮಸ್ತರೂ ಪರಾರಿ! ಊರಿನ ಯಾರೊಬ್ಬರಿಗೂ ಮನೆ ಒಳಕ್ಕೆ ಕಾಲಿಡೋದಿಕ್ಕೇ ಅಂಜಿಕೆ! "ಇಲ್ಲಿ ನೋಡ್ದೆ– ಅಲ್ಲಿ ನೋಡ್ದೆ! ಹೀಗೆ ಮಾಡ್ತು–ಹಾಗೆ ಮಾಡ್ತು!" ಎಂದು ಪ್ರತಿಯೊಬ್ಬರೂ ಕಥೆ ಹೇಳೋವ್ರೆ ಆದರು. ವಿಧಿಯಿಲ್ಲದೆ ಈ ನಮ್ಮ ಪಿತ್ರಾರ್ಜಿತ ಆಸ್ತಿಯನ್ನ ಬಿಟ್ಟು ಬೇರೆ ಮನೆಗೆ ಹೋಗಬೇಕಾಯ್ತು... ಏನ್ಮಾಡೋದು ಹೇಳಿ? ಯಾವುದೋ ಹಿರಿಯರ ದೆವ್ವಾನಂತೆ ಅದೇ ಇದ್ದುಕೊಳ್ಳಲಿ ಎಂದು ಹೊರಟುಬಿಟ್ಟೆವು. ಆವತ್ತಿನಿಂದ ಈವರೆಗೂ ಮನೆಗೆ ಬೀಗ ಹಾಕಿಟ್ಟಿದೀನಿ... ಒಂದು ನರಪಿಳ್ಳೆ ಸಹ ಈ ಮನೆ ಹತ್ರ ಬರೋಲ್ಲ... ಇರಲ್ಲ..."

ಆ ಮಾಲೀಕ ನೇರವಾಗಿ ಇಷ್ಟೆಲ್ಲಾ ಹೇಳಿದರೂ, ಮಹದೇವನ್ ವಿಚಲಿತನಾಗಲಿಲ್ಲ.

ಆತನಿಗೆ ಈ ದೆವ್ವ– ಭೂತ ಪ್ರೇತ– ಪಿಶಾಚಿ ಇವುಗಳಲ್ಲಿ ನಂಬಿಕೆ ಇರಲಿಲ್ಲ. ಎಲ್ಲಾ ಮನುಷ್ಯನ ದುರ್ಬಲ ಮನಸ್ಸಿನ ಫಲ– ಬರೀ ಚಿತ್ತಭ್ರಮೆ, ಎಂತಲೇ ಭಾವನೆ.

ಅಂತೆಯೇ, ಈಗ ಕೇಳಿದ್ದೆಲ್ಲಾ ಯಾವುದೂ ತಲೆಗೆ ಹೋಗಲಿಲ್ಲ.

"ನೀವೇನೇ ಹೇಳಿ, ನಾನೀ ಬಂಗಲೆಯನ್ನ ಕೊಳ್ಳುವವನೇ... ಅದರಲ್ಲಿರೋ ಹಳೆಯ ಫರ್ನಿಚರ್ ಸಮೇತ. ಇಷ್ಟರ ಮಟ್ಟಿಗೆ ಆ ಭೂತದ ಪರಿಚಯಾನ ಮಾಡಿಸಿದ್ದಕ್ಕೆ ಥ್ಯಾಂಕ್ಸ್... ನಾನು ಅದನ್ನ ಹೆದರಿಸಿ ಓಡಿಸಿಬಿಡ್ತೀನಿ..." ಎಂದಾತ ಒಂದೇ ದೃಢ ಮನಸ್ಸಿನಿಂದ ಹೇಳಿಬಿಟ್ಟಾಗ, ಆ ಮನೆಯ ಮಾಲೀಕನಿಗೆ ಆಶ್ಚರ್ಯಕ್ಕಿಂತ ಸಂತಸ!

ತುಂಬು ಭಕ್ತಿಯಿಂದ ನಿತ್ಯವೂ ಪೂಜಿಸುತ್ತಿದ್ದ ತನ್ನ ಮನೆಯ ದೇವರೇ ಇಳಿದು ಬಂದು ತನಗೆ ಹೀಗೊಂದು ಅದ್ಭುತ ಸಹಾಯವನ್ನು ಮಾಡುತ್ತಿದ್ದಾನೆ, ಎಂಬ ಭಾವನೆ...

ತನ್ನ ಸ್ವಂತ ಲಾಭವನ್ನು ಮರೆತು, ಜಾಸ್ತಿ ಮಾತನಾಡಿಬಿಟ್ಟೆನೋ, ಎಂದನ್ನಿಸಿದರೂ, ಕೊನೆಯದಾಗಿ ಒಂದು ಮಾತನ್ನು ಹೇಳುವುದು ತನ್ನ ಧರ್ಮವೆಂದುಕೊಂಡು ತಿಳಿಸಿದ– "ಸುಮಾರು ಮುನ್ನೂರು

ನಾನ್ನೂರು ವರ್ಷಗಳಿಂದ ಇಲ್ಲಿ ಜಾಂಡಾ ಹಾಕಿರೋ ದೆವ್ವ—ಅಷ್ಟು ಸುಲಭವಾಗಿ ಹೋಗಲ್ಲ. ನಿಮ್ಮ ಹುಶಾರಲ್ಲಿ ನೀವಿರೋದು ಕ್ಷೇಮ– ಮತ್ತು, ಇನ್ನೊಂದು ಸಂಗತಿ... ಮನೆಯವರು ಯಾರಾದರೂ ಸಾಯೋ ಹೊತ್ತಲ್ಲಿ ಅದು ಕಣ್ಣಿಗೆ ಬೀಳುತ್ತೆ ಅಂತ ಪ್ರತೀತಿ..."

"ಹೌದೇ? ನಮ್ಮ ಮನೆ ಡಾಕ್ಟರ್ ಸಹ ಆ ಹೊತ್ತಲ್ಲಿ ಕಾಣಿಸಿಕೋತಾನೆ" ಮಹದೇವನ್ ನಗೆಯಾಡಿದಾಗ, ಮಾಲೀಕನಿಗೆ ಮುಂದೇನು ಹೇಳಬೇಕೋ ತೋಚಲಿಲ್ಲ.

"ಸರಿ ಬಿಡಿ, ಏನಾರ ಅನಾಹುತ ಆದಲ್ಲಿ ನನ್ನನ್ನ ಮಾತ್ರ ಅನ್ನಬೇಡಿ... ಆ ದೇವರೇ ನಿಮ್ಮನ್ನ ಕಾಪಾಡಬೇಕು" —ಎಂದವರೇ, ಬಂಗಲೆಯ ಬೀಗದ ಕೈಯನ್ನು ಕೊಟ್ಟು, ಕೈ ತೊಳೆದುಕೊಂಡರು.

ಶುಭ ದಿನ ಶುಭ ಮುಹೂರ್ತ ನೋಡಿ, ಮಹದೇವನ್ ಮನೆಯವರು ಬಂದಿಳಿದರು. ಅಂದು, ಊರಿಗೆ ಊರೇ ಒಳ್ಳೆ ಸಂತೆಯಂತೆ ನೆರೆದು, ಆ ಸಾಹಸಿಗರನ್ನು ವೀಕ್ಷಿಸಿತು. ಹಿಮಾಲಯ ಪರ್ವತವನ್ನು ಹತ್ತುತ್ತಿರುವ ವೀರನಂತೆ ಮಹದೇವನ್ ಅವರೆಲ್ಲರಿಗೂ ಕೈ ಬೀಸಿದನು.

ಬಿಸಿಲಲ್ಲಿ ನಿಂತಿದ್ದ ಅವರೆಲ್ಲರಿಗೂ ಪಾನಕ, ಕೋಸಂಬರಿ ಸಂತರ್ಪಣೆ ಮಾಡಿಸಿದರು. ಒಳಗಿನ ದೆವ್ವದ ಸಮಾಚಾರ ಹೇಗೋ, ಹೊರಗಡೆ ನಿಂತಿದ್ದ ಈ ದೆವ್ವಗಳಿಗಂತೂ ಶಾಂತಿಯಾಯಿತು.

'ದೀರ್ಘಾಯುಷ್ಮಾನ್ ಭವ' ಎಂದು ಆಶೀರ್ವದಿಸಿ, ಚದುರಿದರು. ಆಳು ಕಾಳುಗಳನ್ನ ಬಿಟ್ಟು, ಬಂದಿಳಿದವರು ತೀರಾ ನಾಲ್ಕೈದೇ ಜನ– ಚಿಕ್ಕದೂ ಅಲ್ಲ, ದೊಡ್ಡದೂ ಅಲ್ಲ, ಅಂಥಾ ಸಂಸಾರ. ನಾಲ್ಕು ಮಕ್ಕಳು ಒಬ್ಬ ಹೆಂಡತಿ: ಹೆಂಡತಿ ಒಂದಾನೊಂದು ಕಾಲದಲ್ಲಿ ಮಾಡೆಲಿಂಗ್ ಮಾಡುತ್ತಿದ್ದವಳು ಈ ಮಧ್ಯಮ ವಯಸ್ಸಿನಲ್ಲೂ ಬಲು ಸುಂದರವಾಗಿದ್ದಳು: ತನ್ನ ಮೈ ಕಟ್ಟನ್ನು ಮಾಟವಾಗಿಯೇ ಇಟ್ಟುಕೊಂಡಿದ್ದಳು.

ಹಾಗೆಂದು, ಎಂಥಾದ್ದೂ ಡಯೆಟ್ ಮಾಡುತ್ತಿರಲಿಲ್ಲ. ಹಾಯಾಗಿ, ಬೇಕು ಬೇಕಾದಾಗ ರುಚಿ ರುಚಿಯಾದ ಊಟ ತಿಂಡಿ ಸೊಗಸಾದ ವೇಷ ಭೂಷಣ, ಇವುಗಳಲ್ಲಿ ಈಗಿಗ ಬಹಳವೇ ಆಸಕ್ತಿ. ದೇವರು ಕೈ ತುಂಬಾ ಕೊಟ್ಟಿರುವಾಗ, ಯಾಕೆ ತಾನೆ ಹಿಂಜರಿಯಬೇಕು– ಜಾರಿ ಹೋಗುತ್ತಿರುವ ಯೌವನವನ್ನ

ಅಂತರ



ವಿವಾಹ ಪೂರ್ವದ ಮೊಗದ
ಮದಂಹಾಸ
ವಿವಾಹೋತ್ತರದಲಿ ಆಗುತ್ತದೆ
ಇತಿಹಾಸ!

—ಎಚ್ ವಿಶಾಲಾಕ್ಷಿ

ಏಕೆ ಸವಿಯಬಾರದು ಪೂರ್ತಿಯಾಗಿ?– ಎಂಬ ಧೋರಣೆ.

ಅಲ್ಲದೆ, ಒಂದಾನೊಂದು ಕಾಲದಲ್ಲಿ ಅಲ್ಪಸ್ವಲ್ಪ ನೃತ್ಯವನ್ನು ಮಾಡುತ್ತಿದ್ದಳು, ಈಗೀಗ ಕೋಣೆಯ ಬಾಗಿಲನ್ನು ಹಾಕಿಕೊಂಡು, ಬೆಳಗಾಗುತ್ತಲೂ ಏನೇನೋ ಸರ್ಕಸ್ ಮಾಡುತ್ತಿದ್ದಳು. (ಗಂಡನ ಭಾಷೆಯಲ್ಲಿ).

"ನೀನೂ ಮಾಡು ಡ್ಯಾಡಿ– ಆಗ ನಿನ್ನ ಈ ಬೊಜ್ಜು ಇಳಿಯುತ್ತೆ"– ಅಂತ ಮಗ ತಂದೆಯನ್ನು ತಮಾಷೆ ಮಾಡುತ್ತಿದ್ದ.

ಸೂರ್ಯ ಏಳುವುದಕ್ಕೂ ಮುಂಚೆಯೇ ಪೈಪೋಟಿಯಂತೆ ಜಾಗಿಂಗ್ ಹೊರಡುತ್ತಿದ್ದರು ಅವರು.

ಮಗ ಸೋಮಾರಿ. ಅಪ್ಪ ಎಷ್ಟು ಕರೆದರೂ ಜೊತೇಲಿ ಹೋಗದೆ, ಹಾಯಾಗಿ ಬೆಳಿಗ್ಗೆ ಹತ್ತು ಗಂಟೆಯವರೆಗೂ ಮಲಗಿರುತ್ತಿದ್ದ– ಹೊತ್ತಿಲ್ಲ ಗೊತ್ತಿಲ್ಲ, ಟೇಪ್‌ರೆಕಾರ್ಡರ್ ಹಾಕಿ ಮೈಕೆಲ್ ಜ್ಯಾಕ್ಸನ್ ಅಭಿನಯ ಮಾಡುತ್ತಿದ್ದ. ಇದು ಅವನ ತಂಗಿಗೆ ತಲೆ ನೋವು.

ಮುದ್ದುಮಗ–ಮುದ್ದು ಮಗಳು. ಯಾರ ಪರ ವಕಾಲತ್ತು ವಹಿಸುವುದು, ತಂದೆ ತಾಯಿ?

ಏಕ ಮಾತ್ರ ಪುತ್ರ ಎಂದು ತಾಯಿಗೆ ಆ ಕಡೆ ತಕ್ಕಡಿ ಸ್ವಲ್ಪ ಜಾಸ್ತಿ– ಏಕಮಾತ್ರ ಪುತ್ರಿ ಎಂದು ತಂದೆಗೆ ಈ ಕಡೆ ಗುಲಗಂಜಿಯಷ್ಟು ಹೆಚ್ಚು...

ಅಲ್ಪಸ್ವಲ್ಪ ಘರ್ಷಣೆ ಅವರಿಬ್ಬರಲ್ಲಿ, ಮಕ್ಕಳಿಂದಾಗಿ. ಆದರೆ ಮಕ್ಕಳು ಮಾತ್ರ ಒಟ್ಟು ಮೇಲೆ ಅನ್ಯೋನ್ಯ...

ಮಗಳು ಕಾವ್ಯಾಳಿಗೆ ಕೇವಲ ಹದಿನೈದು ವರ್ಷ ಅಷ್ಟೆ. ಅವಳಿಗೆ ಜೊತೆಯಾಗಿರಲಿ ಎಂದು, ತಮ್ಮ ತಮ್ಮನ ಮಕ್ಕಳಿಬ್ಬರನ್ನು ಕರೆತಂದಿದ್ದರು ಮಹದೇವನ್– ವಿದ್ಯಾಭ್ಯಾಸದ ನೆಪದಲ್ಲಿ.

ಬಲೇ ತುಂಟ ಹುಡುಗರು– ಅವಳಿ ಜವಳಿ ಮಕ್ಕಳು.

ಹೀಗಾಗಿ, ಮನೆಯಲ್ಲಿ ಸದಾ ಗಲಾಟೆ– ಮನೆಯ ತುಂಬಾ ಜನ...

ಆ ಮನೆಯ ಹೆಸರು "ವೈಭವೀ!" ಮತ್ತು ಆ ಭೂತದತ ಹೆಸರು –"ವೈಭವೀ ಭೂತ!"

* * *

ಮಹದೇವನ್ ಹತ್ತಿರ ಒಂದು ಹಳೆಯ ವ್ಯಾನ್ ಇತ್ತು: ತಾತ ಮುತ್ತಾತಂದಿರ ಬಳುವಳಿಯಂತಿತ್ತು. ಆದರೆ ನಿಜಕ್ಕೂ ಅದು ಅವರಿಗೆ ಮದುವೆಯಲ್ಲಿ ಬಂದ ವರದಕ್ಷಿಣೆ. ತುಂಬು ಸಂಭ್ರಮದಿಂದ ವರಪೂಜೆಯನ್ನು ಅದರಲ್ಲೇ ಮಾಡಿಸಿದ್ದರು, ಹೆಣ್ಣು ಕೊಟ್ಟ ಮಾವ. ಆ ವ್ಯಾನ್‌ನ ಒಂದು ಅಂಗವೂ ಕಾಣದಂತೆ ಘಮ ಘಮ ಮೈಸೂರು ಮಲ್ಲಿಗೆಯಿಂದ ಅಲಂಕರಿಸಿದ್ದರು.

ಅಂತೆಯೇ ಆ ವಾಹನದ ಐಬೆಲ್ಲಾ ಮುಚ್ಚಿ ಹೋಗಿತ್ತು. ಅಲ್ಲದೆ, ಅದರ ಮೇಲೆ ಒಂದು ಬಗೆಯ ಪ್ರೀತಿಯೂ ಬೆಳೆದಿತ್ತು, ಅಳಿಯನಿಗೆ.

"ವ್ಯಾನ್ ಅಳಿಯ" ಎಂತಲೇ ಹೆಸರು ಮಹದೇವನ್‌ರವರಿಗೆ, ಅವರ ಊರಲ್ಲಿ.

ಆ ಬಿರುದನ್ನು ಶಾಶ್ವತವಾಗಿ ಕಾಪಾಡಿಕೊಳ್ಳಬೇಕೆಂದೋ, ಇಲ್ಲ ವರಪೂಜೆಯ ಜ್ಞಾಪಕಾರ್ಥವಾಗಿಯೋ, ಇಂದಿಗೂ ಆ ಓಬಿರಾಯನ ರಥವನ್ನೇ ಉಪಯೋಗಿಸುತ್ತಿದ್ದರು, ಮಹದೇವನ್...

"ನಂಗ ಬೇಜಾರಾಗಿದೆ ಅದನ್ನ ನೋಡೀ ನೋಡೀ– ಒಳಗಡೆ ಕೂತರೆ ಮೈಕೈಯೆಲ್ಲಾ ನೋವತ್ತೆ. ಬಂದಷ್ಟು ಬೆಲೆಗೆ ಅದನ್ನ ಕೊಟ್ಟುಬಿಟ್ಟು ಒಳ್ಳೇ ಮಾಡರನ್ ಫಾರಿನ್ ಕಾರನ್ನ ತೊಗೊಳ್ಳೋಣ"– ಎಂಬ, ಹೆಂಡತಿಯ ಯಾವ ಸಲಹೆ–ಬೇಡಿಕೆಯನ್ನೂ ಕಿವಿಗೆ ಹಾಕಿಕೊಳ್ಳದೆ...

ಅಂತೆಯೇ ಈಗ ಅದರಲ್ಲೇ ಹೊರಟಿದ್ದರು, ಕುಟುಂಬ ಸಮೇತ – ನೆಚ್ಚಿನ ಆಳುಕಾಳುಗಳನ್ನೂ ತುಂಬಿಕೊಂಡು. ಮಕ್ಕಳ ಮುದ್ದು ನಾಯಿ– ಪತ್ನಿಯ ಮುದ್ದು ಬೆಕ್ಕು, ಇವೂ ಹೊರಟಿದ್ದವು ಹೊಸ ಊರಿಗೆ–ಹೊಸ ಮನೆಗೆ. ಮುಂಗಡವಾಗಿ ರವಾನೆಯಾಗಿತ್ತು.

ಅದೊಂದು ಸುಂದರವಾದ ಸಂಜೆ: ದೇವದಾರು ಮರಗಳ ಪರಿಮಳದಿಂದ ತಂಗಾಳಿಯು ಇಂಪಾಗಿತ್ತು. ಆಗೊಮ್ಮೆ ಈಗೊಮ್ಮೆ ಕಾಡು ಪಾರಿವಾರಗಳ ಮಧುರ ಕಂಠ, ಮರ ಮರ ಶಬ್ದ ಸುತ್ತಿದ್ದ ತರುಲತೆಗಳಲ್ಲಿ ಫಳ ಫಳ ಹೊಳೆಯುವ ರೆಕ್ಕೆಗಳು... ಎಲ್ಲೆಲ್ಲೂ ಹೊಂಗೆ ಮರಗಳು... ತಂಪಾದ ನೆರಳು. ಕಾರಿನ ಶಬ್ದವನ್ನು ಕೇಳಿದೊಡನೆಯೇ ಪುಟ್ಟ ಪುಟ್ಟ ಅಳಿಲುಗಳು ಮರಗಿಡಗಳ ಆಶ್ರಯಕ್ಕೆ ಓಡಿದವು— ರೆಂಬೆಗಳ ಸಂದಿನಿಂದ ಇಣಿಕಿ ಇಣಿಕಿ ನೋಡುತ್ತಿದ್ದವು, ಪಿಳಿ ಪಿಳಿ ಕಣ್ಣುಗಳನ್ನೂ ಬಿಟ್ಟುಕೊಂಡು.

ಅಲ್ಲಲ್ಲಿ ಸುಂದರ ಮೊಲಗಳು ಬೇರೆ... ಅವನ್ನು ಕಂಡು ಮಕ್ಕಳಿಗೆ ಒಂದೇ ಸಂತಸ! ಕಾರನ್ನು ನಿಲ್ಲಿಸಿ ಕರೆದವು— ಒಂದನ್ನಾದರೂ ಎತ್ತಿಕೊಂಡು ಹೋಗಿ ಮುದ್ದು ಪ್ರಾಣಿಯಾಗಿ ಪಾಲಿಸಬೇಕೆಂದು...

ಆದರೆ, ಅವು ಕೈಗೆ ಸಿಗಬೇಕಲ್ಲಾ? ಮಕ್ಕಳೊಡನೆ ಜೂಜಾಟ ಆಡಿದವು... ತಮ್ಮ ಶ್ವೇತ ಬಾಲಗಳನ್ನು ಒಯ್ಯಾರದಿಂದ ಗಾಳಿಯಲ್ಲಿ ಅಲ್ಲಾಡಿಸುತ್ತ ಪಾಚಿಮಯ ದಿನ್ನೆಗಳ ಮೇಲೆ ಮುಳ್ಳುಕಂಟೆ ಪೊದೆಗಳ ನಡುವೆ, ಪಲಾಯನ ಮಾಡಿದವು.

"ಬಲೇ ಕೆಟ್ಟ ಮೊಲಗಳು"— ಮಕ್ಕಳು ನಿರಾಶೆಯಿಂದ ಮುಖ ದಪ್ಪ ಮಾಡಿಕೊಂಡು ಕೂತವು ಕಾರಲ್ಲಿ. ದೊಡ್ಡವರು ನಕ್ಕರು.

ನಗುತ್ತಲೇ ವೈಭವೀ ಬಂಗಲೆಯ ಪರಿಸರವನ್ನು ಸಮೀಪಿಸಿದರು.

ಆದರೆ, ಅವರುಗಳಿಗೇ ತಿಳಿಯದಂತೆ ಆ ನಗು ಮಾಯವಾಯಿತು.

ವಿಚಿತ್ರ ತರಹೆಯ ಸ್ತಬ್ಧತೆಯೊಂದು ಎಲ್ಲೆಡೆಯೂ ವ್ಯಾಪಿಸಿತ್ತು.

ನಿರ್ಮಲವಾಗಿದ್ದ ಆಗಸದಲ್ಲಿ ಕರಿಯ ಮೋಡಗಳು ಕಾಣಿಸಿಕೊಂಡವು— ಹಠಾತ್ತನೆ!

ಏನೋ ಒಂದು ರೀತಿಯ ಕೆಟ್ಟ ಚಳಿ!

ತಲೆಗಳ ಮೇಲೆ ನಿಶ್ಶಬ್ದವಾಗಿ ಹಾರಿ ಹೋಯಿತು. ಕಾಗೆಗಳ ಸಾಲು ಬೃಹತ್ ಸಾಲು...

ಮನೆ ಸೇರುವ ವೇಳೆಗೆ ಆನೆಕಲ್ಲಿನಷ್ಟು ದೊಡ್ಡ ಮಳೆ ಹನಿಗಳು ಬೀಳಲಾರಂಭಿಸಿದ್ದವು.

ಬಂದವರನ್ನು ಸ್ವಾಗತಿಸಲು, ವಯಸ್ಸಾದ ಹೆಂಗಸೊಬ್ಬಳು ಮೆಟ್ಟಿಲುಗಳ ಮೇಲೆ ನಿಂತಿದ್ದಳು.

ಕರಿಯ ಉಡುಪನ್ನು ಧರಿಸಿದ್ದಳು. ಆಕೆ ನಾಗಮ್ಮ— ಆ ಮನೆಯೊಂದಿಗೆ ಬಂದ ಬಳುವಳಿ.

"ಬಲೇ ಪ್ರಾಮಾಣಿಕ ಹೆಂಗಸು. ಇಲ್ಲೇ ಬಹು ಕಾಲದಿಂದ ಇದ್ದೂ ಇದ್ದೂ ಇದ್ದುದರಿಂದಲೇ ತನ್ನದೇ ಈ ಬಂಗಲೆ ಎಂಬ ಭಾವನೆ ಆಕೆಗೆ. ಆಳುಕಾಳುಗಳಿಂದ ಹಿಡಿದು, ಪ್ರತಿಯೊಂದು ಮೇಲ್ವಿಚಾರಣೆಯನ್ನೂ ಚೆನ್ನಾಗಿ ನೋಡಿಕೋತಾರೆ— ಆಕೆ ಇದ್ದುಬಿಟ್ಟರೆ, ನಿಮಗೆ ಯಾವ ತಲೆ ನೋವೂ ಇರೋದಿಲ್ಲ—" ಹಿಂದಿನ ಮಾಲೀಕರು ಶಿಫಾರಸು ಮಾಡಿದ್ದರು.

ಸೋಮ ನಾಯಕಿ— ಮಹದೇವನ್‌ರವರ ಧರ್ಮಪತ್ನಿ, ಅವರಿಗೂ ಇದೇ ಬೇಕಾಗಿದ್ದುದು. ಹೊಸ ಜಾಗ, ಹೊಸ ಮನೆ, ಹೊಸ ಆಳುಕಾಳುಗಳು, ಹೇಗೋ ಏನೋ, ಎಂದು ಸ್ವಲ್ಪ ಅಳುಕು ಇದ್ದೇ ಇತ್ತು. ನಾಗಮ್ಮನಂಥವರು ಸಿಕ್ಕಿರುವುದು ಧೈರ್ಯ ತಂದಿತು.

"ಬಲಗಾಲನ್ನ ಮುಂದಿಟ್ಟು ಒಳ ಬನ್ನಿ."

ಬಿಗಿ ಮುಖದಿಂದಲೇ ಸ್ವಾಗತ ಕೋರಿದರು ನಾಗಮ್ಮ.

ಧ್ವನಿ ನಿರ್ವಿಕಾರವಾಗಿತ್ತು; ಆದರೆ, ಅಷ್ಟರಮಟ್ಟಿಗೆ ಹೇಳಿದ್ದು ಹಿತವಾಗಿತ್ತು ಬಂದವರಿಗೆ.

ಮನಸ್ಸನ್ನು ಒಮ್ಮೆಲೆ ಕವಿದಿದ್ದ ದುಗುಡ ಕರಗಿತು.

ಅಲ್ಲದೆ ಬಂಗಲೆ ಮಜಭೂತಾಗಿತ್ತು.: ಒಳ್ಳೇ ಅರಮನೆಯಂತಿತ್ತು!

ಅರಸು ಮಕ್ಕಳಂತೆ ಪ್ರವೇಶಿಸಿತು ಪರಿವಾರ. ಕುತೂಹಲದಿಂದ ಎಲ್ಲೆಡೆಯೂ ಒಂದು ರೌಂಡ್ ಹಾಕಿತು. "ಅಬ್ಬಾ, ಎಷ್ಟೊಂದು ಕೋಣೆಗಳು!" ಒಂದಕ್ಕಿಂತ ಒಂದು ವಿಶಾಲವಾದದ್ದು—ಮತ್ತು, ಒಂದರ ಒಳಗೊಂದು. ಎಲ್ಲಿ ತಿರುಗಬೇಕೋ, ಹೇಗೆ ಹೊರಬರಬೇಕೋ, ತಿಳಿಯಲೊಲ್ಲದು. ಇಲ್ಲಿ ಹೇಗೆ ತಾನೆ ವಾಸಿಸುವುದು? ಮಕ್ಕಳು ದಿಗ್ಭ್ರಮೆಯಿಂದ ಒಬ್ಬರ ಮುಖ ಒಬ್ಬರು ನೋಡಿದರು.

ಹೆಮ್ಮೆಯಿಂದ ನಕ್ಕರು, ಮಹದೇವನ್.

ಬಿಸಿ ಬಿಸಿ ಇಡ್ಲಿ, ಚಟ್ನಿ, ಘಮ ಘಮಿಸುವ ಕೇಸರಿ ಭಾತು, ಹಿತವಾದ ಕಾಫಿ, ಪ್ರತ್ಯಕ್ಷವಾದವು. ಡ್ರೆಸಿಂಗ್ ಟೇಬಲ್‌ನ ಮೇಲೆ.

ತುಂಬಾ ಹಸಿವಾಗಿತ್ತು ಎಲ್ಲರಿಗೂ; ಹತ್ತು ನಿಮಿಷದಲ್ಲಿ ಖಾಲಿ ಮಾಡಿದರು.

"ಈ ನಾಗಮ್ಮ ಬಹಳ ಒಳ್ಳೆಯವರು; ಇಲ್ಲೇ ಇರಲಿ ಖಾಯಂ ಪರ್ಮನೆಂಟಾಗಿ"–ಮಕ್ಕಳು ಶಿಫಾರಸು ಮಾಡಿದವು. ಸೋಮನಾಯಕಿ ಒಪ್ಪಿದರು.

ಪಠಾತ್ತನೆ ಆಕೆಯ ಜ್ಞಾನ ನೆಲದ ಮೇಲೆ ಹೋಯಿತು. ಅರೆ, ಆ ಕ್ರೂರ ಕಲೆ ಏನು!

"ಅಲ್ಲಿ ಏನೋ ಚೆಲ್ಲಿದಂತಿದೆ... ಒರಸಲಿಲ್ಲವೇ?"–ಸೋಮನಾಯಕಿ ತೋರಿಸಿದರು ನಾಗಮ್ಮನಿಗೆ.

"ಹೌದಮ್ಮ"– ನಾಗಮ್ಮ ಪಿಸುಗುಟ್ಟಿದರು– "ಬಹಳ ವರ್ಷಗಳ ಕಲೆ– ರಕ್ತ ಚೆಲ್ಲಿದ ಕಲೆ– ಅದು...?

"ಅಯ್ಯಬ್ಬಾ!"– ಸೋಮನಾಯಕಿ ಮುಖ ಕಿವುಚಿದರು. "ನನ್ನ ಕೈಲಿ ನೋಡೋಕ್ಕಾಗಲ್ಲಾಪ್ಪಾ– ರಕ್ತದ ಕಲೇನ! ಈಗಲೇ ಒರೆಸಿಬಿಡಿ...

ನಾಗಮ್ಮ ಒಂದು ತರಹವಾಗಿ ನಕ್ಕರು– ತಿಳಿಸಿದರು, ಅದೇ ಕೆಳದನಿಯಲ್ಲಿ– "1690ನೆಯ ಇಸವಿಯಲ್ಲಿ ಇಲ್ಲಿ ಭಾರಿ ಶ್ರೀಮಂತ ದಂಪತಿಗಳು ಇದ್ದರಂತೆ. ಆಕೆಯ ಹೆಸರು ವೈಭವಿ– ಆತನ ಹೆಸರು ಆದಿಶೇಷ. ಅದೇನಾಯಿತೋ ಏನೋ, ಆದಿಶೇಷ ತನ್ನ ಹೆಂಡತಿಯ ಕೊಲೆ ಮಾಡಿಬಿಟ್ಟ– ಹಾಗೆಂದು ಕಥೆ. ಅದಾದ ಕೆಲವು ದಿವಸಕ್ಕೆಲ್ಲಾ ಆದಿಶೇಷ ಮಾಯವಾಗಿಬಿಟ್ಟನಂತೆ, ಇದ್ದಕ್ಕಿದ್ದಂತೆಯೇ! ಅವನದೂ ಕೊಲೆಯೋ ಏನಾದರೂ ಆಗಿರಬೇಕು. ಯಾಕೆಂದರೆ ಅವನ ಆತ್ಮ ಭೂತವಾಗಿ ಇನ್ನೂ ಮೂಸ್ನೂ ಕಾಡ್ತಿದೆ– ಈ ನಮ್ಮ ಬಂಗಲೇನ..." ಒಂದು ಬಗೆಯ ಭಯಾನಕ ಮೌನ ಆವರಿಸಿತು...

"ಈ ರಕ್ತದ ಕಲೆ ಆಕೆಯದು– ಆ ವೈಭವಿ ದೇವಿಯದ್ದು. ಮತ್ತು, ಇನ್ನೂ ಒಂದು ವಿಷಯ ಅವರ ಗಂಡ ಆದಿಶೇಷನ ಹೆಣ ಸಿಗಲೇ ಇಲ್ಲ, ಯಾರಿಗೂವೆ! ಭೂತ ಮಾತ್ರ ಕಾಣಿಸಿಕೊಂಡಿದೆ, ಅನೇಕರಿಗೆ..." ನಾಗಮ್ಮ ಹೇಳಿ ಮುಗಿಸಿದರು.

"ಅದಕ್ಕೇನಾ ಈ ನಮ್ಮ ಅರಮನೆಗೆ ಇಂಥಾ ಮಜಭೂತಾದ ಬಿರುದು– 'ವೈಭವಿ' ಎಂದು! ಯೋಚನೆ ಮಾಡ್ಬೇಡಿ. ಆ ಆದಿಶೇಷನ ಭೂತಾನ ನಾನು ಕ್ಷಣಮಾತ್ರದಲ್ಲಿ ಹೊರಗೋಡಿಸಿಬಿಡ್ತೇನೆ– ವಿಷ್ಣುದ್ರೂ. ನನ್ನ ಹೆಸರು ವಿಷ್ಣು ಅಲ್ಲವೇ?" ಮಹದೇವನ್‌ರವರ ಹಿರಿಯ ಮಗ ನಗೆಯಾಡಿದನು.

ಅವನ ಹೆಸರು ವಿಷ್ಣುಕುಮಾರ್. ಹಿರಿಯರು ಇಟ್ಟಿದ್ದು ಬರೀ ವಿಷ್ಣು ಎಂತಲೇ. ಆದರೆ, ನಟನಾಗುವ ಕನಸು ಕಾಣುತ್ತಿದ್ದ. ಆ ಚಿಗುರು ಮೀಸೆಯ ಯುವಕ, ಎಂದಾದರೂ ಸಿನಿಮಾಗೆ ಸೇರಿದರೆ ಇರಲಿ, ಎಂದು ಸಿನಿಮಾ– ಪಾಸ್‌ಪೋರ್ಟ್‌ನಂತಿದ್ದ ಈ 'ಕುಮಾರ್' ಎಂಬ ಪದವನ್ನೂ ತಾನಾಗಿ ಸೇರಿಸಿಕೊಂಡಿದ್ದನು.

"ಹಾಗೆಲ್ಲಾ ಹೇಳಬೇಡಿ ಚಿಕ್ಕ ಯಜಮಾನರೇ..." ನಾಗಮ್ಮ ಎಚ್ಚರಿಸಿದರು– "ಭೂತ ಕೇಳಿಸಿಕೊಂಡುಬಿಟ್ರೆ ಕಷ್ಟ!"

ಪಕಪಕನೆ ನಕ್ಕುಬಿಟ್ಟನು, ಆ ಧೀರ.

ನಾಗಮ್ಮನ ಮುಖ ಕಪ್ಪಾಯಿತು.

"ಸದ್ಯಕ್ಕೆ ಈ ಕಲೆಯನ್ನು ಚೆನ್ನಾಗಿ ಒರೆಸಿಬಿಡಿ– ಭೂತದ ಪಾಡನ್ನು ಆಮೇಲೆ ನೋಡಿಕೊಳ್ಳೋಣ."

ಸೋಮನಾಯಕಿ ಅಪ್ಪಣೆ ಮಾಡಿದರು, ಅಸಹನೆಯಿಂದ.

"ಆ ಕಲೆ ಎಂದೂ ಹೋಗೋದಿಲ್ಲ ಅಮ್ಮ–ಅದನ್ನ ನೋಡಿ ಹೋಗಬೇಕೇಂದೇ ಊರೂರಿಂದ ಜನ ಬಂದಿದಾರೆ... ನನ್ಮಾತು ಕೇಳಿ ಅದರ ತಂಟೆಗೆ ಹೋಗ್ಬೇಡಿ!"

"ಯಾಕೆ ಹೋಗಲ್ಲ– ನಾನೂ ನೋಡ್ತೀನಿ... ಸ್ವಲ್ಪ ಸ್ಟೈನ್ ರಿಮೂವರ್ ಹಾಕಿ ಇಷ್ಟು ಉಜ್ಜಿದರೆ ಸಾಕು, ಹೇಳಹೆಸರಿಲ್ಲದಾಗತ್ತೆ– ನೋಡ್ಕೊಂದಿರಿ"– ಎಂದು ಹೇಳಿದವನೇ, ವಿಷ್ಣುಕುಮಾರ್ ಮಾಡಿಯೇಬಿಟ್ಟ ಆ ಕಾರ್ಯವನ್ನು...

ನಿಮಿಷ ಮಾತ್ರದಲ್ಲಿ ಆ ಕಲೆ ಮಾಯವಾಯಿತು.

"ನೋಡಿದಿರಾ ನೋಡಿದಿರಾ– ನಾನು ಹೇಳಲಿಲ್ವೇ? ಈಗೇನು ಹೇಳ್ತೀರಿ?"– ವಿಷ್ಣುಕುಮಾರ್ ಇನ್ನೂ ಹೇಳಿ ಮುಗಿಸಿಲ್ಲ, ಅಷ್ಟರಲ್ಲಿ ಆ ಕಲೆ ಮತ್ತೆ ಪ್ರತ್ಯಕ್ಷವಾಯಿತು– ಏನೂ ಆಗಿಲ್ಲದಂತೆ!

ಭಯಂಕರವಾದ ಮಿಂಚು ಕೋಣೆಯಲ್ಲಿ! ಎಲ್ಲರೂ ಬೆಚ್ಚಿ ಮೂರ್ಛೆ ಹೋಗುವಂತಹಾ ಗುಡುಗಿನ ಶಬ್ದ! ನಾಗಮ್ಮ ಮೂರ್ಛೆಯೇ ಹೋದರು.

ಜ್ಞಾನ ಬಂದೊಡನೆಯೇ ಎಚ್ಚರಿಸಿದರು...

"ಏನೋ ಅನಿಷ್ಟ ಆಗೋಹಾಗಿದೆ ಈ ಮನೇಲಿ... ನಾನು ಏನೇನೋ ಕಂಡುಬಿಟ್ಟಿದೀನಿ ಇಲ್ಲಿ... ದೇವರೇ ನಿಮ್ಮನ್ನ ಕಾಪಾಡಬೇಕು!"

* * *

ರಾತ್ರಿಯೆಲ್ಲಾ ಒಂದೇ ಮಳೆ– ಗುಡುಗು– ಸಿಡಿಲು! ಎಲ್ಲರ ಮನಸ್ಸಿನಲ್ಲೂ ಅದೇ ಪ್ರಶ್ನೆ– "ಪ್ರಕೃತಿಯ ಈ ವಿಕೋಪಕ್ಕೂ– ಆ ರಕ್ತದ ಕಲೆಗೂ ಸಂಬಂಧವಿದೆಯೇನು?"

ಅದು ಹೇಗಾದರೂ ಇರಲಿ, ಯಾರೂ ಅಷ್ಟಾಗಿ ಅಂಜಲಿಲ್ಲ.

"ನಮ್ಮನ್ನ ಬೆದರಿಸಿ ಈ ಬಂಗಲೆಯಿಂದ ಓಡಿಸಬೇಕೆಂದಿಯೇನೋ ವೈಭವಿಭೂತ! ಬದಲು, ನಾವೇ ಅದನ್ನ ಬೆದರಿಸಿ ಓಡಿಸಿದರಾಯ್ತು"– ಮಾತನಾಡಿಕೊಂಡರು, ಧೈರ್ಯ ಬರಿಸಿಕೊಂಡು.

ಮಹದೇವನ್‌ರವರ ತಮ್ಮನ ಮಕ್ಕಳಿಬ್ಬರಿಗಂತೂ ಬಲೇ ಖುಷಿ– ಹೀಗೊಂದು ದೆವ್ವ ಮನೆಯಲ್ಲಿರುವುದು!

ಅದನ್ನು ನೋಡಬೇಕೆಂದು ಕೋಣೆಯೆಲ್ಲಾ ಸುತ್ತಾಡಿದ್ದೂ ಸುತ್ತಾಡಿದ್ದೇ!

ತಮಟೆ– ಜಾಗಟೆಗಳನ್ನ ಬಾರಿಸಿದ್ದೂ ಬಾರಿಸಿದ್ದೇ! ಅವಿತುಕೊಂಡಿರುವ ಜಾಗದಿಂದ ಅದನ್ನ ಬೆದರಿಸಿ, ಹೊರಬರಿಸಲು. ಆ ದೆವ್ವದ ಕುತ್ತಿಗೆಗೆ ಕಟ್ಟಲು, ಮಜಭೂತಾದ ಗಂಟೆಯನ್ನೂ ಸಹ ತಂದಿದ್ದವು ಆ ತುಂಟ ಹುಡುಗರು.

ನ ಗಣ್ಯ

ನನ್ನವಳು
ಹೊಡೆಯುತ್ತಲೇ ಇರುತ್ತಾಳೆ
ಬಾಯಿಯ ಬ್ಯಾಟಿನಿಂದ
ಮಾತಿನ ಬೌಂಡರಿ-ಸಿಕ್ಸರ್‌ಗಳನ್ನು
ಅವಳಿಗ್ಯಾವ ಲೆಕ್ಕ?
ನನ್ನ ಒಂದು-ಎರಡು ರನ್ನು!

-ನೀ ಶ್ರೀಶೈಲ



ಇವೆಲ್ಲವನ್ನೂ ಅಸಮಾಧಾನದಿಂದ ವೀಕ್ಷಿಸುತ್ತಾ, ಮುಖ ದಪ್ಪಗೆ ಮಾಡಿಕೊಂಡು ತಿರುಗುತ್ತಿದ್ದರು ನಾಗಮ್ಮ. ಯಾರಿಗೂ ಬುದ್ಧಿವಾದ ಹೇಳಲು ಹೋಗಿರಲಿಲ್ಲ.

"ಇರಲಿ, ತಾನಾಗಿ ಗೊತ್ತಾಗತ್ತೆ– ನಮ್ಮ ದೆವ್ವ ಇವರುಗಳನ್ನ ಸುಮ್ಮನೆ ಬಿಡತ್ಯೇ? ಯಾರೊಬ್ಬರಿಗೂ ಬೆದರದೆ, ಅಷ್ಟೊಂದು ವರ್ಷಗಳಿಂದ ರಾಜಾರೋಷವಾಗಿ ಇಲ್ಲಿರುವ ಅದು ಆ ಪೋರರಿಗೇ ಅಂಜುವುದು? ಆಗಲಿ, ಇಷ್ಟರಲ್ಲೇ ಅನುಭವವಾಗತ್ತೆ"– ಮನಸ್ಸಿನಲ್ಲೇ ಹೇಳಿಕೊಳ್ಳುತ್ತಿದ್ದರು.

ಅದಕ್ಕೆ ಸರಿಯಾಗಿ ಆ ರಕ್ತ ಕಲೆಯದೇ ಒಂದು ದೊಡ್ಡ ವಿಚಿತ್ರ!

ಪ್ರತಿನಿತ್ಯ ಊರಲ್ಲಿರುವ ಡಿಟರ್‌ಜೆಂಟ್ಸ್ ಎಲ್ಲವನ್ನೂ ತರಿಸಿ, ಖುದ್ದಾಗಿ ಉಜ್ಜುವನು ವಿಷ್ಣುಕುಮಾರ್.

ಸಂಪೂರ್ಣವಾಗಿ ಮಾಯವಾದಂತೆ ನಾಟಕ ಆಡುವ ಅದು, ಮರುದಿನ ಬೆಳಿಗ್ಗೆ ಎಲ್ಲರೂ ಎದ್ದು– ಇಳಿದು ಬರುವ ವೇಳೆಗೆ ಪ್ರತ್ಯಕ್ಷವಾಗಿಬಿಡುತ್ತಿತ್ತು.

ಆಳುಕಾಳುಗಳ– ನಾಗಮ್ಮನ, ಅಥವಾ ಬೇರೆ ಯಾರದಾದರೂ ಚೇಷ್ಟೆಯೇನೋ ಎಂದು ಅನುಮಾನಿಸಿ, ಆ ಕೋಣೆಯ್ನು ಮಾತ್ರ ರಾತ್ರಿ ಬೀಗ ಹಾಕಿನೋಡಿಯೂ ಆಯಿತು.

ಆದರೂ ಬೆಳಿಗ್ಗೆ– ಆ ಕಲೆ ಪ್ರತ್ಯಕ್ಷ!

"ಹೌದು, ನಾಗಮ್ಮ ಹೇಳೋದು ನಿಜ! ಇದು ಆ ಭೂತದ ಕೆಲಸವೇ! ನಿಜಕ್ಕೂ ಒಂದು ಭೂತ ಇದೆ ಈ ಮನೇಲಿ"– ಮಹದೇವನ್ ಒಪ್ಪಿಕೊಂಡರು– "ಎಲ್ಲರೂ ಹೇಳಿದಾಗ ನಾನು ನಂಬಲಿಲ್ಲ. ಈ ಭೂತ–ಪಿಶಾಚಿಗಳ ಬಗ್ಗೆ ನಂಗೆ ಯಾವತ್ತೂ ನಂಬಿಕೆ ಇರಲಿಲ್ಲ."

"ಇದು– ಒಮ್ಮೆಲೇ ಕಾಣೆಯಾದ ಆ ಆದಿಶೇಷನ ಭೂತವೇ ಇರ್ಬೇಕು"– ಮಕ್ಕಳು ನಿರ್ಧರಿಸಿದರು– "ಆದರೆ, ಅದಕ್ಕೆ ಯಾಕೆ 'ವೈಭವೀ ಭೂತ' ಎಂಬ ಬಿರುದು? ಬದಲು, 'ಆದಿಶೇಷ ಭೂತ' ಎಂಬ ಹೆಸರಿರಬೇಕಿತ್ತಲ್ಲವೇ?"

"ಆದಿಶೇಷ ಭೂತ ಎಂಬ ಹೆಸರಿಗಿಂತ 'ವೈಭವಿ ಭೂತ' ಎಂಬ ಬಿರುದು ಇನ್ನೂ ಸೊಗಸಾಗಿದೆ– ಅದಕ್ಕೇ..."

ಕಾಮ್ಯಾ ತೀರ್ಪಿತ್ತಳು– "ಆ ಭೂತ ಯಾರ ಕಣ್ಣಿಗಾದ್ರೂ ಬಿದ್ದರೆ, ಅದನ್ನೇ ಕೇಳಬೇಕು ಮತ್ತೆ..."

ಭೂತಗಳ ಬಗ್ಗೆ ತಿಳಿದುಕೊಳ್ಳಲು, ಎಲ್ಲರೂ 'ಭೂತ ಕಥೆಗಳನ್ನ' ಓದತೊಡಗಿದರು.

ಸೈಕಿಕಲ್ ಸೊಸೈಟಿಗೆ ಸದಸ್ಯೆಯಾದಳು, ಸೋಮನಾಯಕಿ.

ಫಾರೆನ್ಸಿಕ್ ವಿಭಾಗಕ್ಕೆ ಫೋನ್ ಮಾಡಿ, ಪತ್ರ ವ್ಯವಹಾರ ಆರಂಭಿಸಿದರು ಮಹದೇವನ್. ಆ ಭೂತ ಎಲ್ಲಾದರೂ ಸಿಕ್ಕಿದರೆ ಅದರ ಬೆರಳ ಗುರುತನ್ನು ತೆಗೆದುಕೊಂಡು, ಪೊಲೀಸರಿಗೆ ಒಪ್ಪಿಸಿ, ತನಿಖೆ ಆರಂಭಿಸಲೂ ಸಿದ್ಧರಾದರು.

ಆದರೆ, ಆ ಭೂತವನ್ನು ಕೋರ್ಟಿನಲ್ಲಿ ಹಾಜರುಪಡಿಸುವುದು ಹೇಗೆ? ಅಪರಾಧಿ ಎಂದು ಪರಿಗಣಿಸಲ್ಪಟ್ಟಲ್ಲಿ, ಅದನ್ನ ಗಲ್ಲಿಗೇರಿಸುವುದು ಹೇಗೆ?

"ಭೂತ ಸಮಸ್ಯೆ" ಎಂಬ ಕಾದಂಬರಿಯನ್ನು ಬರೆಯಲಾರಂಭಿಸಿದಳು, ಕಾಮ್ಯಾ.

ಅದರಲ್ಲಿ ನಾಗಮ್ಮನೇ ಕಥಾನಾಯಕಿ.

ಭೂತ ಕಂಡೊಡನೆಯೇ ಅದಕ್ಕೊಂದು ದೊಡ್ಡ ಪಾರ್ಟೀ ಕೊಟ್ಟು ಎಲ್ಲರನ್ನೂ ಕರೆಯುವೆನೆಂದು ವಾಗ್ದಾನ ಮಾಡಿದನು– ವಿಷ್ಣುಕುಮಾರ್, ತನ್ನ ಪಟ್ಟಣದ ಸ್ನೇಹಿತರಿಗೆ.

ಅಂದೊಂದು ದಿನ– ರಾತ್ರಿ ಮಳೆ ಬರದೆ ಹಿತವಾಗಿತ್ತು. ಒಳ್ಳೆ ಬಿಸಿಲು–ಸಂಜೆ ಅದೇನು ತಂಪು!

ಎಲ್ಲರೂ ಸುತ್ತಾಡಿಕೊಂಡು ಬರಲು ಕಾರನ್ನ ಏರಿದರು. ಹಿಂತಿರುಗುವ ವೇಳೆಗೆ ರಾತ್ರಿ ಒಂಬತ್ತರ ಮೇಲಾಗಿತ್ತು. ಊಟವಾದ ಮೇಲೆ ಮಾತುಕಥೆ– ಇತ್ತೀಚಿನ ಸುದ್ದಿಗಳ ಮೇಲೆ.

ಮಲಗುವ ವೇಳೆಗೆ ಹನ್ನೆರಡರ ಹತ್ತಿರ ಆಗಿತ್ತು. ಮನಸ್ಸು ಎಲ್ಲರಿಗೂ ಪ್ರಫುಲ್ಲವಾಗಿತ್ತು; ದಿಂಬಿಗೆ

ತಲೆಯನ್ನು ಆನಿಸಿದ ಒಡನೆಯೇ ನಿದ್ರೆ ಆವರಿಸಿದ್ದರೂ ಆಶ್ಚರ್ಯವಿಲ್ಲ.

ಕೋಣೆಯ ಹೊರಗೆ ವಿಚಿತ್ರ ತರಹೆಯ ಶಬ್ದ! ಬರಬರುತ್ತಾ ಜಾಸ್ತಿಯಾಯಿತು. ಹತ್ತಿರ ಹತ್ತಿರ ಬರುವಂತಿತ್ತು...

ಧಡಕ್ಕನೆ ಎಚ್ಚರವಾಯಿತು, ಮಹದೇವನ್‌ಗೆ.

ಯಾವುದೋ ಲೋಹದ ಝಣ ಝಣ ಶಬ್ದ!

ಮಹದೇವನ್ ಅಂಜಲಿಲ್ಲ. ಎದ್ದರು; ಮೆತ್ತಗೆ ಬಾಗಿಲನ್ನು ತೆರೆದರು.

ಹೆಜ್ಜೆಗಳ ಶಬ್ದ...ಲೋಹದ ಝಣ ಝಣ ಅಧಿಕ!


ಅಲಮಾರಿನಿಂದ ಒಂದು ಸಣ್ಣ ಸೀಸೆಯನ್ನು ತೆಗೆದುಕೊಂಡವರೇ, ಮಹದೇವನ್ ಹೊರಬಂದರು.

ಬೆಳದಿಂಗಳಲ್ಲಿ ಕಂಡಿತು– ಭೀಷಣ ದೃಶ್ಯ! ಒಬ್ಬ ಮುದುಕ ನಿಂತಿದ್ದನು ಎದುರಲ್ಲಿ. ಕಣ್ಣುಗಳು ಕೆಂಪಗಿದ್ದವು– ಉರಿಯುವ ಕಲ್ಲಿದ್ದಲಿನಂತೆ! ಜಡೆ ಹಾಕಿದಂತೆ ಉದ್ದ ಸುರುಳಿಗಟ್ಟ ಕೂದಲು ಭುಜಗಳ ಮೇಲೆ; ಪೂರ್ವಕಾಲದ ರೀತಿಯ ವಸ್ತ್ರ– ಅಲ್ಲಲ್ಲಿ ಹೊಲಸು ಸಾಗೂ ಚಿಂದಿ ಬೊಂತೆ. ಮಣಿ ಕಟ್ಟು ಮತ್ತು ಪಾದದ ಕೀಲುಗಳಿಂದ ಭಾರವಾದ ಸಂಕೊಲೆಗಳು ಇಳಿಬಿದ್ದಿದ್ದವು.

ನೋಡಿದ ತಕ್ಷಣ ಎಂಥವರಿಗೂ ಭಯವಾಗುವಂತಿತ್ತು. ಆದರೆ ಮಹದೇವನ್ ಭಯಗೊಳ್ಳಲಿಲ್ಲ. "ಮಿಸ್ಟರ್ ಭೂತ"– ನಯವಾಗಿ ಹೇಳಿದರು ಅದಕ್ಕೆ.—

"ನಿನ್ನ ಈ ಸರಪಣಿಗಳಿಗೆ ಎಣ್ಣೆ ಹಾಕಿ ಯಾವ ಯುಗವಾಯಿತೋ? ಅದಕ್ಕೇ ಈ ರೀತಿ ಗರಗರ ಶಬ್ದ! ಹೀಗಾದ್ರೆ, ಮನೇಲಿ ಎಲ್ಲರಿಗೂ ಎಚ್ಚರವಾಗುವುದು; ಕಿವಿ ಕಿವುಡಾದ್ರೂ ಆಶ್ಚರ್ಯ ಇಲ್ಲ! ಮಾಡಿರೋ ಪಾಪದ ಜೊತೆಗೆ ಆ ಪಾಪನೂ ಯಾಕೆ ಅಂಟಿಸಿಕೋತಿ? ಅನುಭವಿಸ್ತಿರೋ ಪಾಡು ಸಾಲದೇ? ಇಗೋ, ಈ ತೈಲವನ್ನು ಸರಪಣಿಗಳಿಗೆ ಹಾಕಿ ಉಜ್ಜು–ಶಬ್ದ ಕಮ್ಮಿಯಾಗತ್ತೆ... ನಮಗೂ ನಿದ್ರೆ ಬರತ್ತೆ... ಗುಡ್‌ನೈಟ್!... ಆ ತೈಲಸೀಸೆಯನ್ನು ಮೇಜಿನ ಮೇಲೆ ಇಟ್ಟವರೇ, ಮಹದೇವನ್ ಬಾಗಿಲು ಹಾಕಿಕೊಂಡುಬಿಟ್ಟರು.

ಪರಿಣಾಮ



ಬಿಟ್ಬು ಬಿಡು
ಸಿಗರೇಟು ಗುಟ್ಕಾ ದುರಭ್ಯಾಸ-
ಎಂಬ ನನ್ನ ಒತ್ತಾಯಕ್ಕೆ
ಮಣಿದು ಬಿಟ್ಟನವನು
ಕೊನೆಗೂ ನನ್ನ ಸಹವಾಸ

-ಅಶೋಕ್, ಉಡುಪಿ

ಆ ಭೂತಕ್ಕೆ ಏನು ಹೇಳಬೇಕೋ ತಿಳಿಯಲಿಲ್ಲ. ತನ್ನ ಆ ಬಂಗಲೆಗೆ ಹಿಂದೆ ಎಷ್ಟೊಂದು ಜನ ಬಂದಿದ್ದರು– ಹೋಗಿದ್ದರು. ಎಲ್ಲರೂ ಆದರ ಸರಪಣಿಯ ಶಬ್ದವನ್ನು ಕೇಳಿದ ಒಡನೆಯೇ ಬೆದರಿ ಮೈಲಿದೂರ ಕಂಬಿಕೀಳುತ್ತಿದ್ದರು– ಬೊಬ್ಬೆ ಹಾಕುತ್ತಾ... ಆಗ ಏನು ಮೋಜು, ಅದಕ್ಕೆ! ಬಹಳ ಕಾಲ ಯಾರೂ ಬಂಗಲೆಗೆ ಬಾರದಿರಲು, ಬೇಸರವಾಗಿತ್ತು...ಈಗ ಬಂದವರನ್ನು ಆಟ ಆಡಿಸೋಣ ಎಂದರೆ...ಈ ಮನುಷ್ಯ ಬೆದರಲೇ ಇಲ್ಲವಲ್ಲ, ಎಲ್ಲರಂತೆ? ಅವನು ನಿಜವಾಗಿಯೂ ಮನುಷ್ಯನೋ, ಇಲ್ಲ, ತನ್ನಂತೆ ಭೂತವೋ, ಎಂಬ ಅನುಮಾನ ಬಂದಿತು ಈ ಭೂತಕ್ಕೆ. ಭೂತವಾಗಿದ್ದಲ್ಲಿ ಬೇಗ ಓಡಿಸಬೇಕು, ಇಲ್ಲಿಂದ! ತನ್ನನ್ನು ಬಿಟ್ಟು ಬೇರೊಂದು ಭೂತಕ್ಕೆ ಜಾಗ ಇಲ್ಲ ಇಲ್ಲಿ! ಅದು ಹೇಗೆ ಬಂದಿತು, ಇಲ್ಲಿಗೆ?

ಬರೀ ಮನುಷ್ಯನಾಗಿದ್ದಲ್ಲಿ, ಸುಮ್ಮನೆ ಬಿಡಬಾರದು! ಚೆನ್ನಾಗಿಯೇ ಕಾಡಿಸಬೇಕು!

ಅಲ್ಲಾ, ಒಬ್ಬ ಮನುಷ್ಯನಿಗೆ ಹೇಗೆ ಬಂತು, ಇಷ್ಟೊಂದು ಧೈರ್ಯ?

ಭೂತವನ್ನ ಅಸಾಧ್ಯ ಕೋಪ ಆವರಿಸಿತು. ಆತ ಕೊಟ್ಟಿದ್ದ ಸೀಸೆಯನ್ನು ನೆಲಕ್ಕೆ ಬಡಿಯಿತು; ಅದು ಚೂರು ಚೂರಾಯಿತು.. ಆದರೂ ಆ ಮನುಷ್ಯ ಬೆದರಿ ಹೊರಬರಲಿಲ್ಲ!

ವಿಕಾರವಾಗಿ ಕೂಗುತ್ತಾ, ಹಿಂದೋಡತೊಡಗಿತು. ವಿಚಿತ್ರವಾದ ಹಸಿರು ಬೆಳಕನ್ನು ಉದ್ದಕ್ಕೂ ಚೆಲ್ಲುತ್ತಾ...ಮಹಡಿಯ ಮೆಟ್ಟಲುಗಳ ಬಳಿ ಇನ್ನೊಂದು, ಎಂದಿಗೂ ಊಹಿಸಲಾಗದ ಘಟನೆ ನಡೆಯಿತು...

ಇದ್ದಕ್ಕಿದ್ದಂತೆಯೇ ಕೋಣೆಯೊಂದರ ಬಾಗಿಲು ತೆರೆದುಕೊಂಡಿತು. ದೊಡ್ಡ ದೊಡ್ಡ ದಿಂಬುಗಳನ್ನು ಹಿಡಿದುಕೊಂಡಿದ್ದ ಪುಟಾಣಿಗಳಿಬ್ಬರು ಪ್ರತ್ಯಕ್ಷವಾದರು. ಒಳ್ಳೇ ಏರೋಪ್ಲೇನಿನಂತೆ ಶಬ್ಧ ಮಾಡುತ್ತಾ ಆ ಎರಡು ದಿಂಬುಗಳೂ ಭೂತದ ತಲೆಯ ಅಕ್ಕಪಕ್ಕ ಹಾರಿದವು.

ಭೂತಕ್ಕೆ ಎಷ್ಟು ದಿಗಿಲಾಯಿತೆಂದರೆ, ತಕ್ಷಣವೇ ಅದು ಹತ್ತಿರದಲ್ಲಿದ್ದ ಗೋಡೆಯಲ್ಲಿ ಮಾಯವಾಗಿಬಿಟ್ಟಿತು– ಆ ತುಂಟ ಹುಡುಗರು ನೋಡ ನೋಡುತ್ತಿದ್ದಂತೆಯೇ!

ಆ ಮಕ್ಕಳಿಗೆ ಚೂರೂ ಭಯ ಆಗಲಿಲ್ಲ! ಬದಲು ಭೂತ ಒಂದನ್ನು ಕಣ್ಣಾರೆ ಕಂಡ ಸಂಭ್ರಮ! ಅದನ್ನು ಇನ್ನಷ್ಟು ಕೆಣಕುವ ಉತ್ಸಾಹ!

ಪಟ್ಟಣದಲ್ಲಿರುವ ತಮ್ಮ ಸ್ನೇಹಿತರಿಗೆಲ್ಲಾ ತಿಳಿಸುವುದಕ್ಕೆ ಎಂಥಹಾ ಸ್ವಾರಸ್ಯಕರ ಘಟನೆ!

ರಾತ್ರಿಯೆಲ್ಲಾ ಮಾತನಾಡಿದರು, ಭೂತಗಳ ಬಗ್ಗೆ, ಆಯಾಗಳ ಬಾಯಿಂದ ಕೇಳಿದ್ದ, ಕಥೆಗಳಲ್ಲಿ ಓದಿದ್ದ, ನಿಜ ಘಟನೆಗಳೆಲ್ಲಾ ನೆನಪಿಗೆ ಬಂದವು.

ಈಗ ತಮ್ಮ ಮನೆಯಲ್ಲೇ ಒಂದು ಭೂತ! ಅದೂ ಏನು, ದೊಡ್ಡ ಭೂತ!

ಆದರೇನು, ಅದಕ್ಕೆ ಅಷ್ಟಾಗಿ ಧೈರ್ಯ ಇರುವ ಹಾಗೆ ಕಾಣಲಿಲ್ಲ.

ಚಿಕ್ಕವರಾದ ತಮಗೆ ಅಂಜಿ ಪಲಾಯನ ಮಾಡುವುದೇ? ಎಲ್ಲಿಗೆ ಹೋಗಿರಬಹುದು?

ನೂರೆಂಟು ಕೋಣೆಗಳುಳ್ಳ ಈ ಬಂಗಲೆಯಲ್ಲಿ ಎಲ್ಲಾದರೂ ಗುಟ್ಟಾಗಿ ಒಂದು ಸ್ಥಳ ಮಾಡಿಕೊಂಡಿರಬಹುದೇ? ಇರಬೇಕು! ಮೊದಲು ಆಸ್ಥಳವನ್ನ ಕಂಡುಹಿಡಿಯಬೇಕು– ತಾವೂ ಅದರ ಜೊತೆ ಎರಡು ದಿನ ಅಲ್ಲಿಯೇ ಅವಿತುಕೊಂಡು ಇರಬಹುದು...

ತಮ್ಮ ತುಂಟಾಟವನ್ನು ತಡೆಯಲಾರದೆ, ಹಿರಿಯರು ಶಿಕ್ಷಿಸಿದಾಗ...

ಎಲ್ಲಕ್ಕಿಂತ ಮೊದಲು, ಗೋಡೆಯಲ್ಲಿ ಮಾಯವಾಗುವ ಆ ವಿದ್ಯೆಯನ್ನು ತಮ್ಮ ಭೂತದಿಂದ ಕಲಿಯಬೇಕು...

ಆಗ, ಹಾಯಾಗಿ ಸ್ಕೂಲಿನಿಂದ ಪರಾರಿಯಾಗಬಹುದು, ಮೇಷ್ಟ್ರು ಮನೆಗೆ ಬಂದಾಗ ಹಿರಿಯರಿಗೆ ಅರಿವಾಗದಂತೆ ಪಲಾಯನ ಮಾಡಬಹುದು, ಅವರಿಗೆ ಗೊತ್ತಾಗದಂತೆ ಇಷ್ಟ ಬಂದಾಗ ತಿಂಡಿ–ಕೋಣೆಗೆ ನುಗ್ಗಬಹುದು, ಅವರಿಗೆ ಗೊತ್ತಾಗದಂತೆ ತಿಂದು, ಗೋಡೆಗಳ ಮೂಲಕ ಮಾಯವಾಗಬಹುದು!

ಎಂಥಹಾ ಮಜಾ!

ನಾಳೆಯೇ ಆ ಭೂತವನ್ನು ಹುಡುಕಿ, ಫ್ರೆಂಡ್ ಮಾಡಿಕೊಳ್ಳಬೇಕು, ಎಂದು ನಿರ್ಧರಿಸಿದವು, ಆ ಚೋಟಾರಿಗಳು.

ತನ್ನ ಗುಪ್ತ ಕೋಣೆಯನ್ನು ಸೇರಿದ ಭೂತಕ್ಕೋ, ಒಂದೇ ಗಲಿಬಿಲಿ.

ಸುಮಾರು ಮುನ್ನೂರು ವರ್ಷಗಳ ಕಾಲದ ಅದರ ಜೀವಮಾನದಲ್ಲಿ ಎಂದೂ ಇಂಥಹಾ ಅವಮಾನವಾಗಿರಲಿಲ್ಲ! ಈವರೆಗೂ ತನ್ನನ್ನು ಕಂಡು ಅಂಜಿ, ಕಂಬಿ ಕಿತ್ತಿದವರೆಲ್ಲಾ ನೆನಪಿಗೆ ಬಂದರು. ಒಬ್ಬರೇ, ಇಬ್ಬರೇ? ಅದೂ ಎಂಥೆಂಥಾವರು?

ವಜ್ರದ ಕಿರೀಟ ಧರಿಸಿದ್ದ ರಾಣಿಯಿಂದ ಹಿಡಿದು, ಗುದ್ದಲಿ–ಕೋಲು ಹಿಡಿದ ರಾಣಿಯಿಂದ ಹಿಡಿದು, ಗುದ್ದಲಿ–ಕೋಲು ಹಿಡಿದ ಆಳುಕಾಳುಗಳವರೆಗೂ!

ಸಕಲ ವೈಭವ–ದರ್ಪದಿಂದ ಬಂದಿಳಿದಿದ್ದ ಆ ರಾಣಿ– ಏನವಳ ಹೆಸರು? ತನ್ನನ್ನು ಕಂಡದ್ದೇ, ಅದೇ ರಾತ್ರಿ, ಅರೆ ವಸ್ತ್ರ–ಅರೆ ರಾತ್ರಿಯಲ್ಲಿ ಹೇಗೆ ಓಡಿಹೋದಳು, ರಸ್ತೆಗೆ– ವಿಕಾರವಾಗಿ ಕಿರುಚುತ್ತಾ! ಇನ್ನು ಆ ಭವ್ಯ ದಂಪತಿಗಳು– ಭಯದಲ್ಲಿ ಭಾವಿಗೇ ಬಿದ್ದುಬಿಟ್ಟರು– ತಾನು ಅಟ್ಟಿಸಿಕೊಂಡು ಹೋದಾಗ...ಆ ಜಗದ್ವಿಖ್ಯಾತ ಸಂಗೀತಗಾರ–ಏನವನ ಹೆಸರು? ಒಂದೇ ರಾತ್ರಿಯಲ್ಲಿ ತನ್ನ ಕಂಚಿನ ಕಂಠವನ್ನು ಕಳೆದುಕೊಂಡು, ಅಳುತ್ತಾ ಕೂತುಬಿಡಲಿಲ್ಲವೇ?

ಇನ್ನು ಆ ಹೆಸರಾಂತ ಕಾದಂಬರಿಗಾರ– ತನ್ನ ಬಗ್ಗೆ ಸೊಗಸಾದ ಕಾದಂಬರಿ ಬರೆಯುತ್ತೇನೆಂದು ಜಂಬ ಕೊಚ್ಚಿಕೊಂಡು ಬಂದಿಳಿದವ–ಒಂದೇ ರಾತ್ರಿಯಲ್ಲಿ ಪಲಾಯನ, ತನ್ನ ಅಮೂಲ್ಯ ಪೆನ್ನು–ಪೇಪರುಗಳನ್ನು ಮರೆತು!

ತನ್ನನ್ನ ಬೆದರಿಸಿ, ಇಲ್ಲಿಂದ ಓಡಿಸುತ್ತೇನೆಂದು ಎಲ್ಲರೆದುರಿಗೂ ಎದೆ ತಟ್ಟಿ ಘೋಷಿಸಿದ– ನೂರೆಂಟು ಭಸ್ಮಗಳ ಸಮೇತ ಬಂದಿಳಿದ ಮಾಂತ್ರಿಕ ಮತ್ತು ಅವನ ಗಣ್ಯರು... ಅವರ ಮಂತ್ರಗಳನ್ನ ಅವರುಗಳಿಗೇ ಹಿಂತಿರುಗಿಸಲಿಲ್ಲವೇ ತಾನು? ಕುಟಿಲ ತನದಿಂದ?

ಈವತ್ತು ಬಂದ ಭೂತವೇ ತಾನು, ಇಂಥವರಿಗೆಲ್ಲಾ ಮೋಸ ಹೋಗುವುದಕ್ಕೆ?

ಈಗ ಈ ಪರಿವಾರ ತಲೆಹರಟೆ ಮಾಡುತ್ತದೆ– ಅವರನ್ನ ಸುಮ್ಮನೆ ಬಿಡಬಾರದು!

ಇವರುಗಳಿಗೂ ಬುದ್ಧಿ ಕಲಿಸಬೇಕು! ಉಟ್ಟ ಬಟ್ಟೆಯಲ್ಲಿ ಊರನ್ನ ಬಿಡುವಂತೆ –ಮತ್ತೆ ಎಂದೆಂದಿಗೂ ತನ್ನ ಈ ಬಂಗಲೆಗೆ ಕಾಲಿಡದಂತೆ ಮಾಡಬೇಕು! ತನ್ನನ್ನ ಏನೂ ಅಂತ ತಿಳಿದುಕೊಂಡಿದ್ದಾರೆ?

ಇಂದು ಆದ ಸೋಲಿನಿಂದ ಅವಮಾನ ಆದಂತಾಗಿ, ಭೂತದ ಮೈಯೆಲ್ಲಾ ಉರಿಯತೊಡಗಿತು...ಹಸಿರು ಜ್ವಾಲೆಗಳು ಕೋಣೆಯನ್ನು ಆವರಿಸಿತು.

ಆದಷ್ಟು ಬೇಗ ಸೇಡು ತೀರಿಸಿಕೊಳ್ಳಲು ತೀರ್ಮಾನಿಸಿತು...

ಅದಕ್ಕಾಗಿ ಪ್ಲ್ಯಾನ್ ಹಾಕತೊಡಗಿತು– ಒಂದಕ್ಕಿಂತ ಒಂದು ಭಯಂಕರ ಯೋಜನೆಗಳನ್ನ...

* * *

ಮರುದಿನ ಬೆಳಿಗ್ಗೆ ಬ್ರೇಕ್‌ಫಾಸ್ಟ್‌ಗಾಗಿ ಎಲ್ಲರೂ ಒಟ್ಟಿಗೆ ಕೂತಾಗ, ಮನೆಯವರೆಲ್ಲರ ಬಾಯಲ್ಲೂ ತಾವು ರಾತ್ರಿ ಕಂಡ ದೆವ್ವದ ಮಾತು.

"ಅನ್ಯಾಯ ನಾನು ಎಂಥಾ ಅಪ್ಪಟ ತೈಲಾನ ಕೊಟ್ಟೆ ಅದಕ್ಕೆ! ಎಷ್ಟೊಂದು ಬೆಲೆ ಅದಕ್ಕೆ! ಅದಿರಲಿ, ಆ ತೈಲ ಸಿಗೋದೂ ಕಷ್ಟ– ಅದನ್ನ ತಿಳಿದುಕೊಳ್ದೆ, ಹಾಯಾಗಿ ಆ ಎಣ್ಣೇನ ಕೆಳಗೆ ಚೆಲ್ಲೋದೇ? ಅದಕ್ಕೇನು ಗೊತ್ತು, ನಾವು ಕೊಟ್ಟಿರೋ ಹಣದ ಬೆಲೆ? ಅದೂ ಸುಭಿಕ್ಷೆ ಕಾಲದ ದೆವ್ವ"

"ಏನೇ ಹೇಳಿ ಅಂಕಲ್ ನಮ್ಮ ಭೂತಕ್ಕೆ ಅಸಾಧ್ಯ ಕೋಪ!" ಅವಳಿ ಜವಳಿಗಳು ಕಂಪ್ಲೈನ್ ಮಾಡಿದವು- "ನಾವು ಆ ದಿಂಬುಗಳನ್ನ ಎಸೆದಾಗ ಹೇಗೆ ಕೆಕ್ಕರಿಸಿ ನೋಡಿತು! ಸಿಟ್ಟಿನಿಂದ ಮಾಯವಾಯ್ತು! ಬದಲು, ಸ್ವಲ್ಪ ಹೊತ್ತು ನಿಂತು, ನಮ್ಮ ಕೂಡ ಒಂದು ಗೇಮ್ ಆಡಿದ್ದರೆ? ಮೆತ್ತಗೆ ಟೆನಿಸ್ಸ್ ಅನ್ನೂ ಹೇಳಿಕೊಟ್ಟುಬಿಡ್ತಿದ್ದೆವು ನಾವು..."

ಮಕ್ಕಳು ಹಾಗೆ ದಿಂಬನ್ನು ಎಸೆದದ್ದು ಮಹದೇವನ್‌ರವರಿಗೆ ಹಿಡಿಸಲಿಲ್ಲ. ಸುಮ್ಮಸುಮ್ಮನೆ ಅದನ್ನು ಕೆರಳಿಸುವುದೇ? ಎಷ್ಟಾದರೂ ಅದಕ್ಕೆ ತಮಗಿಂತ ಶಕ್ತಿ ಜಾಸ್ತಿ! ಮಕ್ಕಳ ಮೇಲೆ ತೋರಿಸಿಬಿಟ್ಟರೇ? ಅಲ್ಲದೆ, ಅದರ ವಯಸ್ಸಿಗಾದರೂ ಮರ್ಯಾದೆ ಕೊಡಬೇಕು, ಮಕ್ಕಳು...

ಹಾಗೆಂದು ಹೇಳಿಯೂಬಿಟ್ಟರು.

"ಆದರೆ, ಆ ಸರಪಣಿಗಳ ಶಬ್ದದಲ್ಲಿ ನಮಗೆ ನಿದ್ರೇನೇ ಬರೋದಿಲ್ವಲ್ಲಾ ಅಂಕಲ್? ಹೇಗಾದ್ರೂ ಮಾಡಿ, ಅದಕ್ಕೇ ನೀವೇ ಎಣ್ಣೇನ ಹಾಕಿ ಮತ್ತೆ... ಆಗ, ಎಲ್ರಿಗೂ ನೆಮ್ಮದಿ... ದೆವ್ವದ ಪಾಡಿಗೆ ದೆವ್ವ ಹಾಯಾಗಿ ಇಡೀ ರಾತ್ರಿ ವಾಕಿಂಗ್-ಜಾಗಿಂಗ್ ಮಾಡತ್ತೆ ಬಂಗಲೆ ಪೂರ್ತಿ ನಮ್ಮ ಪಾಡಿಗೆ ನಾವು ಮಲಗ್ತೀವಿ..." ಮಕ್ಕಳು ಸವಾಲು ಹಾಕಿದವು.

ಆ ವಾರ ಪೂರ್ತಿ ಭೂತದ ಪತ್ತೆಯೇ ಇಲ್ಲ!

ತಮ್ಮಂಗಳ ಧೈರ್ಯವನ್ನು ಕಂಡು ಬೆದರಿ, ಅದು ಎಲ್ಲಿಗಾದರೂ ಓಡಿಹೋಯಿತೋ ಎಂಬ ಅನುಮಾನ ಆವರಿಸಿತು.

ಆದರೆ ಇಲ್ಲ, ನೆಲದ ಮೇಲಿನ ಆ ರಕ್ತದ ಕಲೆ ದಿನಾ ಪ್ರತ್ಯಕ್ಷವಾಗುತ್ತಿತ್ತು, ತಪ್ಪದೆ!

ಬೇಸರವಿಲ್ಲದೆ ಪ್ರತಿನಿತ್ಯವೂ ಅದಕ್ಕೆ ಡಿಟರ್‌ಜಂಟ್ ಎಲ್ಲ ಹಾಕಿ ಉಜ್ಜಿ, ಸಂಪೂರ್ಣವಾಗಿ ಮಾಯವಾಗುವಂತೆ ಮಾಡಿ ಮಲಗುತ್ತಿದ್ದರು- ಆ ಕೋಣೆಗೆ ಭದ್ರವಾದ ಬೀಗ ಹಾಕಿ...

ಬೆಳಿಗ್ಗೆ ಏಳುವಷ್ಟರಲ್ಲಿ ಆ ಕಲೆ ಹಾಜರು!

ಸ್ವಲ್ಪ ಸ್ವಲ್ಪ ಬಣ್ಣವೂ ಬದಲಾಯಿಸುತ್ತಿತ್ತು... ಒಂದು ಸಲವಂತೂ ಹಸಿರು ಬಣ್ಣಕ್ಕೆ!

ಹೀಗಾಗಿ ಇದೊಂದು ತಮಾಷೆಯ ವಿಷಯವಾಯಿತು, ಎಲ್ಲರಿಗೂ- ಕಾಮ್ಯಾ ಒಬ್ಬಳನ್ನು ಬಿಟ್ಟು. ಆ ರಕ್ತದ ಕಲೆಯನ್ನು ನೋಡಿದಾಗೆಲ್ಲಾ ಏನೋ ಸಂಕಟವಾಗುತ್ತಿತ್ತು ಹುಡುಗಿಗೆ.

ಅದು ಹಸಿರು ಬಣ್ಣಕ್ಕೆ ತಿರುಗಿದಂದು ಅತ್ತೇಬಿಡುತ್ತಿದ್ದಳು.

ದೆವ್ವ ಮತ್ತೆ ಕಾಣಿಸಿಕೊಂಡದ್ದು ಭಾನುವಾರ ರಾತ್ರಿ.

ಆದೇ ತಾನೇ ಎಲ್ಲರೂ ಮಲಗಲಿಕ್ಕೆ ಹೋಗಿದ್ದರು. ಇದ್ದಕ್ಕಿದ್ದಂತೆಯೇ ಒಂದು ಭಯಂಕರ ಶಬ್ದ ಕಿವಿಗಳಿಗೆ ಅಪ್ಪಳಿಸಿತು. ಎಲ್ಲರ ಕೋಣೆಯ ಬಾಗಿಲುಗಳೂ ತೆರೆದವು, ಒಟ್ಟೊಟ್ಟಿಗೆ ಕೆಳಗಿಳಿದರು, ತಮ್ಮ ತಮ್ಮ ರಾತ್ರಿಯ ಉಡುಪುಗಳಲ್ಲಿ. ಹೋಗಿ ನೋಡುತ್ತಾರೆ- ತೊಟ್ಟಿಯಲ್ಲಿ ಅಲಂಕಾರವಾಗಿ ಗೋಡೆಯ ಮೇಲೆ ನೇತುಹಾಕಿದ್ದ ಕಬ್ಬಿಣದ ಯುದ್ಧಕವಚ ಕೆಳಗೆ ಬಿದ್ದಿದೆ! ಸುಮಾರು ಮುನ್ನೂರು ವರ್ಷಗಳ, ಕಾಲದಿಂದ ಅದೇ ಸ್ಥಳದಲ್ಲಿ ಭದ್ರವಾಗಿ ಮಂಡಿಸಿದ್ದ ಕವಚ! ಪುರಾತನ- ಸಿಂಹಾಸನ ರೀತಿ ಕುರ್ಚಿಯ ಮೇಲೆ ಆ ಭೂತಮಹಾರಾಯ - ಪಟ್ಟು ಬಿದ್ದ ಕಾಲುಗಳನ್ನು ಉಜ್ಜುತ್ತಾ...ಮೊದಲೇ ಸರಿ ಅದರ ಮುಖ ವಕ್ರ- ಈಗ ನೋವಿನಿಂದ ಇನ್ನಷ್ಟು ವಿಕಾರವಾಗಿತ್ತು!

ತಕ್ಷಣವೇ ಅವಳಿ ಜವಳಿಗಳಿಬ್ಬರೂ ತಮ್ಮ ಆಯುಧವಾದ ಕವಣೆ- ಕಲ್ಲನ್ನು ಅದಕ್ಕೆ ಗುರಿಯಿಟ್ಟು ಹೊಡೆದರು. ಮಹದೇವನ್ ಮುಂದೆ ಬಂದವರೇ, ತಮ್ಮ ರಿವಾಲ್ವರ್‌ಅನ್ನು ಹೊರತೆಗೆದು ಕೂಗಿದರು- "ಕೈಗಳನ್ನ ಮೇಲಕ್ಕೆತ್ತು! ಶರಣಾಗತನಾಗು!"

ಅಬ್ಬಾ! ಎಂಥಹಾ ಸಿಟ್ಟು ಬಂದಿತು ಆ ಪಿಶಾಚಿಗೆ! ತನ್ನನ್ನು ಕಂಡು ಎಲ್ಲರೂ ತಮಾಷೆ ಮಾಡುತ್ತಿರುವರೆಂಬ ಭಾವನೆಯೋ? ಕಾಲಿನ ಪಟ್ಟು- ಮಂಡಿಯ ನೋವು, ಎಲ್ಲವನ್ನೂ ಮರೆತದ್ದೇ, ಎದ್ದು ಎಕ್ಸ್‌ಪ್ರೆಸ್ ರೈಲಿನಂತೆ ಹೊರಟುಹೋಯಿತು. ಹೋಗುವ ರಭಸದಲ್ಲಿ ದೀಪದ ಬಲ್ಬನ್ನೂ ಒಡೆದು, ಚೂರು ಚೂರು ಮಾಡಿ!

ಸಂಪೂರ್ಣ ಕತ್ತಲೆ!

ಮೆಟ್ಟಿಲುಗಳ ಬಳಿ ಬಂದ ಆ ಭೂತಕ್ಕೆ ದಿವ್ಯ ಐಡಿಯಾ ಹೊಳೆಯಿತು.

ಎಷ್ಟೋ ಜನರಿಗೆ ಹುಚ್ಚು ಹಿಡಿಸಿದ್ದ- ಬುದ್ಧಿ ಕೆಡಿಸಿದ್ದ, ತನ್ನ ಪೈಶಾಚಿಕ ನಗುವನ್ನು ಕೊಟ್ಟರೆ ಹೇಗೆ? ಆಗಲಾದರೂ ತನ್ನ ಮಹತ್ವ ತಿಳಿಯುವುದೋ? ಹೌದು- ಇದೇ ಸರಿಯಾದ ಸಮಯ!

ತಲೆಯನ್ನು ಹಿಂದಕ್ಕೆ ಹಾಕಿದ್ದೇ, ಘೋರವಾಗಿ ನಗಲಾರಂಭಿಸಿತು. ಸಿನಿಮಾಗಳಲ್ಲಿ ಬರುವ ವಿಲನ್- ನಗುವನ್ನೂ ಮೀರಿಸುವಂತೆ! ಯಾರೊಬ್ಬರೂ ಅಂಜಿದಂತೆ ಕಾಣಲಿಲ್ಲ.

ಬದಲು, ಅವಳಿ ಜವಳಿಗಳ ಗಂಟಲು ಕೇಳಿ ಬಂತು- "ಈ ನಮ್ಮ ಭೂತವನ್ನ ಪಟ್ಟಣಕ್ಕೆ ಕರ್‍ಕೊಂಡು ಹೋಗಿ ಒಳ್ಳೇ ಡಾಕ್ಟರಿಗೆ ತೋರಿಸಬೇಕು ಡ್ಯಾಡಿ... ಮೈ ಹುಷಾರಿಲ್ಲ ಅಂತ ಕಾಣ್ಸತ್ತೆ..."

ಮೈಯೆಲ್ಲಾ ಉರಿಯತೊಡಗಿತು, ಭೂತಕ್ಕೆ. ಏನು ಮಾಡಲೂ ತೋಚದಂತಾಯಿತು.

ಅದಕ್ಕೆ ತಿಳಿದಿದ್ದು ಒಂದೇ ಪರಿಹಾರ... ಮೌನವಾಗಿ ಗೋಡೆಯಲ್ಲಿ ಮಾಯವಾಯಿತು.

ತನ್ನ ಕೋಣೆಯನ್ನು ಸೇರಿದ ಭೂತಕ್ಕೆ ಎಲ್ಲಿಲ್ಲದ ಸಂಕಟ- ತಡೆದುಕೊಳ್ಳದಂತಾಯಿತು.

ಆ ಪೋಕರಿಗಳಿಗೆ ಅದೇನು ಧೈರ್ಯ! ತನ್ನನ್ನು ಅಪಹಾಸ್ಯ ಮಾಡಿ ಬದುಕುವವರೂ ಉಂಟೇ? ಹೇಗಾದರೂ ಮಾಡಿ ಅವುಗಳಿಗೆ ಮಣ್ಣು ಮುಕ್ಕಿಸಬೇಕು! ಇಲ್ಲದಿದ್ದಲ್ಲಿ, 'ವೈಭವೀಭೂತ' ಎಂಬ ಬಿರುದು ಹೊತ್ತು ಏನು ಸಾರ್ಥಕ?

ಈ ಘಟನೆ ಜರುಗಿದ ನಂತರ ಕೆಲದಿನ ಆ ಭೂತ ಹೊರಗಡೆ ಕಾಲಿಡಲಿಲ್ಲ: ತನ್ನ ಕೋಣೆಯನ್ನು ಬಿಟ್ಟು ಅಲ್ಲಾಡಲಿಲ್ಲ. ಆಘಾತದಿಂದ ಚೇತರಿಸಿಕೊಳ್ಳಲು ಅಷ್ಟು ದಿನ ಬೇಕಾಯಿತು.

ಹೇಗಾದರೂ ಮಾಡಿ ಈ ಸಂಸಾರಕ್ಕೆ ಬುದ್ಧಿ ಕಲಿಸಲೇಬೇಕಾಗಿತ್ತು!

ಮುಟ್ಟಿದ್ದಕ್ಕೆ ಮೂರುಸಲ ಎಂಬಂತೆ, ಈ ಬಾರಿ ಏನಾದರೊಂದು ಗಟ್ಟಿ ಯೋಜನೆಯನ್ನು ತಯಾರಿಸಬೇಕೆಂದು ಯೋಚಿಸ ಹತ್ತಿತ್ತು.

ಆಗಸ್ಟ್ ತಿಂಗಳ ಹದನೇಳನೆಯ ತಾರೀಖು ಶುಕ್ರವಾರ ಸರಿಯಾದ ದಿವಸ!

ಮಹದೇವನ್‌ರವರ ಪರಿವಾರವನ್ನು ಹೆದರೋಡಿಸಲು ವೈಭವೀಭೂತ ಆರಿಸಿದ ಉಡುಪು- ಪುರಾತನ ಕಾಲದ್ದು; ಅದರ ಮುತ್ತಜ್ಜನ ಕಾಲದ್ದು! ಶಿರದಿಂದ ಹಿಡಿದು ಕಾಲಿನಡಿಯವರೆಗೂ ಅಪ್ಪಟ ಕೆಂಪು ಬಣ್ಣ- ಸೊಂಟದಲ್ಲಿ ತುಕ್ಕು ಹಿಡಿದ ಕತ್ತಿ!

ತನ್ನ ತಲೆಯನ್ನೆಲ್ಲಾ ಉಪಯೋಗಿಸಿ, ಅದು ಹಾಕಿದ್ದ ಯೋಜನೆ ಇಂತಿತ್ತು-

ಮೊದಲು ಆ ಅಧಿಕಪ್ರಸಂಗಿ ವಿಷ್ಣುಕುಮಾರನ ಕೊಠಡಿಗೆ ಹೋಗಬೇಕು ಮೆಲ್ಲಗೆ... ಅವನನ್ನು ಎಬ್ಬಿಸಿ, ಘೋರವಾಗಿ ಹಲ್ಲು ಕಿರಿಯಬೇಕು! ತನ್ನ ಕತ್ತಿಯಿಂದ ಅವನನ್ನು ಇರಿಯುವಂತೆ ನಟಿಸಬೇಕು. ಆ ಬಳಿಕ ತನ್ನನ್ನು ತಾನೇ ಇರಿದುಕೊಳ್ಳಬೇಕು, ಮೂರು ಸಲ... ಆಗ ಅವನು ಒಂದೇ ಭೀತಿಯಿಂದ ಹೆಣವಾಗನೇ?

ಹಾಗೆ ಮೊದಲು ವಿಷ್ಣುಕುಮಾರನ ತಂಟೆಗೆ ಹೋಗುವುದಕ್ಕೆ ಪ್ರಬಲವಾದ ಕಾರಣವಿತ್ತು.

ಆತ ತಾನೇ ವಿಧವಿಧವಾದ ಡಿಟರ್‌ಜೆಂಟ್ಸ್ ತರಿಸಿ, ತಾನು ಶ್ರದ್ಧೆಯಿಂದ ಬರಿಸುವ ಆ ರಕ್ತದ ಕಲೆಯನ್ನು ಹೋಗಲಾಡಿಸುವುದು? ಅದನ್ನು ಕಂಡು ಗೇಲಿ ಮಾಡುವುದು? ಯಾವ ಭೂತಕ್ಕೆ ತಾನೇ ಕೋಪ ಬಾರದು? ಅಂತೆಯೇ ಆ ರಾಜಕುಮಾರನಿಗೆ 'ಅಧಿಕಪ್ರಸಂಗಿ' ಎಂಬ ಬಿರುದನ್ನು ದಯಪಾಲಿಸಿತ್ತು.

ಮತ್ತು ಮೊದಲು ಅವನಿಗೇ ಚೆನ್ನಾಗಿ ಬುದ್ಧಿ ಕಲಿಸಬೇಕು, ಎಂದು ನಿಶ್ಚಯಿಸಿತ್ತು.

ಭಾರ

ಭಾರವಿಲ್ಲದ ಅರ್ಜಿ
ಬೋರಲು ಬೀಳುತ್ತದೆ
ಭಾರ ಬಿದ್ದಾಕ್ಷಣ
ಮೇಲೇಳುತ್ತದೆ.

-ಬಿ. ತಿಪ್ಪೇರುದ್ರಪ್ಪ



ಆ ಬಳಿಕ, ಮಹದೇವನ್ ದಂಪತಿಗಳ ಬೆಡ್‌ರೂಮಿಗೆ ನಡೆಯಬೇಕು. ತನ್ನನ್ನು ಕಂಡೊಡನೆಯೇ ನಡುಗುವ ಅವರುಗಳ ಕಿವಿಯಲ್ಲಿ ಮೆಲ್ಲಗುಸುರಬೇಕು. ಆ ಬಂಗಲೆಯಲ್ಲಿ ಈವರೆವಿಗೂ ಜರುಗಿರುವ ಪೈಶಾಚಿಕ ಕೃತ್ಯಗಳನ್ನು, ಹಿನ್ನೆಲೆಗಳನ್ನು-

ಆಗ ಅವರ ಮೊಗ ನೋಡಬೇಕು! ಭಯದಿಂದ ಸಾಯದಿದ್ದರೆ ಆಶ್ಚರ್ಯ!

ಅದಾದ ಮೇಲೆ- ಕೊನೆದಾಗಿ ಆ ಅವಳಿ ಜವಳಿಗಳು...ಶುದ್ಧ ತಲೆಹರಟೆಗಳು! ಅವೆರಡೂ ಇಲ್ಲಿರುವವರೆಗೂ ತನಗೆ ತಲೆನೋವು ತಪ್ಪಿದ್ದಲ್ಲ! ಅಂತೆಯೇ, ಹೇಗಾದರೂ ಮಾಡಿ, ಆ ಇಬ್ಬರೂ ಇಲ್ಲಿಂದ ಓಡಿಹೋಗುವಂತೆ ಮಾಡಬೇಕು...

ಹಾಗೆ ಮಾಡದಿದ್ದಲ್ಲಿ, ತನ್ನ ಹೆಸರು 'ವೈಭವೀಭೂತ'ವೇ ಅಲ್ಲ!

ಸರಿಯಾಗಿ ಹನ್ನೊಂದು ಘಂಟೆ, ಮನೆಯವರೆಲ್ಲಾ ಮಲಗುವುದಕ್ಕೆ ಹೊರಟದ್ದು ತಿಳಿಯಿತು.

ಅವಳಿ ಜವಳಿಗಳ ನಗು-ಹರಟೆ ಮಾತ್ರ ಮುಗಿಯುವಂತೆಯೇ ಕಾಣಲಿಲ್ಲ. ರಾತ್ರಿಯೆಲ್ಲಾ ಜಾಗರಣೆ ಮಾಡುವ ನಿರ್ಧಾರವೋ? ಕೋತಿಗಳು! ಭೂತ ಚಡಪಡಿಸಹತ್ತಿ. ಕೊನೆಗೊಮ್ಮೆ ಆ ಗಲಾಟೆಯೂ ನಿಂತಾಗ ಹಾಯಾಗಿ ಉಸಿರಾಡಹತ್ತಿತು.

ಬೀರುವಿಯಿಂದ ಹೊರಟಿತು ಭೂತ. ಜಂಬೂಸವಾರಿಯ ಸಂಭ್ರಮದಿಂದ.

ಗೂಬೆಯೊಂದು ಕಿಟಕಿ ಕನ್ನಡಿಗಳಿಗೆ ಬಡಿಯಿತು. ಕಾಗೆಯೊಂದು ಪುರಾತನ ಮರದ ರೆಂಬೆಗಳ ನಡುವೆಯಿಂದ ಕರ್ಕಶವಾಗಿ ಕೂಗಿತು. ದಾರಿತಪ್ಪಿದ ಆತ್ಮದಂತೆ ರೋಧಿಸುತ್ತಾ, ಮನೆಯ ಸುತ್ತ ಅಲೆದಾಡತೊಡಗಿತು. ಗಾಳಿ... ಎಲ್ಲಿಂದಲೋ ಮಳೆ ಆಕ್ರಮಿಸಿತು.

ಇದಾವುದರ ಪರಿವೆಯೂ ಇಲ್ಲದವರಂತೆ ಮಲಗಿದ್ದರು, ಮನೆಯವರು... ಹಾಯಾಗಿ.

ಎಲ್ಲ ಗೋಡೆಗಳಿಂದಲೂ ಹೊರಬಂದು, ಮೆಲ್ಲಸಾಗಿತು ಭೂತ... ಸ್ವಲ್ಪವೂ ಸಪ್ಪಳ ಆಗದಂತೆ... ಅದರ ಕ್ರೂರ ಸುಕ್ಕುಗಟ್ಟಿದ ಮೊಗದ ಮೇಲೆ ಕೆಟ್ಟ ನಗು!

ಅದನ್ನು ಕಂಡು ಕತ್ತಲೆಗೂ ಅಸಹ್ಯ ಇದ್ದ ಬದ್ದ ಚಂದ್ರನಂತೂ ಯಾವಾಗಲೋ ಮೋಡಗಳ ನಡುವೆ ಪರಾರಿಯಾಗಿತ್ತು..ಕೆಟ್ಟ ಉಸಿರಿನಂಥಹಾ ವಾತಾವರಣ, ಭೂತ ಹೋಗುತ್ತಿದ್ದರೆ...

ಹದಿನಾರನೆಯ ಶತಮಾನದ ವಿಚಿತ್ರ ಶಾಪಗಳನ್ನು ಗೊಣಗುಟ್ಟುತ್ತಾ, ತನ್ನಲ್ಲಿದ್ದ ತುಕ್ಕುಹಿಡಿದ ಕತ್ತಿಯನ್ನು ಹಿಂದಕ್ಕೂ ಮುಂದಕ್ಕೂ ಝಳಪಿಸುತ್ತಾ, ಮುನ್ನಡೆಯಿತು.

ಅದರ ಮೊದಲ ಗುರಿ ಆ ತಲೆಹರಟೆ ವಿಷ್ಣುಕುಮಾರ್ ತಾನೇ?

ಅವನ ಕೋಣೆಯ ಮುಂದೆ ನಿಂತಿತು.

ಅದರ ನೀಳ ನೆರೆತ ಕೂದಲಿನ ಸುತ್ತ ಒಮ್ಮೆಲೆ ಬೀಸಿದ ಬಿರುಗಾಳಿ, ಪ್ರೇತ ವಸ್ತ್ರದಂತೆ ಅವನ್ನು ಪದರಪದರವಾಗಿ ಇಳಿಬಿಟ್ಟಿತು ಶಿರದಿಂದ.

ಭಯಂಕರ ದೃಶ್ಯ!

ತನಗೆ ತಾನೇ ಶಭಾಸಗಿರಿಯನ್ನು ಕೊಡುತ್ತಾ, ಮೂಲೆಯಲ್ಲಿ ತಿರುಗಿತು, ಇನ್ನೇನು ತನ್ನ ಪವಾಡವನ್ನು ತೋರಿಸಬೇಕು, ಅಷ್ಟರಲ್ಲಿ, ಅವನನ್ನೇ ಹೆದರಿಸಿ, ಅಪ್ಪಚ್ಚಿ ಮಾಡುವ ನೋಟ!

ಇದೇನಿದು! ಎಲ್ಲಿಂದ ಬಂತು?

ನೋಡಲಾಗದೆ, ತನ್ನ ನೀಳ- ಮೂಳೆ ಕರಗಳಿಂದ ಮೊಗ ಮುಚ್ಚಿಕೊಂಡಿತು.

ಎದುರಿಗೆ ಸರಿಯಾಗಿ ಇನ್ನೊಂದು ಭೂತ ನಿಂತಿತ್ತು- ತನಗಿಂತಲೂ ಅಗಾಧವಾದ- ಮಜಭೂತಾದ- ಇಮ್ಮಡಿ ಘೋರವಾದ ದೆವ್ವ! ಅದರ ಆ ವಿಕಾರವಾದ ವೇಷವೋ, ಬೆಂಕಿಯನ್ನುಗುಳುವ ಆ ಕಣ್ಣುಗಳೋ, ತುಟಿಗಳ ಮೇಲಿದ್ದ ಆ ಪೈಶಾಚಿಕ ನಗುವೋ, ಹಾಯ್, ಯಾವ ನರಕದಿಂದ ಉದ್ಭವಿಸಿತು? ದೆವ್ವ ಬಡಿದವನಂತೆ ನೋಡಿತು, ಈ ಭೂತ.

ಇದನ್ನು ಕಂಡು ಅದು ಅಂಜಿದಂತೆ ಕಾಣಲಿಲ್ಲ. ಬದಲು, ಹಲ್ಲು ಕಿರಿಯಿತು.

ಇನ್ನು ಅಲ್ಲಿ ನಿಲ್ಲಲಾಗಲಿಲ್ಲ, ನಿಂತರೆ ಅದು ತನ್ನನ್ನು ಏನು ಮಾಡಿಬಿಡುವುದೋ ಎಂಬ ದಿಗಿಲು ಆವರಿಸಿ, ವೈಭವೀಭೂತ ಹಿಂದಕ್ಕೋಡಿತು.

ತನ್ನ ಕೋಣೆಯನ್ನು ಸೇರಿಕೊಂಡಮೇಲೆಯೇ ನೆಮ್ಮದಿ.

ರಾತ್ರಿಯೆಲ್ಲಾ ಯೋಚಿಸಿತು; ತನ್ನದು ಈ ಬಂಗಲೆ ಇಲ್ಲಿಯೇ ಸತ್ತ ತನಗೆ ಮಾತ್ರವೇ ಅಧಿಕಾರ. ಇಲ್ಲಿಯ ಭೂತವಾಗಿ ಮೆರೆಯಲು... ಅಂಥದರಲ್ಲಿ ಆ ದೆವ್ವ ಇಲ್ಲಿಗೆ ಹೇಗೆ ಕಾಲಿಟ್ಟಿತು?

ತನ್ನದೇ ಈ ಜಾಗ ಎಂಬಂತೆ, ಅಟ್ಟಹಾಸದಿಂದ ದೃಷ್ಟಿಸಿತು? ಹೀಗೇ ಬಿಟ್ಟರೆ, ತನ್ನನ್ನು ಓಡಿಸಿಬಿಡಬಹುದು ಆಗ ತಾನು ಎಲ್ಲಿಗೆ ಹೋಗುವುದು? ಉಹು- ಅದು ಹಾಗೆ ಮಾಡುವ ಮೊದಲೇ. ತಾನೇ ಹೇಗಾದರೂ ಮಾಡಿ ಅದನ್ನು ಇಲ್ಲಿಂದ ಹೊರತಳ್ಳಬೇಕು!

ಮುಂಜಾನೆ ಸಮೀಪಿಸುವವರೆಗೂ ಕಾದ ವೈಭವೀಭೂತ ತನ್ನ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ. ಮತ್ತೆ ಆ ಜಾಗಕ್ಕೆ ಸಾಗಿತು- ಯುದ್ಧಕ್ಕೆ ಹೊರಟ ಯೋಧನಂತೆ.

ಹೋಗಿ ನೋಡತ್ತೆ- ಮಹಿಷಾಸುರನಂಥಹಾ ಆ ದೆವ್ವ ಕೆಳಗೆ ಬಿದ್ದುಬಿಟ್ಟಿದೆ!

ಪಾಪ, ಅದಕ್ಕೆ ಯಾರು ಏನು ಮಾಡಿದರೋ ಏನೋ, ಎಂದು ಕಳವಳವಾಗಿ, ಮೇಲಕ್ಕೆತ್ತಲು ಹೋಯಿತು, ಅನುತಾಪದಿಂದ. ಅದನ್ನು ಹಿಡಿದುಕೊಂಡ ತಕ್ಷಣ, ಕೈಗೆ ಬಂದದ್ದು ದಪ್ಪ ಬೆಡ್‌ಶೀಟ್! ಕೆಳಗೆ ಬಿತ್ತು ದೊಡ್ಡ ಅಟ್ಟರೆಕೋಲು, ಕುಂಬಳಕಾಯಿಯ ಬುರುಡೆ ಮತ್ತು ಅದಕ್ಕೆ ಸುತ್ತಲ್ಪಟ್ಟ ಇನ್ನಷ್ಟು ಬಟ್ಟೆ- ಇತ್ಯಾದಿ! ಆ ಭೂತದ ಎದೆಯ ಮೇಲಿದ್ದ ಹಲಗೆಯನ್ನು ಈ ಭೂತ ಕೈ ತೆಗೆದುಕೊಂಡು, ಓದಲು ಪ್ರಯತ್ನಿಸಿತು- ಅದೇ ತಾನೇ ಹರಡುತ್ತಿದ್ದ ಮುಂಬೆಳಕಿನಲ್ಲಿ.

ಹೀಗೆ ಬರೆದಿತ್ತು-

"ನಾನೇ ನಿಜವಾದ ಭೂತ- ಪಿಶಾಚಿ- ದೆವ್ವ, ಎಲ್ಲಾ! ಮಿಕ್ಕವೆಲ್ಲವೂ ಬರೀ ನಕಲಿಗಳು... ಎಚ್ಚರಿಕೆ!

ಇದರ ಅರ್ಥ? ಒಮ್ಮೆಲೆ ಎಲ್ಲವೂ ಹೊಳೆಯಿತು!

ಇದೆಲ್ಲಾ ಆ ಕೇಡಿ ಅವಳಿ ಜವಳಿಗಳ ಕೆಲಸ! ತನ್ನನ್ನು ಬೆದರಿಸಿ, ಇಲ್ಲಿಂದ ಓಡಿಸುವ ಪ್ರಯತ್ನ! ಆದರೆ, ತಾನೇ ಮೋಸ ಹೋಗುವವನು? ಎಷ್ಟು ವರ್ಷದ ಸರ್ವೀಸ್ ಆಗಿದೆ ತನಗೆ, ಏನು ಕಥೆ! ತನ್ನ ಒಂದೊಂದು ಕೂದಲೆಳೆಯಲ್ಲೂ ಕುಟಿಲ ಬುದ್ಧಿ ತುಂಬಿದೆ! ಅಂಥಾದ್ದರಲ್ಲಿ; ಈ ಪುಠಾಣಿಗಳಿಗೇ ಹೆದರುವೆನೆ ನಾನು? ಅಂಥಹವರನ್ನು ಎಷ್ಟು ಮಂದಿ ನೋಡಿಲ್ಲ— ಎದುರಿಸಿಲ್ಲ, ತಾನು ಸಶರೀರನಾಗಿದ್ದಾಗ— ಹೀಗಾದಾಗ?

ತಮ್ಮ ಕುಚೇಷ್ಟೆಯ ಫಲವನ್ನು ನೋಡಲು. ಅವಳಿ ಜವಳಿಗಳು ಹೊರಬರುತ್ತವೇನೋ, ಎಂದು ಹೊಂಚಿಹಾಕತೊಡಗಿತು. ಮೌನವಾದ ಹೆಜ್ಜೆಗಳಿಂದ ನಡೆದಾಡತೊಡಿಗಿತು.

ದೂರದ ಹೊಲವೊಂದರ ಕೆಂಪು ಹೆಂಚಿನ ಮನೆಯ ಛಾವಣಿಯಿಂದ ಹುಂಜವೊಂದು ಕೂಗುವ ಶಬ್ಧ...ಪ್ರಾತಃಕಾಲದ ಸೂಚನೆ...ಆದರೂ ಭೂತ ಅಲ್ಲಿಂದ ಅಲ್ಲಾಡಲಿಲ್ಲ.

ಯಾಕೋ ಏನೋ, ಆ ಹುಂಜ ಮತ್ತೆ ಕೂಗಲಿಲ್ಲ; ಯಾರೂ ಆ ಕಡೆ ಎದ್ದಂತೆ ಕಾಣಲಿಲ್ಲ.

ನೆಟ್ಟಗೆ ಮಕ್ಕಳ ಕೋಣೆಗೆ ಧಾವಿಸಿದರೆ? ಅಷ್ಟರಲ್ಲಿ, ಆಳು ಕಾಳುಗಳು ಈ ಕಡೆ ಬಂದುಬಿಟ್ಟರೆ? ಪಾಪ, ಅವರುಗಳು ಯಾರೂ ತನಗೆ ಏನೂ ಮಾಡಿಲ್ಲಿ— ಸುಮ್ಮಸುಮ್ಮನೆ ಯಾಕೆ ಹೆದರಿಸುವುದು? ಯಾರು ಯಾರ ಮೇಲೋ ತನ್ನ ಪ್ರತಾಪವನ್ನು ತೋರಿಸಿ ಸುಸ್ತಾಗುವುದು?

ಹೀಗೆ ಅದು ತರ್ಕ ವಿತರ್ಕ ಮಾಡುತ್ತಿರುವಂತೆಯೇ, ಪೂರ್ತಿ ಬೆಳಗಾಗಿಬಿಟ್ಟಿತು.

ಅಗೋ ಪರಕೆಗಳ ಶಬ್ಧ! ಬಕೆಟ್ಟಿನ ಸಪ್ಪಳ! ಹೆಜ್ಜೆಗಳ ಸದ್ದು! ಮನೆಯ ನಾಯಿಯ ಬೊಗಳುವಿಕೆ ಬೇರೆ! ಅದಕ್ಕೆ ಬೇರೆ ಕೆಲಸವೇ ಇಲ್ಲ! ಈ ಕಡೆಯೇ ಬರುವಂತಿದೆ! ಇನ್ನು ಇಲ್ಲಿರಬಾರದು- ಇದೇನೂ ಕಡೆಯ ರಾತ್ರಿಯಲ್ಲವಲ್ಲ? ತನ್ನ ಕೈಗೆ ಸಿಗದೆ ಎಲ್ಲಿ ಹೋಗ್ತವೆ ಆ ತುಂಟರು? ಮತ್ತೆ ಈ ರಾತ್ರಿ ಒಂದು ಕೈ ನೋಡಿದ್ರೆ ಆಯ್ತು... ಹ ಹ ಹ ಹ ಹ ಹ ಹ...

ಮನಸ್ಸಿಲ್ಲದ ಮನಸ್ಸಿನಿಂದ ತನ್ನ ಗೂಡನ್ನು ಸೇರಿಕೊಂಡಿತು.

* * *

ಇದಾದ ಸ್ವಲ್ಪ ದಿನ ಭೂತ ಹೊರಗೆ ಕಾಲಿಡಲಿಲ್ಲ. ಅದಕ್ಕೆ ತುಂಬಾ ಸುಸ್ತಾಗಿತ್ತು. ಹಿಂದಿನ

ಅಹಂಭಾವ ಕೈಬಿಟ್ಟಿತ್ತು. ಚೂರು ಶಬ್ದವಾದರೂ ಸರಿ. ಬೆಚ್ಚಿ ಬೀಳುತ್ತಿತ್ತು.

ಕೋಣೆಯಲ್ಲಿನ ರಕ್ತದ ಕಲೆಯನ್ನೂ ಕೈಬಿಟ್ಟಿತ್ತು. ದಿನಾ ಶ್ರದ್ಧೆಯಿಂದ ಅದನ್ನು ಮತ್ತೆ ಬರಿಸಿ, ಬರಿಸಿ ಏನು ಪ್ರಯೋಜನ?ಯಾರೊಬ್ಬರೂ ಅಂಜಿದಂತೆ ಬೇರೆ ಕಾಣಲಿಲ್ಲ! ವಿಚಿತ್ರ ಜನ! ಹೀಗೊಬ್ಬರು ಇರುವರು, ಇಲ್ಲಿಗೆ ಬರುವರು, ತನ್ನ ನಿರಾತಂಕ ನೆಲೆಯಲ್ಲಿ ಭೂಕಂಪ ಮೂಡಿಸುವರು- ಇಂತು ತಲ್ಲಣಿಸುವರು, ಎಂದು ಜನ್ಮದಲ್ಲೇ ಅಂದುಕೊಂಡಿರಲಿಲ್ಲ. ಕಣ್ಣೆದುರಿಗೆ ಸಾಮ್ರಾಜ್ಯವನ್ನು ಕಳೆದುಕೊಂಡ ಮಹಾರಾಜನ ಸ್ಥಿತಿಯಾಗಿತ್ತು ಅದರ ಪಾಡು.

ಒಂದು ದಿನ ಸಂಜೆ ಮಹದೇವನ್‌ರವರ ಮುದ್ದು ಪುತ್ರಿ ಕಾಮ್ಯಾಳ ಅನಿರೀಕ್ಷಿತ ಆಗಮನವಾಯಿತು, ಅದರ ಕೋಣೆಗೆ! ಪಾಪ, ಆ ಹುಡುಗಿಗೆ ಗೊತ್ತಿರಲಿಲ್ಲ, ಅದು ದೆವ್ವದ ಕೋಣೆ ಎಂದು. ಆ ದೆವ್ವ ಎಂದೂ ಅವಳ ತಂಟೆಗೆ ಹೋಗಿರಲಿಲ್ಲ. ಅಂತೆಯೋ ಏನೋ, ಅವಳು ಅದನ್ನು ತಲೆಗೆ ಹಚ್ಚಿಕೊಂಡಿರಲಿಲ್ಲ. ಕಾಸಾಯಿತು, ತನ್ನ ನೃತ್ಯ, ಕಾದಂಬರಿ, ಸಂಗೀತ- ಹಿನಿಮವಾಯಿತು...
ಈಗ ಒಬ್ಬ ಬಾಯ್‌ಫ್ರೆಂಡ್ ಬೇರೆ ಸಿಕ್ಕಿದ್ದ. ಇಷ್ಟರಲ್ಲೇ ಅವನ ಕೂಡ ಮದುವೆಯಾಗಿ ಪಟ್ಟಣದಲ್ಲಿ ನೆಲಸುವ ಕನಸು- ಖಾಯಂ ಆಗಿ.ಯೋಗ್ಯವರ, ಯೋಗ್ಯ ಹುಡುಗಿ. ಆದ್ದರಿಂದ, ಈರ್ವರು ಕಡೆಯ ತಂದೆ ತಾಯಿಗಳೂ ವಿರೋಧಿಸುವ ಪ್ರಾಬ್ಲಮ್ ಇರಲಿಲ್ಲ. ಆದರೆ, ಅವನ ಜೊತೆ ವಾಕಿಂಗ್ ಗೀಕಿಂಗ್ ಹೋಗುವುದನ್ನು ಅವಳ ತಾಯಿ ಇಷ್ಟಪಡರು. ತಾಯಿಗೆ ತಿಳಿಯದಂತೆ ಕಾಮ್ಯಾ ಅಂದು ಹೋಗಿ ಬಂದಿದ್ದಳು- ದೀರ್ಘ ವಾಕಿಂಗ್. ಮಧ್ಯೆ ಜೋರಾಗಿ ಮಳೆ ಬಂದು, ಬಟ್ಟೆಯೆಲ್ಲಾ ನೆಂದುಹೋಗಿತ್ತು. ಮುಂಬಾಗಿಲಿನಿಂದ ಮನೆಯನ್ನು ಪ್ರವೇಶಿಸಿದರೆ ಮಾತೆ ಸೋಮನಾಯಕಿಯ ಕಣ್ಣಿಗೆ ಬೀಳಬಹುದು. ಆಮೇಲೆ ಮನೆಯಲ್ಲಿ ಒಂದೇ ಹಾರಾಟ!

ಅಂತೆಯೇ, ಮೆಲ್ಲಗೆ ಹಿಂದಿನ ಬಾಗಿಲಿನಿಂದ ಪ್ರವೇಶಿಸಿದಳು. ಅವಳ ಕೊಠಡಿ ಇದ್ದದ್ದು ಮಹಡಿಯ ಮೇಲೆ. ಅದಕ್ಕೆ ಹೋಗಲು ಹಳೆಯ ಕಾಲದ ಮೆಟ್ಟಲುಗಳೂ ಚರ ಚರ ಶಬ್ದ ಮಾಡುವ ಈಗಿನ ಕಾಲದ ಚಪ್ಪಲಿಗಳನ್ನು ಕೈಗೆ ತೆಗೆದುಕೊಂಡವಳೇ, ಮೆಲ್ಲಗೆ ಹತ್ತಿದಳು- ಆ ಮೆಟ್ಟಲುಗಳನ್ನು.

ಅರೆ! ಪ್ರತಿನಿತ್ಯವೂ ಬಿಗಿಯಾಗಿ ಮುಚ್ಚಿರುತ್ತಿದ್ದ ಕೊನೆಯ ಕಿರುಕೋಣೆಯ ಬಾಗಿಲು ಇಂದು ತೆರೆದಿದೆ! ಒಳಗೆ ಏನಿರಬಹುದು? ಯಾರಿರಬಹುದು? ಕುತೂಹಲದಿಂದ ಇಣಿಕಿ ನೋಡುತ್ತಾಳೆ.

ವೈಭವೀಭೂತ ಮಂಡಿಸಿತ್ತು!

ಹಳದಿಗೊಂಡ ಮರಗಳನ್ನು, ಗಾಳಿಯಲ್ಲಿ ಬುಗುರಿ ಆಡುತ್ತಿದ್ದ ಅದರ ಕೆಂಪು ಎಲೆಗಳನ್ನು, ಸಾಲುಮರಗಳ ಮಾರ್ಗದಲ್ಲಿ ಹಾಸಿಗೆಯಂತೆ ಅದು ಪವಡಿಸುತ್ತಿದ್ದ ವೈಖರಿಯನ್ನು, ನಿಟ್ಟಿಸಿ ನೋಡುತ್ತಾ ಕುಳಿತಿತ್ತು, ಕಿಟಕಿಯ ಬಳಿ.

ಆದರೆ ಅದರ ಗಮನ ಆ ದೃಶ್ಯದ ಮೇಲಿರಲಿಲ್ಲ.

ತನಗಾದ ಪರಾಭವವನ್ನೇ ಚಿಂತಿಸುತ್ತಿತ್ತು, ವ್ಯಾಕುಲಗೊಳ್ಳುತ್ತಿತ್ತು...

ಅದೇ ತಮ್ಮ ಮನೆಯ ಭೂತ ಎಂದು ಹೊಳೆದದ್ದೇ, ಪಲಾಯನ ಮಾಡಬೇಕಾಗಿತ್ತು, ಕಾಮ್ಯಾ. ಆದರೆ, ಅದರ ಮೊಗದ ಮೇಲಣ ಭಾವ ಅವಳ ಕಾಲುಗಳನ್ನು ತಡೆದವು. ಅದರ ಶೋಚನೀಯ ಸ್ಥಿತಿಯನ್ನು ಕಂಡು ಕರುಣೆ ಉಕ್ಕಿತು. ತಾವುಗಳು ಬಹುವಾಗಿ ಕೇಳಿದ್ದ- ದಿಗಿಲುಗೊಂಡಿದ್ದ ದೆವ್ವ ಮಹಾರಾಯ ನಿಜವಾಗಿಯೂ ಇದುವೇ? ಎಲ್ಲಿ ಹೋಯಿತು ಅದರ ದರ್ಪ, ಭಯಂಕರ ರೂಪ, ಕ್ರೂರತನ? ಪಾಪ, ಏನಾಗಿದೆಯೋ, ವಿಚಾರಿಸಿ, ಸಾಂತ್ವನ ಮಾಡುವುದು ತನ್ನ ಕರ್ತವ್ಯ- ಮನುಷ್ಯಳಾಗಿ...ಧೈರ್ಯದಿಂದ ಸಮೀಪಿಸಿದಳು.

ಧ್ವನಿ ಕೇಳಿದಾಗ ಹೌಹಾರಿತು.

"ಭಯಪಡಬೇಡ- ನಾ ನಿನ್ನನ್ನ ಏನೂ ಮಾಡಲ್ಲ" ಸೌಮ್ಯಧ್ವನಿಯಲ್ಲಿ ಸಮಾಧಾನಿಸಿದಳು- "ನಾನು ಕಾಮ್ಯಾ- ಈ ಮನೆಯ ಮಗಳು. ನೀನೂ ನನ್ನನ್ನ ನೋಡಿರಬಹುದು..."

"ಒಂದೆರಡು ಬಾರಿ; ನೀನು ಬಹಳ ಒಳ್ಳೆಯವಳು- ನನ್ನ ತಂಟೆಗೆ ಬಂದಿಲ್ಲ... ಅದಕ್ಕೇ ನನಗೆ ನಿನ್ನನ್ನ ಕಂಡರೆ ಬಹಳ ಇಷ್ಟ..." ಭೂತ ಅವಳನ್ನು ಕೃತಜ್ಞತೆಯಿಂದ ನೋಡಿತು.

"ಮತ್ತೆ, ಏನು ನಿನ್ನ ಪ್ರಾಬ್ಲಮ್?"

ಗೋಳೋ ಎಂದು ಅಳತೊಡಗಿತು ಭೂತ.

"ಹುಶ್. ಅಳಬೇಡ ಪ್ಲೀಸ್ ಅಳ್ಬೇಡ" ಕಾಮ್ಯಾ ಒರೆಸಿದಳು ಅದರ ಕಣ್ಣೀರನ್ನು. ತನ್ನ ಸೀರೆಯ ಸೆರಗಿನಿಂದ. "ನೀನು ಭೂತ- ಹೆಸರಾಂತ ಭೂತ! ಎಲ್ಲರನ್ನೂ ಹೆದರಿಸಬೇಕಾದವನು! ಹೆದರಿ ಹೆದರಿ ನಾವು ಅಳಬೇಕು- ನೀನಲ್ಲ! ಹುಶ್. ನಿನ್ನನ್ನ ಈ ಸ್ಥಿತಿಯಲ್ಲಿ ನೋಡೋಕ್ಕೆ ಸಂಕಟವಾಗತ್ತೆ. ಅಳ್ಬೇಡ. ಭೂತ ಅಂಕಲ್..."

ಭೂತ ಅಂಕಲ್ ಎಂದೊಡನೆಯೇ ಅದಕ್ಕೆ ತುಂಬು ವಿಶ್ವಾಸ ಅಂಕುರಿಸಿತು. ಈ ಹುಡುಗಿಯ ಬಗ್ಗೆ... ಇವಳೇ ಬೇರೆಯ ತರಹ- ತನ್ನ ಆ ಅಧಿಕಪ್ರಸಂಗಿ ಅಣ್ಣ- ತಲೆಹರಟೆ ಅವಳ ಜವಳಿಗಳಂತಲ್ಲ...ತನ್ನ ಕಷ್ಟವನ್ನು- ತಾನು ಪಡುತ್ತಿರುವ ಪಾಡನ್ನು ಹೇಳಿಕೊಂಡಿತು.

"ಹೌದು ಭೂತ ಅಂಕಲ್. ನೀವು ಹೇಳೋದು ನಿಜ" ಕಾಮ್ಯಾ ಅನುತಾಪದಿಂದ ಅದರ ಎಲುಬು ಹಂದರವನ್ನು ಸವರಿದಳು- ನಿರ್ಭಯವಾಗಿ.

"ಇನ್ನೇನು ಎಲ್ಲರೂ ಪಟ್ಟಣಕ್ಕೆ ಹೋಗ್ತಾರೆ. ಸ್ಕೂಲು. ಕಾಲೇಜು. ಹಾಸ್ಟೆಲ್ ಸೇರ್ಕೊಳ್ಳಲು... ಆಗ. ನಿಮ್ಮ ತಂಟೆಗೆ ಬರೋವ್ರು ಇಲ್ಲಿ ಯಾರೂ ಇರೋಲ್ಲ- ಬೇಕಾದ್ರೆ. ನಾನು ಆಗಾಗ ಬಂದು. ನಿಮಗೆ ಕಥೆಪುಸ್ತಕ ಓತ್ತೀನಿ... ಮ್ಯೂಸಿಕ್ ರಿಕಾರ್ಡ್‌ಗಳನ್ನು ಹಾಕ್ತೀನಿ... ಒಂದು ಟ್ರಾನ್ಸಿಸ್ಟರ್ ಅನ್ನೂ ಪ್ರೆಸೆಂಟ್ ಮಾಡ್ತೀನಿ... ನಿಮ್ಮ ಪಾಡಿಗೆ ನೀವು ಹಾಯಾಗಿ ಇರಬಹುದಲ್ಲಾ?"

ಹಾಯಾಗಿರುವುದು? ತನ್ನ ಪಾಡಿಗೆ! ಹೇಗೆ? ಭೂತ ಮಿಕಿ ಮಿಕಿ ನೋಡಿತು.

"ನಿಮ್ಮ ಸರಪಣಿಗಳು ತುಂಬಾ ಶಬ್ದ ಮಾಡುತ್ತವೆ. ಎಲ್ಲರಿಗೂ ಹೆದರಿಕೆಯಾಗತ್ತೆ. ಅದಕ್ಕೇಂತ ನಮ್ಮ ಡ್ಯಾಡಿ ಸ್ಪೆಶಲ್ ತೈಲ ಬೇರೆ ಕೊಟ್ಟರು- ಸರಪಣಿಗೆ ಬಳಿಯೋಕ್ಕೆ: ಹಾಕಿದ್ದರೆ ಏನಾಗ್ತಿತ್ತು? ಇಷ್ಟೆಲ್ಲಾ ಅವಾಂತರ ಆಗ್ತಿರಲಿಲ್ಲವ್ರೋ? ಮತ್ತು ರಾತ್ರಿಯ ಹೊತ್ತು ಮನೆಪೂರ್ತಿ ಅಲೆದಾಡುವುದು ತಪ್ಪು! ನಮಗೆಲ್ಲಾ ಎಷ್ಟು ನಿದ್ರೆ ಕೆಡತ್ತೆ, ಯೋಚಿಸಿದ್ದೀರಾ?"

ಮಿಕ ಮಿಕ ನೋಡಿತು ಭೂತ. ತಾನು ಮಾಡುತ್ತಿರುವುದು ತಪ್ಪೇ. ಹಾಗೆಂದು ಒಂದು ದಿನವೂ ತನಗೆ ಅನ್ನಿಸಿರಲಿಲ್ಲ. ಅದೇ ತನ್ನ ದಿನಚರಿಯಾಗಿತ್ತು- ಭೂತವಾದಂದಿನಿಂದ!

"ಹೇಗಾದ್ರೂ ಮಾಡಿ ಇನ್ಮೇಲಿಂದ ಆದರೂ. ನೀವು ಒಳ್ಳೆಯವನಾಗಬೇಕು. ಆಗಲೇ ನಿಮಗೂ ಉಳಿಗಾಲ ಭೂತ ಅಂಕಲ್... ನೀವೇ ಹೇಳಿ. ಈವರೆಗೂ ಎಷ್ಟೊಂದು ಕೆಟ್ಟವರಾಗಿದ್ದಿರಿ! ಅದು ಸರಿಯೇ? ಅದರಿಂದ ಯಾರಿಗೆ ಸುಖ? ನಿಮ್ಮ ಕೀರ್ತಿ ಊರ ತುಂಬಾ ಹರಡಿದೆ- ಎಲ್ಲರೂ ನಡುಗ್ತಾರೆ. ನಿಮ್ಮ ಹೆಸರು ಕೇಳಿದ್ರೆ! ನಾಚಿಕೆಯಾಗೋದಿಲ್ವೇ? ಅದಕ್ಕೇ ಯಾರೊಬ್ರೂ ಬರಲಿಲ್ಲವಂತೆ ಈ ಅರಮನೆಯಂಥಾ ಭವ್ಯ ಮನೆಗೆ! ಹೀಗೆ ನೀವು ಮಾಡಿದ್ದು ಸರಿಯೇ? ವ್ಯಥೆ ಆಗೋದಿಲ್ವೇ?"

ನಿಜಕ್ಕೂ ಭೂತಕ್ಕೆ ವ್ಯಥೆಯಾಯಿತು- ತಲೆ ತಗ್ಗಿಸಿತು.

ಯಾರೂ ಅದರ ಅಪರಾಧವನ್ನ ತೋರಿಸಿಕೊಟ್ಟಿರಲಿಲ್ಲ; ಅಂತೆಯೇ. ತಾನು ಮಾಡುತ್ತಿರುವುದು ಅಪರಾಧ ಎಂದು, ತೋರಿರಲಿಲ್ಲ.

"ನೀವು ನಿಮ್ಮ ಹೆಂಡತಿಯನ್ನ ಕೊಂದಿರಂತೆ! ಹಾಯಾಗಿ ಕೊಲೆ ಮಾಡಿಬಿಟ್ಟಿರಂತೆ? ನಿಜವೇ?" ನೇರವಾಗಿ ಕೇಳಿಬಿಟ್ಟಳು ಹುಡುಗಿ- "ಊರೆಲ್ಲಾ ಮಾತಾಡಿಕೊಳ್ಳುತ್ತೆ..."

"ಅದು ನನ್ನ ಸ್ವಂತ ವಿಷಯ... ನನ್ನ ಸಂಸಾರಕ್ಕೆ ಸಂಬಂಧಪಟ್ಟ ವಿಷಯ" -ಭೂತಕ್ಕೆ ಸಿಟ್ಟು ಬಂದಂತೆ ತೋರಿತು. "ಹೀಗೆಲ್ಲಾ ನೀನು ಕೇಳಬಾರ್ದು..."

"ಇರಬಹುದು... ಆದ್ರೆ. ಹಾಗೆಲ್ಲಾ ಇನ್ನೊಬ್ರನ್ನ ಕೊಲೆ ಮಾಡೋದು ತಪ್ಪು- ಕಾನೂನು ದೃಷ್ಟೀಲಿ ದೊಡ್ಡ ಅಪರಾಧ! ಕಾಮ್ಯಾ ಬುದ್ಧಿವಾದ ಹೇಳಿದಳು- "ಅದಕ್ಕೇ ಏನೋ ನಿಮಗೆ ಹೀಗೆ ಪಿಶಾಚಿ ಜನ್ಮ ಅಂಟಿರೋದು!"

"ಮಗು. ನಿಂಗೇನು ಗೊತ್ತು. ನಾನು ಅನುಭವಿಸಿದ ಕಷ್ಟ- ಸಂಕಟ, ತೊಂದರೆ? ಸ್ವಲ್ಪ ಕಿರುಕುಳ ಕೊಟ್ಟಳೇ ಆ ಮಹಾರಾಯ್ತಿ? ಏನಾರ ನೋಡಿಕೊಂಡಳೇ ನನ್ನನ್ನ? ಒಂದಿನ ಆದ್ರೂ ಒಳ್ಳೇ ಊಟ ಹಾಕಲಿಲ್ಲ- ನನ್ನ ಬಟ್ಟೆ ಬರೇನ ರಿಪೇರಿ ಮಾಡಿಕೊಡ್ಲಿಲ್ಲ, ಕಾಯಿಲೆ ಕಸಾಲೆ ಎಂದಾಗ ಶುಶ್ರೂಷೆ ಮಾಡ್ಲಿಲ್ಲ... ಅಂಥಾವಳ ಕೂಡ ಎಷ್ಟು ದಿನಾ ಅಂತ ಏಗೋದು? ನನ್ನ ಸಹನೇಗೂ ಮಿತಿ ಇಲ್ವೇ?

ಏನೋ ಕೋಪದಲ್ಲಿ ಸಾಯಿಸಿದೆ. ಅವಳ ಅಣ್ಣ ತಮ್ಮಂದಿರು ನಂಗೆ ಅನ್ನ ನೀರು ಕಾಣಿಸದೆ. ಬಂಧಿಸೋದೇ? ಅಬ್ಬಾ. ಹಸಿವಿನಿಂದ ಎಷ್ಟೊಂದು ನರಳಿದೆ ಗೊತ್ತೇ?" ಭೂತ ಅಳುತ್ತಿತ್ತು.

ಕಾಮ್ಯಾಳ ಹೃದಯ ಕರಗಿತು. ತನ್ನ ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಚಾಕೊಲೇಟ್, ಬಿಸ್ಕತ್ತುಗಳನ್ನು ನೀಡಿದಳು. "ತಿನ್ನು ಭೂತ ಅಂಕಲ್... ಕೆಳಗೆ ಹೋದ್ಮೇಲೆ ಬಿಸಬಿಸಿ ಊಟಾನ ತರ್‍ತೀನಿ" ಆದರೆ ಆ ಉಪಚಾರ ಎಲ್ಲಾ ಭೂತಕ್ಕೆ ಬೇಕಾಗಿರಲಿಲ್ಲ. ಅದಕ್ಕೆ ಈಗ ಬೇಕಾಗಿದ್ದದ್ದು, ಆ ಅವಳಿ ಜವಳಿಗಳ ಕಾಟದಿಂದ ವಿಮೋಚನೆ.

ಅಲ್ಲದೆ ಅದಕ್ಕೆ ತಿನ್ನುವ ಶಕ್ತಿಯೇ ಇರಲಿಲ್ಲ- ಈಗ!

ನಿದ್ರೆ?

ಮಲಗಿ ಮುನ್ನೂರು ವರ್ಷಗಳಾಗಿತ್ತು!

ಮು-ನ್ನೂ-ರು ವರ್ಷ!

ಕಾಮ್ಯಾಳ ಮೃದು ಹೃದಯ ಬಿರಿದು ಚೂರು ಚೂರಾಗುವಂತೆ ಮರುಗಿತು. ಇದೆಂಥಹಾ ಬಾಳು? ಇತ್ತ ಮನುಷ್ಯನೂ ಅಲ್ಲ- ಅತ್ತ ಆತ್ಮವೂ ಅಲ್ಲ! ನನ್ನವರು- ತನ್ನವರು ಎಂಬುವರೇ ಇಲ್ಲ! ಇನ್ನೂ ಎಷ್ಟು ವರ್ಷಕಾಲ ಹೀಗೇ? ನಿರಂತರವಾಗಿ? ನರಕ!ಇದಕ್ಕೆ ಪರಿಹಾರ?ಸಂಪೂರ್ಣ ಸಾವು!

"ಸಾವು ನಿಜಕ್ಕೂ ಸುಂದರ" -ಭೂತ ಕನಸು ಕಂಡಿತು. 'ಯಾವ ಒಂದು ಚಿಂತೆಯೂ ಇಲ್ಲ- ಆಸೆಯೂ ಇಲ್ಲ... ನಿರಾತಂಕ ದೀರ್ಘ ನಿದ್ರೆ! ನೆನ್ನೆ ಎಂಬುದು ಇಲ್ಲ, ನಾಳೆ ಎಂಬುದು ಇಲ್ಲ, ಕಾಲವನ್ನು ಮರೆತು. ಬಾಳನ್ನು ಕ್ಷಮಿಸಿ. ನೆಮ್ಮದಿಯಾಗಿ ಮಲಗುವುದರಲ್ಲಿ ಎಂಥಹಾ ಆನಂದ! ಹಾಗಾಗುವಂತೆ ಮಾಡುವುದು ನಿನ್ನ ಕೈಯಲ್ಲಿ ಮಾತ್ರವೇ ಸಾಧ್ಯ! ಸಾವಿನ ಮನೆಯ ಬಾಗಿಲನ್ನು ನನಗಾಗಿ ತೆರೆಯೋ ಶಕ್ತಿ ನಿನಗೆ- ನಿನಗೊಬ್ಬಳಿಗೇ ಉಂಟು...

ದಿಗ್ಭ್ರಮೆಗೊಂಡವಳಂತೆ ಕಾಮ್ಯಾ ನೋಡಲು, ಭೂತ ವಿವರಿಸಿತು. "ಸಾವಿಗಿಂತ ಶಕ್ತಿಯುತವಾದದ್ದು ಪ್ರೀತಿ- ನೀನು ಪ್ರೀತಿಯ ಮೂರ್ತಿ!"

ಯಾಕೋ ನಡುಕ ಹರಿಯಿತು ಕಾಮ್ಯಾಳ ನರನರಗಳಲ್ಲೂ. ಕೆಲ ನಿಮಿಷ ವಿಚಿತ್ರ ನಿಶ್ಶಬ್ದ...ಮಾತೇ ಹೊರಡಲೊಲ್ಲದು...ಕೆಟ್ಟ ಸ್ವಪ್ನದಲ್ಲಿರುವವಳಂತೆ ಭಾಸ...ಆ ಒಂದು ವಿಲಕ್ಷಣ ಮೌನವನ್ನು ಬೇಧಿಸಲು ಹುಡುಗಿಗೆ ಆಗದು- ಆದರೆ, ಭೂತಕ್ಕೆ ಆಯಿತು.

"ಮನೆಯ ಅಂಗಳದ ಕಿಟಕಿಯ ಮೇಲೆ ಬರೆದಿರೋ ಆ ಪುರಾತನ ಭವಿಷ್ಯವನ್ನ ಎಂದಾದರೂ ಓದಿದೀಯಾ?" ಪ್ರಶ್ನಿಸಿತು. ಅದರ ಗಂಟಲು ನಿಟ್ಟುಸಿರಂತೆ ಕೇಳಿಸಿತು.

ಸರಕ್ಕನೆ ಹುಡುಗಿ ಮೊದಲಿನ ಸ್ಥಿತಿಗೆ ಬಂದಳು.

ಕಿಟಕಿಯ ಮೇಲಿನ ಭವಿಷ್ಯ? ಓ, ಎಷ್ಟು ಸಲ ಓದಿಲ್ಲ? ಕುತೂಹಲಕರ ಕಪ್ಪು ಅಕ್ಷರಗಳಲ್ಲಿದ್ದ ಅದನ್ನು ಓದುವುದು ಪ್ರಯಾಸಕರವೇ...ಬರೀ ಆರು ವಾಕ್ಯಗಳು ಅಷ್ಟೇ...

"ಮುಗ್ಧ ಹುಡುಗಿಯ ದೆಸೆಯಿಂದ,
ಪಾಪಿಯ ಹೃದಯದಿಂದ
ಪ್ರಾರ್ಥನೆ ಹೊರಬಂದಲ್ಲಿ,
ನಿರ್ಮಲ ಹುಡುಗಿಯ ಕಣ್ಣೀರಿನಿಂದ,
ಪಶ್ಚಾತ್ತಾಪ ಅದನ್ನು ಸುಟ್ಟಲ್ಲಿ,
ಶಾಂತಿ ಬರುವುದು ಆದರ ಆತ್ಮಕ್ಕೆ,
ವೈಭವೀ ಮನೆಗೆ!"

ಅಂದರೆ, ಏನರ್ಥ?

"ಅಂದರೆ" ಅದು ತಿಳಿಸಿತು ದುಃಖದಿಂದ, "ನನಗೆ ಕಣ್ಣೀರು ಎಂಬುವುದು ಇಲ್ಲದಿರುವುದರಿಂದ ನೀನು ಅಳಬೇಕು ನನಗಾಗಿ- ನನ್ನ ಪಾಪಗಳಿಗಾಗಿ; ನನಗೆ ನಂಬಿಕೆ- ದೈವಭಕ್ತಿ ಎನ್ನುವುದು ಇಲ್ಲದಿರುವುದರಿಂದ ನೀನು ಪ್ರಾರ್ಥಿಸಬೇಕು ನನಗಾಗಿ- ನನ್ನ ಆತ್ಮೋದ್ಧಾರಕ್ಕಾಗಿ. ನಿನ್ನ ಒಳ್ಳೆಯತನದಿಂದಾಗಿ ಕರುಣೆ ಬರುವುದು ನನ್ನ ಮೇಲೆ- ಯಮನಿಗೆ. ಕತ್ತಲಲ್ಲಿ ಭಯಂಕರ ಆಕಾರಗಳನ್ನ

ನೀನು ನೋಡಬಹುದು- ದುಷ್ಟಶಕ್ತಿಗಳು ನಿನ್ನ ಕಿವಿಯಲ್ಲಿ ಪಿಸುಗುಟ್ಟಬಹುದು, ಆದರೆ ಯಾರೂ ನಿನಗೆ ಕೆಡಕು ಮಾಡರು- ನಿನ್ನ ಪವಿತ್ರತೆ ನಿನ್ನನ್ನ ಕಾಪಾಡುವುದು..."

ಏನು ಬದಲೀಯಲೂ ತೋಚಲಿಲ್ಲ ಹುಡುಗಿಗೆ. ಇದೆಂಥಹಾ ಪರೀಕ್ಷೆ! ಯಾರನ್ನಾದರೂ ಸಲಹೆ ಕೇಳಿದರೆ ವಾಸಿಯಲ್ಲವೇ? ಆದರೆ, ಯಾರನ್ನು ತರುವುದು -ಅಲ್ಲಿ? ಭೂತ ಬಿಡಬೇಕಲ್ಲ?

ಇಂಥಹಾ ಒಂದು ಘೋರ ಹೆಜ್ಜೆಯನ್ನು ತಾನಾಗಿ ತೆಗೆದುಕೊಳ್ಳುವುದು ಸರಿಯೇ? ನಡುವೆ ಏನಾದರೂ ಎಡವಟ್ಟು ಆದರೆ? ತನ್ನಿಂದಾಗಿ ಮನೆಯವರಿಗೆಲ್ಲಾ ತೊಂದರೆ ಆದರೆ? ಈಗ ಆಗಿರುವುದೇ ಸಾಕು! ಬಹಳ ಯೋಚನೆ ಮಾಡಿ ತೆಗೆದುಕೊಳ್ಳಬೇಕಾದ ನಿರ್ಧಾರ... ಕಾಲಾವಕಾಶ ಕಮ್ಮಿ...

ಹುಡುಗಿಯ ಮೌನವನ್ನು ನೋಡಿ ಭೂತಕ್ಕಿದ್ದ ಏಕೈಕ ಆಶಾಕಿರಣವೂ ಇಂಗಿಹೋಯಿತು.

ಅತೀವ ನಿರಾಶೆಯಿಂದ ನರಳತೊಡಗಿತು.

ಇನ್ನು ಹುಡುಗಿಗೆ ತಡೆದುಕೊಳ್ಳಲಾಗಲಿಲ್ಲ.

ಅದರ ಕೈ ಹಿಡಿದುಕೊಂಡು ವಾಗ್ದಾನ ಮಾಡಿದಳು– "ನಿನ್ನ ಪಾಪಗಳನ್ನು ಕ್ಷಮಿಸುವಂತೆ, ನಿನ್ನ ಮೇಲೆ ಕನಿಕರ ತೋರುವಂತೆ ದೇವರನ್ನು ಪ್ರಾರ್ಥಿಸುತ್ತೇನೆ..." ಎಂದು.

ಹೃದಯ ನಡುಗುತ್ತಿದ್ದರೂ ಧ್ವನಿ ದೃಢವಾಗಿತ್ತು: ಕಣ್ಣುಗಳಲ್ಲಿ ಅಲೌಕಿಕ ಹೊಳಪು. ಸ್ವರ್ಗವೇ ಸಿಕ್ಕಿದಷ್ಟು ಸಂತಸವಾಯಿತು, ಭೂತಕ್ಕೆ. ಅವಳ ಕರವನ್ನು ತೆಗೆದುಕೊಂಡು ಕಣ್ಣಿಗೆ ಒತ್ತಿಕೊಂಡಿತು.

ಅದರ ಕರ ಮಂಜಿನಷ್ಟು ತಣ್ಣಗಿತ್ತು, ಅದರ ತುಟಿಗಳು ಬೆಂಕಿಯಂತೆ ಸುಡುತ್ತಿದ್ದವು, ಆದರೆ ಹುಡುಗಿ ಅಂಜಲಿಲ್ಲ: ಅದರ ಕೂಡ ದಾಟಿದಳು, ಆ ಮಬ್ಬಾದ ಕೋಣೆಯನ್ನು.

ಮಾಸಿದ ಬೂಟೇದಾರ ವಸ್ತ್ರದ ಮೇಲೆ ಇದ್ದ ಪುಟ್ಟ ಬೇಟೆಗಾರರ ಕಸೂತಿ ಕೆಲಸ ಒಮ್ಮೆಲೆ ಜೀವ ತಾಳಿದಂತಾಯಿತು! ತಮ್ಮ ಕುಚ್ಚು ಮಯಕೋಲು ಕಹಳೆಗಳನ್ನು ಊದಿ, ತಮ್ಮ ಚಿಕ್ಕ ಕರಗಳಿಂದ ಸನ್ನೆ ಮಾಡಿದರು– ಹಿಂದಕ್ಕೆ ಹೋಗುವಂತೆ.

"ಇನ್ನು ಒಂದು ಹೆಜ್ಜೆಯನ್ನೂ ಇಡಬೇಡ– ಅಪಾಯ! ಅಪಾಯ! ಅಪಾಯ!" ಬೇಡಿಕೊಂಡವು.

ಭೂತ ಮತ್ತೂ ಬಿಗಿಯಾಗಿ ಹಿಡಿದುಕೊಂಡಿತು, ಅವಳ ಹಸ್ತವನ್ನು. ಕಣ್ಣು ಮುಚ್ಚಿಕೊಂಡಳು.

ಹಲ್ಲಿಯ ಬಾಲಗಳುಳ್ಳ ಉಗ್ರ ಮೊಗದ ಪ್ರಾಣಿಗಳು ತಮ್ಮ ಕರಾಳ ಕಣ್ಣುಗಳನ್ನು ವಕ್ರವಕ್ರವಾಗಿ ತಿರುಗಿಸುತ್ತಾ ಹೆದರಿಸಿದವು. ಸುತ್ತುಗಟ್ಟಿದವು.

"ಎಚ್ಚರಿಕೆ ಪುಟ್ಟ ಕಾಮ್ಯಾ, ಎಚ್ಚರಿಕೆ! ನೀನೀಗ ಇದರ ಕೂಡ ಹೋದರೆ, ಮತ್ತೆ ಬೆಳಕನ್ನು ನೋಡಲಾರೆ! ಅದರ ಜೊತೆ ನಿನಗೂ ಕತ್ತಲೆಯೇ ಗತಿ! ಹಿಂದಕ್ಕೆ ಹೋಗು– ಬೇಗೋಡು!" ಚೀರಿಕೊಂಡವು, ಒಂದೇ ಸಮನೆ. ಆದರೆ ಯಾವುದೋ ಶಕ್ತಿ ಹುಡುಗಿಯನ್ನು ಪ್ರೇರೇಪಿಸಿತು, ಆ ಭೂತಕ್ಕೆ ಸಹಾಯ ಮಾಡಲು. ತೀವ್ರಗತಿಯಿಂದ ಹೆಜ್ಜೆಯಿಡುತ್ತಿತ್ತು, ಅದು.

ಕೋಣೆಯ ಕೊನೆಗೆ ಬಂದಾಗ, ಹಠಾತ್ತನೆ ನಿಂತು, ಅವಳಿಗೆ ಅರ್ಥವಾಗದ ವಿಚಿತ್ರ ಮಂತ್ರಗಳನ್ನು ಉಚ್ಚರಿಸಿತು. ಕಣ್ಣು ತೆರೆದಳು. ಎದುರಿನ ಗೋಡೆ ಇಬ್ಬನಿಯಂತೆ ಕರಗಿಹೋಗುತ್ತಿತ್ತು:

ದೊಡ್ಡದಾದ, ಕತ್ತಲಾದ, ಗುಹೆಯಂತಿದ್ದ, ಭೀಕರ ದೃಶ್ಯ ಬಿಚ್ಚಿಕೊಳ್ಳುತ್ತಿತ್ತು!

ತೀಕ್ಷ್ಣವಾದ ಶೀತಲ ಗಾಳಿ ಅವಳನ್ನು ಹರಿಯತೊಡಗಿತು– ಯಾವುದೋ ಶಕ್ತಿ ಅವಳನ್ನು ಎಳೆದುಕೊಂಡು ಹೋಗುತ್ತಿರುವ ಕೆಟ್ಟ ಅನುಭವವಾಗತೊಡಗಿತು.

ಸಣ್ಣದಾಗಿ ಚೀರುವ ಶಕ್ತಿಯನ್ನೂ ಕಳೆದುಕೊಂಡಂತಾಗಿತ್ತು!

"ಬೇಗ ಬೇಗ!"– ಅವಸರಪಡಿಸಿತು, ಭೂತ– "ಇನ್ನೊಂದು ಕ್ಷಣ ತಡ ಮಾಡಿದರೂ, ಕಾಲ ಮಿಂಚಿ ಹೋಗುವುದು! ಆಮೇಲೆ ಇಬ್ಬರಿಗೂ ಉಳಿಗಾಲವಿಲ್ಲ– ಬೇಗ ಬೇಗ!"

ಕ್ಷಣದಲ್ಲಿ ಇಬ್ಬರೂ ಆ ಗುಹೆಯಲ್ಲಿದ್ದರು– ಹೇಗೆ ತೆರೆದುಕೊಂಡಿತೋ ಹಾಗೇ ಗೋಡೆ ಮುಚ್ಚಿತ್ತು: ತಾನಾಗಿ! ಭೂತದ ಕೋಣೆ ಖಾಲಿಯಾಗಿತ್ತು.

ದೆಲ್ಲಾ ಕಾಮ್ಯಾ ಎಲ್ಲೂ ಕಾಣಬರದಿರಲು ಮನೆಯವರೆಲ್ಲಾ ಗಾಬರಿಯಾದರು. ಅವಳನ್ನು ಹುಡುಕಲು ಒಂದೊಂದು ದಿಕ್ಕಿಗೆ ಒಬ್ಬರು ಹೊರಟರು. ಆಳುಕಾಳುಗಳನ್ನು ಲಾಂದ್ರಾಗಳನ್ನು ಹಿಡಿದುಕೊಂಡು ಅಕ್ಕಪಕ್ಕದ ಹೊಲ–ಗದ್ದೆಗಳಲ್ಲೆಲ್ಲಾ ತಡಕಾಡಿದರು. ಎಲ್ಲೂ ಹುಡುಗಿಯ ಸುಳಿವೇ ಇಲ್ಲ!

ತಾಯಿ ಸೋಮನಾಯಕಿಗಂತೂ ಹುಚ್ಚು ಹಿಡಿದಂತಾಯಿತು. ಏನೇನೋ ಕೆಟ್ಟ ಕೆಟ್ಟ ಕಲ್ಪನೆಗಳು– ಶಂಕೆಗಳು– ಭೀತಿಗಳು! ಊರಲ್ಲಿರುವ ಭಾವಿಗಳಲ್ಲೆಲ್ಲಾ ಇಣುಕಿ ನೋಡಿಯಾಯಿತು.

ಲಕ್ಷಣವಾದ ಹುಡುಗಿ– ಯಾರಾದರೂ ಅಪಹರಿಸಿ ಗಿಪಹರಿಸಿದರೋ? ಅರೇಬಿಯಾದ ಶೇಕ್‌ಗೆ ಮಾರಲು? ಅಯ್ಯೋ! ಸೋಮನಾಯಕಿ ರೋಧಿಸತೊಡಗಿತು.

ಪೂರ್ಣಿಮೆಯ ರಾತ್ರಿ... ಕಾಪಾಲಿಕರು ಯಾರಾದರೂ ಬಂದು ಮಾಟ ಮಾಡಿ ಕರೆದುಕೊಂಡು ಹೋದರೋ– ಸ್ಮಶಾನಕ್ಕೆ? ದೇವಿಗೆ ಬಲಿ ಕೊಡಲು? ಸರಿ– ಲಾಂಥ್ರಾ ಗ್ಯಾಸ್‌ಲೈಟ್‌ಗಳನ್ನು ಹಿಡಿದುಕೊಂಡು ಊರಲ್ಲಿದ್ದ ಎಲ್ಲಾ ಜಾತಿಯ ಸ್ಮಶಾನಗಳನ್ನೂ ಜಾಲಾಡಿಯಾಯಿತು.

ಜಾಲಾಡದ ಸ್ಥಳವಿಲ್ಲ– ಪ್ರಶ್ನಿಸದ ಜನರಿಲ್ಲ... ಹತಾಶರಾಗಿ, ಸುಸ್ತಾಗಿ ಹಿಂತಿರುಗಿದರು ಮಹದೇವನ್ ಅಂಡ್ ಸನ್ಸ್.

ಸೋಮನಾಯಕಿ ದೇವರ ಮನೆಯಲ್ಲಿ ಕೂತುಬಿಟ್ಟಳು. –ಜ್ಞಾಪಕ ಬಂದ ದೇವರುಗಳಿಗೆಲ್ಲಾ ಪ್ರಾರ್ಥಿಸುತ್ತಾ...

ಮಹದೇವನ್ ಟೆಲಿಫೋನಿನ ಮುಂದೆ ಮಂಡಿಸಿಬಿಟ್ಟರು– ತಾವು ಎಲ್ಲೆಡೆ ಮಾಡಿರುವ ಟ್ರಂಕ್ ಕಾಲ್‌ಗಳಿಗೆ ಉತ್ತರ ನಿರೀಕ್ಷಿಸುತ್ತ... —

ಮಧ್ಯರಾತ್ರಿಯ ಸಮಯ: ಹನ್ನೆರಡು ಘಂಟೆ ಹೊಡೆಯಿತು. ತಕ್ಷಣವೇ–,

ಎಂಥಾ ಘೋರ ಶಬ್ದ! ಯಾರದು ಹಾಗೆ ವಿಕಾರವಾಗಿ ಚೀರಿದ್ದು!

ಭಯಂಕರ ಸಿಡಿಲು ನಡುಗಿಸಿತು ಇಡೀ ಮನೆಯನ್ನೇ! ಮಳೆಯಿಲ್ಲ– ಮಿಂಚಿಲ್ಲ! ಗುಡುಗಿಲ್ಲ ಗಾಳಿಯಿಲ್ಲ! ಹಠಾತ್ತನೆ ಅಲೌಕಿಕ ಸಂಗೀತ ಎತ್ತಲಿಂದದೋ ತೇಲಿಬಂದಿತು.

ಎಲ್ಲರೂ ದಿಗ್ಭ್ರಮೆಯಿಂದ ನೋಡಿದರು, ಒಬ್ಬರನ್ನೊಬ್ಬರರನ್ನು. ಆಗ...

ಮಹಡಿ ಮೆಟ್ಟಲುಗಳ ಮೇಲಿನ ಬಾಗಿಲೊಂದು ಜೋರಾಗಿ ಸಪ್ಪಳ ಮಾಡುತ್ತಾ ಕೆಳಗೆ ಬಿತ್ತು... ಅದರಿಂದ ಪ್ರತ್ಯಕ್ಷವಾದಳು ಕಾಮ್ಯಾ! ಮುಖ ಬಿಳಿಚಿಕೊಂಡಿತ್ತು: ಬಳಲಿದಂತಿತ್ತು. ಕರದಲ್ಲಿ ಒಂದು ಪೆಟ್ಟಿಗೆ.

* * *

ತಂದೆ ತಾಯಿಗಳು ಪ್ರಶ್ನಿಸುವ ಮೊದಲೇ ನಡೆದ ಘಟನೆಯನ್ನು ಕಾಮ್ಯಾ ತಿಳಿಸಿಬಿಟ್ಟಳು- ಚಚೂಬಿಡದೆ.

"ಪಾಪ, ಆ ಭೂತ ಈಗ ಸತ್ತಿದೆ- ಸರಿಯಾದ ಅರ್ಥದಲ್ಲಿ. ಅವನು ಬಹಳವೇ ಕೆಟ್ಟ ಮನುಷ್ಯನಾಗಿದ್ದವನು- ಬದುಕಿದ್ದಾಗ: ಭೂತವಾದ ಮೇಲೂ ಹಾಗೇ ಇರಲು ನೋಡಿತು... ಕೊನೆಗೆ ಬೇಜಾರಾಯ್ತು: ನನ್ನ ಸಹಾಯ ಬೇಡಿತು. ತಾನು ಮಾಡಿದ್ದ ಪಾಪಕ್ಕೆ ಮರುಗಿ, ನನ್ನನ್ನ ಆಶೀರ್ವಾದಿಸಿ, ಈ ತನ್ನ ಒಡವೆಗಳನ್ನೆಲ್ಲಾ ಕೊಟ್ಟಿತು. ನೋಡಿ, ಎಷ್ಟೊಂದು ಇದೆ, ಈ ಪೆಟ್ಟಿಗೇಲಿ!"

ಎಲ್ಲರೂ ಆಶ್ಚರ್ಯದಿಂದ ಮೂಕರಾದರು. ಅವಳ ಕಥೆಯನ್ನು ನಂಬುವುದೋ ಬಿಡುವುದೋ ತಿಳಿಯಲಿಲ್ಲ. ಮೌನವಾಗಿ ಎಲ್ಲರನ್ನೂ ಕರೆದುಕೊಂಡು ಹೋದಳು ನೆಲಮಾಳಿಗೆಗೆ. ಒಂದೇ ಕತ್ತಲು....

ವಿಷ್ಣುಕುಮಾರ್ ಟಾರ್ಚ್ ತಂದನು.

ತುಕ್ಕು ಹಿಡಿದ ಮೊಳೆಗಳಿಂದ ಭದ್ರಮಾಡಿಸಲ್ಪಟ್ಟ ಹಳೆಯ ಕಾಲದ ಮಜಭೂತಾದ ಬಾಗಿಲೊಂದು ಎದುರಾಯಿತು. ಕಾಮ್ಯಾ ಅದನ್ನು ಸ್ಪರ್ಶಿಸಿದ ಕೂಡಲೆ, ತೆರೆದುಕೊಂಡಿತು. ಗುಹೆಯಂಥಹಾ ಗೂಡು:

.ಮಯೂರ

ಗಾಳಿಯಿಲ್ಲ, ಬೆಳಕಿಲ್ಲ. ಗೋಡೆಯೊಳಗೆ ಸೇರಿದಂತೆ ಒಂದು ಅಗಾಧ ಕಬ್ಬಿಣದ ಉಂಗುರ- ಅದಕ್ಕೆ ಕಬ್ಬಿಣದ ಸರಪಣಿಗಳಿಂದ ಬಂಧಿತವಾಗಿದ್ದ ಒಂದು ಸೆಟೆಗೊಂಡ ಅಸ್ಥಿಪಂಜರ. ಅದರ ಪಕ್ಕದಲ್ಲಿ, ಅದರ ಮಾಂಸರಹಿತ ಬೆರಳುಗಳಿಗೆ ಎಟುಕದಂತೆ ಸ್ವಲ್ಪವೇ ಸ್ವಲ್ಪ ದೂರದಲ್ಲಿ, ನೀರಿನ ಹೂಜಿ - ಲೋಟ. ಅವುಗಳ ಭರ್ತಿ ನೀರಿದ್ದಿರಬೇಕು, ಮೂನ್ನೂರು ವರ್ಷಗಳ ಕೆಳಗೆ. ಅದನ್ನು ಕುಡಿಯಲು ಆ ಮನುಷ್ಯ ಹೆಣಗಾಡಿರಬೇಕು... ಹಸಿವು ಬಾಯಾರಿಕೆಯಿಂದ ಒದ್ದಾಡಿರಬೇಕು. ಯಾರೊಬ್ಬರಿಗೂ ಅದರ ಪ್ರಲಾಪ ಕೇಳಿಸದಂಥಹಾ ಜಾಗದಲ್ಲಿ ಕಠೋರ ಬಂಧನ ಬೇರೆ...ಪಾಪ, ಎಂಥ ನರಕಯಾತನೆ!

ಹೀಗೊಂದು ಭೂತವಾಗಿದ್ದರಲ್ಲಿ ಸೋಜಿಗವೇನು?

ಅವಳಿ ಜವಳಿಗಳಿಗೂ ಅನುತಾಪ ಉಕ್ಕಿ ಹರಿಯಿತು.

ಅಸ್ಥಿಪಂಜರದ ಬಳಿ ಮೊಣಕಾಲೂರಿದ ಕಾಮ್ಯಾ ಮೆಲುದನಿಯಲ್ಲಿ ದೇವರಿಗೆ ಪ್ರಾರ್ಥನೆ ನಡೆಸಿದಳು. ಆ ಮನುಷ್ಯನ ಆತ್ಮೋದ್ಧಾರಕ್ಕಾಗಿ.

ತಂದೆ ತಾಯಿಗಳೂ ಸೇರಿಕೊಂಡರು.

"ಅರೆ!" ಇದ್ದಕ್ಕಿದ್ದಂತೆ ಅವಳಿಜವಳಿಗಳು ಕೂಗಿಕೊಂಡರು "ಬರಡಾಗಿದ್ದ ಆ ಮರ ಒಮ್ಮೆಲೆ ಚಿಗುರುತ್ತಿದೆ! ಅದರಿಂದ ಹೂವು ಉದುರುತ್ತಿದೆ! ನೋಡಿ ಇಲ್ಲಿ!"

ಎಲ್ಲರೂ ಆ ಪುಟ್ಟ ಕಿಟಕಿಯ ಬಳಿ ಧಾವಿಸಿದರು. ನಿಜ!

ತಂಗಾಳಿ ಒಳಗೆ ಹೆಜ್ಜೆಯಿಟ್ಟಿತು. ಯಾವುದೋ ಶಾಂತತೆ ಪಸರಿಸುತ್ತಿತ್ತು.

"ದೇವರು ಅವನನ್ನು ಕ್ಷಮಿಸಿದ್ದಾನೆ" ಕಾಮ್ಯಾ ನುಡಿದಳು. "ಆ ಆತ್ಮದ ವೇದನೆ ಪಶ್ಚಾತ್ತಾಪ ದೇವರಿಗೆ ಮುಟ್ಟಿದೆ."

ಎದ್ದು ನಿಂತಳು: ಯಾವುದೋ ಭವ್ಯಬೆಳಕು ಅವಳ ಮುಖಕ್ಕೆ ಅಲೌಕಿಕ ಕಳೆ ಕೊಟ್ಟಿತ್ತು.

"ಎಂದೆಂದೂ ಮರೆಯಲಾಗದ ಪುಣ್ಯ ಕಾರ್ಯವನ್ನ ಮಾಡಿದ್ದೀ ಮಗಳೇ" ತಂದೆ ತಾಯಿಗಳಿಬ್ಬರೂ ಅವಳನ್ನು ತಬ್ಬಿಕೊಂಡರು- "ನಿನ್ನಿಂದ ನಾವೂ ಒಳ್ಳೆಯತನವನ್ನ ಕಲಿಯುವಂತಾಯಿತು."

ತುಂಟ ಅವಳಿಜವಳಿಗಳಿಗೆ ಮಾತ್ರ ಸ್ವಲ್ಪ ಕೊರಗೇ ಕಾಡಿಸುವುದಕ್ಕೆ ಭೂತ ಇಲ್ಲವಲ್ಲಾ ಎಂದು. ಅನ್ಯಾಯ, ಪಟ್ಟಣದ ಸ್ನೇಹಿತರನ್ನೆಲ್ಲಾ ಇಲ್ಲಿಗೆ ಕರೆದುಕೊಂಡು ಬಂದು ಅದನ್ನು ತೋರಿಸಬೇಕು-ಟಿಕೆಟ್ ಹಾಕಿ ಹಣ ಮಾಡಬೇಕು. ಆ ಹಣದಿಂದ ಊರಲ್ಲಿರುವ ಸಿನೀಮಾಗಳನ್ನೆಲ್ಲಾ ನೋಡಬೇಕು. ಹೊಟ್ಟೆ ಬಿರಿಯುವಂತೆ ಮಸಾಲೆದೋಸೆ, ಐಸ್‌ಕ್ರೀಮ್ ಎಲ್ಲಾ ಲಗಾಯಿಸಿ ಮಜಾ ಮಾಡಬೇಕು, ಎಂದೆಲ್ಲಾ ಲೆಖ್ಖಹಾಕಿ ಎಂಥೆಂಥ ಕನಸು ಹೆಣೆದಿದ್ದರು!

* * *

ಆ ಭೂತದ ಅಸ್ಥಿಪಂಜರಕ್ಕೆ ಒಂದು ದೊಡ್ಡ ಸ್ಮಶಾನಯಾತ್ರೆ ಏರ್ಪಾಡಾಯಿತು.

ತನ್ನ ಜೀವಮಾನದಲ್ಲಿ ಐವತ್ತಕ್ಕೂ ಹೆಚ್ಚು ವರ್ಷಕಾಲ ಅದರ ಜೊತೆಯಲ್ಲೇ ಇದ್ದ ನಾಗಮ್ಮನಿಗೆ ಮುಖ್ಯ ಸ್ಥಾನವನ್ನು ಕೊಡಲಾಯಿತು. ಪಟ್ಟಣದಿಂದ ಪತ್ರಿಕೆಯವರೂ ಬಂದಿಳಿದರು, ಪಾಲುಗೊಳ್ಳಲು. ಭೂತದ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು, ಅಂತ್ಯ ಸಂಸ್ಕಾರವನ್ನು ಸಾಂಗವಾಗಿ ನೆರವೇರಿಸಿದರು- ಮಹದೇವನ್.

ಭೂತವು ಕಾಮ್ಯಾಳಿಗೆ ಉಡುಗೊರೆಯಾಗಿ ಕೊಟ್ಟಿದ್ದ ಪೆಟ್ಟಿಗೆಯ ಭರ್ತಿ ಪ್ರಾಚೀನ ಕಾಲದ ಬೆಲೆಬಾಳುವ ಒಡವೆಗಳು! ಒಂದಕ್ಕಿಂತ ಒಂದು ಭರ್ಜರಿ! ಅವಕ್ಕೆ ನಿಜವಾದ ಹಕ್ಕುದಾರಳು ಆ ಹುಡುಗಿಯೇ ಎಂದು, ಸರಕಾರ ನಿರ್ಧರಿಸಿತು. ತಾಯಿಗೆ ಒಂದೇ ಖುಷಿ!

ಅವನ್ನೆಲ್ಲಾ ಧರಿಸಿ ಅವಳು ತನ್ನ ಮದುವೆ ಮಂಟಪಕ್ಕೆ ಬಂದಾಗ, ಎಲ್ಲಿಯೋ ನಿಂತು ಆ ಭೂತ ಇಲ್ಲ ಇಲ್ಲ, ಆ ಮನುಷ್ಯ- ಅವನು ತನ್ನ ಈಗಿನ ಭವ್ಯ ಸೂಕ್ಷ್ಮ ಶರೀರದಲ್ಲಿ ನಿಂತು, ತನ್ನನ್ನು ಆಶೀರ್ವಾದ ಮಾಡುತ್ತಿರುವಂತೆ ಭಾಸವಾಯಿತು, ಹುಡುಗಿಗೆ.

ಮನಸ್ಸಿನಲ್ಲೇ ಅವನಿಗೆ ವಂದಿಸಿದಳು ಕಾಮ್ಯಾ. ✤

ಒಂದಕ್ಕೆ ಎರಡು...!

ಮನೆಗೆ ಬಂದ ತಕ್ಷಣ ಶೂಸು ಬಿಚ್ಚಿ, ನಗರ ಸಾರಿಗೆ ಬಸ್ಸಿನಲ್ಲಿ ಜನಗಳ ನೂಕಾಟ, ನುಗ್ಗಾಟ, ಒದ್ದಾಟಗಳಿಂದ ಎಲ್ಲೆಲ್ಲೋ ಹೋಗಿ ಸೇರಿಕೊಂಡಿದ್ದ ಮೂಳೆಗಳನ್ನೆಲ್ಲಾ ಮತ್ತೆ ಸ್ವಸ್ಥಾನಕ್ಕೆ ಸೇರಿಸಿಕೊಂಡು 'ಉಸ್ಸಪ್ಪಾ' ಎನ್ನುತ್ತಾ ಆರಾಮ – ಖುರ್ಚಿಯಲ್ಲಿ ಕುಳಿತುಕೊಂಡು ಕಣ್ಣು ಮುಚ್ಚಿಕೊಂಡು ಸುಧಾರಿಸಿಕೊಳ್ಳತೊಡಗಿದೆ.

ಮೂಗಿನ ಬಡಿದ ಚಹಾದ ವಾಸನೆಯಿಂದ ಕಣ್ಣು ತೆರೆದು ನೋಡಿದರೆ ಎದುರು ಟೀಪಾಯಿಯ ಮೇಲೆ ಚಹಾದ ಬಟ್ಟಲೊಂದಿಗೆ ತಟ್ಟೆಯೊಂದರಲ್ಲಿ ಉಪ್ಪಿಟ್ಟು, ಖಾರ ಕೂಡ ಕಾಣುತ್ತಿವೆ. ನನಗೆ ಗಾಬರಿಯಾಯಿತು. ಮನೆ ಸಿಕ್ಕರೆ ಸಾಕಪ್ಪಾ ಎಂದು ಅವಸರದಿಂದ ನನ್ನ ಮನೆಗೆ ಬದಲಾಗಿ ಬೇರಿನ್ನಾರದೋ ಮನೆಗೆ ನುಗ್ಗಿದೆನೇನೋ ಎಂದುಕೊಂಡು ಮನೆಯ ಪರಿಸರ ಗಮನಿಸಿದೆ. ಎಲ್ಲಾ ಚಿರಪರಿಚಿತ ವಸ್ತುಗಳೇ! ಖಂಡಿತ ನಮ್ಮ ಮನೆಯೇ.

"ಅಯ್ಯೋ ಅದೇನು ಯೋಚಿಸ್ತಾ ಇದೀರಾ. ಬೇಗ ತಿಂಡಿ ತಗೊಳ್ಳಿ ಆರಿ ಹೋಗುತ್ತೆ."

ಉಪಚಾರ ಮಾಡುತ್ತಾ ಪ್ರತ್ಯಕ್ಷವಾದವಳೂ ಸಾಕ್ಷಾತ್ ನನ್ನ ಧರ್ಮಪತ್ನಿಯೇ! ಇಂಥ ಪತಿಸೇವೆ ಅಪರೂಪಕ್ಕೆ ಸಿಗುತ್ತಿರುವುದರ ಹಿಂದೆ ಯಾವುದೋ ಭಯಾನಕವಾದ ಉದ್ದೇಶ ಇರಬಹುದೆಂದು ನನ್ನ ಆರನೆಯ ಇಂದ್ರಿಯ ತಿಳಿಸುತ್ತಿದ್ದರೂ, ಅಪರೂಪಕ್ಕೊಮ್ಮೆ ಸಿಗುವ ಅವಕಾಶನ್ನು ಕಳೆದುಕೊಳ್ಳಬಾರದೆಂದು ತಟ್ಟೆಯಲ್ಲಿದ್ದ ತಿಂಡಿಯನ್ನು ಚಪ್ಪರಿಸಿದೆ.

"ರ್ರೀ..., ಯಾವ್ದನ್ನೇ ತಗೊಂಡ್ರೂ ಇನ್ನೊಂದು ಫ್ರೀಯಾಗಿ ಕೊಡ್ತಾರಂತೆ" ಎಂದಳು



ಎಂ ಎಸ್ ಹಾಲಸ್ವಾಮಿ

ಹಣ ತೆತ್ತು ಒಂದಕ್ಕೆ ಎರಡು
ತಂದದ್ದು ನಿಜ. ಆದರೆ...



ನನ್ನ ಅರ್ಧಾಂಗಿ.

ಕುಡಿಯುತ್ತಿದ್ದ ಟೀ ಎಲ್ಲಾ ಒಮ್ಮೆಗೆ ಬಾಯಿಯೊಳಗೆ ನುಗ್ಗಿ ತುಟಿ, ನಾಲಗೆಯಲ್ಲಾ ಸುಟ್ಟು ಮುಖ ಕೆಟ್ಟದಾಗಿ ಕಿವುಚಿಕೊಂಡೆ.

"ಅದ್ಯಾಕ್ರೀ, ಹಾಗೆ ಕೆಟ್ಟ ಮುಖ ಮಾಡ್ಕೊತೀರಿ, ನಾನ ಏನು ಹೇಳಬಾರದ್ದನ್ನ ಹೇಳಿದೆನಾ?" ಎಂದು ಕಣ್ಣಗಲಿಸಿ ಕೇಳಿದಾಗ,

"ಹಾಗಲ್ವೇ ಮಹರಾಯ್ತಿ! ಟೀ ತುಂಬಾ ಸುಡುತ್ತಿದ್ದರಿಂದ ಬಾಯೆಲ್ಲಾ ಸುಟ್ಟಹಾಗಾಯ್ತು ಅಷ್ಟೆ" ಎಂದೆ ಮೆತ್ತಗೆ. "ಅದೇನೋ ಒಗಟು ಹೇಳಿದೆಯಲ್ಲಾ ಸರಿಯಾಗಿ ಮತ್ತೊಮ್ಮೆ ಹೇಳು" ಎಂದೆ.

"ಒಗಟಲ್ಲಾರೀ, ನಾನು ಹೇಳಿದ್ದು. ಪಕ್ಕದ್ಮನೆ ಪೂರ್ಣಿಮಾ ಹೇಳ್ತಾ ಇದ್ಲು, ತಿರುಪತಿಯಿಂದ ಯಾವ್ದೋ ಕಂಪೆನಿಯವರು ರೆಡಿಮೇಡ್ ಬಟ್ಟೆ, ಸೀರೆಗಳ ಭಾರೀ ರಿಯಾಯಿತಿ ಮಾರಾಟ ಮಾಡ್ತಾಇದಾರಂತೆ ಒಂದನ್ನ ತಗೊಂಡ್ರೆ ಇನ್ನೊಂದನ್ನ ಫ್ರೀಯಾಗಿ ಕೊಡ್ತಾರಂತೆ. ಅಂದ್ರೆ ಒಂದಕ್ಕೆ ಎರಡು ರ್‍ರೀ..." ಎಂದಳು.

"ಅವೆಲ್ಲಾ ನಂಬಬೇಡವೇ, ಮೋಸ ಇರುತ್ತದೆ" ಎಂದು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದೆ. ನನಗೆ ಗೊತ್ತು ಇದು ವಿಫಲ ಪ್ರಯತ್ನ ಎಂದು. ಆದರೂ ಪ್ರಯತ್ನ ನನ್ನದು, ಇಚ್ಛೆ, ನಿರ್ಧಾರ ಅವಳದ್ದು ಎನ್ನುವಂತೆ.

"ಹಾಗೇನಿಲ್ಲರೀ, ಅವಳು ನಾಲ್ಕು ರೇಶಿಮೆ ಸೀರೆ ತಂದಿದ್ದಾಳೆ. ತುಂಬಾ ಚೆನ್ನಾಗಿವೆ. ಅವುಗಳ ಜೊತೆ ಮತ್ತೆ ನಾಲ್ಕು ರೇಶಿಮೆ ಸೀರೆ ಕೊಟ್ಟಿದ್ದಾರೆ. ನಮಗೆಲ್ಲಾ ತೋರಿಸಿದಳು. ನಾನೂ, ಪಂಕಜ, ಕಮಲ, ಗಿರಿಜಾ ಎಲ್ಲಾ ಪರೀಕ್ಷೆ ಮಾಡಿದೆವುರೀ, ಮೋಸ ಇಲ್ಲಾ, ಎಲ್ಲಾ ಶುದ್ಧ ರೇಶಿಮೆ ಸೀರೆಗಳೆ!" ನನಗೆ ನಿಜವಾಗಲೂ ಕೆಂಡದಂಥ ಕೋಪ ಬಂದದ್ದು ಪಕ್ಕದಮನೆ ಪೂರ್ಣಿಮಾಳ ಮೇಲಲ್ಲಾ ಅವಳಗಂಡ ಪರಮೇಶಿ ಮೇಲೆ. ಅಯೋಗ್ಯ ಎಲ್ಲಿ ಹುಡುಕಿ ಅವಳನ್ನು ಮದುವೆ ಮಾಡಿಕೊಂಡನೋ, ಹಾಳಾಗಿ ಹೋಗ್ಲಿ, ನಮ್ಮ ಮನೆಯ ಪಕ್ಕಕ್ಕೆ ಬಂದು ಝಂಡಾ ಊರಬೇಕೆ? ಅವಳಿಗೋ ಪೇಟೆಯಲ್ಲಿ ಸಿಕ್ಕ, ಸಿಕ್ಕದ್ದನೆಲ್ಲಾ ಕೊಂಡುಕೊಂಡು ಬರುವ ದುರಭ್ಯಾಸ. ಅಷ್ಟೇ ಆಗಿದ್ದರೆ ನಮಗ್ಯಾಕೆ ಅಂತ ಸುಮ್ಮನಾಗಿಬಿಡಬಹುದಿತ್ತು. ಆದರೆ ಹೊಸದಾಗಿ ಖರೀದಿಸಿ ತಂದ ವಸ್ತುಗಳನ್ನು ಅಕ್ಕಪಕ್ಕದ ಹೆಂಗಸರಿಗೆಲ್ಲಾ ತೋರಿಸಿ, ಹೊಟ್ಟೆ ಉರಿಸಿ ಗಂಡಂದಿರ ಜೇಬಿಗೆ ದಾಳಿ ಮಾಡಿಸುವ ಪರಿಪಾಠ ಬೇರೆ. ಪರಮೇಶಿ ಹೊರಗಡೆ ಎಲ್ಲಾದರೂ ಸಿಕ್ಕಿದರೆ ನಾಲ್ಕು ಬಿಗಿದು ಬುದ್ಧಿ ಕಲಿಸಬೇಕೆಂದು ಅಂದೇ ಪ್ರತಿಜ್ಞೆ ಮಾಡಿದೆ.

"ಬೇಗ, ಬೇಗ ಹೊರಡಿ, ಟೈಮಾಗಿಬಿಡುತ್ತದೆ. ಇವತ್ತೇ ಕಡೆಯ ದಿನ ಅಂತೆ" ಎಂದಳು.

"ನೀನು ರೆಡಿಯಾಗಬೇಕಲ್ಲೇ" ಎಂದೆ. ಅವಳು ಸಿದ್ಧವಾಗಬೇಕೆಂದರೆ ಕಡಿಮೆ ಎಂದರೂ ಅರ್ಧ ದಿನವಾದರೂ ಬೇಕು ಎಂಬ ನಂಬಿಕೆಯಿಂದ.

"ಅಯ್ಯೋ ನಾನಾಗಲೇ, ಬೆಳಗಿನಿಂದಲೇ ಸಿದ್ಧವಾಗಿದೀನ್ರೀ" ಎಂದಳು. ಇಂಥ ಸಂದರ್ಭಗಳಲ್ಲಿ ಎಷ್ಟೊಂದು ದೂರದೃಷ್ಟಿ ಇವರಿಗೆ! ವಿಧಿಯಿಲ್ಲದೆ, ಮತ್ತೆ ಕಾಲಿಗೆಚಪ್ಪಲಿ ಸಿಕ್ಕಿಸಿಕೊಂಡು ಅವಳ ಹಿಂದೆ ವಿನಮ್ರ ಸೇವಕನಂತೆ ಹೊರಟೆ.

ನಾವು ಮೋಸ ಹೋಗುತ್ತೇವೆನೋ ಎಂಬ ಅಳುಕಿತ್ತು. ಆದರೆ ಮಾರಾಟ ಮಳಿಗೆಯ ತುಂಬಾ ನಮ್ಮಂತೆ ಮೋಸ ಹೋಗುವವರ, ಕ್ಷಮಿಸಿ, ಒಂದನ್ನು ಕೊಂಡು ಎರಡನ್ನು ಪಡೆದು ಬುದ್ಧಿವಂತರಾಗಲು ಬಂದಿದ್ದ ಜನಸಂಖ್ಯೆಯನ್ನು ನೋಡಿ ಏನೋ ಒಂದು ರೀತಿಯ ಸಮಾಧಾನ.

ಆ ದೊಡ್ಡ ಹಾಲಿನ ತುಂಬಾ ರಾಶಿ ರಾಶಿಯಾಗಿ ಬಿದ್ದಿದ್ದ ಸಿದ್ಧ ಉಡುಪುಗಳು ಹಾಗೂ ಸೀರೆಗಳು ನನಗೂ ಕೊಂಚ ಮರಳು ಮಾಡಿದವು. ಗಿಜಗಿಜಗುಟ್ಟುತ್ತಿರುವ ಜನಸಂದಣಿ ಮೆಲ್ಲಗೆ ಉತ್ತೇಜನ ತುಂಬಿತು. ನಾನು ಚೆನ್ನಾಗಿ ಕಾಣುವ ಪ್ಯಾಂಟು ಶರಟುಗಳಿಗಾಗಿ ಹುಡುಕಾಡತೊಡಗಿದೆ. ನನ್ನವಳು ಕೈಗೆ ಸಿಕ್ಕ ಸೀರೆಗಳನ್ನೆಲ್ಲಾ ತಂದು,

"ಇದು ಹೇಗಿದೆ, ಬರೀ ಐನೂರು ರೂಪಾಯಿ" ಎಂತಲೋ, "ಬರೀ ಮುನ್ನೂರು ರೂ" ಅಂತಲೋ, ರೇಶಿಮೆಯ ಸೀರೆ ಹಿಡಿದು, "ಬರೀ ಎರಡು ಸಾವಿರ ರೂಪಾಯಿ ಕಣ್ರೀ! ಇಂಥದ್ದೇ ಇನ್ನೊಂದು ಸೀರೆ ಕೂಡ ಫ್ರೀ ಸಿಗುತ್ತೆ" ಎಂದು ಪಿಸುಗುಟ್ಟಿ ಹೋಗುತ್ತಿದ್ದಳು. ನಾನು ಎಲ್ಲದಕ್ಕೂ ತಲೆ ಆಡಿಸುತ್ತಿದ್ದೆ. ಏಕೆಂದರೆ ಸೀರೆಗಳ ಬಗ್ಗೆ ನನಗೆ ಅಷ್ಟೊಂದು ಜ್ಞಾನವಿಲ್ಲ.

(ದಯವಿಟ್ಟು ಇದು ನಿಮ್ಮಲ್ಲೇ ಇರಲಿ. ನನ್ನವಳಿಗೆ ಈ ವಿಷಯ ತಿಳಿದಿಲ್ಲವಾದ್ದರಿಂದ, ಅಷ್ಟೋ ಇಷ್ಟೋ ಸೀರೆ ವ್ಯಾಪಾರ ಕೊಂಚ ನನ್ನ ನಿಯಂತ್ರಣದಲ್ಲಿದೆ:)

ನಾನು ಒಂದೆರಡು ಶರಟುಗಳನ್ನು ತೆಗೆದು ಇವಳಿಗೆ ತೋರಿಸಿ ಅಭಿಪ್ರಾಯ ಕೇಳಿದರೆ, "ಚೆನ್ನಾಗಿಲ್ಲ ಬಿಡಿ" ಎಂತಲೋ, "ಬಣ್ಣ ಹೊಂದೋಲ್ಲರೀ," ಎಂತಲೋ, "ಅಯ್ಯೋ ಅದು ನೋಡಿದರೆ ಒಳ್ಳೆ ಬಟ್ಟೆ ಥರಾ ಕಾಣೋಲ್ಲ" ಎಂತಲೋ ಅಭಿಪ್ರಾಯ ಮಂಡಿಸಿ ನನಗೆ ಉತ್ಸಾಹ ಇಳಿಸಿ, ತಾನು ಮಾತ್ರಾ ಸೀರೆ ಖರೀದಿಯಲ್ಲಿ ನಿಶ್ಚಿಂತಳಾಗಿ ನಾಲ್ಕು ಸೀರೆ ಕೊಂಡುಕೊಂಡಳು. ಆ ನಾಲ್ಕು ಸೀರೆಗಳ ಜೊತೆಗೆ ಮತ್ತೆ ನಾಲ್ಕು ಸೀರೆಗಳು ಉಚಿತ! ಅವಳ ಸಂತೋಷಕ್ಕೆ ಪಾರವೇ ಇಲ್ಲ. ನನ್ನ ದುಃಖ ಕೇಳುವವರೇ ಇಲ್ಲ! ಜೇಬು ಖಾಲಿಯಾಯ್ತು.

ಒಂದು ವಾರ ನನ್ನವಳು ತಾನು ಕೊಂಡು ತಂದ ಸೀರೆಗಳನ್ನು ಪ್ರದರ್ಶನ ಕಾರ್ಯಕ್ರಮ ನಡೆಸಿದಳು. ನಾಲ್ಕು ಸೀರೆಗಳು ನೀರು ಕಂಡಾಗ ಅಲ್ಲಲ್ಲಿ ರಂಧ್ರಗಳು ಕಾಣಿಸಿದವು. ಮತ್ತೆರಡು ಎರಡು ಮೂರು ಕಡೆ ಬಣ್ಣ ಬದಲಾಯಿಸಿದವು. ಇನ್ನೆರಡು ಸೀರೆಗಳ ಮಧ್ಯೆ ತುಂಡಾದ ನೂಲುಗಳನ್ನು ಜೋಡಿಸಿ ಹೆಣೆದಿರುವುದು ಗಮನಕ್ಕೆ ಬಂತು.

ಒಂದು ಕಡೆ ಅವಮಾನ ಮತ್ತೊಂದು ಕಡೆ ಹಣ ಕಳೆದುಕೊಂಡ ಸಿಟ್ಟು ಇವುಗಳಿಂದಾಗಿ ಸರಿಯಾಗಿ ಊಟ, ತಿಂಡಿ ಮಾಡಲಿಲ್ಲ ನನ್ನ ಅರ್ಧಾಂಗಿ. ಇದರಿಂದಾಗಿ ನನಗೂ ಸರಿಯಾಗಿ ಊಟ ತಿಂಡಿ ಸಿಗಲಿಲ್ಲ. ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವುದೇ ಪತಿಯ ಧರ್ಮ ಅಂದುಕೊಂಡು ಹೇಗೋ ಸಹಿಸಿಕೊಂಡೆ.

ನಾಲ್ಕೈದು ದಿನಗಳು ಹಾಗೇ ಕಳೆದಿದ್ದವು. ಸಂಜೆ ಕೆಲಸದಿಂದ ಯಥಾಪ್ರಕಾರ ಸುಸ್ತಾಗಿ ಮನೆಗೆ ಬರುತ್ತಿದ್ದಂತೆ ಬಿಸಿ ಬಿಸಿ ಕಾಫಿ ಕೈಗೆ ಬಂತು. ನನ್ನವಳ ಮುಖದಲ್ಲಿ ನಗುವಿನ ಕಳೆ ತುಂಕೊಂಡಿತ್ತು.

"ಏನು ಸಮಾಚಾರ?" ಎಂದು ಕೇಳಿದೆ. ಮತ್ತಾವುದಾದರೂ ಇಳುವರಿ ಮಾರಾಟ ಬಂದಿದೆಯೋ ಎಂಬ ಹೆದರಿಕೆಯಿಂದ.

"ಪಕ್ಕದ್ಮನೆ ಪೂರ್ಣಿಮ ತಗೊಂಡಿದ್ದಳಲ್ಲ, ಆ ಸೀರೆಗಳೆಲ್ಲಾ ನಮ್ಮ ಸೀರೆಗಳ ಹಾಗೇ ಹಾಳಾಗಿವೆ ರೀ..., ಅಷ್ಟೇ ಅಲ್ಲ ಕೊನೇಮನೆ ಕಮಲಾಕ್ಷಿ ಖರೀದಿ ಮಾಡಿದ್ದ ಬಟ್ಟೆಗಳೂ ಸಹ ಹಾಳಾಗಿ ಹೋಗಿವೆ ರೀ, ನಾವೊಬ್ಬರೆ ಅಲ್ಲಾರೀ, ಮೋಸ ಹೋಗಿರೋದೂ..."

ಅಕ್ಕ ಪಕ್ಕದ ಮನೆಯವರೂ ನಮ್ಮ ಹಾಗೇ ಗುಂಡಿಗೆ ಬಿದ್ದಿದ್ದಾರೆ ಎಂಬ ವಿಷಯ ಇವಳಿಗದೆಷ್ಟು ಖುಷಿ ಕೊಡುತ್ತಿದೆ. ಕಷ್ಟಪಟ್ಟು ಸಂಪಾದಿಸಿದ್ದ ಹಣ ಪೋಲಾಯ್ತಲ್ಲ ಎಂದು ನಾನು ಸಂಕಟಪಡ್ತಾ ಇದ್ದರೆ, ನೆರೆಹೊರೆಯವರೂ ಹಾಳಾದರಲ್ಲ ಎಂಬ ಖುಷಿ ಇವಳಿಗೆ.

ಕಛೇರಿಯಲ್ಲಿ ಸಹೋದ್ಯೋಗಿ ತನ್ನ ಸ್ನೇಹಿತೆಗೆ, ಹೊಸ ಸೀರೆಯೊಂದನ್ನು ತೋರಿಸುತ್ತಿದ್ದಳು. ಸೀರೆಗಳ ಬಗ್ಗೆ ಎಂದೂ ತಲೆ ಕೆಡಿಸಿ ಕೊಳ್ಳದಿದ್ದ ನನಗೆ ಏಕೋ ಇತ್ತೀಚೆಗೆ ಸೀರೆ ಎಂದ ಕೂಡಲೇ ಕುತೂಹಲ ಉಂಟಾಗ ತೊಡಗಿತ್ತು.

"ಏನ್ರೀ, ನೀವೂ ಟೋಪಿ ಬಿದ್ದು ಒಂದಕ್ಕೆ ಎರಡು ಅಂತ ಈ ಸೀರೆ ಕೊಂಡುಕೊಂಡಿರಾ?" ಎಂದು ಹಾಸ್ಯ ಮಾಡುತ್ತಾ ಕೇಳಿದೆ..

"ಟೋಪೀನೂ ಇಲ್ಲ, ಗೀಪೀನೂ ಇಲ್ಲ. ನಮ್ಮಜಮಾನ್ರು, ರೇಶ್ಮೆ ಸೀರೆ ಅಂಗಡಿಯಿಂದ ಇದನ್ನು ತಂದಿದ್ದಾರೆ" ಅಂತ ಜಂಭದಿಂದ ಅದರ ಬೆಲೆಯನ್ನು ಹೇಳಿದಳು. ಆ ಬೆಲೆಯು ಒಂದೂವರೆಯಷ್ಟು ಹಣ ತೆತ್ತು ಅಂಥವೇ ನಾಲ್ಕು, ಎರಡನೇ ದರ್ಜೆಯ ಸೀರೆಗಳನ್ನು, ನಾಲ್ಕು ಅಂಥವೇ ಉಚಿತ ಸೇರೆಗಳೊಂದಿಗೆ ನಾವು ಟೋಪಿ ಹಾಕಿಸಿಕೊಂಡು ಬಂದಿದ್ದು ಖಚಿತವಾಯ್ತು.

ನನ್ನ ಹೆಂಡತಿಗೆ ಚೆನ್ನಾಗಿ ಬೈದು, ನಾವು ಕೊಂಡು ತಂದ ದೋಷಪೂರಿತ ಸೀರೆಯ ಮಾದರಿಯ ಉತ್ತಮದರ್ಜೆ ಸೀರೆಯ ಬೆಲೆ ಎಷ್ಟೆಂದು ಅವಳಿಗೆ ತಿಳಿಸಬೇಕೆಂದು ನಿರ್ಧರಿಸಿದೆ. ಆದರೆ ನಾನು ಈ ವಿಷಯವನ್ನೇನಾದರೂ ಹೇಳಿದ ಪಕ್ಷದಲ್ಲಿ ಅವಳು ಉತ್ತಮ ದರ್ಜೆಯ ಸೀರೆಯನ್ನೇ ಕೊಂಡುಕೊಳ್ಳೋಣವೆಂದು ಹಠ ಹಿಡಿದರೆ...! ಎಂಬ ಯೋಚನೆ ಬಂದು ನನ್ನ ನಿರ್ಧಾರವನ್ನು ಬದಲಿಸಿಕೊಂಡೆ.


ಒಂದು ಮಾಡೋಕೆ ಹೋಗಿ ಎರಡು ಆಗಿಬಿಟ್ಟರೆ? ✤

ಶತಮಾನದ ಸಣ್ಣ ಕಥೆಗಳು

ಪರಂಪರೆ ಹಾಗೂ ಪ್ರಯೋಗದ ಒಟ್ಟು ಸ್ವರೂಪ

ಹೊಸಗನ್ನಡ ಸಣ್ಣ ಕಥಾ ಪರಂಪರೆ ಹಾಗೂ ಪ್ರಯೋಗದ ಒಟ್ಟಾರೆ ಸ್ವರೂಪವನ್ನು ಪರಿಚಯಿಸುವಲ್ಲಿ ಶತಮಾನದ ಸಣ್ಣಕಥೆಗಳ ಸಂಕಲನದ ಯಶಸ್ಸು ಗಮನಾರ್ಹ. ಇದರ ಮಿತಿ ಏನಿದ್ದರೂ ಅಧ್ಯಯನ ಯೋಗ್ಯವೆನ್ನಿಸುವಂಥ ಅಪೂರ್ವ ಮಾದರಿಗಳು ಇಲ್ಲಿವೆ.

ಕತೆ ಹೇಳುವ ಆಸೆ, ಕೇಳುವ ತವಕ ಮನುಷ್ಯನ ಮೂಲ ಸ್ವಭಾವಗಳಲ್ಲಿ ಒಂದು. ಲಿಪಿ ಹುಟ್ಟುವ ಮುನ್ನವೇ ಕತೆ ಹುಟ್ಟಿರಬೇಕು. ಇದರ ಮೂಲ ವಾಕ್ ಪರಂಪರೆಯು ಜಾನಪದದಲ್ಲಿ ಮುಚ್ಚಿ ಹೋಗಿದೆ. ಬಹುಶಃ ಜಗತ್ತಿನ ಎಲ್ಲ ಭಾಷೆಗಳ ಪ್ರಾಚೀನ ನೆಲೆಯಲ್ಲಿ ಜನಪದ ಕಥೆಗಳಿವೆ. ಕನ್ನಡದಲ್ಲಿ ಒಂಬತ್ತನೆ ಶತಮಾನದ 'ವಡ್ಡಾರಾಧನೆ' ಯಿಂದ ಮೊದಲಾಗಿ ಇಂದಿನವರೆಗೆ, ಲಿಖಿತ ಹಾಗೂ ವಾಕ್ ಪರಂಪರೆಯಲ್ಲಿ ಲಕ್ಷಾಂತರ ಕತೆಗಳು ರಚನೆಯಾಗಿರ ಬಹುದಾದರೂ ಕಾಲ ಪ್ರವಾಹದಲ್ಲಿ ತೇಲಿ ಬಂದು ಉಳಿದ ಕತೆಗಳು ಮಾತ್ರ ದಾಖಲಾಗಿವೆ. ಮುದ್ರಣ ಯಂತ್ರದ ಸೌಲಭ್ಯದಿಂದಾಗಿ ಹೊಸಗನ್ನಡ ಕತೆಗಳು ಮಾತ್ರ ಎಲ್ಲವೂ ಲಭ್ಯವಾಗುತ್ತಿವೆ ಎಂಬುದನ್ನು ಬಿಟ್ಟರೆ, ಪ್ರಾಚೀನ ಕತೆಗಾರನಿಗಿಂತ ಇಂದಿನ ಸಾಹಿತಿ ಕತೆಗಾರ ಮೂಲತಃ ಭಿನ್ನವಾಗಿಲ್ಲ. ಹೇಳುವ ಕತೆಯನ್ನು ಕುತೂಹಲ ಹುಟ್ಟಿಸುವಂತೆ ಹೇಳಬೇಕು; ಆಡು ಮಾತಿಗಿರುವ ಮಿತಿಯನ್ನು ದಾಟಿ ಕೇಳುಗನೊಂದಿಗೆ ಸಾಮರಸ್ಯ




ಕೃತಿ-ಕರ್ತೃ

ಸಾಧಿಸಬೇಕೆಂಬ ಗುರಿ ಇಬ್ಬರಿಗೂ ಸಾಮಾನ್ಯವಾದುದು. ವಾಸ್ತವವಾಗಿ ಮಾನವ ಜನಾಂಗವು ತಲೆಮಾರಿನಿಂದ ತಲೆಮಾರಿಗೆ ತನ್ನ ನಂಬಿಕೆ, ಆಚರಣೆ, ನೀತಿ ಮತ್ತು ವಿವೇಕವನ್ನು ಕತೆಗಳ ಮೂಲಕವೇ ರವಾನಿಸಿದೆ ಎಂಬುದನ್ನು ನೆನೆದರೆ ಸಂಸ್ಕೃತಿಯ ವಿಕಾಸದಲ್ಲಿ ಕತೆಗಳ ಪಾತ್ರ ಏನೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಆಧುನಿಕ ಯುಗದ ಸಾಹಿತ್ಯ ಪರಂಪರೆಯಲ್ಲಿ ಸಣ್ಣ ಕತೆಯ ಮಹತ್ವ ಹೆಚ್ಚಾಯಿತು. ವಸಾಹತುಶಾಹಿಯ ಪರಿಣಾಮವಾಗಿ ಇಂಗ್ಲಿಷ್ ಸಾಹಿತ್ಯದ ಪರಿಚಯ, ಆಧುನಿಕ ಶಿಕ್ಷಣ, ವೃತ್ತ ಪತ್ರಿಕೆಗಳು, ನಿಯತಕಾಲಿಕಗಳ ಬೇಡಿಕೆ, ಕ್ಷಿಪ್ರಗತಿಯ ಆಧುನಿಕ ಜೀವನದ ಉದ್ವೇಗ ಹಾಗೂ ತಳಮಳ, ಇವೆಲ್ಲವೂ ಸೇರಿ ಸಣ್ಣ ಕತೆಯ ಸ್ವರೂಪ ಮತ್ತು ತಿರುಳಿನಲ್ಲಿಯೂ ಆಮೂಲಾಗ್ರ ಬದಲಾವಣೆಯಾಯಿತು. ಉಳಿದ ಯಾವ ಸಾಹಿತ್ಯ ಪ್ರಕಾರಗಳಿಗೂ ಇಲ್ಲದ ಪ್ರಮಾಣದಲ್ಲಿ ಸಣ್ಣ ಕತೆಗೆ ಬೇಡಿಕೆಯಿದ್ದ ಕಾರಣ, ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಬೆಳೆಯಿತು. ರಚನೆಯ ಸರಳತೆಯಿಂದಾಗಿ ಯಾವುದೇ ವಸ್ತು ಪಾತ್ರ ಸನ್ನಿವೇಶಗಳು ಸಣ್ಣ ಕತೆಗೆ ಸುಲಭವಾಗಿ ಹೊಂದಿಕೊಳ್ಳುತ್ತವೆ. ಕಳೆದ ನೂರು ವರ್ಷಗಳ ಕನ್ನಡ ಸಾಹಿತ್ಯದಲ್ಲಿ ನಿಸ್ಸಂದೇಹವಾಗಿ ಸಣ್ಣ ಕತೆ, ಗುಣ ಮತ್ತು ವೈವಿಧ್ಯಗಳೆರಡೂ ನೆಲೆಯಿಂದ ವಿಸ್ತಾರವಾಗಿ ಬೆಳೆದಿದೆ. ಎಸ್ ದಿವಾಕರ್ ಅವರು ಸಂಪಾದಿಸಿ, ಪ್ರಿಸಂ ಪ್ರಕಾಶನದವರು ಪ್ರಕಟಿಸಿರುವ "ಶತಮಾನದ ಸಣ್ಣ ಕತೆ"ಗಳು ಎಂಬ ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ ಈ ಶತಮಾನದ ಅತ್ಯುತ್ತಮ ಸಣ್ಣ ಕತೆಗಳ ಒಂದು ಪ್ರಾತಿನಿಧಿಕ ಸಂಕಲನವಾಗಬೇಕೆಂಬ ಮಹದಾಸೆ ಹೊತ್ತು ಈ ಕೃತಿ ಹೊರಬಂದಿದೆ. ಶತಮಾನದ ಕೊನೆಯ ಘಟ್ಟದಲ್ಲಿ ಪ್ರಕಟವಾಗಿರುವುದರಿಂದ, ಸಂಪಾದಕರು ಮತ್ತು ಪ್ರಕಾಶಕರ ಆಶಯಕ್ಕೆ ಸಹಜವಾಗಿಯೇ ಮಹತ್ವ ದೊರೆಯುವಂತೆ ಆಗಿದೆ.

ಎಸ್ ದಿವಾಕರ್ ಅವರು ಕನ್ನಡದ ಉತ್ತಮ ಸಣ್ಣ ಕತೆಗಾರರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. ಜಗತ್ತಿನ ಹಲವು ಶ್ರೇಷ್ಠ



ಡಾ ಕೆ. ಮರುಳಸಿದ್ದಪ್ಪ

ಸಣ್ಣ ಕತೆಗಳನ್ನು ಅನುವಾದಿಸಿ ಕನ್ನಡ ಓದುಗರಿಗೆ ಪರಿಚಯಿಸಿದ ಅವರು, 'ಮಲ್ಲಿಗೆ', 'ಸುಧಾ' ಇಂತಹ ಜನಪ್ರಿಯ ನಿಯತಕಾಲಿಕೆಗಳ ಸಂಪಾದಕ ವರ್ಗದಲ್ಲಿ ಕೆಲಸ ಮಾಡಿರುವುದರಿಂದ ಸಣ್ಣ ಕತೆಯ ವೈವಿಧ್ಯ, ವಿಸ್ತಾರ, ಮೌಲಿಕತೆಯನ್ನು ಚೆನ್ನಾಗಿ ಬಲ್ಲವರು. 'ಶತಮಾನದ ಸಣ್ಣ ಕತೆಗಳು' ಮಾದರಿಯ ಒಂದು ಸಂಕಲವನ್ನು ಸಂಪಾದಿಸಲು ಬೇಕಾದ ಅನುಭವ ಅರ್ಹತೆಗಳೆರಡೂ ಅವರಿಗೆ ಇದ್ದರೂ, ತಮ್ಮ ಸಂಕಲನಕ್ಕೆ ಅವರು ನಿಗದಿಪಡಿಸಿಕೊಂಡಿರುವ ಗುರಿ ಹಲವು ಸಮಸ್ಯೆಗಳನ್ನು ತಂದು ಹಾಕಿದೆ. ಈ ಸಂಕಲನದ ಪ್ರಕಾಶಕ ಮತ್ತು ಸಂಪಾದಕರಿಬ್ಬರೂ ಈ ಕೃತಿಯನ್ನು ಒಂದು ಪ್ರಾತಿನಿಧಿಕ ಸಂಕಲನ ಎಂದೇ ಘೋಷಿಸಿಕೊಂಡಿದ್ದಾರೆ. ವಾಸ್ತವವಾಗಿ

ಅವರು ಇಂತಹ ಒಂದು ಚೌಕಟ್ಟಿಗೆ ಬದ್ಧವಾಗಿರಬೇಕಾದ ಅಗತ್ಯವಿರಲಿಲ್ಲ. ಖಾಸಗಿ ಪ್ರಕಾಶನ ಸಂಸ್ಥೆಯೊಂದು ಸಂಪಾದಕನ ಅಭಿರುಚಿಯೊಂದನ್ನು ಮಾನದಂಡವನ್ನಾಗಿಸಿಕೊಂಡು ಒಂದು ಸಂಕಲನವನ್ನು ಹೊರತರುವ ಹಕ್ಕನ್ನು ಯಾರೂ ಪ್ರಶ್ನಿಸಲಾರರು. ಆದರೆ ಒಮ್ಮೆ ಅವರು ಈ ಸಂಕಲನವನ್ನು ಪ್ರಾತಿನಿಧಿಕವೆಂದು ಕರೆದುಕೊಂಡ ಬಳಿಕ, ಏಳುವ ವಿವಾದಕ್ಕೆ ಉತ್ತರಿಸುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕವಿತೆ, ಕತೆ, ಏಕಾಂಕ ಹೀಗೆ ಯಾವುದೇ ಸಾಹಿತ್ಯ ಪ್ರಕಾರದ ಸಂಕಲನವೊಂದನ್ನು ಸಂಪಾದಿಸಿ ಕೊಡುವ ವ್ಯಕ್ತಿ ಅನಿವಾರ್ಯವಾಗಿ ತನ್ನ ವೈಯಕ್ತಿಕ ಅಭಿರುಚಿ ಮತ್ತು ಸಂವೇದನೆಗಳಿಗೇ ನಿಷ್ಠನಾಗಿರಬೇಕಾಗುತ್ತದೆ. ಅವರು ಹಾಗೆ ಹೇಳಿಕೊಳ್ಳದಿದ್ದರೂ ಅಂತಿಮವಾಗಿ ಅವನ ಆಯ್ಕೆಯನ್ನು ವೈಯಕ್ತಿಕ ಮಾನದಂಡಗಳೇ ನಿರ್ಣಯಿಸುತ್ತವೆ. ಇದರಲ್ಲಿ ತಪ್ಪೇನೂ ಇಲ್ಲ. ಪ್ರಾತಿನಿಧಿಕವೆಂಬ ಪರಿಕಲ್ಪನೆಯೇ ಸಾಹಿತ್ಯ ಕ್ಷೇತ್ರದಲ್ಲಿ ಹಲವು ವಿವಾದಗಳಿಗೆ ದಾರಿ ಮಾಡಿಕೊಡುತ್ತದೆ. ಒಂದು ಶತಮಾನದ ದೀರ್ಘ ಕಾಲದಲ್ಲಿ ಆಯ್ಕೆಮಾಡಿ ಪ್ರಕಟಿಸಬಹುದಾದ ಹಲವು ವಿವಿಧ ಮಾದರಿಯ ಸಂಕಲನಗಳಿಗೆ ಅವಕಾಶವಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಹೀಗೆ ಸಾಹಿತ್ಯ ಮಾರ್ಗಗಳನ್ನು ಆಯ್ಕೆಯ ಮಾನದಂಡವಾಗಿ ಬಳಸಿಕೊಳ್ಳಬಹುದು. ಮಹಿಳೆಯರೇ ರಚಿಸಿದ ಕತೆಗಳ ಸಂಕಲನವೂ ಈಗಾಗಲೇ ಹೊರಬಂದಿದೆ. ಯಾವುದೇ ಶೀರ್ಷಿಕೆಯಿದ್ದರೂ ಆಯ್ಕೆಯ ಹಿಂದಿರುವ ತಾತ್ವಿಕತೆಯನ್ನು ಮಾತ್ರ ಸಂಪಾದಕರು ಸ್ಪಷ್ಟಪಡಿಸಬೇಕಾಗುತ್ತದೆ. ಈ ಸಂಕಲನದ ಸಂಪಾದಕರೂ ಅಂತಹ ಒಂದು ಪ್ರಯತ್ನವನ್ನು ಮುನ್ನುಡಿಯಲ್ಲಿ ಮಾಡಿದ್ದಾರೆ. ಓದುಗರು ಅಥವಾ ವಿಮರ್ಶಕರು ತಾವು ಆಯ್ಕೆಮಾಡಿರುವ ಕತೆಗಳು ಪ್ರಾತಿನಿಧಿಕ ಆಗಿಲ್ಲವೆಂದು ಆಕ್ಷೇಪಿಸಬಹುದೆಂಬ ಅರಿವೂ ಅವರಿಗಿದೆ. ಇಂತಹ ಸಂದರ್ಭದಲ್ಲಿ ಸಂಪಾದಕನು ಅಸಹಾಯಕನೆಂಬುದು ನಿಜ. ಆದರೆ ಸಂಪಾದಕರು ತಮ್ಮ ಮುನ್ನುಡಿಯಲ್ಲಿ ಪ್ರಸಿದ್ಧ ಸಣ್ಣಕತೆಗಾರರ ಒಂದು ಪಟ್ಟಿಯನ್ನೇ ಕೊಟ್ಟು, ಈ ಕತೆಗಾರರ ಕತೆಗಳು ತಮ್ಮ ಸಂಕಲನದಲ್ಲಿ ಸೇರ್ಪಡೆಯಾಗದಿರಲು ಕಾರಣ, ಪುಸ್ತಕದ ಪುಟಗಳ ಮಿತಿ ಎಂದಿರುವುದು ವಿವಾದಾಸ್ಪದ ಆಗುತ್ತದೆ. ವಾಸ್ತವವಾಗಿ ಈಗಿರುವ ಪುಟ ಮಿತಿಯಲ್ಲೇ ಅವರು ಕೈಬಿಟ್ಟಿರುವ ಕೆಲವು ಉತ್ತಮ ಕತೆಗಾರರಿಗೆ ಅವಕಾಶ ಮಾಡಿಕೊಟ್ಟು ಜಾಗ ಗಿಟ್ಟಿಸಿಕೊಂಡಿರುವ ಕೆಲವು ಸಾಧಾರಣ ಕತೆಗಾರರನ್ನು ತೆಗೆದುಹಾಕಲು ಖಂಡಿತಾ ಅವಕಾಶವಿದೆ. ಅಲ್ಲದೆ, ಈ ಸಂಕಲನದಲ್ಲಿರುವ ಎಂಬತ್ತೆರಡು ಕತೆಗಾರರಲ್ಲಿ ಐವತ್ತೆಂಟು ಕತೆಗಾರರು ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಹುಟ್ಟಿದವರಾಗಿದ್ದರೆ, ಕೇವಲ ಇಪ್ಪತ್ತು ನಾಲ್ಕು ಕತೆಗಾರರು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹುಟ್ಟಿದವರು. ಇದರಿಂದ ಅರ್ಧಶತಮಾನದ ಕಾಲಮಾನದ ದೃಷ್ಟಿಯಿಂದ ಸಹ ಇದು ಪ್ರಾತಿನಿಧಿಕ ಎನ್ನಿಸುವುದಿಲ್ಲ. ಕನ್ನಡ ಸಣ್ಣಕತೆಗೆ ವಸ್ತುವೈವಿಧ್ಯ ಹಾಗೂ ಚುರುಕಾದ ಕಥನ ಶೈಲಿ ಪ್ರಾಪ್ತವಾದದ್ದೇ ಕಳೆದ ಮೂರುನಾಲ್ಕು ದಶಕಗಳ ಬಳಿಕವೆಂಬುದನ್ನು ಯಾರೂ ಮರೆಯುವಂತಿಲ್ಲ. ಗ್ರಾಮೀಣ ನೆಲೆಯ ಕತೆಗಾರರು, ಸಮಾಜದ ವಿವಿಧ ವರ್ಗ ಜಾತಿಗಳಿಂದ ಹುಟ್ಟಿಬಂದ ಸೃಜನಶೀಲ ಮನಸ್ಸುಗಳು ಬದುಕನ್ನು ಗ್ರಹಿಸಿ, ಸಾಹಿತ್ಯದ ಕ್ಷಿತಿಜವನ್ನು ವಿಸ್ತರಿಸಿದ ಅಪೂರ್ವ ಕಾಲವಿದು. ಒಂದು ಶತಮಾನದ ಸಣ್ಣಕತೆಗಳಲ್ಲಿ ಅರೆಪಾಲಿಗೂ ಮಿಗಿಲಾದ ಶ್ರೇಷ್ಠ ಕೃತಿಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹುಟ್ಟಿದ ಕತೆಗಾರರಿಂದ ಬಂದಿವೆಯಾದುದರಿಂದ ಆಯ್ಕೆಯಲ್ಲಿ ಅವರಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿಲ್ಲವೆಂಬ ಆಕ್ಷೇಪಣೆಗೆ ಅವಕಾಶವಾಗಿದೆ.

ಅಲ್ಲದೆ, ಶತಮಾನದ ಕತೆಗಳ ಪ್ರಾತಿನಿಧಿಕ ಸಂಕಲನ ಪ್ರಕಟಿಸುವ ಆದರ್ಶದ ಹಿಂದಿರುವ ಒತ್ತಡಗಳಾವುವು? ಎಂಬುದೂ ಇಲ್ಲಿ ಮುಖ್ಯವಾಗಬೇಕಾಗುತ್ತದೆ. ಕೇವಲ ಸಾಹಿತ್ಯ ಪರಂಪರೆ, ವಸ್ತು, ತಂತ್ರ, ಶೈಲಿಗಳೇ ಆಯ್ಕೆಯನ್ನು ನಿರ್ಣಯಿಸುವಂತೆ, ಸಾಂಸ್ಕೃತಿಕ ವಿಕಾಸದ ಸ್ಥೂಲ ಚಿತ್ರವೊಂದನ್ನೂ ಇಂತಹ ಸಂಕಲನ ಕಟ್ಟಿಕೊಡುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಶತಮಾನವೊಂದರ ಸಣ್ಣಕತೆಗಳು ಒಂದು ಭಾಷೆ ಹಾಗೂ ಜನ ಸಮುದಾಯಗಳಲ್ಲಿ

ಆದ ಸಾಮಾಜಿಕ ಏರಿಳಿತಗಳು, ಪರಿವರ್ತನೆ, ಸಂಘರ್ಷ- ಮುಂತಾದ ಸಾಮಾಜಿಕ ವಿಚಾರಗಳ ಬಗೆಗೆ ಒದಗಿಸುವ ಮಾಹಿತಿ ಆಕಾಲದ ವೈಚಾರಿಕತೆಯ ಸ್ವರೂಪವನ್ನು ಪ್ರತಿಬಿಂಬಿಸುವುದಲ್ಲದೆ ಅಂದಿನ ಸಾಂಸ್ಕೃತಿಕ ಚರಿತ್ರೆಯ ನಿರ್ಮಿತಿಗೆ ಅಪರೂಪವೆನ್ನಿಸುವಂತಹ ಆಧಾರಗಳನ್ನು ಒದಗಿಸಬಹುದಾಗಿದ. ಎಸ್ ದಿವಾಕರ್ ಅವರ ಸಂಕಲನದ ಮಿತಿ ಏನಿದ್ದರೂ ಒಟ್ಟಾರೆಯಾಗಿ ಅಧ್ಯಯನ ಯೋಗ್ಯ ಎನ್ನಿಸುವಂತಹ ಅಪೂರ್ವ ಮಾದರಿಗಳು ಅಲ್ಲಿ ಗೋಚರಿಸುತ್ತವೆ. ಇದಕ್ಕೆ ಕಾರಣ, ವಿವರಗಳಲ್ಲಿ ಹೆಚ್ಚು ಕಡಿಮೆಯಾಗಿದ್ದರೂ ಸಹ ಕನ್ನಡದ ಅತಿ ಮಹತ್ವದ ಕತೆಗಾರರು ಯಾರೂ ಇಲ್ಲ ಬಿಟ್ಟು ಹೋಗಿಲ್ಲ. ಪಂಜೆ, ಮಾಸ್ತಿ, ಗೊರೂರು, ಅ.ನ.ಕೃ., ಚದುರಂಗ, ನಿರಂಜನ, ರಾಮಚಂದ್ರಶರ್ಮ, ಶಾಂತಿನಾಥ ದೇಸಾಯಿ, ಚಿತ್ತಾಲ, ಅನಂತಮೂರ್ತಿ, ಲಂಕೇಶ್, ತೇಜಸ್ವಿ, ರಾಮಣ್ಣ, ಡಿಸೋಜ, ದೇವನೂರು, ಕಟ್ಪಾಡಿ, ಬೋಳುವಾರು, ಕುಂ ವೀ. ಕಾಯ್ಕಿಣಿ, ಮೊಗಳ್ಳಿ, ರಶೀದ್, ಗೌರಮ್ಮ, ತ್ರಿವೇಣಿ, ಸಾರಾ, ವೈದೇಹಿ, ಬಿ ಟಿ ಜಾಹ್ನವಿ- ಹೀಗೆ ಹಲವು ನೆಲೆಯ ಶ್ರೇಷ್ಠ ಕತೆಗಾರರ ರಚನೆಗಳು ಇಲ್ಲಿ ಸೇರ್ಪಡೆಯಾಗಿವೆ.

ಆಧುನಿಕ ಸಣ್ಣಕತೆಗಳಲ್ಲಿ ಸಮಕಾಲೀನ ವಸ್ತುವಿಗೇ ಆದ್ಯತೆ ದೊರೆತಿರುವುದು ಸಹಜವೇ ಆಗಿದೆ. ಈ ಸಂಕಲನದ ಎಲ್ಲಾ ಕತೆಗಳೂ ಸಮಕಾಲೀನ ಬದುಕನ್ನೇ ಕುರಿತಿವೆಯಾದರೂ ಗ್ರಹಿಸುವ ಕ್ರಮದಲ್ಲಿ ಹಾಗೂ ನಿರೂಪಿಸುವ ರೀತಿಯಲ್ಲಿ ವ್ಯತ್ಯಾಸವಿದೆ. ಅಲ್ಲದೆ, ನಿರ್ದಿಷ್ಟ ಕತೆಗಾರನ ಯಾವ ಕತೆಯನ್ನು ಆರಿಸಿಕೊಳ್ಳ ಬೇಕೆಂಬ ವಿಚಾರದಲ್ಲಿಯೂ ಸಂಪಾದಕರ ವಿವೇಚನೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಉದಾಹರಣೆಗೆ ಗೋರೂರರ 'ಕಮ್ಮಾರ ವೀರಭದ್ರಾಚಾರಿ ಜೋಯಿಸನಾದುದು' ಎಂಬಂತಹ ಕತೆಯನ್ನು ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ', ದೇವನೂರರ 'ಮಾರಿಕೊಂಡವರು' ಅಥವಾ ಮೊಗಳ್ಳಿಗಣೇಶರ 'ಬುಗುರಿ'ಯೊಂದಿಗೆ ಹೋಲಿಸಿದಾಗ ಗ್ರಾಮೀಣ ಬದುಕನ್ನು ಇತ್ತೀಚಿನ ಕತೆಗಾರರು ಗೊರೂರರಿಗಿಂತ ಯಥಾರ್ಥವಾಗಿ ಸಂಕೀರ್ಣವಾಗಿ ಚಿತ್ರಿಸ ಬಲ್ಲರೆಂಬುದು ಸ್ಪಷ್ಟವಾಗುತ್ತದೆ. ಈ ಸಂಕಲನದ ಕತೆಗಳಲ್ಲಿ ಮೊದಲಿನ ಎರಡು ತಲೆಮಾರಿನ ಕತೆಗಾರರಲ್ಲಿ ನವೋದಯ, ಪ್ರಗತಿಶೀಲರಿದ್ದರೆ, ಮುಂದಿನವರು ನವ್ಯ ಮತ್ತು ನವ್ಯೋತ್ತರ ಪರಂಪರೆಯವರು. ನವೋದಯ ಮತ್ತು ಪ್ರಗತಿಶೀಲ ಪರಂಪರೆಯ ಕತೆಗಾರರ ನಡುವೆ ಮನೋಧರ್ಮದ ದೃಷ್ಟಿಯಿಂದ ವ್ಯತ್ಯಾಸವಿದ್ದರೂ ಸಮಾನ ಅಂಶಗಳೇ ಒಡೆದು ಕಾಣುತ್ತವೆ. ಎರಡೂ ಪರಂಪರೆಯ ಕತೆಗಾರರಿಗೆ ವ್ಯಕ್ತಿಯ ಸಾಮಾಜಿಕ ಪರಿಸರವೇ ಮುಖ್ಯ. ಪ್ರಗತಿಶೀಲರು ಈ ಪರಿಸರವನ್ನು ಬದಲಾಯಿಸಬೇಕನ್ನುವ ಛಲ ಹಾಗೂ ಭಾವಾವೇಶಕ್ಕೆ ಪಕ್ಕಾಗಿದ್ದರೆ, ನವೋದಯದವರಿಗೆ ಅದರ ಅಗತ್ಯ ಕಂಡುಬಂದಿಲ್ಲ. ನಿರಂಜನರ 'ಕೊನೆಯ ಗಿರಾಕಿ' ಯಂತಹ ಕತೆ ಎಂತಹ ಭಾವಾವೇಶ ಹಾಗೂ ನಿರ್ಣಾಯಕ ಧಾಟಿಯಲ್ಲಿ ವೇಶ್ಯಾ ಸಮಸ್ಯೆ ಯನ್ನು ನಿರೂಪಿಸಿದೆಯೆಂದರೆ ಅಲ್ಲಿ ಬರುವ ಸಂಕೇತಗಳೆಲ್ಲ ಪ್ರಜ್ಞಾಪೂರ್ವಕವೆನ್ನಿಸಿ ಒಂದು ಕತೆಯ ಸಹಜ ಆವಿಷ್ಕಾರಕ್ಕೆ ಅವಕಾಶವೇ ದೊರೆತಿಲ್ಲವೆನ್ನಿಸಿಬಿಡುತ್ತದೆ. ಚಿತ್ತವಿಕಾರಗಳಿಗೆ ಎಡೆಯಾಗದೆ ಕತೆಯನ್ನು ಸಹಜವಾಗಿ ನಿರೂಪಿಸುವುದರಲ್ಲಿ ನವೋದಯ ಕತೆಗಾರರ ಸಾಧನೆ ಅನನ್ಯವಾದುದು. ಈ ಪರಂಪರೆಯ ಶ್ರೇಷ್ಠ ಕತೆಗಾರ ಮಾಸ್ತಿಯವರೇ ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದ್ದಾರೆ.

ನವ್ಯಪರಂಪರೆಯ ಕತೆಗಳ ವೈಶಿಷ್ಟ್ಯವನ್ನು ವಿವರಿಸುತ್ತಾ ಈಗಾಗಲೇ ಚಲಾವಣೆಯಲ್ಲಿರುವ ವಿಮರ್ಶಾ ಧಾಟಿಯನ್ನೇ ಈ ಸಂಪಾದಕರೂ ಒಪ್ಪಿ ಪುನರಾವರ್ತಿಸಿದ್ದಾರೆ. ನವ್ಯರು ಪ್ರತಿಪಾದಿಸಿದ ಆಧುನಿಕ ಬದುಕಿನ ಅನಾಥ ಸ್ಥಿತಿ, ಅವರ ಕೃತಿಗಳಲ್ಲಿ ಕಂಡುಬರುವ ಅಂತರ್ಮುಖಿ ದೃಷ್ಟಿ, ಸ್ವಕೇಂದ್ರಿತ ಪ್ರಜ್ಞೆ- ಇವೆಲ್ಲಾ ಇಂದು ಕ್ಲೀಷೆಗಳಾಗಿದ್ದು, ಒಂದು ಕತೆಯ ಮೌಲಿಕತೆ ಅದರ ತಾತ್ವಿಕತೆಗಿಂತ ಕಲಾತ್ಮಕತೆಯನ್ನು ಅವಲಂಬಿಸಿರುತ್ತದೆ ಎಂಬುದಕ್ಕೆ ಈ ಸಂಕಲನದಲ್ಲಿರುವ ಅನಂತಮೂರ್ತಿಯವರ 'ಸೂರ್ಯನ ಕುದುರೆ'ಯೇ ಶ್ರೇಷ್ಠ ಉದಾಹರಣೆ. ಉಲ್ಲಾಸಮಯವಾಗಿ ಓದಿಸಿಕೊಂಡು ಹೋಗುವುದು ಕತೆಯ ಮೊತ್ತ ಮೊದಲ ಗುಣವಾಗಿರಬೇಕೆಂಬುದನ್ನು ಲಕ್ಷಿಸಿದರೆ ಈ

ಸಂಕಲನದಲ್ಲಿರುವ ಕೆಲವು ನವ್ಯಕತೆಗಳನ್ನು ಓದಲು ತಾಳ್ಮೆಯೇ ಉಳಿಯುವುದಿಲ್ಲ. ಆದರೆ ಕುಂ ವೀರಭದ್ರಪ್ಪ, ಬೋಳುವಾರು, ಬೆಸರಗರಹಳ್ಳಿ ರಾಮಣ್ಣನವರ ಕತೆಗಳಲ್ಲಿ ಈ ಉಲ್ಲಾಸವೇ ಪ್ರಮುಖವಾಗಿ ಗೋಚರಿಸುತ್ತದೆ. ಬದುಕಿನ ಸೂಕ್ಷ್ಮ ನೆಲೆಗಳನ್ನು ಆಳವಾಗಿ ಹೊಕ್ಕು ಶೋಧಿಸುವಲ್ಲಿ ಮತ್ತು ಪಾತ್ರಗಳ ಮನೋ ವಿಶ್ಲೇಷಣೆ ಹಾಗೂ ಭಾಷೆಯ ಕಾವ್ಯಾತ್ಮಕತೆ ಯಲ್ಲಿ ನವ್ಯಯರು ಅಸಾಧಾರಣ ಯಶಸ್ಸು ಪಡೆದರೆಂಬುದು ಸುಳ್ಳಲ್ಲ. ಎಲ್ಲ ಪರಂಪರೆಯಂತೆ ಇಲ್ಲಿಯೂ ಗಟ್ಟಿಕಾಳುಗಳು ಬೆರಳೆಣಿಕೆಯಲ್ಲಿದ್ದರೆ ಜೊಳ್ಳು ಸಮೃದ್ಧವಾಗಿ ವಿಜೃಂಭಿಸಿದೆ. ಈ ಸಂಕಲನದಲ್ಲಿ ಗಟ್ಟಿ ಜೊಳ್ಳು ಗಳೆರಡೂ ಸಮ ಸಮವಾಗಿ ಅವಕಾಶ ಪಡೆದಿವೆಯೆಂಬುದೇ ಗಮನಿಸಬೇಕಾದ ಸಂಗತಿ.

ಈ ಸಂಕಲನದಲ್ಲಿರುವ ಮುಸ್ಲಿಂ ಕತೆಗಾರರು ಮತ್ತು ದಲಿತ ಕತೆಗಾರರನ್ನು ಅಭ್ಯಾಸ ಮಾಡಿದರೆ ಒಂದು ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಅವರೆಲ್ಲಿ ತಾವು ನಿಂತ ನೆಲದ ಮೇಲೆ ಗಟ್ಟಿಯಾಗಿ ಕಾಲೂರಿ ಬರೆಯುತ್ತಿದ್ದಾರೆ. ಪ್ರಗತಿಶೀಲರಂತೆ ಭಾವಾವೇಶವಿಲ್ಲದೆ, ನವ್ಯರಂತೆ ಅಂತರ್ಮುಖಿಗಳಾಗದೆ, ಅಥವಾ ನವೋದಯದ ವರಂತೆ ಆದರ್ಶವಾದಿಗಳೂ ಎನ್ನಿಸದೆ, ತಮ್ಮ ಸಾಮಾಜಿಕ ಪರಿಸರದ ಸ್ಪಂದಿಕೆಯೇನೆಂಬುದನ್ನು ಚೆನ್ನಾಗಿ ಗ್ರಹಿಸಿ ಸೃಜನಶೀಲವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಮಹಿಳೆಯರ ಕತೆಗಳನ್ನು ಈ ನಿಟ್ಟಿನಿಂದ ಗಮನಿಸಿದಾಗ ಕೊಡಗಿನ ಗೌರಮ್ಮನವರಿಂದ ಬಿ ಟಿ ಜಾಹ್ನವಿಯವರೆಗೆ ಅವರ ಗ್ರಹಿಕೆಯಲ್ಲಾಗಿರುವ ಪಲ್ಲಟಗಳು ಗಮನಾರ್ಹವಾಗಿವೆ. ಪುರುಷ ಪ್ರಧಾನ ಸಮಾಜವು ಏಕರೀತಿಯಲ್ಲಿಲ್ಲ; ಅದೂ ಜಾತಿ ವರ್ಗಗಳ ವಾಸ್ತವಗಳಿಂದ ನಿಯಂತ್ರಿಸಲಾಗಿದ್ದು, -ಅದರ ಯಥಾವತ್ತಾದ ಚಿತ್ರಣವನ್ನು ಕಾಲದಿಂದ ಕಾಲಕ್ಕೆ ನಮ್ಮ ಕತೆಗಾರ್ತಿಯರು ಸಮರ್ಥವಾಗಿ ನೀಡಿದ್ದಾರೆ. ಈ ಮೂರೂ ವರ್ಗದ ಕತೆಗಳು ಅನುಭವದ ಹೊಸತನದಿಂದಲೂ ಉಳಿದವರಿಗಿಂತ ಭಿನ್ನವಾಗಿವೆ.

ಕಥಾ ನಿರೂಪಣೆ ಹಾಗೂ ತಂತ್ರದ ದೃಷ್ಟಿಯಿಂದ ನವೋದಯ ಹಾಗೂ ನವ್ಯೋತ್ತರ ಕತೆಗಾರರಿಗೆ ನಮ್ಮ ನಾಡಿನ ಕಥಾ ಪರಂಪರೆಯೊಂದಿಗಿರುವ ಗಾಢ ಸಂಬಂಧ ಗಮನಾರ್ಹವಾದುದು. ವಾಕ್ ಪರಂಪರೆಯ ಜನಪದ ಕಥೆಗಳು ಹಾಗೂ ಲಿಖಿತ ಸಾಹಿತ್ಯದ ಗದ್ಯಕಥಾ ಪರಂಪರೆಯನ್ನು ನೆನಪಿಗೆ ತರುವಂಥಹ ಸಹಜವಾದ ಕಥನ ಶೈಲಿಯನ್ನು ಅವರಲ್ಲಿ ಕಾಣಬಹುದು. ನವ್ಯೋತ್ತರ ಕತೆಗಾರರಂತೂ ವ್ಯಂಗ್ಯ ಹಾಗೂ ಹಾಸ್ಯವನ್ನು ತಮ್ಮ ಕಥನ ಕಲೆಯ ಮೂಲ ಸೆಲೆಯನ್ನಾಗಿಸಿಕೊಳ್ಳುವ ಮೂಲಕ ಜನಪದ ಕಥಾ ಪರಂಪರೆಗೆ ವಾರಸುದಾರರಾಗಿದ್ದಾರೆ. ಆಡುಮಾತಿನ ನುಡಿಗಟ್ಟು ಹಾಗೂ ದೇಸಿಯ ಚೆಲುವು ಭಾಷೆಯಲ್ಲಿ ದಟ್ಟವಾಗಿ ಕಾಣಿಸಿಕೊಂಡದ್ದು ಇವರ ಕತೆಗಳಲ್ಲಿಯೇ ಎಂಬುದೂ ಗಮನಿಸಬಹುದಾದ ಮತ್ತೊಂದು ಸಂಗತಿ. ಓದುಗರು ಆಪ್ತ ಗೆಳೆಯರಂತೆ ಎದುರು ಕುಳಿತಿರುವರೆಂಬ ಮಾದರಿಯಲ್ಲಿ ಕತೆಗಳನ್ನ ನಿರೂಪಿಸಿದ ವೈಶಿಷ್ಟ್ಯ ನವೋದಯ ಪರಂಪರೆಗೆ ಸಲ್ಲುತ್ತವೆ. ಈ ನಿಟ್ಟಿನಲ್ಲಿ ಪ್ರಗತಿಶೀಲ ಮತ್ತು ನವ್ಯ ಪರಂಪರೆ ಪಶ್ಚಿಮದ ದಟ್ಟ ಪ್ರಭಾವ ದಿಂದಾಗಿ ಸಾಹಿತ್ಯ ನಿಷ್ಠವಾಯಿತು. ಪ್ರತಿಮೆ ಮತ್ತು ಸಂಕೇತಗಳ ಬಳಕೆಯ ಮೂಲಕ ನವ್ಯರು ಭಾಷೆಯ ಧ್ವನಿಶಕ್ತಿಯನ್ನು ವಿಸ್ತರಿಸಿದರೆಂಬುದೂ ಮಹತ್ವದ ವಿಚಾರವೇ ಆಗಿದೆ.

ಹೊಸಗನ್ನಡ ಸಣ್ಣಕಥಾ ಪರಂಪರೆ ಹಾಗೂ ಪ್ರಯೋಗದ ಒಟ್ಟಾರೆ ಸ್ವರೂಪವನ್ನು ಪರಿಚಯಿಸುವಲ್ಲಿ ಈ ಸಂಕಲನದ ಯಶಸ್ಸು ಗಮನಾರ್ಹವಾಗಿದೆ. ಒಂದು ಶತಮಾನದ ಕಾಲಮಾನದಲ್ಲಿ ಕತೆಯ ವಸ್ತು, ತಂತ್ರ, ಭಾಷೆಯ ನೆಲೆಯಿಂದ ಹೇಗೆ ವಿಕಾಸ ಹೊಂದಿತೆಂಬುದನ್ನು ಇಲ್ಲಿ ಗುರುತಿಸಲು ಅವಕಾಶವಿದೆ. ಈ ಕಾಲದಲ್ಲಿ ನಂಬಿಕೆಗಳ ನೆಲೆಯಲ್ಲಿ ಆದ ಪಲ್ಲಟಗಳು, ಸಾಮಾಜಿಕ ಸಂಘರ್ಷಗಳು, ನೀತಿ ನಿರೂಪಣೆಯಲ್ಲಾದ ಬದಲಾವಣೆಗಳು- ಇದೆಲ್ಲವನ್ನೂ ಈ ಸಂಕಲನದ ಕತೆಗಳು ಪ್ರತಿಬಿಂಬಿಸುತ್ತಿವೆ. ಆಯ್ಕೆಯಲ್ಲಿ ಇನ್ನೂ ವಸ್ತುನಿಷ್ಠವಾಗಿರಬಹುದಿತ್ತು, ಎನ್ನಿಸಿದರೂ ಕನ್ನಡದ ಮಹತ್ವದ ಕತೆಗಾರರೆನ್ನಿಸಿಕೊಂಡರೆಲ್ಲ ಇಲ್ಲಿ ಸೇರ್ಪಡೆ ಆಗಿದ್ದಾರೆಂಬ ಸಂಗತಿಯನ್ನೂ ಇಲ್ಲಿ ಮರೆಯುವಂತಿಲ್ಲ. ✥

ಬಿಟ್ಟೆನೆಂದರೂ ಬಿಡದೀ ಮಾಯೆ...

ನೊಂದ ಹೆಂಗಸರು ಒಂದೆಡೆ ಸೇರಿ,
ಮೀಟಿಂಗೊಂದನು ನಡೆಸಿದರು
ಸೋಪಿಲ್ಲದೆಯೇ ಗಂಡು ಜನ್ಮವನು
ತಿಕ್ಕಿ, ಕುಕ್ಕಿ ಜಾಲಾಡಿದರು

ಕುಡಿತ, ಜೂಜು, ವ್ಯಭಿಚಾರ,
ಗುಟುಕಾ, ಮಟಕಾ, ವ್ಯವಹಾರ
ಜರ್ದಾ, ಬೀಡಿ, ಸಿಗರೇಟು,
ಒಂದಿಲ್ಲೊಂದರ ಜೊತೆ ನಂಟು

ಬುದ್ಧಿಮಾತುಗಳ ಕೇಳುವುದಿಲ್ಲ
ಆಣೆಗೆ, ಭಾಷೆಗೆ ಬೆಲೆಯೇ ಇಲ್ಲ
ದುಶ್ಚಟದಲಿ ದುಡ್ಡೆಲ್ಲಾ ಹಾಳು
ಮನೆ ಮನೆಯಲ್ಲೂ ಪ್ರತಿದಿನ ಗೋಳು

ದಿನವಿಡಿ ಚರ್ಚೆಯು ನಡೆದಿತ್ತು,
ಉಪಾಯ ಹುಡುಕಿ ದಣಿದಿತ್ತು
'ಗಂಡಿಗೆ ಬೇಕು ಗಟ್ಟಿ ಮನಸ್ಸು
ಅದು ಒಂದಿದ್ದರೆ ಎಲ್ಲ ಸಲೀಸು'

'ನನ್ನಯ ದುಡಿಮೆಗೆ ನಾ ಹಕ್ಕುದಾರ,
ಹೊತ್ತಿಲ್ಲವೆ ಸಂಸಾರದ ಭಾರ?
ಬೇಕಿದೆ ನನಗೂ ಕೊಂಚ ರಿಲೀಫು
ಮರೆಯಲು ಕಾಷ್ಟವ್ಯಸನದ ಲೇಪು'

ಗಂಡಿನ ಉತ್ತರ ಹೊಸದೇನಲ್ಲ
ಹೆಣ್ಣಿಗೆ ಮಾತ್ರಾ ಬಿಡುಗಡೆ ಇಲ್ಲ

ಒಡಲು ಅವನಿಗೆ ನಾನಾ ಹಾದಿ
ಅಂಟಿಕೊಳ್ಳುವುದು ಇವಳ ವಿಧಿ

'ಸಂಘವನೊಂದನು ಕಟ್ಟೋಣ,
ಇಸ್ಪೀಟ್ ಎಲೆಯನು ಹಿಡಿಯೋಣ
ಬೀರು ಸಿಗಾರಿನ ರುಚಿ ನೋಡೋಣ.
ಹರಿದು ಬರೋಣ ಕಡಿವಾಣ'

'ದುಡ್ಡಿನ ವಿಷಯಕೆ ಚಿಂತೆಯು ಸಲ್ಲ
ಒಡೆವೆ ವಸ್ತುಗಳು ಇವೆಯಲ್ಲ,
ವಿಷಕ್ಕೆ ವಿಷದಾ ಮದ್ದೆ ಸರಿ,
ಬುದ್ಧಿ ಕಲಿಸುವುದೆ ನಮ್ಮ ಗುರಿ'

ಠರಾವು ಮಾಡಿ ಸಭೆ ಚದುರಿತ್ತು
ಹೆಜೆಹೆಜ್ಜೆಯಲಿ ಹೊಸಗತ್ತು
ಹಸಿದು ಕಂಗೆಟ್ಟ ಮಕ್ಕಳ ನೋಡಿ
ಪಶ್ಚಾತ್ತಾಪವು ಮಾಡಿತು ಮೋಡಿ

ಒಂದೇ ದಿನಕೆ ಮನಯಲಿ ಗೋಳು,
ದಿನವೂ ಹೋದರೆ ಬದುಕೇ ಹಾಳು,
ಬಿಟ್ಟೇನೆಂದರು ಮನೆಯನ್ನು,
ಮನೆ ಬಿಟ್ಟೀತೇ ಹೆಣ್ಣನ್ನು?

-ವಸುಮತಿ ಉಡುಪ

ಬೆಳ್ಳಿ ಬೆಳಕಿನ ನೀಲಾಂಜನ



ವಿದ್ಯಾರ್ಥಿ ಕಥಾ ವಿಭಾಗ

ಪಾತಮ್ಮ ಸತ್ತ ಸುದ್ದಿ ತಿಳಿದಾಗ ದಿಗ್ಭ್ರಾಂತನಾದೆ. ಅವಳದು ಸಾಯುವ ವಯಸ್ಸಲ್ಲ. ಅವಳು ಸತ್ತದ್ದಾದರೂ ಹೇಗೆ?



ವಿಶ್ವವಿದ್ಯಾಲಯದ ಉತ್ತರ ಮೂಲೆಯ ಹಸಿರು ಹೊದ್ದ ಶಾಲ್ಮಲಾ ಗುಡ್ಡದ ಒಂದಂಚಿನ ಹಾಸ್ಟೆಲಿನ ಕೋಣೆಯೊಂದರಲ್ಲಿ ರಾತ್ರಿ ಹನ್ನೊಂದೂವರೆಯ ಹೊತ್ತಿಗೆ ಡಿಪಾರ್ಟ್‌ಮೆಂಟಿನಿಂದ ಆಗ ತಾನೇ ಬಂದು, ಬಾಗಿಲು ತೆಗೆದ ತಕ್ಷಣ ಕಾಲಿಗಡರಿದ ಪತ್ರವನ್ನು, ಮಲಗುವಾಗ ಓದೋಣವೆಂದು ತೆಗೆದಿಟ್ಟು, ಈಗ ಇನ್ನೇನು ಮಲಗಬೇಕೆನ್ನುವಷ್ಟರಲ್ಲಿ ಓದುತ್ತ, ಓದುತ್ತ, ಅಲ್ಲಲ್ಲಿ ಲಟಗುಟ್ಟುವ ಮಂಚದ ಮೇಲೆ ಧಿಗ್ಗನೆದ್ದು ಕುಳಿತಿದ್ದೇನೆ. ಪಕ್ಕದ ಮನೆ ಪ್ರಕಾಶನ ಪತ್ರವದು. ಕೊನೆಯ ಒಂದೇ ಒಂದು ವಾಕ್ಯ ಎದೆಯ ಮೂಲೆಯಲ್ಲೆಲ್ಲೋ ಛಳ್ಳೆನಿಸಿ ನಿದ್ದೆಯನ್ನು ಓಡಿಸಿಬಿಟ್ಟಿದೆ. ಛಳಿಯಲ್ಲೂ ನಾನು ಬೆವರಿದ್ದೇನೆ ಅನ್ನಿಸಿತು. ವಾಕ್ಯವನ್ನು ಪೂರ್ತಿ ಓದಿ ಮುಗಿಸಿದೆ. "ನಮ್ಮೂರಿನ ಉರ್ದು ಪಾತಮ್ಮ ತೀರಿಕೊಂಡಳು. ಅಕ್ಬರ ಕ್ರಿಯಾಕರ್ಮ ಮಾಡಲು ಬಂದಿದ್ದ."

ಆಕೆ ಉರ್ದು ಪಾತಮ್ಮ ಅಲ್ಲ. ಮೂಲ ಹೆಸರು ಫಾತಿಮಾ. ನೋಡಿದರೆ ಅಮ್ಮನಿಗಿಂತ ನಾಲ್ಕೈದು ವರ್ಷ ಹೆಚ್ಚಿರಬಹುದೇನೋ ಅಷ್ಟೇ. ನಾನು ಸಣ್ಣವನಿದ್ದಾಗಿಂದ ಪ್ರೀತಿ ತೋರಿದ ಹೆಂಗಸು. ನಮ್ಮ ಮನೆ ಅಡಿಕೆ ಸುಲಿಯಲು ಬರುತ್ತಿದ್ದಳು. ನಮ್ಮೂರ ಫಾರೆಸ್ಟಿನ ಗಾರ್ಡ್‌ನ ಹೆಂಡತಿ. ಅವನ ಹೆಸರು ಸರಿಯಾಗಿ ನೆನಪಿಲ್ಲ. ಎಲ್ಲರೂ ಅವನಿಗೆ ಬುಡನಸಾಬ ಎಂದು ಕರೆಯುತ್ತಿದ್ದರಿಂದ ನಾನೂ ಹಾಗೇ ಕರೆಯುತ್ತಿದ್ದೆ.

ದತ್ತಾತ್ರೇಯ ಹೆಗಡೆ

(ಅಂತಿಮ ಎಂಬಿಎ)

ಪಾತಮ್ಮಳಿಗೆ ಎರಡು ಮಕ್ಕಳು. ಒಬ್ಬಾಕೆ ಫರೀದಾ. ನನ್ನ ಕ್ಲಾಸ್‌ಮೇಟು. ಇನ್ನೊಬ್ಬ ಅಕ್ಬರ. ನನಗಿಂತ ಎರಡು ವರ್ಷ ದೊಡ್ಡವನು. ನನ್ನ ಕ್ರಿಕೆಟ್‌ಮೇಟು. ಎಲ್ಲವೂ ಸರಿಯಾಗಿದ್ದಿದ್ದರೆ ಅವನು ಇಷ್ಟೊತ್ತಿಗೆ ದೊಡ್ಡ ಆಫೀಸರಾಗಿ ಇರುತ್ತಿದ್ದನೇನೋ! ಈಗ ಮುಂಬಯಿಯ ಹೋಟೆಲೊಂದರಲ್ಲಿದ್ದಾನೆಂದು ತಿಳಿದಿತ್ತು.

ಮಲೆನಾಡಿನ ಹಸಿರ ನಡುವೆ ಕಳೆದ ದಿನಗಳ ನೆನಪು ಈಗಲೂ ನನ್ನ ಚಿತ್ತಭಿತ್ತಿಯಲ್ಲಿ ಹಾಗೇ ಮೂಡಿವೆ. ಆಗಾಗ ಕಳ್ಳನಂತೆ ಹೊರಬಂದು ಕಾಡುತ್ತಿರುತ್ತವೆ. ಆ ನೆನಪಿನ ಮರುಕಳಿಕೆಯಲ್ಲಿ ಖುಷಿಯಿದೆ, ಬೇಸರದ ಬದುಕಿಗೆ ನವಚೈತನ್ಯ ನೀಡುವ ಶಕ್ತಿಯಿದೆ, ಎಲ್ಲಕ್ಕೂ ಹೆಚ್ಚಾಗಿ ಕನಸು ಕಟ್ಟಲು ಪ್ರೇರೇಪಣೆಯಿದೆ. ಆ ನೆನಪಿನ ಒಂದು ಅಧ್ಯಾಯದಲ್ಲಿ ಪಾತಮ್ಮ ಇದ್ದಾಳೆ.

ಆರೇಳು ವರ್ಷದ ಹುಡುಗನಾಗಿದ್ದಿಂದ, ಹದಿನೆಂಟರ ಹರೆಯಕ್ಕೆ ಓದುವ ಸಲುವಾಗಿ ಮನೆಬಿಟ್ಟು ಹೊರಬರುವವರೆಗೂ ಪಾತಮ್ಮ ನನಗೆ ಆತ್ಮೀಯ ಹೆಂಗಸು. ಆಕೆಯನ್ನು ಕೇವಲ ನಮ್ಮ ಮನೆಗೆ ಬರುತ್ತಿದ್ದ ಅಡಿಕೆ ಸುಲಿಯುವ ಹೆಂಗಸಾಗಿ ನಾನು ಯಾವಾಗಲೂ ಕಂಡಿಲ್ಲ. ಹಾಗೆ ನೋಡಿದರೆ ಆಕೆಗೆ ಅಡಿಕೆ ಸುಲಿಯುವ ಕೆಲಸದ ಅವಶ್ಯಕತೆಯೇನೂ ಇರಲಿಲ್ಲ. ಬರೀ ಕೆಲಸದ ಖುಷಿಯಿಂದ ಬರುತ್ತಿದ್ದವಳು. ಅಮ್ಮನಿಗೂ ಆತ್ಮೀಯ ಆಕೆ. ಬೆಳ್ಳ ಬೆಳ್ಳಗೆ, ಕಪ್ಪು ಕಣ್ಣಿನ ಆಕರ್ಷಕ ಹೆಂಗಸು. ಮೇಲಾಗಿ ನನ್ನ ಗೆಳತಿ ಫರೀದಾಳ ಅಮ್ಮ.

ಸಂಜೆ ಶಾಲೆ ಬಿಟ್ಟ ಮೇಲೆ ವಾರಕ್ಕೊಂದೆರಡು ಬಾರಿಯಾದರೂ ಪಾತಮ್ಮದ ಮನೆಗೆ ನಾ ಹೋಗುತ್ತಿದ್ದೆ. ಹಳ್ಳಿಯ ಮೂಲೆಯ ಕ್ವಾರ್ಟರ್ಸ್‌ನಲ್ಲಿ ಅವಳ ಕುಟುಂಬದ ವಾಸ. ನಾನು ಆಗಾಗ ಹೋಗುತ್ತಿದ್ದುದು ಅಮ್ಮನಿಗೆ. ಗೊತ್ತಿತ್ತು ಆದರೆ ಬ್ರಾಹ್ಮಣಾತ್ಮವನ್ನೇ ನೆಚ್ಚಿಕೊಂಡಿದ್ದ ಅಪ್ಪಯ್ಯನಿಗೆ ಗೊತ್ತಿರಲಿಲ್ಲ. ಗೊತ್ತಾಗಿದ್ದರೆ ಒಂದೆರಡಾದರೂ ಬಾಸುಂಡೆಗಳು ಬೆನ್ನ ಮೇಲೇಳುತ್ತಿದ್ದವೇನೋ! ಪಾತಮ್ಮ ಕೊಡುವ ಕೊಬ್ಬರಿ- ಸಕ್ಕರೆ ತುಂಬಾ ರುಚಿಯಾಗಿರುತ್ತಿತ್ತು.

ಪಾತಮ್ಮಳ ಮನೆಯಲ್ಲಿ ನನ್ನನ್ನು ಆಕರ್ಷಿಸುತ್ತಿದ್ದ ಮುಖ್ಯ ವಸ್ತುವೆಂದರೆ ಬೆಳ್ಳಿಯಂತೆ ಹೊಳೆವ ಎರಡು ಹಣತೆಗಳು. ದೇವರ ಗೋಡೆಯ ಮೂಲೆಯಲ್ಲಿ ಪಾತಮ್ಮ ಸೂರ್ಯಾಸ್ತದ ಮೊದಲೇ ಅವೆರಡು ಹಣತೆ ಹಚ್ಚಿಡುತ್ತಿದ್ದಳು. ಎಲ್ಲಾ ಹಣತೆ ಕೆಂಪಗೋ, ಕಪ್ಪಗೋ ಇರಬೇಕಾದರೆ ಇದೇಕೆ ಹೀಗೆ ಎಂದು ಪಾತಮ್ಮಳಲ್ಲಿ ಕೇಳಿದ್ದೆ. "ಬೇಟಾ, ಅದು ನಮ್ಮಪ್ಪ ಕೊಟ್ಟಿದ್ದು. ಭಟ್ಕಳದ ನಮ್ಮ ಮೂಲ ಮನೆಯಲ್ಲಿದ್ದದ್ದು. ಅದಕ್ಕೆ ಬೆಳ್ಳಿ ಲೇಪನವಿದೆ" ಎಂದಿದ್ದಳು. ಮುಗ್ಧನಾಗಿ "ನನಗೊಂದು ಕೊಡುತ್ತೀಯಾ?" ಎಂದು ಕೇಳಿದ್ದೆ. ಪಾತಮ್ಮ ಮುಗುಳ್ನಕ್ಕಿದ್ದಳಷ್ಟೇ.

ಒಮ್ಮೆ ಶಾಲೆಯಲ್ಲಿ ಆಟವಾಡುತ್ತ, ಫರೀದಾಳ ಖಾಲಿ ಹಣೆ ನೋಡಿ ಯಾಕೋ ಕೆಟ್ಟೆನಿಸಿ ಮನೆಗೆ ಬಂದು ಗೋದಕ್ಕನ ಬಿಂದಿ ಪಾಕೆಟ್ಟಿನಿಂದ ಬಂದು ಬಿಂದಿ ಕದ್ದು ಅವಳಿಗೊಯ್ದು ಕೊಟ್ಟಿದ್ದೆ. ಆಕೆ ಅದನ್ನು ಹಚ್ಚಿಕೊಂಡು ಮನೆಗೆ ಹೋಗಿಬಿಟ್ಟಳು. ಮರುದಿನ ಫಾತಿಮಾ ಮನೆಗೆ ಬಂದು ಹೇಳಿದಳೋ ಏನೋ, ಅಮ್ಮ ಸಂಜೆಗೆ ಮನೆಗೆ ಹೋದ ಕೂಡಲೇ ಬೆನ್ನಿಗೊಂದು ಗುದ್ದಿ "ಸಾಬರ ಹುಡುಗೀಗೆ ಬಿಂದಿ ಕೊಡ್ತಿಯ? ನಾಚಿಕೆ ಆಗ್ತಿಲ್ಲೆ ನಿಂಗೆ, ನಿನ್ನ ಅಪ್ಪಯ್ಯಂಗೆ ಗೊತ್ತಾದ್ರೆ ಬೆನ್ನು ಮುರಕ್ಕೊಡ್ತ ನೋಡು!" ಎಂದಳು. ಅಪ್ಪರ ಮೇಲೆ ಅಂತಹ ಸಾಹಸಕ್ಕೆ ಕೈ ಹಾಕಿರಲಿಲ್ಲ.

ನಾನು ಹೈಸ್ಕೂಲಲ್ಲಿರಬೇಕಾದರೆ ಕೆಲವು ಆಗಬಾರದ ಘಟನೆಗಳು ನಡೆದುಹೋದವು. ಹಾಲಿನಂತಿದ್ದ ಪಾತಮ್ಮಳ ಸಂಸಾರ ಹುಳಿಗಟ್ಟು ಹೋಯಿತು. ಬುಡನಸಾಬ ಐವತ್ತರ ಅಂಚಿನಲ್ಲಿದ್ದೂ, ಹತ್ತಿರದ ಲಗ್ಗೇರಿಯೆಂಬ ಊರಿನ 'ಲೋಚನ' ಎಂಬ ವಿಧವೆ ಬಾಲವಾಡಿ ಶಿಕ್ಷಕಿಯ ಮೋಹಪಾಶಕ್ಕೆ ಬಿದ್ದುಬಿಟ್ಟ. ವಾರಕ್ಕೆ ಐದು ದಿನಗಳು ಆಕೆಯ ಮನೆಯಲ್ಲಿ ಕಳೆಯ ತೊಡಗಿದ. ಅಪ್ಪನ ಈ ಕೆಲಸಕ್ಕೆ ಬೇಸತ್ತು ಅಕ್ಬರ ಮನಸ್ಸು ಕೆಟ್ಟು ಮುಂಬಯಿಗೆ ಓಡಿ ಹೋದ. ಅಕ್ಬರ ನಿಜಕ್ಕೂ ಓದಿನಲ್ಲಿ ಬುದ್ಧಿವಂತನಿದ್ದ. ಪರಿಸ್ಥಿತಿ ಅವನಿಗೆ ಪ್ರತಿಕೂಲವಾಗಿತ್ತು.

ಅಕ್ಬರ ಮುಂಬಯಿಗೆ ಹೋದವನು ವಿಳಾಸ ತಿಳಿಸಿ ನನಗೊಂದು ಪತ್ರ ಬರೆದು ತಾಯಿಗೆ ಕ್ಷಮಿಸುವಂತೆ ಕೋರಲು ನನಗೆ ತಿಳಿಸಿದ್ದ. ಅಪ್ಪನಿಗೆ ಈ ವಿಷಯ ಗೊತ್ತಾಗಬಾರದಾಗಿ

ಹೇಳಿದ್ದ. ಪಾತಮ್ಮಳ ಬಳಿ ಈ ವಿಷಯವೆಲ್ಲ ತಿಳಿಸಿದಾಗ ಆಕೆ ಒಮ್ಮೆ ಮಗನ ವಿಷಯ ಕೇಳಿ ಸಂತಸಗೊಂಡರೂ ಮರುಕ್ಷಣವೇ ದುಃಖದ ಛಾಯೆಯಲ್ಲಿ ಮುಳುಗಿಬಿಟ್ಟಳು. ಆ ಸಂಜೆ ಆಕೆ ಅವೆರಡು ಹಣತೆ ಹಚ್ಚಿದಾಗ ಹಬ್ಬಿದ ಮಂದ ಬೆಳಕಿನಲ್ಲಿ ಮೊದಲಿನ ಕಳೆಯಿರಲಿಲ್ಲ.

ಇದೇ ಸಮಯದಲ್ಲಿ ಬುಡನಸಾಬ ಹತ್ತಿರದ ಊರಿನ ಒಬ್ಬ ಅಡಿಕೆ ವ್ಯಾಪಾರಿ ಯೂಸುಫನಿಗೆ ಫರೀದಾಳನ್ನು ಕೊಟ್ಟು ಮದುವೆ ಕೂಡ ಮಾಡಿಬಿಟ್ಟ. ಆಗ ಆಕೆಗೆ ಹದಿನಾಲ್ಕು ವಯಸ್ಸು ಇರಬಹುದೇನೋ! ಫರೀದಾ ಹೋದ ಮೇಲೆ ಪಾತಮ್ಮ ತೀರ ಕಳೆಗುಂದಿಬಿಟ್ಟಳು. ಅಡಿಕೆ ಸುಲಿಯುವ ಕಾಯಕದಲ್ಲಿ ಹೆಚ್ಚಿನ ಸಮಯ ಕಳೆಯಹತ್ತಿದಳು. ಅದಿಲ್ಲದಿದ್ದರೆ ತೋಟದದ ಯಾವ ಕೆಲಸವಿದ್ದರೂ ಬರುವೆನೆಂದು ಅಮ್ಮನ ಬಳಿ ಹೇಳಿರುತ್ತಿದ್ದಳು. ಪಾತಮ್ಮಳ ತಲೆಗೂದಲು ಸ್ಪಷ್ಟವಾಗಿ ಬೆಳ್ಳಿ ಛಾಯೆ ತೋರತೊಡಗಿದವು. ಬುಡನಸಾಬ ತಿಂಗಳಿಗೊಂದೋ, ಎರಡೋ ಸಲ ಮನೆಗೆ ಬರತೊಡಗಿದ. ಪಾತಮ್ಮ ಮೌನಿ ಆತೊಡಗಿದಳು.

ನಾನು ಓದಿಗೋಸುಗ ಊರುಬಿಟ್ಟ ಬಂದಮೇಲೂ ಆಗಾಗ ಪಾತಮ್ಮ ನೆನಪಿಗೆ ಬರುತ್ತಿದ್ದಳು. ಊರಿಗೆ ಹೋದಾಗೊಮ್ಮೆ ಆಕೆಯ ಮನೆಯೆಡೆ ಹೋಗಿ ಆಕೆಯ ಕ್ಷೇಮ ಕೇಳಿ ಬರುತ್ತಿದ್ದೆ. ಆಗೆಲ್ಲ ಆಕೆಗೆ ಅಕ್ಬರನ ನೆನಪಾಗಿ ಕೊರಳುಬ್ಬಿ ಬರುತ್ತಿತ್ತು. ಅಕ್ಬರ ಆಗಾಗ ತಾಯಿಗೂ ಪತ್ರ ಬರೆಯುತ್ತಿದ್ದ. ಒಮ್ಮೆ ಒಂದೆರಡು ದಿನಗಳ ಮಟ್ಟಿಗೆ ಬಂದೂ ಹೋಗಿದ್ದನಂತೆ! ಆದರೆ ಪಾತಮ್ಮ ಮಾತ್ರ ತೀರ ಒಂಟಿಯಾಗಿಬಿಟ್ಟಿದ್ದಳು.

ಈಗ ನಾಲ್ಕೈದು ವರ್ಷಗಳಿಂದ ಪಾತಮ್ಮಳ ಭೇಟಿ ತೀರ ಕಮ್ಮಿಯಾಗಿತ್ತು. ಅಡಿಕೆ ಸುಲಿಯಲು ಬರುವುದೂ ಕಡಿಮೆಯ್ಯಾಗಿತ್ತು. ವಾರಕ್ಕೆ ಒಂದೆರಡು ದಿನವಷ್ಟೇ ಮನೆಯ ಕಡೆ ಬರುತ್ತಿದ್ದರಿಂದ, ನಾನು ಊರಿಗೆ ಹೋದಾಗ ಭೆಟ್ಟಿ ಮಾಡುವುದೂ ಕಡಿಮೆಯಾಗತೊಡಗಿತು. ಆದರೆ ಅವಳ ಬಗ್ಗೆ ಅಮ್ಮನ ಬಳಿ ನನ್ನ ಬಗ್ಗೆ ಒಮ್ಮೆಯಾದರೂ ಕೇಳಿರುತ್ತಿದ್ದೆ.

ಈಗ ಪತ್ರ ಓದಿ ಪಾತಮ್ಮಳ ಸಾವಿನ ಸುದ್ದಿ ನನ್ನನ್ನು ಚಿಂತೆಗೆ ಎಡೆಮಾಡಿತ್ತು. ಸಾಯುವಂಥ ವಯಸ್ಸೇನೂ ಅಲ್ಲ ಆಕೆಯದು. ಇಷ್ಟಕ್ಕೂ ಹೇಗೆ ಸತ್ತಳು? ಎಂಬ ಪ್ರಶ್ನೆಯನ್ನು ಮನದಲ್ಲಿ ಇಟ್ಟುಕೊಂಡೇ ನಿದ್ರೆಗಿಳಿದೆ.

ಇದಾದ ಒಂದು ತಿಂಗಳ ನಂತರ ಊರಿಗೆ ಹೋಗುತ್ತಿದ್ದೇನೆ. ಮಲೆನಾಡಿನ ಹವೆಯ ಸೇವನೆಯ ಖುಷಿ ಅನುಭವಿಸುವ ತವಕ, ಅಮ್ಮನ ಕೈಯ ಅಡಿಗೆಯೂಟ ಸವಿಯುವ ತವಕ, ಬೆಚ್ಚನೆ ಕಂಬಳಿಗಳೊಳಗೆ ಮಲಗಿ ನಿದ್ರಿಸುವ ತವಕದೊಡನೆ ಪಾತಮ್ಮಳ ಸಾವಿನ ಪ್ರಶ್ನೆಗೆ ಉತ್ತರ ದೊರಕಿಸುವ ತವಕವನ್ನೂ ಜೊತೆಗೆ ಒಯ್ಯುತ್ತಿದ್ದೇನೆ. ಮನೆ ಮುಟ್ಟಿ ಸ್ವಲ್ಪ ಹೊತ್ತಿಗೆ ಅಮ್ಮ ಕೊಟ್ಟ ಚಾ ಕುಡಿಯುತ್ತ ಕೇಳಿದೆ- "ಅಮ್ಮಾ, ಪಾತಮ್ಮ ಸತ್ತು ಹೋದಳಂತೆ!" ಅಮ್ಮ ತನ್ನ ಗೆಳತಿಯ ಸಾವಿನ ದುಃಖವನ್ನು ತಡೆದುಕೊಳ್ಳುತ್ತಲೇ ಹೇಳುತ್ತ ಹೋದಳು. ಈಗ ಎರಡು ತಿಂಗಳ ಹಿಂದೆ ಬುಡನಸಾಬ ಆಕೆಯ ಮನೆಗೆ ಬಂದು ಇಷ್ಟು ವರುಷ ದುಡಿದ ದುಡ್ಡೆಲ್ಲ ಕೊಡುವಂತೆ ಕೇಳಿದನಂತೆ. ಪಾತಮ್ಮ ನಿರಾಕರಿಸಿದಾಗ ಅಲ್ಲೇ ಜಚ್ಚಲ ಮನೆಯ ಮೂಲೆಗೆ ಬೆಳಿಗ್ಗೆ ಹಚ್ಚಲೆಂದು ಕೂಡಿಟ್ಟ ಕಟ್ಟಿಗೆಯೊಂದನ್ನು ತೆಗೆದುಕೊಂಡು ಬೆನ್ನ ಮೇಲೆ ಬಾರಿಸಿಬಿಟ್ಟನಂತೆ. ಪಾತಮ್ಮ ಎಚ್ಚರ ತಪ್ಪಿ ಬಿದ್ದರೂ ನೋಡದೇ ಹೋಗಿ ಬಿಟ್ಟನಂತೆ. ಹದಿನೈದು ದಿನ ನರಳಿದ ಪಾತಮ್ಮ ಕಣ್ಮುಚ್ಚಿದಳಂತೆ! ಇಷ್ಟು ಹೇಳಿ ಅಮ್ಮ ಮೌನಿಯಾಗಿಬಿಟ್ಟಳು.

ಸ್ವಲ್ಪ ಹೊತ್ತಿನ ನಂತರ ಅಮ್ಮ ಏನೋ ನೆನಪಾದವಳಂತೆ ನುಡಿದಳು. "ಹಾಂ! ಹೇಳಲು ಮರ್‍ತಿದ್ದೆ ನೋಡು! ಪಾಪ ಬಡ ಹೆಂಗಸು, ನಿನ್ನ ಎಷ್ಟು ಹಚ್ಕೊಂಡಿತ್ತು ನೋಡು! ಸಾವಿನ ಐದು ದಿನ ಮುಂಚೆ ನಾ ಅವಳನ್ನು ನೋಡಲು ಹೋದಾಗ ಅವೆರಡು ಹಣತೆ ನಿನಗಂತ ಕೊಟ್ಲು. ಅದೇ ಬೆಳ್ಳಿ ಲೇಪನ ಮಾಡಿದ ಹಣತೆಗಳು. ನೀ ಅದನ್ನು ಜೋಪಾನ ಇಟ್ಕೋಬೇಕಂತೆ!" ಅಮ್ಮ ಒಳಗಿಟ್ಟ ಅವೆರಡು ಹಣತೆಗಳನ್ನು ನನ್ನ ಕೈಲಿ ತಂದಿತ್ತಳು. ಅದೇ ಹೊಳಪು! ಅದೇ ಚೆಂದ! ಮನಸ್ಸು ಮ್ಲಾನವಾಗಿತ್ತು. ಕಣ್ಣು ಮುಚ್ಚಿ ಹಣತೆಗಳೆರಡನ್ನೂ ಕಣ್ಣಿಗೊತ್ತಿ ಹಿಡಿದು ಪಾತಮ್ಮಳಿಗೆ ಕಟ್ಟಕಡೆಯ ನಮಸ್ಕಾರ ಹೇಳಿದೆ.

ಹೀಗಿದ್ದರೆ ಹೇಗೆ?

"ಆಟೋ ಜಯನಗರಕ್ಕೆ ಬರ್ತಿಯೇನಪ್ಪ?"

"ನಡೀರೀ ಸಾರ್... ಈ ಮಧ್ಯರಾತ್ರೀಲೀ ಎಲ್ಲಿಂದ ಬರ್‍ತಾ ಇದ್ದೀರಾ ಸಾರ್? ಇನ್ಮೇಲೆ ಇಷ್ಟೊತ್ತನಲ್ಲಿ ಬರಬೇಡಿ. ಕಾಲ ತುಂಬಾ ಕೆಟ್ಟುಹೋಗಿದೆ."

"ಏನು ಮಾಡಲಿ ಬಸ್‌ಕೆಟ್ಟು ಲೇಟಾಯ್ತು. ಇಲ್ಲೇ ಇಳಿಸಪ್ಪ. ಎಷ್ಟು ಕೊಡಬೇಕು?"

"ಮೀಟರ್ ರೀಡೀಂಗ್ ಎಷ್ಟೋ ಅಷ್ಟೇ ಕೊಡಿ ಸಾರ್. ಜಾಸ್ತಿ ಬೇಡ. ನಿಮ್ಮ ಹೆಂಡ್ತಿ ಮಕ್ಕಳು ನಿಮಗಾಗಿ ಕಾಯ್ತಾ ಇರ್‍ತಾರೆ ಪಾಪ. ಗುಡ್ ನೈಟ್ ಸಾರ್...!"

*

"ಏನ್ ಸಾರ್ ಹಾಗೇ ಇಳಿದುಹೋಗ್ತಾ ಇದ್ದೀರಾ? ಚಿಲ್ಲರೆ ತಗೋಳ್ಳೀ ಸಾರ್"

"ಮರೇತೇ ಹೋಯ್ತು ಕಂಡೆಕ್ಟರ್. ಇರ್‍ಲಿಬಿಡಿ ನೀವೇ ಇಟ್ಕೊಳಿ"

"ಛೇ... ಛೇ... ನಿಮ್ಮ ದುಡ್ಡು ನಂಗೆ ಯಾಕೆ ಸಾರ್. ಟಿಕೇಟು ಹರಿದು ಹಾಕಿ ಸಾರ್".

*

"ಬನ್ನಿ ಮೇಸ್ಟ್ರೆ ಕೂತ್ಕೊಳ್ಳೀ. ಹೋದ ತಿಂಗಳು ಅಲ್ವೇ ನೀವು ರಿಟೈರ್ ಆಗಿದ್ದು?".

"ಹೌದು ಸಾರ್..."

ನಿಮ್ಮ ಸರ್ವೀಸ್ ರೆಕಾರ್ಡ್ ಎಲ್ಲಾ ಪರಿಶೀಲಿಸಲಾಗಿದೆ. ನಾಳೆಯಿಂದಲೇ ನಿಮಗೆ ಪಿಂಚಣಿ ಬರತ್ತೆ. ನೀವೇನೂ ಯೋಚನೆ ಮಾಡಬೇಡಿ.".

ತುಂಬಾ ಸಂತೋಷ ಸಾರ್. ಇಷ್ಟು ಬೇಗ ಪಿಂಚಣಿಯಾಗುತ್ತೆ ಅಂತ ಖಂಡಿತ ತಿಳಿದುಕೊಂಡಿರಲಿಲ್ಲ ಸಾರ್".

"ಇದರಲ್ಲಿ ಉಪಕಾರ ಏನು ಬಂತು? ನನ್ನ ಕರ್ತವ್ಯ ನಾನು ಮಾಡಿದ್ದೀನಿ. ಪಾಪ ನಿಮ್ಮಂತಹ ವಯಸ್ಸಾದವರಿಗೆ ತೊಂದರೆಯಾಗಬಾರದು ನೋಡಿ. ಹೋಗಿ ಬನ್ನಿ.".

*

ನೀವೇ ಏನ್ರೀ ಖಾತೆ ಬದಲಾವಣೆಗೆ ಮೊನ್ನೆ ಅರ್ಜಿ ಹಾಕಿದ್ದು?"

"ಹೌದು ಸಾರ್"

"ಎಲ್ಲಾ ರೆಡಿಯಾಗಿದೆ. ಗುಮಾಸ್ತೆ ಗೋವಿಂದಯ್ಯನ ನೋಡಿಹೋಗಿ".

"ಇಷ್ಟು ಬೇಗ ರೆಡಿಯಾಗಿದೆಯೇ ಸಾರ್? ಗೋವಿಂದಯ್ಯನವರಿಗೆ ಏನಾದ್ರೂ ಕೊಡಬೇಕೇ ಸಾರ್?"

"ನೋ... ನೋ... ಯಾರಿಗೂ ಏನೂ ಕೊಡಬೇಕಾಗಿಲ್ಲ. ಆ ಕಾಲ ಎಲ್ಲಾ ಆಗೋಯ್ತು".

"ತುಂಬಾ ಸಂತೋಷ ಸಾರ್... ಬರ್ತೀನೀ ಸಾರ್..."

ಇಂಥ ಸುದಿನ ಎಂದಾದರೂ ಬಂದೀತೆ?

ಎಸ್.ವಿ. ರಾಮಚಂದ್ರ

*

ನಮ್ಮನೇಲಿ ಎರಡು ದಿನದಿಂದ ನೀರು ಬರ್‍ತಾ ಇಲ್ಲಾ ಸಾರ್"

"ಯಾಕೆ? ಇದರ ಬಗ್ಗೆ ನಮಗೆ ಯಾರಿಂದಸೂ ದೂರು ಬಂದಿಲ್ಲವಲ್ಲ. ನೀರಿನ ಕಂದಾಯ ಬಾಕಿ ಏನಾದ್ರೂ ಇದೆಯೇ?"

"ಒಂದು ತಿಂಗಳು ಮಾತ್ರ ಬಾಕಿ ಇದೆ ಸಾರ್".

ಅದ್ಯಾವ ಮಹಾ ಬಿಡಿ... ನಾನು ತಕ್ಷಣ ಜನ ಕಳಿಸ್ತೀನಿ. ಅವರು ಎಲ್ಲಾ ಸರಿ ಮಾಡ್ತಾರೆ. ನಮ್ಮಿಂದ ನಿಮಗೆ ತೊಂದರೆಯಾದುದಕ್ಕೆ ದಯವಿಟ್ಟು ಕ್ಷಮಿಸಿ. ನೀವು ನೀರಿನ ಬಿಲ್ಲನ್ನು ಕಟ್ಟುವಾಗ ಎರಡು ದಿನದ ಹಣ ವಜಾ ಮಾಡಿಕೊಂಡು ಕಟ್ಟಿ...!"

*

"ಅಮ್ಮಾವ್ರೇ..."

"ಯಾರಪ್ಪ ಅದು?"

"ನಾನು ದಿನಸಿ ಅಂಗಡಿ ಶೆಟ್ಟರ ಮಗ ತಾಯಿ. ಮೊನ್ನೆ ಹೋದ ತಿಂಗಳು ದಿನಸಿ ಬಾಕಿ ಕೊಟ್ಟು ಕಳಿಸಿದ್ದರಲ್ಲಾ ತಾಯೀ...".

"ಯಾಕಪ್ಪ ಏನಾದ್ರೂ ಹೆಚ್ಚು ಕಮ್ಮಿ ಯಾಯ್ತೇ? ಸರಿಯಾಗಿ ಲೆಕ್ಕ ಹಾಕೇ ಕಳಿಸಿದ್ದೀವೀ..."

"ಹಾಗಲ್ಲಾ ತಾಯಿಾ... ನೀವು ನೂರು ರೂಪಾಯಿ ಹೆಚ್ಚಿಗೆ ಕೊಟ್ಟಿದ್ದೀರಿ. ಅದನ್ನ ವಾಪಸ್ಸು ಕೊಟ್ಟು ಬಾ ಅಂತ ನಮ್ಮ ತಂದೆ ಹೇಳಿದ್ರು. ಹಾಗೇ ಕ್ವಿಟಾಲ್ ಅಕ್ಕಿ ತಗೊಂಡಿದ್ರಲ್ಲ ಅದನ್ನ ವಾಪಸ್ಸು ಕೊಡಬೇಕಂತೆ".

"ಯಾಕಪ್ಪಾ...?"

"ಅಕ್ಕೀಲೀ ತುಂಬಾ ಕಲ್ಲಿದೆಯಂತೆ, ಬೇರೆ ಕೊಡ್ತಾರಂತೆ".

"ಇರಲಿ ಬಿಡಪ್ಪ. ಆರಿಸಿದರಾಯ್ತು..."

"ಉಂಟೇ ತಾಯಿ. ತಿನ್ನೋ ಅನ್ನಕ್ಕೆ ಕಲ್ಲು ಬೆರಸಿದ್ರೆಯಾರು ಉದ್ಧಾರ ಆಗ್ತಾರೆ ಹೇಳಿ?"

*

"ಇನ್ನೊಂದೆರಡು ತಿಂಗಳು ಹಾಲಿಗೆ ಎರಡು ರೂಪಾಯಿ ಕಮ್ಮಿ ಕೊಡಿ ಸಾರ್"

"ಯಾಕಯ್ಯ ಹಾಲಿನ ಬೆಲೆ ಏನಾದ್ರೂ ಕಮ್ಮಿ ಆಗಿದೆಯೇ?"

"ಇಲ್ಲಾ ಸಾರ್... ಹಾಲು ಸ್ವಲ್ಪ ನೀರಾಗಿದೆ... ಬೇಸಿಗೆ ಅಲ್ವಾಸಾರ್. ನೀರು ಬೆರಸಿ ನಿಮಗೆ ಮೋಸ ಮಾಡೋಲ್ಲ ಸಾರ್!"

"ನೀನು ಹೇಳೋದು ನಿಜವೇನಯ್ಯ?"

*

"ಈ ಮನೆಗೆ ಅಡ್ವಾನ್ಸ್; ಬಾಡಿಗೆ ಎಷ್ಟು ಕೊಡಬೇಕು ಸ್ವಾಮೀ?"

"ಅಡ್ವಾನ್ಸ್ ಏನೂ ಬೇಡ. ಬಾಡಿಗೆ ಕೊಡಿ ಸಾಕು".

"ಏನು ಸ್ವಾಮೀ ನೀವು ಹೇಳ್ತಾ ಇರೋದು?"

"ಹೌದಪ್ಪ... ಮನೆ ಎಲ್ಲಾ ಅನುಕೂಲವಾಗಿದೆ. ನಿಮಗೆ ತೊಂದರೆ ಏನಾದರೂ ಆದರೆ ಸಂಕೋಚಪಡದೇ ತಿಳಿಸಿ. ನೀರಿಗೆ ತೊಂದರೆ ಆದರೆ ನಮ್ಮನೆ ಬಾವಿಯಿಂದ ತಗೊಳ್ಳಿ. ಮನೆಗೆ ಏನಾದರೂ ಖರ್ಚು ಮಾಡಿದರೆ, ಅದನ್ನು ವಜಾ ಮಾಡಿಕೊಂಡು ಉಳಿದ ಬಾಡಿಗೆ ಕೊಡಿ. ಯಾವುದಕ್ಕೂ ಸಂಕೋಚ ಮಾಡಿಕೊಳ್ಳಬೇಡಿ!"

*

"ಬನ್ನಿ... ಏನು ಮೇಸ್ಟ್ರುಗಳೆಲ್ಲಾ ಒಟ್ಟಾಗಿ ಬಂದಿದ್ದೀರಲ್ಲಾ?"

"ಏನಿಲ್ಲಾ ಸಾರ್. ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದಿದ್ದೇವೆ ಸಾರ್. ಇನ್ನು ಮುಂದೆ ನಾವೆಲ್ಲಾ ಮನೆಯಲ್ಲಿ ಪಾಠ ಮಾಡುವುದನ್ನು ನಿಲ್ಲಿಸಿ, ಅದೇ ಸಮಯವನ್ನು ವಿದ್ಯಾರ್ಥಿಗಳಿಗೆ ಒಳ್ಳೆಯದಾಗುವಂತೆ ಮಾಡ್ತೇವೆ ಸಾರ್. ಶಾಲೆಯಲ್ಲೇ ಎಲ್ಲವನ್ನೂ ಕಲಿಸುತ್ತೇವೆ ಸಾರ್. ಅವರು ಯಾವಾಗ ಬಂದು ಏನು ಕೇಳಿದರೂ ಹೇಳಿಕೊಡ್ತೀವೀ ಸಾರ್. ನಮ್ಮ ಶಾಲೆಗೆ, ನಿಮಗೆ ಹೆಸರು ಬರುವಂತೆ ಶ್ರಮಿಸುತ್ತೇವೆ ಸಾರ್!"

"ನೀವು ತೆಗೆದುಕೊಂಡಿರುವ ತೀರ್ಮಾನಕ್ಕೆ ತುಂಬಾ ಸಂತೋಷ. ನಾನೂ ಸಹ ನಿಮ್ಮೊಂದಿಗೆ ಸಹಕರಿಸುತ್ತೇನೆ..."

*

"ಮಹಾಜನಗಳಲ್ಲಿ ವಿನಂತಿ. ನಾನು ಚುನಾವಣೆಯಲ್ಲಿ ಗೆದ್ದು ಮಂತ್ರಿಯಾಗಿರುವುದು ನಿಮಗೆ ಗೊತ್ತೇ ಇದೆ. ಆದರೆ ನಾನು ನನ್ನ ಈ ಸ್ಥಾನಕ್ಕೆ ರಾಜೀನಾಮೆ ಕೊಡ್ತಾ ಇದ್ದೇನೆ. ನಾನು ನಿಮಗೆಲ್ಲಾ ಮೋಸ ಮಾಡಿದ್ದೇನೆಂದು ಹೇಳಲು ನಾಚಿಕೆಯಾಗುತ್ತಿದೆ. ಆ ಸಮಯದಲ್ಲಿ ನನಗೆ ಇದು ಯಾವುದೂ ತಪ್ಪು ಎನ್ನಿಸಲೇ ಇಲ್ಲಾ! ನಾನು ಚುನಾವಣೆಯಲ್ಲಿ ಗೆದಿದ್ದು ಮೋಸದಿಂದ, ಹಣ ಹೆಂಡದಿಂದ! ಕಳ್ಳಭಟ್ಟಿ!! ದಯುವಿಟ್ಟು ನನ್ನನ್ನು ಕ್ಷಮಿಸಿ. ನಾನು ಈ ಮಂತ್ರಿ ಪದವಿಗೆ ಯೋಗ್ಯನಲ್ಲ. ನನ್ನಿಂದ ನಿಮಗಾಗಲೀ, ದೇಶಕ್ಕಾಗಲೀ ಏನೂ ಒಳ್ಳೆಯದಾಗುವುದಿಲ್ಲ. ನಾನು ರಾಜಕೀಯದಿಂದ ನಿವೃತ್ತನಾಗುತ್ತ ಇದ್ದೇನೆ...!"

*


ರೀ... ಏಳ್ರೀ... ಆಗ಼್ೇ ಘಂಟೆ ಎಂಟಾಯ್ತು! ಒಳ್ಳೇ ಸೋಮಾರಿಯಾಗಿ ಬಿಟ್ಟಿರಿ ಇತ್ತೀಚೆಗೆ... ಏಳಿ ಮೇಲೆ...!" ರಾಮರಾಜ್ಯದ ಕನಸು ಕಾಣುತ್ತಿದ್ದ ನಂಗೆ ನನ್ನ ಹೆಂಡ್ತಿಯ ಕರ್ಕಶ ಧ್ವನಿ ಕೇಳಿ ಎಚ್ಚರವಾಗಿ, ವಾಸ್ತವ ಪ್ರಪಂಚಕ್ಕೆ ಬರಲು ಸ್ವಲ್ಪ ಸಮಯವೇ ಬೇಕಾಯ್ತು!

ದರೋಡೆ

• ಭರತ್ ಬಿ ಎನ್

"**ಕ್ಯಾ**ಶ್ ಎಲ್ಲಾ ತೆಗ್ಗಿಡು" ಎಂಬ ಆಗಂತುಕನ ಗಡಸಿನ ಧ್ವನಿಗೆ ಕ್ಯಾಶಿಯರ್ ಪ್ರಮೀಳಾ ಪೂರ್ತಿ ಬೆವತಿದ್ಳು. ಕಾಲಿನಿಂದ ಬೆಲ್ ಒತ್ತಿ ಸೈರನ್ ಸದ್ದು ಹೊರಡಿಸಬಹುದಾದರೂ ಈ ಸೈರನ್ ಕಾರಣಾಂತರಗಳಿಂದ ಬ್ಯಾಂಕಿನಲ್ಲಿ ಆಗಾಗ ಕೂಗುತ್ತಲೇ ಇರುತ್ತದೆ. ಸೈರನ್ ಮೊಳಗಿದರೂ ಯಾರಿಗೂ ಏನೂ ಅನಿಸದು. ಅಲ್ಲದೆ ಅನಿರೀಕ್ಷಿತವಾದ ಬೆದರಿಕೆಯಿಂದ ಅವಳು ಕಂಗಾಲು. ಈ ದರೋಡೆಕೋರರ ಗುಂಪಿನ ಇತರ ಸದಸ್ಯರು ಈಗಾಗಲೇ ಅಲ್ಲಲ್ಲಿ ಸಿಬ್ಬಂದಿಗಳನ್ನು "ಹ್ಯಾಂಡ್ಸ್ ಅಪ್" ಎಂದು ಬೆದರಿಸಿ ಎಲ್ಲರನ್ನೂ ಮೂಲೆಗೆ ತಳ್ಳಿ ಹಗ್ಗದಿಂದ ಬಿಗಿಯುತ್ತಿದ್ದರು. ಅವರ ಕೈಯಲ್ಲಿದ್ದ ಸ್ಟೆನ್‌ಗನ್‌ಗಳಿಂದ ಎಲ್ಲರೂ ಭಯಭೀತರಾಗಿದ್ದರು. ಗೇಟಿನ ಬಳಿಯಿರುತ್ತಿದ್ದ ಸಶಸ್ತ್ರ ಕಾವಲುಗಾರನಿಗೆ ಮೂರ್ಛೆ ಬರುವಂತೆ ಮಾಡಿದ್ದರು.

ಸ್ವಲ್ಪ ದೂರದಲ್ಲಿದ್ದ ಮ್ಯಾನೇಜರ್ ಛೇಂಬರ್ ಗಾಜಿನ ಕ್ಯಾಬಿನ್ ಆಗದೆ ಒಂದು ಪ್ರತ್ಯೇಕ ಕೊಠಡಿಯೇ ಆಗಿದ್ದುದರಿಂದ ಈ ಗದ್ದಲವು ಅವರ ಗಮನಕ್ಕೆ ಬಂದಿರಲಿಲ್ಲ. ಯಾವುದೋ ಕಾರಣಕ್ಕೆ ಹೆಡ್ ಆಫೀಸಿಗೆ ಫೋನ್ ಮಾಡಲು ರಿಸೀವರ್ ಎತ್ತಿಕೊಂಡು ಬಟನ್ ಒತ್ತಿದರೂ ಯಾವ ಉತ್ತರವೂ ಇಲ್ಲ. ಆಗಷ್ಟೆ ಡಯಲ್ ಟೋನ್ ಇಲ್ಲ ಎಂಬ ಅರಿವು ಬಂತವರಿಗೆ. ಅಟೆಂಡರ್ ಸುರೇಶನನ್ನು ಪಕ್ಕದ ಟೆಲಿಫೋನ್ ಎಕ್ಸ್‌ಛೇಂಜ್‌ಗೆ ಕಳಿಸಿ ಕಂಪ್ಲೇಂಟ್ ಕೊಡಬೇಕೆಂದು ಅವನನ್ನು ಕರೆಯಲು ಕರೆಗಂಟೆಯನ್ನು ಒತ್ತಿದರು. ಕಾಲ್ ಬೆಲ್‌ನ ಸದ್ದು ಕೇಳಿ, ಆ ಕೊಠಡಿಯಲ್ಲಿ ಯಾರೋ ಇದ್ದಾರೆಂದು ಈಗಷ್ಟೆ ಗೊತ್ತಾಗಿ ಗನ್ ಹಿಡಿದುಕೊಂಡು ಒಬ್ಬ ದರೋಡೆಕೋರ ಮ್ಯಾನೇಜರ್‌ರ ಕ್ಯಾಬಿನ್ನಿಗೆ ನುಗ್ಗಿದ.



ಮ್ಯಾನೇಜರ್‌ರು ಇವನನ್ನು ನೋಡಿ ಕಂಗಾಲು. ಕೊನೆಗೆ ಮ್ಯಾನೇಜರ್‌ರನ್ನೂ ದರೋಡೆಕೋರ ಉಳಿದೆಲ್ಲಾ ಸಿಬ್ಬಂದಿಗಳಿದ್ದ ಮೂಲೆಗೆ ತಳ್ಳಿದ.

ತಿಂಗಳ ಮಧ್ಯಭಾಗವಾದುದರಿಂದ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ಇದ್ದ ನಾಲ್ಕೈದು ಮಂದಿಯನ್ನು ಇನ್ನೊಂದು ಮೂಲೆಗೆ ತಳ್ಳಿಯಾಗಿತ್ತು.

ಕ್ಯಾಶಿಯರ್ ಬಳಿಯಿದ್ದ ನಗದೆಲ್ಲವನ್ನೂ ಬ್ಯಾಗಿಗೆ ತುಂಬಿಸಿದ ಬಳಿಕ ವಾಲ್ಟ್‌ನಲ್ಲಿದ್ದ ಕ್ಯಾಶನ್ನು ಪಡೆಯಲು ಸ್ಟೆನ್‌ಗನ್ ಹಿಡಿತ ದರೋಡೆಕೋರನೊಬ್ಬ ಅಕೌಂಟೆಂಟ್ ಹಾಗೂ ನಗದು ಅಧಿಕಾರಿಯನ್ನು ಬಲವಂತವಾಗಿ ತಳ್ಳಿ ವಾಲ್ಟ್‌ನೊಳಗೆ ದಬ್ಬಿಕೊಂಡು ಹೋದ.

ಬ್ಯಾಂಕ್ ದರೋಡೆ ಮುಗಿಯುವ ವೇಳೆಗೆ ಸರಿಯಾಗಿ ಪೊಲೀಸರು ಬಂದದ್ದು ಹೇಗೆ?

ಯಾರೂ ಬರುವ ಭಯವಿರಲಿಲ್ಲ. ಫೋನ್ ವಯರ್, ಸೈರನ್ ವಯರ್ ಎಲ್ಲ ಕಡಿದಾಗಿತ್ತು. ಇನ್ನೇನು ಹತ್ತು ನಿಮಿಷಗಳೊಳಗೆ ಈ ಕಾರ್ಯಾಚರಣೆ ಮುಗಿದೀತೆಂದು ಅವರ ಲೆಕ್ಕಾಚಾರ.

ಸರಿಯಾಗಿ ಒಂಬತ್ತು ನಿಮಿಷಗಳೊಳಗೆ ಬ್ಯಾಂಕಿನಲ್ಲಿದ್ದ ನೋಟಿನ ಕಂತೆಗಳೆಲ್ಲವನ್ನೂ ಚೀಲಗಳಿಗೆ ತುರುಕಿಸಿ ಹೊರಬರುತ್ತಿದ್ದ ದರೋಡೆಕೋರರು ಗೇಟಿನ ಹೊರ ಬರುತ್ತಿದ್ದಂತೆಯೇ ಹೊರಗಿನಿಂದ ಏಳೆಂಟು ಪೊಲೀಸರು ಒಮ್ಮೆಲೇ ಅವರೆಲ್ಲರ ಮೇಲೆ ಮುಗಿಬಿದ್ದುದರಿಂದ ಗಲಿಬಿಲಿಗೊಳ್ಳುವ ಸರದಿ ಈಗ ದರೋಡೆಕೋರರದ್ದು. ಅವರ ಗನ್‌ಗಳನ್ನು ಕಸಿದು, ಹೆಡೆಮುರಿ ಕಟ್ಟಿ, ಪೊಲೀಸ್ ವ್ಯಾನ್‌ಗಳೊಳಗೆ ದಬ್ಬಿ ಸ್ಟೇಷನ್‌ಗೆ ಕರೆದೊಯ್ದಿದ್ದು ತೀರಾ ಸಿನಿಮೀಯವಾಗಿಯೇ ನಡೆದಿತ್ತು.

ಪೊಲೀಸ್ ಅಧಿಕಾರಿಯವರು ತಮ್ಮ ಒಂದಿಬ್ಬರು ಸಹಾಯಕರೊಡನೆ ಬ್ಯಾಂಕಿನೊಳಗೆ ಹೋಗಿ ಸಿಬ್ಬಂದಿಗಳೆಲ್ಲರನ್ನೂ ಬಿಡಿಸಿ, ಕ್ಯಾಶ್ ಇರುವ ಚೀಲವನ್ನು ಹಿಂದೆ ನೀಡಿದರು. ಪೊಲೀಸ್ ಇನ್ಸ್‌ಪೆಕ್ಟರ್‌ರನ್ನೂ, ಹೆಡ್ ಆಫೀಸಿನ ಕಂಪ್ಯೂಟರ್ ಸೆಕ್ಷನ್ನಿನ ಪ್ರಸಾದ್‌ನನ್ನೂ ನೋಡಿ ಮ್ಯಾನೇಜರ್ ಹಾಗೂ ಸಿಬ್ಬದಿಗಳೆಲ್ಲರೂ ಆಶ್ಚರ್ಯ ಚಕಿತರಾಗಿದ್ದರು.

ಈ ರೀತಿ ದರೋಡೆ ನಡೆದದ್ದು ಎಷ್ಟು ಅನಿರೀಕ್ಷಿತವಾಗಿತ್ತೋ, ದರೋಡೆಯನ್ನು ವಿಫಲಗೊಳಿಸಿದುದೂ ಅಷ್ಟೇ ನಾಟಕೀಯ ಆಗಿತ್ತು. ಮ್ಯಾನೇಜರ್ ಇನ್ಸ್‌ಪೆಕ್ಟರ್‌ರ ಕೈಕುಲುಕಿ "ಸ್ಸಾರ್, ನಿಮ್ಗೆಷ್ಟು ಥ್ಯಾಂಕ್ಸ್ ಹೇಳಿದ್ರೂ ಸಾಲ್ದು. ಸದ್ಯ ದರೋಡೆ ತಪ್ಪಿಸಿದ್ರಲ್ಲಾ" "ಇಟ್ಸ್ ಆಲ್ರೈಟ್ ನಮ್ ಡ್ಯೂಟೀನೇ ಅದು. ಥ್ಯಾಂಕ್ಸ್ ಹೇಳ್ಬೇಕಾದ್ದು ನಿಮ್ಮ ಪ್ರಸಾದ್‌ಗೆ. ಏಕೆಂದು ಅವ್ರನ್ನೇ ಕೇಳಿ" ಎಂದರು ಇನ್ಸ್‌ಪೆಕ್ಟರ್.

"ಏನು ಪ್ರಸಾದ್, ಹೇಗಾಯ್ತು ಇದೆಲ್ಲಾ" ಎಂದು ಮ್ಯಾನೇಜರ್ ಪ್ರಸಾದ್‌ನನ್ನು ಕೇಳಿದರು. ಪ್ರಸಾದ್ ಬ್ಯಾಂಕಿನ ಹೆಡ್ ಆಫೀಸಿನ ಕಂಪ್ಯೂಟರ್ ಸೆಕ್ಷನ್ನಿನಲ್ಲಿ ಪ್ರೋಗ್ರಾಮರ್. "ಆನಂದನಗರ ಬ್ರ್ಯಾಂಚ್‌ನಲ್ಲಿ ಸಿಸ್ಟಮ್ ಡೌನ್ ಆಗಿತ್ತು. ಅದನ್ನು ಸರಿಮಾಡ್ತಾ ಇದ್ದೆ. ಹಾಗೇ ಇಲ್ಲಿಗೆ ಕಂಪ್ಯೂಟರ್ ಕಾಲ್ ಅಟೆಂಡ್ ಮಾಡ್ಲಿಕ್ಕೆ ಬಂದಿದ್ದ ರಮೇಶ್‌ಗೆ ಅರ್ಜೆಂಟ್ ಪೇಜರ್ ಮೆಸೇಜ್ ಕಳ್ಸಿದ್ದೆ. ಕಾಲು ಗಂಟೆಯಾದ್ರೂ ವಾಪಸ್ಸು ಮೆಸೇಜ್ ಬಂದಿರ್‍ಲಿಲ್ಲ. ಹಾಗೆ ಇಲ್ಲಿಗೆ ಫೋನ್‌ಗೆ ಟ್ರೈ ಮಾಡಿದ್ರೂ ಲೈನ್ ಡೆಡ್ ಆಗಿತ್ತು. ಮೆಸೇಜ್ ಅರ್ಜೆಂಟ್ ಇದ್ದ ಕಾರಣ ಪೇಜರ್ ನೋಡಿ ರಮೇಶ್ ಕೂಡ್ಲೆ ಕಾಂಟಾಕ್ಟ್ ಮಾಡ್ಲೇಬೇಕಿತ್ತು. ಮಾಡದ ಕಾರಣ ಏನೋ ತೊಂದರೆಯಾಗಿದೆಯೆಂದೇ ನನಗೆ ಅನಿಸ್ತು. ಅಲ್ಲೇ ಇದ್ದ ಹೊಯ್ಸಳದಲ್ಲಿದ್ದ ಪೊಲೀಸ್ ಸಿಬ್ಬಂದಿಗೆ ವಿಷಯ ತಿಳಿಸಿ ಏನೋ ಅನಾಹುತ ನಡೆದಿರಬಹುದೆಂದು ಸಂದೇಹ ವ್ಯಕ್ತಪಡಿಸಿದೆ. ಅವರೂ ನೋಡ್ಲೋಣ. ನೋಡಿ ಬರುವುದರಲ್ಲಿ ತಪ್ಪೇನಿದೆ ಎಂದು ನನ್ನೊಜತೆ ಬಂದ್ರು. ಮುಂದಿಂದೆಲ್ಲಾ ಗೊತ್ತೇ ಇದೆ ಅಲ್ವಾ" ಎಂದು ಕಥೆ ಮುಗಿಸಿದಾಗ ಎಲ್ರೂ ಪ್ರಸಾದ್, ರಮೇಶ್, ಇನ್ಸ್‌ಪೆಕ್ಟರ್ ಎಲ್ಲರ ಕೈ ಕುಲುಕಿದ್ದೇ ಕುಲುಕಿದ್ದು.



ಜ್ಯೋತ್ಸ್ನಾ - ಕೃಷ್ಣಾನಂದ ಕಾಮತ್

ತಾಯ್ನೆಲದಲ್ಲೇ ನಿಂತ ಪ್ರತಿಭೆ

■ ಸಮುದ್ರಗುಪ್ತ

ಉತ್ತರ ಕನ್ನಡ ಜಿಲ್ಲೆಯ ಈ ದಂಪತಿಗಳು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ನೀಡಿದ ಕೊಡುಗೆ ಅಪೂರ್ವವಾದದ್ದು. ವಿದೇಶಕ್ಕೆ ಹೋಗುವ ಎಲ್ಲಾ ಸೆಳೆತಗಳಿಂದಲೂ ಪಾರಾಗಿ ಕನ್ನಡ ನೆಲದಲ್ಲೇ ನೆಲೆ ನಿಂತದ್ದು ದಂಪತಿಗಳ ವೈಶಿಷ್ಟ್ಯ

ಅನುರೂಪ

“ಅ ಆ ಬರೆಯಲು ಕಲಿತೊಡನೆ ಸಾಹಿತಿಯಾಗಲು ಸಾಧ್ಯವೆ?” ಅಮೆರಿಕಾದಲ್ಲಿ ಡಾಕ್ಟರೇಟ್ ಪಡೆದು, ಭಾರತಕ್ಕೆ ಮರಳಿಬಂದು, ವಿವಾಹಿತರಾಗಿ, ಅಮೆರಿಕಾ ನೋಡದ ಪತ್ನಿಗೆ, ಅಲ್ಲಿಯ ಅನುಭವಗಳನ್ನೆಲ್ಲಾ ರಂಗು ರಂಗಾಗಿ ವರ್ಣಿಸುತ್ತಿದ್ದ ಪತಿಯನ್ನು ಕಾಡುತ್ತಿದ್ದ ಪ್ರಶ್ನೆ. ಗಂಡ ವರ್ಣಿಸುತ್ತಿದ್ದ ಅಮೆರಿಕಾದ ವರ್ಣನೆಯನ್ನು ಕನ್ನಡದಲ್ಲಿ ಬರೆಯಬೇಕೆಂಬುದು ಪತ್ನಿಯ ಒತ್ತಾಯ. “ನಿಮ್ಮ ಹತ್ತಿರ ಅಪೂರ್ವ ಅನುಭವಗಳಿವೆ ಬರೆಯುವ ಶೈಲಿಯಿದೆ. ಬರೀರೀ!” ಎಂದು ಕೈಹಿಡಿದವಳು ಪಟ್ಟುಹಿಡಿದಾಗ ಉಪಾಯವಿಲ್ಲದೆ ಪತಿ ವಿರಾಮದ ವೇಳೆಯಲ್ಲಿ ಅಮೆರಿಕಾದ ಅನುಭವಗಳನ್ನು ಬರೆಯಲಾರಂಭಿಸಿದ.

ಬರೆದದ್ದನ್ನು ತೋರಿಸಿದಾಗ “ತೀರ ಸಂಕ್ಷಿಪ್ತ ಬರಹ. ತಂತಿ ಸಮಾಚಾರದ ಭಾಷೆಯ ಬರವಣಿಗೆ ಸಾಹಿತ್ಯವಾಗಲಾರದು!” ಎಂದು ಪತ್ನಿಯ ಆಕ್ಷೇಪ.. “ಸ್ವಲ್ಪದರಲ್ಲಿ ತಿಳಿಸುವುದು, ವಿಜ್ಞಾನದ ರೀತಿ” ಎಂದು ಪತಿ ಪಟ್ಟುಹಿಡಿದ ಪರಿಣಾಮವಾಗಿ ಬರವಣಿಗೆ ಕೆಲಕಾಲ ಸ್ಥಗಿತಗೊಂಡಿತು. ಕೊನೆಗೆ ಅರ್ಧಾಂಗಿಯೇ ಸೋತು ಬರೆದದ್ದನ್ನು ಒಪ್ಪಿಕೊಂಡಾಗ ಬರವಣಿಗೆ ಮುಂದುವರೆಯಿತು. ಹಸ್ತಪ್ರತಿ ಸಿದ್ಧವಾದಾಗ ಅದನ್ನು ಧಾರವಾಡದ ಮನೋಹರ ಗ್ರಂಥಮಾಲೆಗೆ ಕಳುಹಿಸಿಯೂ ಆಯಿತು. ಒಂದೇ ರಾತ್ರಿಯಲ್ಲಿ ಓದಿ ಮುಗಿಸಿದ ಜಿ ಬಿ ಜೋಶಿ ಅವರು ಅದನ್ನು ಪ್ರಕಟಿಸಿಯೂಬಿಟ್ಟರು.

“ರಾತ್ರಿ ಬೆಳಗಾಗುವುದರೊಳಗೆ ನಾನೊಬ್ಬ ಸಾಹಿತಿಯಾಗಿಬಿಟ್ಟಿದ್ದೆ” ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಬರಹಗಾರ ಎನಿಸಿಕೊಂಡಿರುವ ಡಾ. ಕೃಷ್ಣಾನಂದ ಕಾಮತ್ ತಮ್ಮ ಪ್ರಥಮ ಕೃತಿ 'ನಾನೂ ಅಮೆರಿಕೆಗೆ ಹೋಗಿದ್ದೆ' ರೂಪುಗೊಂಡ ಬಗ್ಗೆ ವಿವರಿಸುವಾಗ, ಸಾಹಿತಿಯಾಗಿ ಅವರನ್ನು ರೂಪಿಸಿದ ಬಾಳಸಂಗಾತಿ ಜ್ಯೋತ್ಸ್ನಾ ಕಾಮತ್ ನಗುತ್ತಾ ತಮ್ಮ ಸೊಲ್ಲುಗಳನ್ನು ಸೇರಿಸುತ್ತಾರೆ. ಕನ್ನಡ ಸಾಹಿತ್ಯಕ್ಕೆ ಈ ದಂಪತಿಗಳು ನೀಡಿದ ಕೊಡುಗೆ ವಿಶಿಷ್ಟ ಬಗೆಯದು ಮಾತ್ರವಲ್ಲ ಅಷ್ಟೆ ವೈವಿಧ್ಯಮಯ. ಪ್ರವಾಸ ಕಥನ, ಕಾದಂಬರಿ, ವೈಜ್ಞಾನಿಕ ಬರವಣಿಗೆ, ಪತ್ರ ಸಾಹಿತ್ಯ, ಚಿತ್ರಕಲೆ- ಹೀಗೆ ಹಲವು ಬಗೆಯಲ್ಲಿ ಕೃಷ್ಣಾನಂದ ಕಾಮತರು ಅನೇಕ ಕೃತಿಗಳನ್ನು ಕನ್ನಡದಲ್ಲಿ ಬರೆದರೆ, ಪತ್ನಿ ಜ್ಯೋತ್ಸ್ನಾ ಕಾಮತ್ ಇತಿಹಾಸ, ಪ್ರಬಂಧ, ಶಿಕ್ಷಣ, ಹಾಸ್ಯ- ಹೀಗೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಸಿದ್ದಾರಲ್ಲದೆ, ಅಕಾಡೆಮಿ ಹಾಗೂ ಮತ್ತಿತರ ಸಾಹಿತ್ಯ ಪ್ರಶಸ್ತಿ- ಪುರಸ್ಕಾರ ಪಡೆಯುವುದರಲ್ಲೂ ದಂಪತಿಗಳ ನಡುವೆ ಸ್ಪರ್ಧೆ ನಡೆದಿದೆ ಎನ್ನಬಹುದು.

“ಎಳನೆಯ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ನನ್ನ ಬೌದ್ಧಿಕ ಜೀವನವನ್ನು ರೂಪಿಸುವಲ್ಲಿ ಮೂವರು ಪುರುಷರು ಕಾರಣರಾಗಿದ್ದಾರೆ. ತಂದೆ, ವಿದ್ಯಾಗುರುಗಳು ಹಾಗೂ ಪತಿ” ತಮ್ಮ ಬಾಳಿನ ಅಭ್ಯುದಯದ ರೂಪು-ರೇಷೆಗಳನ್ನು ವಿಶ್ಲೇಷಿಸುತ್ತಾ ಡಾ. ಜ್ಯೋತ್ಸ್ನಾ ಕಾಮತ್ ಹೇಳುವ ಮಾತು.

ಜ್ಯೋತ್ಸ್ನಾ ಅವರ ತಂದೆ ಬುರ್ಡೆ ಗಣೇಶ ರಾಯರು. ಪೋಸ್ಟ್ ಮಾಸ್ಟರ್ ಆಗಿ ಚಿಕ್ಕ ದೊಡ್ಡ ಊರುಗಳಿಗೆ ವರ್ಗವಾಗುತ್ತಾ ಸೇವೆಸಲ್ಲಿಸಿದವರು. ವಾಚನಾಸಕ್ತಿಯ ಬಗ್ಗೆ ವಿಶೇಷ ಒಲವು ಹೊಂದಿದ್ದ ಗಣೇಶರಾಯರು, ತಮ್ಮ ಸಣ್ಣ ಸಂಬಳದಲ್ಲೂ ಕೊಂಡ ಪುಸ್ತಕಗಳಿಗೆ ಲೆಕ್ಕವಿಲ್ಲ. ಮನೋಹರ ಗ್ರಂಥಮಾಲೆಯ ಪ್ರಾರಂಭದ ವರ್ಷಗಳಿಂದಲೂ ಚಂದಾದಾರರು. ವರ್ಗ ಆದಲ್ಲಿ, ಮೊದಲು ಊರಿನಲ್ಲಿದ್ದ ವಾಚನಾಲಯಗಳ ಸದಸ್ಯರಾಗುತ್ತಿದ್ದರು. ಕಾರವಾರದ ಗ್ರಂಥಾಲಯದಿಂದ ಅಂಚೆಯಲ್ಲಿ ಪುಸ್ತಕ ತರಿಸಿ ಓದುತ್ತಿದ್ದ ಬುರ್ಡೆಯವರ ಚಟದಲ್ಲಿ ಭಾಗಿಯಾದವರಲ್ಲಿ ಗೌರೀಶ ಕಾಯ್ಕಿಣಿ ಅವರೂ ಒಬ್ಬರು.

“ತಂದೆ ತಾವು ಮಾತ್ರ ಓದಿದ್ದಲ್ಲ, ತಮ್ಮ ಮೂರು ಮಕ್ಕಳಿಗೂ ವಾಚನಾಭಿರುಚಿ ಬೆಳೆಯುವಂತೆ ನೋಡಿಕೊಂಡರು. 'ಕಾರಂತರ ಬಾಲಪ್ರಪಂಚ' ಸಂಪುಟಗಳನ್ನು ನೆಲದಮೇಲೆ ಹರಡಿ, ಲಾಂದ್ರದ ಬೆಳಕಿನಲ್ಲಿ ಬಾಲ್ಯದಲ್ಲಿ

ಓದುತ್ತಿದ್ದ ನೆನಪು ಬಾಳಿನುದ್ದಕ್ಕೂ ಮಾಸಲಾರದ ಚಿತ್ರ.'' ಎಳಮೆಯ ದಿನಗಳನ್ನು ಕಣ್ಣಿಗೆ ಕಟ್ಟುವಂತೆ ಜ್ಯೋತ್ಸ್ನಾ ವರ್ಣಿಸಬಲ್ಲರು.

ನಾಲ್ಕೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಜ್ಯೋತ್ಸ್ನಾ, ಗೋಕರ್ಣದ ಭದ್ರಕಾಳಿ ಹೈಸ್ಕೂಲ್ ಮುಗಿಸಿದ ಬಳಿಕ ಸೇರಿದ್ದು ಕುಮಟಾದ ಕೆನರಾ ಕಾಲೇಜ್.

ಅಧ್ಯಯನ ಆಸಕ್ತಿ

"ಕಾಲೇಜ್ ದಿನಗಳಲ್ಲಿ ನನ್ನ ಓದಿನ ಚಟ ಇನ್ನೂ ಜೋರಾಯ್ತು! ಆಸ್ಕರ್ ವಾಯ್‌ಲ್ಡ್, ವೆಲ್ಸ್, ಶಾ, ಹೆಮಿಂಗ್‌ವೇ, ಠಾಗೂರ್, ಜೇನ್ ಆಸ್ಟಿನ್' ಪರ್ಲ್‌ಬಕ್ ಮುಂತಾದವರ ಕೃತಿಗಳನ್ನು ಆಗಲೇ ಓದಿದ್ದು. ಕನ್ನಡ ಪುಸ್ತಕ-ಪತ್ರಿಕೆ ಯಾವುದು ಕೈಗೆ ಸಿಕ್ಕರೂ ಓದಿ ಮುಗಿಸುತ್ತಿದ್ದೆ. ಓದು-ಬರಹಕ್ಕೆ ಇರುವ ನಂಟನ್ನು ಆಗ ಅರಿತುಕೊಂಡಿರಲಿಲ್ಲ. ಇತಿಹಾಸ ಪ್ರೀತಿಯ ವಿಷಯವಾಗಿತ್ತು. ಜೊತೆಗೆ ಸಂಸ್ಕೃತವನ್ನು ಮುಖ್ಯ ವಿಷಯವಾಗಿ ಆಯ್ಕೆ ಮಾಡಿಕೊಂಡೆ. ಸಂಸ್ಕೃತಕ್ಕೆ ಆಗ ಡಾ. ಕೆ. ಕೃಷ್ಣಮೂರ್ತಿ ಅವರಂಥ ಘನ ವಿದ್ವಾಂಸರೂ, ಪ್ರೊ. ಲಿಂಗೇಶ್ ಶರ್ಮರಂಥ ಒಳ್ಳೆಯ ಉಪನ್ಯಾಸಕರೂ ಸಿಕ್ಕಿದ್ದರು. ನಂತರದ ನನ್ನ ಸಂಶೋಧನೆಗಳಿಗೆ. ಅಷ್ಟೇ ಏಕೆ ಈಗಿನ ದಿನಗಳಲ್ಲೂ ಕೂಡ ಅಂದು ನಾನು ಪಡೆದ ಸಂಸ್ಕೃತ ಭಾಷೆಯ ಜ್ಞಾನವೇ ಭದ್ರವಾದ ನೆಲಗಟ್ಟನ್ನು ಒದಗಿಸಿದ್ದು ಎಂಬುದನ್ನು ಅಲ್ಲಗಳೆಯುವಂತಿಲ್ಲ.'' ಎನ್ನುತ್ತಾರೆ.

ಆಟ, ನಾಟಕ, ಡಿಬೇಟ್‌ಗಳಲ್ಲಿ ಭಾಗವಹಿಸುತ್ತಿದ್ದ ಜ್ಯೋತ್ಸ್ನಾ ಕೆನರಾ ಕಾಲೇಜಿಗೆ ಮೊದಲಿಗರಾಗಿ ಬಿ. ಎ. (ಆನರ್ಸ್) ಮುಗಿಸಿದರು. ಎಂ.ಎ.ಗೆ ಪ್ರವೇಶ ಹಾಗೂ ಶಿಷ್ಯ ವೇತನ ದೊರೆಯುವ ಸಾಧ್ಯತೆ ಇದ್ದರೂ ಆರ್ಥಿಕ ಸ್ವಾವಲಂಬನೆ ಅಂದಿನ ಅವರ ತುರ್ತು ಅಗತ್ಯ ಆಗಿತ್ತು. ಅದೇ ಸಮಯದಲ್ಲಿ ತಂದೆಯವರಿಗೆ ಧಾರವಾಡಕ್ಕೆ ವರ್ಗವಾದಾಗ ಜ್ಯೋತ್ಸ್ನಾ ಬಿ.ಎಡ್. ಪಠ್ಯ ಕ್ರಮವನ್ನು ಒಳಗೊಂಡ ಜೀವನ ಶಿಕ್ಷಣ ತರಬೇತಿಯ ಪದವಿಗೆ ಸೇರಿದರು. ಇಲ್ಲಿ ಟ್ರೈನಿಂಗ್ ಪಡೆದ ಬಳಿಕ ಪ್ರಾಥಮಿಕ ಶಿಕ್ಷಕಿಯರ ಟ್ರೈನಿಂಗ್ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದರು.

"ಟ್ರೈನಿಂಗ್ ಕಾಲೇಜಿನಲ್ಲಿ ಕಲಿಸುತ್ತಲೇ ಎಂ.ಎ. ಪದವಿ ಪಡೆಯಲು ಹವಣಿಸಿದೆ. ಕರ್ನಾಟಕ ಇತಿಹಾಸ ಕ್ಷೇತ್ರದಲ್ಲಿ ಹೆಸರು ಪಡೆದ ಡಾ. ಬಿ. ಎ. ಸುಲೆತ್ತೂರ್, ಡಾ. ಪಾಂಡುರಂಗರಾವ್ ದೇಸಾಯಿ ಹಾಗೂ ಡಾ. ಜಿ. ಎಸ್. ದೀಕ್ಷಿತ್ ಅವರನ್ನು ಪ್ರಾಧ್ಯಾಪಕರನ್ನಾಗಿ ಪಡೆಯುವ ಭಾಗ್ಯ ನನ್ನದಾಯಿತು. ಎಂ.ಎ.ಯನ್ನು ಮೊದಲಿಗಳಾಗಿ ಮುಗಿಸಿದೆ'' ಎನ್ನುವ ಜ್ಯೋತ್ಸ್ನಾ ಕಾಮತ್ ಮೂರುವರ್ಷಗಳ ಕಾಲ ಶಿಕ್ಷಕಿಯಾಗಿ ದುಡಿದರು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪ್ರೊ. ಜಿ. ಎಸ್. ದೀಕ್ಷಿತ್‌ರಿಗೆ ಸಂಶೋಧನಾ ಸಹಾಯಕಿಯಾಗಿ ಸೇರಿಕೊಂಡರು.

ಜ್ಯೋತ್ಸ್ನಾ ಅವರಿಗೆ ಭದ್ರವಾದ ನೌಕರಿಯ ಅಗತ್ಯವಿದೆ ಎಂಬುದನ್ನು ಮನಗಂಡ ಪ್ರೊ. ದೀಕ್ಷಿತರು ಆಕಾಶವಾಣಿಯ ಕಾರ್ಯನಿರ್ವಾಹಕರ ಹುದ್ದೆಗಳಿಗೆ ಕರೆ ನೀಡಿದಾಗ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಿದರು. 1964ರಲ್ಲಿ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯನಿರ್ವಾಹಕಿ ಆಗಿ ಜ್ಯೋತ್ಸ್ನಾ ನೇಮಕಗೊಂಡರು.

ವಿವಾಹಯೋಗ

ಈ ಎಲ್ಲಾ ಜಂಜಾಟಗಳ ನಡುವೆ ಜ್ಯೋತ್ಸ್ನಾ ಅವರಿಗೆ ವಿವಾಹದ ವಯಸ್ಸು ಮೀರಿತ್ತು. "ಆರ್ಥಿಕ ಸ್ವಾವಲಂಬನೆ, ವೈಚಾರಿಕ ಸ್ವಾತಂತ್ರ್ಯವೆಂಬ ಪೊಳ್ಳು ಅಭಿಮಾನದ ಜೊತೆಗೆ, ಸ್ವಭಾವ ವೈಚಿತ್ರ್ಯ ನನ್ನ ವೈವಾಹಿಕ ಜೀವನಕ್ಕೆ ಅಡ್ಡಿ ತರಬಹುದೆಂಬ ಆತಂಕ ನನಗಿತ್ತು. ಶೀಘ್ರ ಕೋಪ, ಅಸಹನೆ, ಅವ್ಯವಹಾರಿಕತೆಗಳು ನನ್ನ ದೌರ್ಬಲ್ಯಗಳು. ಜೊತೆಗೆ ಬಾಳಸಂಗಾತಿ ಆಗುವಾತ ಧೀಮಂತ ವ್ಯಕ್ತಿಯಾಗಿರಬೇಕು ಎಂಬ ಕನಸು ಬೇರೆ! ನನ್ನ ಸ್ವಭಾವಕ್ಕೆ ಹೊಂದಿ ಕೊಳ್ಳುವಂಥ ವ್ಯಕ್ತಿ ಸಿಕ್ಕರೆ ಮದುವೆ ಆಗುವುದು ಇಲ್ಲದಿದ್ದರೆ ಕನ್ಯೆಯಾಗಿಯೇ ಉಳಿದುಬಿಡುವುದು ಎಂಬ ನಿರ್ಧಾರಕ್ಕೆ ಬಂದಿದ್ದೆ. ಈಗ ಆಫೀಸರ್ ಬೇರೆ ಆಗಿ ವಿವಾಹದ ಅವಕಾಶ ಇನ್ನೂ

ದೂರವಾಯಿತೆಂದುಕೊಂಡಿದ್ದೆ. ಆದರೆ ವಿವಾಹಯೋಗವೆಂಬುದು ವಿಧಿಯು ಕೈವಾಡ ಎಂದು ಒಮ್ಮೊಮ್ಮೆ ಅನ್ನಿಸುವುದುಂಟು. ತಡವಾಗಿಯಾದರೂ ಅತ್ಯಂತ ಸುಲಭವಾಗಿ ನನ್ನ ಜೀವನದಲ್ಲಿ ಅದು ಘಟಿಸಿತು. ಬಹುಮುಖ ಪ್ರತಿಭೆಯ ವ್ಯಕ್ತಿ ನನ್ನ ಕೈ ಹಿಡಿದ" ಪತಿ ಕೃಷ್ಣಾನಂದ ಕಾಮತರ ಬಗ್ಗೆ ಹಾಗೂ ವಿವಾಹದ ದಿನಗಳನ್ನು ನೆನಪಿಸಿಕೊಳ್ಳುತ್ತ ನಗುತ್ತಾ ನುಡಿಯುತ್ತಾರೆ ಜ್ಯೋತ್ಸ್ನಾ.

"ಸ್ತ್ರೀ ಸೌಂದರ್ಯದ ಶೋಧದಲ್ಲಿ ಹೊರಟ ಕೃಷ್ಣಾನಂದ ಕಾಮತರಿಗೆ, ಶಾಲಾ ಕಾಲೇಜು ದಿನಗಳಿಂದಲೂ, ಕಾವ್ಯದ ತುಣುಕುಗಳ ವಾಚನದಿಂದ ಪ್ರಭಾವಿತರಾಗಿ ಅಪೂರ್ವ ಸುಂದರಿಯನ್ನೇ ಪತ್ನಿಯಾಗಿ ಹೊಂದುವ ಕನಸು. ಆ ಯತ್ನದಲ್ಲಿ ಅವರು ಯೂರೋಪ್ ಅಮೆರಿಕಾಗಳಲ್ಲದೆ ಕಾಶ್ಮೀರ, ಬಂಗಾಲ, ರಾಜಸ್ಥಾನದಲ್ಲೂ ಶೋಧನೆ ನಡೆಸಿದ್ದರು. ಆದರೆ ವಿಧಿ ಅವರಿಗೆ ಕಟ್ಟಿಟ್ಟ 'ಕೂಸು' ಅವರ ಊರಿಗೆ ಹನ್ನೆರಡೇ ಮೈಲಿ ದೂರದಲ್ಲಿತ್ತು" ವಧುಅನ್ವೇಷಣಾ ಕಾರ್ಯದಲ್ಲಿ ಬಂದ ಕಾಮತರನ್ನು ಕಂಡ ಮೊದಲ ದಿನಗಳನ್ನು ಜ್ಯೋತ್ಸ್ನಾ ವರ್ಣಿಸುವ ಬಗೆ ಇದು.

ಹುಟ್ಟಿನಿಂದ ಲಕ್ಷ್ಮೀಪುತ್ರನೆನಿಸಿಕೊಂಡರೂ, ಅನಂತರ ಸರಸ್ವತಿಯ ದತ್ತಕ ಪುತ್ರನಾಗಿ, ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನ-ಮಾನ ಪಡೆದ ಕೃಷ್ಣಾನಂದ ಕಾಮತರು ತಾವು ಕಳೆದ ಅರ್ಧ ಶತಮಾನದ ಹೋರಾಟದ ಬದುಕನ್ನು ನಿರೂಪಿಸುವ ರೀತಿಯೇ ಬೇರೆ.

"ಹೊನ್ನಾವರದಲ್ಲಿ ಹುಟ್ಟಿ ಬೆಳೆದ ನಾನು ಅಲ್ಲಿಯ ಕಸಬಾ ಗಂಡುಮಕ್ಕಳ ಶಾಲೆ ಸೇರಿದ್ದು ಏಳು ವರ್ಷ ತುಂಬಿದ ಬಳಿಕವೇ. ಆಗ ನಿಯಮವೇ ಹಾಗಿತ್ತು. ಮಾಧ್ಯಮಿಕ ಶಾಲಾ ಶಿಕ್ಷಣಕ್ಕಾಗಿ 'ನ್ಯೂ ಇಂಗ್ಲಿಷ್ ಸ್ಕೂಲ್' ಸೇರಿದ್ದಾಯ್ತು. ಅಲ್ಲಿ ಪ್ರತಿ ತಿಂಗಳಿಗೊಬ್ಬರು ಹೊಸ ಶಿಕ್ಷಕರು ಬಂದು ಸೇರುತ್ತಿದ್ದಂತೆ, ರಾಜೀನಾಮೆ ಕೊಟ್ಟು ಹೋಗಿಬಿಡುತ್ತಿದ್ದರು! ಮುಂದೆ ಹೈಕೋರ್ಟ್ ನ್ಯಾಯಾಧೀಶರಾದ ಜಿ. ಎಸ್. ಸಭಾಹಿತ, ಕವಿ ವಿ. ಜಿ. ಭಟ್ಟ, ಜಾನಪದ ಸಂಶೋಧಕ ಡಾ. ಎಲ್. ಆರ್. ಹೆಗ್ಡೆ ಮುಂತಾದವರು, ಮೊದಲಲ್ಲಿ ಮೇಷ್ಟ್ರು ಆಗಿದ್ದು

ಸಾಹಿತ್ಯ ಕೃತಿಗಳು

ಕೃಷ್ಣಾನಂದ ಕಾಮತ್

1) 'ನಾನೂ ಅಮೆರಿಕೆಗೆ ಹೋಗಿದ್ದೆ' 2) 'ಭಗ್ನ ಸ್ವಪ್ನ' 3) 'ವಂಗದರ್ಶನ' 4) ಪ್ರೇಯಸಿಗೆ ಪತ್ರಗಳು 5) 'ಪ್ರಾಣಿ ಪರಿಸರ' (ಉತ್ತಮ ವೈಜ್ಞಾನ ಕೃತಿ 1975) 6) 'ಕಾಲರಂಗ' 7) 'ಪ್ರೇಯಸಿಗೆ ಪತ್ರಗಳು' 8) ಪಶು-ಪಕ್ಷಿ ಪ್ರಪಂಚ' 9) ಬಸ್ತರ ಪ್ರವಾಸ 10) 'ಕೀಟ ಜಗತ್ತು' 11) 'ಸಸ್ಯ ಪ್ರಪಂಚ' 12) 'ಕಾವಿಕಲೆ' 13) ಮಧ್ಯಪ್ರದೇಶದ ಮಡಿಲಲ್ಲಿ (14) ಸಸ್ಯ ಪರಿಸರ.

ಜ್ಯೋತ್ಸ್ನಾ ಕಾಮತ್

1) 'ಸೋಷಿಯಲ್ ಲೈಫ್ ಇನ್ ಮಿಡಿವಲ್ ಕರ್ನಾಟಕ' 2) 'ಸಂಸಾರದಲ್ಲಿ ಸ್ವಾರಸ್ಯ' (ಪ್ರಬಂಧ) 3) 'ಕರ್ನಾಟಕ ಶಿಕ್ಷಣ ಪರಂಪರೆ' (ಕರ್ನಾಟಕ ಸಾಹಿತ್ಯ ಅಕಾಡೆಮಿ ಉತ್ತಮ ಸಂಶೋಧನಾ ಗ್ರಂಥ ಬಹುಮಾನ 1989) 4) 'ಹೀಗಿದ್ದೇವೆ ನಾವು' (ಹಾಸ್ಯ). ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1991)

ನಮ್ಮ ಶಾಲೆಯಲ್ಲೇ! ಮುಂದೆ ಹೆಚ್ಚಿನ ಶಿಕ್ಷಣಕ್ಕೆ'ಕೆನರಾ ಕಾಲೇಜ್' ಸೇರಿದಾಗ ಪ್ರೊ. ಗೋಪಾಲಕೃಷ್ಣ ಅಡಿಗ, ಡಾ. ಜಿ. ಎಸ್. ಆಮೂರರಂಥ ಮೇಧಾವಿ ಉಪನ್ಯಾಸಕರಿದ್ದರು. ಅಲ್ಲಿಂದ ಮುಂದೆ ಧಾರವಾಡದ ಕರ್ನಾಟಕ ಕಾಲೇಜ್ ಸೇರಿ ಪದವಿ ಹಾಗೂ ಅಲ್ಲಿಯೇ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ ಪಡೆದೆ."

ಎರಡು ವರ್ಷಕಾಲ ಕರ್ನಾಟಕ ಕಾಲೇಜಿನಲ್ಲಿ ಶಿಕ್ಷಕರಾಗಿದ್ದು, ಆಮೇಲೆ ಶಿಷ್ಯವೇತನ ಪಡೆದು ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಪಿ.ಎಚ್‌ಡಿ ಪದವಿ ಪಡೆದರು. ಅದೇ ಅವಧಿಯಲ್ಲಿ ಅಮೆರಿಕ ಸರ್ಕಾರದ ಕೃಷಿ ಖಾತೆ ಏರ್ಪಡಿಸಿದ್ದ ಅರಣ್ಯ ವೀಕ್ಷಣೆ- ತರಬೇತಿಯನ್ನು ಪಡೆದರು.

"ಕೈತುಂಬ ಸಂಬಳ ತರುವ ವೃತ್ತಿಯೊಂದನ್ನು ಹಿಡಿದು ಅಲ್ಲೇ ನೆಲಸಬಹುದಾಗಿತ್ತು. ಆದರೆ

ನಾನು ಹುಟ್ಟಿ ಬೆಳೆದ ನೆಲ-ಜಲ ಕೈ ಬೀಸಿ ಕರೆಯುತ್ತಿತ್ತು. ಬೇರೊಂದು ದೇಶದಲ್ಲಿ ಪರಕೀಯನಾಗಿ ಬಾಳಲು ಮನಸ್ಸು ಬಾರದೇ ಸ್ವದೇಶಕ್ಕೆ ಮರಳಿದೆ. ಅರಣ್ಯ ಶಾಸ್ತ್ರದ ಡಾಕ್ಟರೇಟ್, ವಿಶೇಷ ತರಬೇತಿಗಳ ಪ್ರಯೋಜನ ನನ್ನ ನಾಡಿಗೆ, ಜಿಲ್ಲೆಗೆ ಆಗಲಿ ಎಂಬುದು ನನ್ನ ಆಗಿನ ಕನಸಾಗಿತ್ತು'' ತಮ್ಮ ಧ್ಯೇಯ ಉದ್ದೇಶಗಳ ಬಗ್ಗೆ ಕೃಷ್ಣಾನಂದ ಕಾಮತರು ನೀಡುವ ವಿವರಣೆ.

ಭಾರತಕ್ಕೆ ಮರಳಿ ಬಂದ ಕಾಮತರು ವಧು ಅನ್ವೇಷಣಾಕಾರ್ಯ ಕೈಗೊಂಡಾಗ ಸಿಕ್ಕವರು ಜ್ಯೋತ್ಸ್ನಾ. ಈ ಪ್ರೇಮಿಗಳ ಪ್ರೇಮದ ಫಲವೇ ಕನ್ನಡ ಸಾಹಿತ್ಯಕ್ಕೆ ದೊರೆತ ಅಪೂರ್ವ ಕೃತಿ ಮನೋಹರ ಗ್ರಂಥ ಮಾಲೆ ಪ್ರಕಟಿಸಿದ 'ಪ್ರೇಯಸಿಗೆ ಪತ್ರಗಳು.'

"ಜೊತೆಯಲ್ಲಿದ್ದಾಗ ಮಿತ ಭಾಷಿ ಆಗಿರುತ್ತಿದ್ದ ಕಾಮತರು ಪತ್ರಗಳಲಿ ತುಂಬ ವಾಚಾಳಿ! 'ಪ್ರೇಮಗೀತ', 'ಸಖಿಗೀತ'ಗಳನ್ನು ಬರೆದ ಕವಿಗಳು ಕನ್ನಡದಲ್ಲಿ ಕಡಿಮೆಯೇನಿಲ್ಲ. ಆದರೆ ದಶಲಕ್ಷಗಟ್ಟಲೆ ಪತ್ರ ಬರೆಯಲು ಪತ್ನಿಯಲ್ಲಿ ಪ್ರೇಮಿಯನ್ನು ಕಲ್ಪಿಸಿಕೊಂಡ ಕಾಮತ್ ಅಂಥವರು ಇರಲಿಕ್ಕಿಲ್ಲ!" ಎನ್ನುತ್ತಾರೆ ಜ್ಯೋತ್ಸ್ನಾ ಕಾಮತ್. ಹಲವು ವರ್ಷಗಳ ನಂತರ ಭೇಟಿಯಾದ ಆಪ್ತರಲ್ಲಿ ಕೆಲವರು "ಈಗಲೂ ನಿನ್ನ ಗಂಡ ಹಿಂದಿನ ತೀವ್ರತೆಯಿಂದಲೇ ಪತ್ರ ಬರೆಯುತ್ತಾರೆಯೇ?" ಎಂದು ಪ್ರಶ್ನಿಸುತ್ತಾರಂತೆ.

ಹಲವಾರು ಕನಸುಗಳನ್ನು ಕಟ್ಟಿಕೊಂಡು ಭಾರತಕ್ಕೆ ಮರಳಿ ಬಂದಿದ್ದ ಕೃಷ್ಣಾನಂದ ಕಾಮತರಿಗೆ ಎಲ್ಲೆಡೆ ನಿರಾಶೆ.

"ಶೇಕಡಾ 80 ರಷ್ಟು ಅರಣ್ಯವಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲಿ ನನ್ನ ಪರಿಣತಿ ಬಳಸಲಾಗಲಿಲ್ಲ. ಆದ್ದರಿಂದ ಭಾರತ ಸರಕಾರ ನನ್ನ ಸೇವೆಯನ್ನು ಕಾಡೇ ಇಲ್ಲದ ಮರುಭೂಮಿಯ ರಾಜಾಸ್ತಾನಕ್ಕೆ ಎರವಲು ಕೊಟ್ಟಿತು. ಉದಯ್‌ಪುರ ಕೃಷಿ ವಿಶ್ವ ವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮೂರು ವರ್ಷ ಪಾಠ ಹೇಳಿದರೂ, ಸೇವೆ ಪಡೆದ ಸಂಸ್ಥೆಯು ನನ್ನನ್ನು ಸಿಬ್ಬಂದಿ ವರ್ಗದಲ್ಲಿ ಸೇರಿಸಿಕೊಳ್ಳಲು ಒಪ್ಪದಿದ್ದರಿಂದ ಕಬ್ಬಿನ ಕೀಟ ನಿಯಂತ್ರಣ ಕೈಗೊಂಡಿದ್ದ ಕಾಮನ್‌ವೆಲ್ತ್ ಸಂಸ್ಥೆ ನಡೆಸುತ್ತಿದ್ದ ಪಶ್ಚಿಮ ಬಂಗಾಲದ ಇತಿಹಾಸ ಪ್ರಸಿದ್ಧ ಪ್ಲಾಸಿಗೆ ಧಾವಿಸಿದೆ. ಅಲ್ಲಿ ಆಗಲೇ ರಕ್ತಪಾತದಲ್ಲಿ ತೊಡಗಿದ್ದ ನಕ್ಸಲೀಯರಿಂದ ಸಂರಕ್ಷಿಸಿಕೊಳ್ಳಲು ಎರಡೇ ವರ್ಷಗಳಲ್ಲಿ ಕಂಬಿ ಕೀಳಬೇಕಾಯಿತು. ನೌಕರಿ ಸಿಗದಿದ್ದರೂ ಶಿಕ್ಷಣ ಸಂಶೋಧನೆಗಳ ಸಾಮಿಪ್ಯವಿರಲಿ ಎಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿ 'ವೈಜ್ಞಾನಿಕ ಛಾಯಾಗ್ರಹಣ ಲ್ಯಾಬೋರೇಟರಿ' ಪ್ರಾರಂಭಿಸಿದೆ."

ಹೀಗೆ ಹೊಸ ಉದ್ಯೋಗ ಪ್ರಾರಂಭಿಸಿದ ಕಾಮತರಿಗೆ ಆ ವಿಷಯದಲ್ಲಿ ಪೂರ್ವ ತರಬೇತಿ ಏನೂ ಇರಲಿಲ್ಲ. ಸ್ವಾಧ್ಯಾಯದಲ್ಲಿ ಅಚಲ ವಿಶ್ವಾಸ ಹೊಂದಿದ ಅವರು ಹೊಸ ಉದ್ಯೋಗದಲ್ಲೂ ಸ್ವಯಂ ಪರಿಣತಿ ಪಡೆದಿರುವರು. ಕಳೆದ ಕಾಲು ಶತಮಾನದಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸ್ನಾತಕೋತ್ತರ ಸಂಶೋಧನಾ ಸಂಸ್ಥೆಗಳ ಪ್ರಾಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಛಾಯಾಗ್ರಹಣದ ನೆರವು ನೀಡಿದ್ದಾರೆ. ಬೆಂಗಳೂರಿನಲ್ಲಿರುವ 'ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಸೈನ್ಸ್', 'ನಿಮಾನ್ಸ್', 'ನ್ಯಾಶನಲ್ ಡೈರಿ ರಿಸರ್ಚ್ ಲ್ಯಾಬ್', 'ಹಾರ್ಟಿಕಲ್ಚರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ' ಮುಂತಾದ ವಿವಿಧ ಸಂಸ್ಥೆಗಳಿಗೆ ವಿವಿಧ ಬಗೆಯ ವೈಜ್ಞಾನಿಕ ಛಾಯಾಗ್ರಹಣ ಕೈಕೊಂಡು ಬೆನ್ನು ತಟ್ಟಿಸಿಕೊಂಡಿದ್ದಾರೆ.

ಸಾಹಿತ್ಯ ಸಂಪರ್ಕ

ಹಲವಾರು ಆಕಾಶವಾಣಿ ನಿಲಯಗಳಲ್ಲಿ ಕಾರ್ಯ ನಿರ್ವಹಿಸಿದ ಜ್ಯೋತ್ಸ್ನಾ ಎಂದೂ ಸಾಹಿತ್ಯದ ಸಂಪರ್ಕದಿಂದ ದೂರವಾಗಲಿಲ್ಲ.

"ಕಲ್ಕತ್ತಾದಲ್ಲಿ ಸುಮಾರು ಮೂರು ವರ್ಷಗಳ ಕಾಲ ವಾಸ್ತವ್ಯ ಮಾಡಿದ್ದರ ಫಲವಾಗಿ ಬಂಗಾಲಿ ಸಾಹಿತ್ಯದ, ರಂಗದ ಭಾಷೆಯ ನಿಕಟ ಪರಿಚಯ ಒದಗಿಸಿದವು. ಚರಿತ್ರೆ, ಸಂಗೀತ, ನಾಟಕ, ಸಾಹಿತ್ಯ ಕ್ಷೇತ್ರಗಳ ಪ್ರಚಲಿತ ಮೇಧಾವಿಗಳನ್ನು ಭೇಟಿ ಮಾಡುವಂತಾಯಿತು" ಎನ್ನುವ ಜ್ಯೋತ್ಸ್ನಾ ಕಾಮತ್ ಆಕಾಶವಾಣಿ ವೃತ್ತಿಯು ನನಗೆ ನೆಮ್ಮದಿ, ಹುಮ್ಮಸ್ಸು ಹಾಗೂ

ಜೀವಕಳೆ ತುಂಬಲು ಸಹಕಾರಿಯಾಯಿತು ಎನ್ನುತ್ತಾರೆ.

ಮೈಸೂರು ಆಕಾಶವಾಣಿಯಲ್ಲಿ ಕೆಲಸ ಮಾಡಿದ ದಿನಗಳು ಜ್ಯೋತ್ಸ್ನಾ ಅವರ ಬಾಳಿನಲ್ಲಿ ಒಂದು ಅಪೂರ್ವ ಅಧ್ಯಾಯ. "ದಶಕಗಳ ಕಾಲ ಮುಚ್ಚಿಯೇ ಹೋಗಿದ್ದ ಕೇಂದ್ರಕ್ಕೆ ಜೀವಕಳೆ ತುಂಬಲು ಸಾಕಷ್ಟು ಹೋರಾಡಬೇಕಾಯಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ 33 ದೇಶಗಳ ವಿದ್ಯಾರ್ಥಿಗಳನ್ನು ಬರಮಾಡಿಕೊಂಡು 'ವಿಶ್ವ ಭಾರತಿ' ಕಾರ್ಯಕ್ರಮ ಏರ್ಪಡಿಸಿದ್ದು, ಮೈಸೂರು ಆಕಾಶವಾಣಿಯ ಚಿನ್ನದ ಹಬ್ಬ, ವಿಶ್ವ ಕನ್ನಡ ಸಮ್ಮೇಳನ ನಡೆದಾಗ ಇಡೀ ಸಿಬ್ಬಂದಿ ಹಗಲು ರಾತ್ರಿಯ ಪರಿವೆಯಿಲ್ಲದೇ, ದುಡಿದದ್ದು. 'ಯುಗಾದಿ ಕವಿ ಮೇಳ', 'ಗಾಂಧಿ ಒಂದು ಪ್ರದರ್ಶನ' ಮುಂತಾದ ಪುಸ್ತಕಗಳನ್ನು ಪ್ರಕಟಿಸಿ ಉಚಿತವಾಗಿ ಹಂಚಿದ್ದು" ಹೀಗೆ ಜ್ಯೋತ್ಸ್ನಾ ಅವರ ಕಾರ್ಯಸಾಧನೆಯ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅಲ್ಲದೆ ಕುವೆಂಪು, ಪ್ರೊ. ಎಸ್. ವಿ. ರಂಗಣ್ಣ, ಫೀಲ್ಡ್ ಮಾರ್ಶಲ್ ಕಾರ್ಯಪ್ಪ, ರಾಜಾರಾವ್, ಕೆ. ಕೆ. ಹೆಬ್ಬಾರ್, ಆರ್. ಕೆ. ನಾರಾಯಣ, ಆರ್. ಕೆ. ಲಕ್ಷ್ಮಣ್ ಮುಂತಾದವರ ಧ್ವನಿ ಮುದ್ರಿಸಿಕೊಂಡು ಸಂಗ್ರಹಿಸಿದ್ದು ಜ್ಯೋತ್ಸ್ನಾ ಅವರ ಅಪೂರ್ವ ಸಾಧನೆ ಎನ್ನಬಹುದು.

ಮುಂಬೈಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜ್ಯೋತ್ಸ್ನಾ ನಿವೃತ್ತಿಯ ಪೂರ್ವದಲ್ಲಿ ಬೆಂಗಳೂರಿಗೆ ಬಂದರು. ಹಾಗೇ ಬಂದಾಗಲೂ ಇಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಬಾನುಲಿ ಬರವಣಿಗೆ, ಸಂಗೀತ ಕಾರ್ಯಕ್ರಮಗಳಿಗೆ ಹಿಮ್ಮೇಳ ಒದಗಿಸುವ ಕುರಿತು ವಾದ್ಯ ಕಲಾವಿದರಿಗೆ ತರಬೇತಿ, ಶಬ್ದ ಚಿತ್ರದ ತರಬೇತಿ. ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು, ಕ್ರೈಸ್ಟ್ ಕಾಲೇಜ್‌ಗಳ ಸಹಯೋಗದಿಂದ ಏಳೆಂಟು ಬಾನುಲಿ ಬರವಣಿಗೆಯ ಗ್ರಂಥಗಳನ್ನು ಹೊರತರುವುದರಲ್ಲಿ ಜ್ಯೋತ್ಸ್ನಾ ಅವರ ಪರಿಶ್ರಮ ಅಪಾರವಾದದ್ದು. ನಿವೃತ್ತಿಯ ಬಳಿಕವೂ ಜ್ಯೋತ್ಸ್ನಾ ಅವರು ಕನ್ನಡ, ಇಂಗ್ಲಿಷ್, ಕೊಂಕಣಿ ಭಾಷೆಗಳಲ್ಲಿ ಬರವಣಿಗೆ ಮುಂದುವರಿಸಿಕೊಂಡು ಬಂದಿದ್ದಾರೆ. ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಅಧಿವೇಶನಗಳಲ್ಲಿ ಪ್ರಬಂಧ ಮಂಡಿಸುತ್ತಾ ಬಂದಿದ್ದಾರೆ. ಮೂರು ಗ್ರಂಥಗಳು ಹಸ್ತ ಪ್ರತಿ ರೂಪದಲ್ಲಿವೆ. ಅವುಗಳು ಬೆಳಕು ಕಾಣುವಂತಾದಾಗ ಶಾಶ್ವತ ನೆಮ್ಮದಿ ನನ್ನದಾಗುತ್ತದೆ" ಎನ್ನುತ್ತಾರೆ.

ವಿಕಾಸ- ಕಾಮತ್ ದಂಪತಿಗಳ ಏಕಮಾತ್ರ ಪುತ್ರ. ಅಮೇರಿಕದಲ್ಲಿ ಕಂಪ್ಯೂಟರ್ ವಿಜ್ಞಾನದಲ್ಲಿ ಮಾಸ್ಟರ್ ಪದವಿ ಪಡೆದು ಸ್ವಂತದ ಸಾಫ್ಟ್‌ವೇರ್ ಉದ್ಯೋಗ ಕೈಗೊಂಡಿದ್ದಾನೆ. ಭಾರತ ಸ್ವಾತಂತ್ರ್ಯ ಸುವರ್ಣೋತ್ಸವದ ಸಂದರ್ಭದಲ್ಲಿ, ತನ್ನ ದೇಶ ಕುರಿತಾದ ಇಂಟರ್‌ನೆಟ್ ಕಾರ್ಯಕ್ರಮ ಪ್ರಾರಂಭಿಸಿ ತನ್ನ ತಂದೆ ಸೆರೆಹಿಡಿದ ಛಾಯಾಚಿತ್ರಗಳನ್ನು ಪೂರಕ ಮಾಹಿತಿಗಳನ್ನು ಬಳಸಿಕೊಳ್ಳುತ್ತಿದ್ದಾನೆ. ಭಾರತ ದೇಶದ ಜನರ ಜೀವನ ಅತ್ಯಂತ ವೇಗದಿಂದ ಬದಲಾಗಿದೆ. ಬದಲಾಗುತ್ತಿದೆ. ಎಂದೂ ಚಿತ್ರಿಸುವಲ್ಲಿ ಕಾಮತ್‌ರು ಎಂದೋ ಕ್ಲಿಕ್ಕಿಸಿದ ಚಿತ್ರಗಳು ಇಂದು ಅತ್ಯಪೂರ್ವ ಎನಿಸಿಕೊಳ್ಳುತ್ತಿವೆ. 'ಕಾಮತ್ ಪ್ಲೌಪುರಿ' ಹಾಗೂ 'ಕಾಲರಂಗ' ಎಂಬ ಶಿರೋನಾಮೆಯಡಿಯಲ್ಲಿ ಪ್ರಸಾರವಾದ 'ಈ ಮೇಲ್' ಕಾರ್ಯಕ್ರಮ ವಿಶ್ವದ ಮೂಲೆ ಮೂಲೆಯಿಂದ ಕುತೂಹಲಕಾರಿಯಾದ ಆಕರ್ಷಣೆಯಾಗಿ ಕಂಡಿದೆ. ಶಿಕಾಗೋ ವಿಶ್ವ ವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರಿಗೆ ಭಾರತೀಯ ಮಾರಾಟಗಾರರ ಪದ್ಧತಿ ಆಕರ್ಷಕವಾಗಿ ಕಂಡರೆ ಆಸ್ಟ್ರೇಲಿಯಾದವರಿಗೆ ಭಿಕ್ಷುಕರ ಕುರಿತಾದ ಮಾಹಿತಿ ಇನ್ನಷ್ಟು ಬೇಕು ಎನಿಸಿತಂತೆ! ಇಟಲಿಯ ಪ್ರೇಕ್ಷಕನೊಬ್ಬನಿಗೆ ಕರ್ನಾಟಕದ ಸುಗ್ಗಿ ಕುಣಿತ ಕಂಡು ತನ್ನ ಪೂರ್ವಜರು ಭಾರತದಿಂದ ಬಂದಿರಬಹುದೇ ಎಂಬ ಸಂಶಯ. ಜರ್ಮನ್ ಸಂಶೋಧಕಿ ಒಬ್ಬಳಿಗೆ ಭಾರತೀಯ ಸೀರೆ ಕುರಿತು ಮಾಹಿತಿ ಅಪೂರ್ವ ಎನಿಸಿತಂತೆ. ದಿನಾ 1500ಕ್ಕೂ ಹೆಚ್ಚು ಜನ ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದಾರೆಂದು ವಿಕಾಸನ ಕಂಪ್ಯೂಟರ್ ವರದಿ ಸೂಚಿಸಿದೆ. ಕಾಮತರ 14 ಪುಸ್ತಕ ಹಾಗೂ ನೂರಕ್ಕೂ ಮಿಕ್ಕಿದ ಬಿಡಿ ಲೇಖನಗಳನ್ನು ಓದಿದ ಕನ್ನಡಿಗರ ಸಂಖ್ಯೆ ಕಡಿಮೆ ಎನ್ನಬಹುದು. ತೀರ ಹೊಸದಾದ ಮಲ್ಟಿಮೀಡಿಯಾ ಮಾಧ್ಯಮಕ್ಕೆ ಹೇಳಿ ಮಾಡಿಸಿದ ಪ್ರತಿಭೆ ಕಾಮತರದು. ✤

ಜುಲೈ 1998

ಮೇಷ



ಶಾಲೆಗಳ ಉದ್ಯಮದಲ್ಲಿ ಗುರು ಮುಂದಿಯಿಂದ ಖರ್ಚು. ಉರಿ ವಸ್ತುಗಳ ವ್ಯಾಪಾರದಲ್ಲಿ ಲಾಭ. ಸೋದರಿಗೆ ಯಾತ್ರಾಸ್ಥಳದಲ್ಲಿ ಮದುವೆ ಸಾಧನೆ. ಮೃತರ ಶಾಂತಿಗಾಗಿ ಕನ್ಯಾದಾನ. ಅಣ್ಣನಿಗೆ ನೌಕರಿಯಲ್ಲಿ ಅನುಕೂಲ. ಆರೋಗ್ಯ ಸುಧಾರಣೆ. ಮಕ್ಕಳ ವಿದ್ಯಾಭ್ಯಾಸ ಮುನ್ನಡೆ. ಮೇಲ್ಮನೆ ವಾಸದಿಂದ ಹಾನಿಯ ಫಲ ಕಡಿಮೆ.

ವೃಷಭ



ಶಾಲಾ ಉದ್ಯಮದಲ್ಲಿ ಧನಾಗಮ. ಪುಸ್ತಕಗಳು ಬರೆವ ಕಾಗದ ವ್ಯವಹಾರದಲ್ಲಿ ಧನ ಲಾಭ. ಕೋಪತಾಪದಿಂದ ಸಲ್ಲದ ಕಲಹ. ಉರಿ ವಸ್ತುಗಳ ವ್ಯಾಪಾರದಲ್ಲಿ ಧನಾಗಮ. ಮೃತರ ಆರಾಧನಾ ಖರ್ಚು. ಇಲ್ಲ ಆಸ್ಪತ್ರೆ ಉಪಚಾರದಿಂದ ಖರ್ಚು. ಶ್ರೀಮತಿಯ ಸಹಕಾರದಿಂದ ಅನುಕೂಲ. ನೌಕರಿಯಲ್ಲಿ ಬಡ್ತಿ ಬೇರೆ. ದಾಂಪತ್ಯದಲ್ಲಿ ಒಳ್ಳೆಯ ರಸ ನಿಮಿಷಗಳು ಪ್ರವಾಸ ಉದ್ಯಮದಲ್ಲಿ ಧನ ಲಾಭ.

ಮಿಥುನ



ಆಸ್ಪತ್ರೆ ಸೇವಾ ಭೇಟಿಗಳಿಂದ ವೈದ್ಯರಿಗೆ ಧನ ಲಾಭ. ಮದುವೆಗಳಲ್ಲಿ ಪ್ರೀತಿಯ ಕೊಡುಗೆ. ಲೇಖಕರಿಗೆ ಧನ ಲಾಭ. ಉಷ್ಣದಿಂದ ಮೈ ಕೈ ಉರಿ. ಕೋಪ ತಾಪ ಬೇರೆ. ಇದರಿಂದ ಎಲ್ಲರಿಂದ ನೀವು ದೂರ. ಪುಸ್ತಕಗಳ ವ್ಯವಹಾರದಲ್ಲಿ ಧನ ಲಾಭ. ಶಾಲಾ ವೃತ್ತಿಗಳಲ್ಲಿ ಧನಾಗಮ. ಮಾಸದ ಮುನ್ನಡೆಯಲ್ಲಿ ಆಡಳಿತ ಪರೀಕ್ಷೆಯಲ್ಲಿ ತೇರ್ಗಡೆ ಇದರಿಂದ ಸರಕಾರದ ನೌಕರಿಯಲ್ಲಿ ಬಡ್ತಿ ಆದೀತು.

ಕಟಕ



ಆಸ್ಪತ್ರೆ ವೃತ್ತಿಗಳಲ್ಲಿ ಧನಾಗಮ. ಶಾಲಾ ಉದ್ಯಮದಲ್ಲಿ ಭಾಗ್ಯ ಲಾಭ. ಲೇಖಕರಿಗೆ ಸನ್ಮಾನ ಲಾಭ. ಬರೆವ ಕಾಗದ, ಪುಸ್ತಕಗಳಿಂದ ಧನ ಲಾಭ. ಉರಿ ವಸ್ತುಗಳ ವ್ಯಾಪಾರದಲ್ಲಿ ಖರ್ಚು. ತಮ್ಮನಲ್ಲಿ ಕಲಹದಿಂದ ಖರ್ಚು. ಸುಟ್ಟಗಾಯಗಳಿಂದ ಪರಿಹಾರ ಕಾರ್ಯಗಳಿಂದ ವೈದ್ಯರಿಗೆ ಧನಾಗಮ. ಮಾಸದ ಮುನ್ನಡೆಯಲ್ಲಿ ನೌಕರಿ ಲಾಭ. ಆಡಳಿತ ಇಲಾಖೆಯಲ್ಲಿ ನೌಕರಿಯಿಂದ ಹಿರಿಮೆ ಪ್ರಾಪ್ತಿ. ಮಹಡಿ ವಾಸದಿಂದ ಆರೋಗ್ಯ ಉತ್ತಮ.

ಸಿಂಹ



ಮೃತರ ಆರಾಧನೆಯಿಂದ ಆರೋಗ್ಯ ಅನುಕೂಲ. ಮಕ್ಕಳಿಗೆ ಉದಾರದಿಂದ ಪುಸ್ತಕ ದಾನದಿಂದ ಸೇವಾ ಸಂಸ್ಥೆಗಳಿಗೆ ಖರ್ಚು. ಶುಭ ಕಾರ್ಯಗಳಲ್ಲಿ ಧಾನಗಮ. ವಸ್ತ್ರಾಲಂಕಾರ ಉದ್ಯಮದಲ್ಲಿ ಲಾಭ. ದೇವೀ ಕ್ಷೇತ್ರದಲ್ಲಿ ಪ್ರಿಯರ ದರ್ಶನ. ಯತ್ನದಿಂದ ಮದುವೆಯೂ ಆದೀತು. ಮಾಸದ ಮುನ್ನಡೆಯಲ್ಲಿ ಶಾಲೆಗೆ ಸಂಬಂಧದ ಸರಕಾರದ ಕೆಲಸಗಳಲ್ಲಿ ಹೇರಳ ಖರ್ಚು. ಸಹೋದ್ಯೋಗಿಗೆ ಸಹಾಯದಿಂದ ಖರ್ಚು.

ಕನ್ಯಾ



ಶಾಲಾ ಸಂಬಂಧದ ಸರಕಾರದ ಕೆಲಸಗಳಲ್ಲಿ ಲಾಭ. ಪರೀಕ್ಷೆಯಲ್ಲಿ ತೊಂದರೆಯಿಂದ ಬರಬೇಕಾದ ಬಡ್ತಿ ಮುಂದೂಡಿಕೆ. ರಕ್ಷಣಾ ಇಲಾಖೆಯ ನಿಗಮದಲ್ಲಿ ನೌಕರಿಯಿಂದ ಅನುಕೂಲ. ಅಗ್ನಿಶಾಮಕ ನೌಕರಿಯಿಂದಲೂ ಅನುಕೂಲ. ಬಂಡಾಯದ ಸ್ವಭಾವದಿಂದ ನೌಕರಿಯಲ್ಲಿ ಅಸಮಾಧಾನ ಹೆಚ್ಚು. ಶ್ರೀಮತಿ ವರ್ಗದ ಸಹಾಯದಿಂದ ಅನುಕೂಲ. ಮನೆಯಲ್ಲಿ ರೋಗಿ ಇದ್ದರೆ ಆಸ್ಪತ್ರೆ ಸೇವಾ ಖರ್ಚು.

ಮಾಸಭವಿಷ್ಯ

ತುಲಾ



ಲೇಖಕರಿಗೆ ವಸ್ತು ಅಭಾವ. ಶಿಶು ಸಾಹಿತ್ಯದಿಂದ ಅನುಕೂಲ. ಪುಸ್ತಕಗಳ ಉದ್ಯಮದಲ್ಲಿ ಹಣದ ಅಭಾವ. ಶ್ರೀಮತಿ ಹವ್ಯಾಸಗಳಿಂದ ಧನ ಹಾನಿ. ತಂದೆಯಲ್ಲಿ ಕಲಹದಿಂದ ದೂರ ವಾಸ. ಮಾಸದ ಮುನ್ನಡೆಯಲ್ಲಿ ನೌಕರಿಯಲ್ಲಿ ಅರ್ಹತೆ ಅಭಾವದಿಂದ ನಿರಾಸೆ.

ವೃಶ್ಚಿಕ



ಪರೀಕ್ಷಾ ತರಬೇತಿ ಶಿಬಿರಗಳಿಂದ ಹಿರಿಯ ಮಗನಿಗೆ ಅನುಕೂಲ. ಪುಸ್ತಕಗಳ ವ್ಯಾಪಾರದಲ್ಲಿ ಅನುಕೂಲ. ಶ್ರೀಮತಿ ಸಹಕಾರದಿಂದ ಸಂಸಾರದಲ್ಲಿ ನೆಮ್ಮದಿ. ತಮ್ಮನಲ್ಲಿ ಕಲಹದಿಂದ ನಷ್ಟ. ಅಗ್ನಿಮೂಲೆ ದೋಷದಿಂದ ಮನೆಯಲ್ಲಿ ಅಶಾಂತಿ. ರಾಜಕೀಯ ಗಲಭೆಗಳಲ್ಲಿ ಭಾಗದಿಂದ ತಲೆಗೆ ಪೆಟ್ಟು. ಪೊಲೀಸರಿಂದ ಖರ್ಚು. ಮಾಸದ ಮುನ್ನಡೆಯಲ್ಲಿ ವಾಹನಗಳಿಂದ ಖರ್ಚು. ಮಗನಿಗೆ ವಿದ್ಯಾವಿಘ್ನ. ತಂದೆಗೆ ನೌಕರಿಯಲ್ಲಿ ನೆಮ್ಮದಿ.

ಧನು



ವೈದ್ಯ ಕಲಿಕೆಯಲ್ಲಿ ಅನುಕೂಲ. ಸುಬ್ರಹ್ಮಣ್ಯನ ಸೇವೆಯಿಂದ ವಿದ್ಯಾವೃದ್ಧಿ. ಗುರು ಮಂದಿಯಲ್ಲಿ ಅವಿಶ್ವಾಸದಿಂದ ಶಾಲಾ ಉದ್ಯಮದಲ್ಲಿ ನಷ್ಟ. ಸಹೋದ್ಯೋಗಿ ಮಾತುಗಳಿಂದ ಧನ ಹಾನಿ. ಶ್ರೀಮತಿ ವರ್ಗದಲ್ಲಿ ವಿರೋಧ. ಶ್ರೀಮತಿಗೆ ತವರಿನ ವಾಸವೂ ಅಚ್ಚರಿ ಏನಲ್ಲ. ಕೋಪ ತಾಪದ ಬಾಧೆಯಿಂದ ದಾಂಪತ್ಯದಲ್ಲಿ ದೂರ ದೂರ ವಾಸ ಆದೀತು. ಉರಿ ವಸ್ತುಗಳ ವ್ಯಾಪಾರದಲ್ಲಿ ಲಾಭ. ಮಾಸದ ಮುನ್ನಡೆಯಲ್ಲಿ ಸರಕಾರದ ಕೆಲಸಗಳಲ್ಲಿ ನಷ್ಟ.

ಮಕರ



ಮಾತುಗಳಲ್ಲಿ ವೇದಾಂತ ತಲೆ ಹಾಕಿದರೆ ಮಂದಿಯಲ್ಲಿ ವಿರೋಧ ಆದೀತು. ಆಸ್ಪತ್ರೆ ಉಪಚಾರಗಳಲ್ಲಿ ಹೇರಳ ಖರ್ಚು. ಹಾನಿ ಭಯ ಬೇರೆ. ಶ್ರೀಮತಿಗೆ ಕಲಾಭ್ಯಾಸದಲ್ಲಿ ಬಯಕೆ. ಮಹಿಳಾಧಿಕಾರಿಯಲ್ಲಿ ಆಸಕ್ತಿಯಿಂದ ಅನುಕೂಲ. ನೌಕರಿಯ ಹೆಂಡತಿಗೆ ಅದರಲ್ಲಿ ಬೇಸರ. ಮಾಸದ ಮುನ್ನಡೆಯಲ್ಲಿ ನವದಾಂಪತ್ಯದ ಮೋಹದ ದಂಪತಿಗಳಲ್ಲಿ ಕೋಪತಾಪ ಅಸೂಯೆ ಇದ್ದಿರಬಹುದು. ಅಣ್ಣನಿಗೆ ಸಹೋದ್ಯೋಗಿಯಲ್ಲಿ ಅನುರಾಗದ ಆಸಕ್ತಿ.

ಕುಂಭ




ತೀವ್ರ ಗ್ರ ಜಪ ತಪಾದಿಗಳಿಂದ ವೇದಾಂತ ಜ್ಞಾನ ಲಾಭ. ಆಸ್ಪತ್ರೆ ಸೇವೆಯು ಮಂದಿಯಲ್ಲಿ ಆಸಕ್ತಿಯಿಂದ ಲಾಭ. ಆಸ್ಪತ್ರೆ ವಸ್ತುಗಳ ಸರಬರಾಜಿನಿಂದ ಧನ ಲಾಭ. ಮನೆಯಲ್ಲಿ ಸ್ತ್ರೀ ಸಹಕಾರದಿಂದ ವಿರೋಧ. ಅಗ್ನಿಶಾಮಕ ಸೇವೆಯಲ್ಲಿ ತರಬೇತಿಯಿಂದ ಅನುಕೂಲ. ಮಾಸದ ಮುನ್ನಡೆಯಲ್ಲಿ ಸರಕಾರದ ಕೆಲಸಗಳಲ್ಲಿ ಅನಾನುಕೂಲ. ಅಧಿಕಾರಿ ವಿರೋಧ ಬೇರೆ. ಕೊನೆಯ ವಾರದಲ್ಲಿ ವೈದ್ಯ ವಧು ಆಗಮನದಿಂದ ಸುಯೋಗ ಲಾಭ.

ಮೀನ



ಶಾಲಾ ಉದ್ಯಮದಲ್ಲಿ ತೊಡಕುಗಳು. ಗುರು ಮಂದಿಯಿಂದ ಬೇಸರ. ವಿದ್ಯಾರ್ಥಿಗಳಿಗೆ ತೊಂದರೆ. ಶ್ರೀ ಕೃಷ್ಣನ ಸೇವೆಯಿಂದ ಅನುಕೂಲ. ಸೋದರಿಗೆ ಸುಯೋಗದಿಂದ ಮದುವೆ ಯತ್ನ ಸುಗಮ. ಆದರೆ ಪತಿರಾಯನು ಸಿಗದೆ ತೊಂದರೆ. ಉರಿ ವಸ್ತುಗಳ ವ್ಯಾಪಾರದಲ್ಲಿ ಖರ್ಚು. ಮನೆ ಹತ್ತಿರದ ವಾಸದ ವರನ ಬಂಧುತ್ವದಿಂದ ಅನಾನುಕೂಲ. ಕಾರಣ ಗಂಡು ತುಂಬಾ ಒರಟು. ಮಗನಿಗೆ ನೌಕರಿಯಲ್ಲಿ ಅನುಕೂಲ.



ಕರ್ಪೂರ


ಆಸೆಗಿಷ್ಟು ಬಣ್ಣ ಹಚ್ಚಿ ಹಾರಿಬಿಟ್ಟಳವಳು,
ಚಿಟ್ಟೆಯಾಯಿತು
ಕನಸಿಗೊಂದು ಕಣ್ಣ ಕೊಟ್ಟು ಕನ್ನಡಿಯನು
ಅದರಲ್ಲಿಟ್ಟು ಕುಣಿಯಬಿಟ್ಟಳವಳು
ಮಯೂರವಾಯಿತು
ಮುಗ್ಧತೆ ಮುದ್ರೆ ಒತ್ತಿ ನಕ್ಷತ್ರದ ಬೆಳಕಿನಿಂದ
ಚುಕ್ಕೆ ಇಟ್ಟಳವಳು
ಚಿಗರೆಯಾಯಿತು.

ಚಿಟ್ಟೆ ಹೊರಳಿ ನೋಡಲಿಲ್ಲ
ಮಯೂರ ಮರಳಿ ಬರಲಿಲ್ಲ
ಚಿಗರೆ ಮತ್ತೆ ಕಾಣಲಿಲ್ಲ

ಕಣ್ಣ ಕಾಡಿಗೆ ಕಪ್ಪು ಕೆನ್ನೆಗಿಳಿದು
ಬೆಟ್ಟದಷ್ಟು ಕನಸುಗಳು ಸೊನ್ನೆಗಿಳಿದು
ಕರಗಿ ಹೋದಳವಳು
ಕರ್ಪೂರದ ಹಾಗೆ

-ಮೀನಾ ಸದಾಶಿವ

Printed and Published by V. Padmanabhan for the Proprietors:
The Printers (Mysore) Ltd., at Deccan Herald Press,
75, M. G. Road, Bangalore-560 001. Phone: 5588999.
Editor *K. N. HARI KUMAR.*



ವರ್ಣಪಾರದರ್ಶಿಕೆ: ಎಚ್. ಸತೀಶ್

MAYURA Kannada Monthly July 1998 Regd. KRN



Cover Printed by: Modern Process Printers, Ban